7063

ಜೀವನ ಮೌಲ್ಯಗಳು

ಪ್ರ. ಗ. ಸಹಸ್ರಬುದ್ಧೆ

ಕನ್ನಡ ರೂಪಾಂತರ: ಶಕುಂತಲಾ ಎನ್. ರಾವ್



K121.8
~~K128.8~~
SAS

ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು

7063

ಜೀವನ ಮೌಲ್ಯಗಳು

ಮರಾಠಿ ಮೂಲ :

ಪ್ರ. ಗ. ಸಹಸ್ರಬುದ್ಧೆ

ಕನ್ನಡ ರೂಪಾಂತರ :

ಶಕುಂತಲಾ ಎನ್. ರಾವ್

ಪ್ರಕಟಣೆ ೫೭

ರಾಷ್ಟ್ರೋತ್ಥಾನ ಸಾಹಿತ್ಯ
ಗವೀಪುರಂ ಮಾರ್ಗ ಕೆಂಪೇಗೌಡನಗರ
ಬೆಂಗಳೂರು ೫೬೦ ೦೧೯

ಮೊದಲ ಮುದ್ರಣ : ೧೯೮೮

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಗ್ರಂಥಾಗಾರ
7063
ಕ್ರಮ ಸಂಖ್ಯೆ
ವರ್ಗ
ವರ್ಗ ಸಂಖ್ಯೆ
20.2.01
18-00

ಬೆಲೆ : ರೂ. ೧೮–೦೦

ರಾಷ್ಟ್ರೋತ್ಥಾನ ಮುದ್ರಣಾಲಯ
ಬೆಂಗಳೂರು – ೫೬೦ ೦೧೯

K121·8
SAS
eg 7791

JEEVANA–MAULYAGALU. ('Values of Life'). Vol. I. Kannada. Essays on ethical themes. Marathi original by P. G. SAHASRABUDDHE. Translation by SHAKUNTALA N. RAO. Published by Rashtrotthana Sahitya, Kempegowda Nagar, Bangalore – 560 019 (India). Pages: viii + 178. Price: Rs. 18–00 1988.

Printed at Rashtrotthana Mudranalaya, Bangalore–560 019

ಸಮಕ್ಷಮದಲ್ಲಿ

ಅನೇಕ ಶತಮಾನಗಳ ನಮ್ಮ ಸ್ವಾತಂತ್ರ್ಯಸಂಘರ್ಷ ಇಂದು ಯಶಸ್ಸಿನ ಒಂದು ಘಟ್ಟ ಮುಟ್ಟಿದೆ. ನಮ್ಮ ರಾಷ್ಟ್ರದ ಸ್ವತಂತ್ರ, ಸಾರ್ವಭೌಮ ಜೀವನವನ್ನು ಕಟ್ಟುವ ಸುವರ್ಣಸಂಧಿ ನಮಗಿಂದು ಒದಗಿಬಂದಿದೆ.

ಇದೊಂದು ಸುವರ್ಣಸಂಧಿ ಆಗಿರುವಂತೆಯೇ ಒಂದು ಗಂಭೀರ ಸವಾಲೂ ಆಗಿದೆ. ನಮ್ಮ ರಾಷ್ಟ್ರಜೀವನವನ್ನು ಯಾವ ಆದರ್ಶದ ಬೆಳಕಿನಲ್ಲಿ, ಯಾವ ಸಿದ್ಧಾಂತದ ಅಡಿಗಲ್ಲ ಮೇಲೆ ಕಟ್ಟಬೇಕು ಎಂಬ ಸವಾಲಿಗೆ ನಾವಿಂದು ಉತ್ತರ ಕೊಡಬೇಕಾಗಿದೆ.

ಆದರೆ ನಮ್ಮ ನಾಡಿನ ದೌರ್ಭಾಗ್ಯದಿಂದ ಇವತ್ತಿಗೂ ಈ ಮೂಲಪ್ರಶ್ನೆಯ ಬಗ್ಗೆ ನಮ್ಮ ಸ್ವತಂತ್ರ ಪ್ರತಿಭೆಯಿಂದ ವಿಚಾರಮಂಥನ ನಡೆಯುತ್ತಲೇ ಇಲ್ಲ. ಇಂಗ್ಲೆಂಡ್ ಅಮೆರಿಕಾಗಳಂತೆಯೋ ಇಲ್ಲವೇ ರಷ್ಯ ಚೀನಾಗಳಂತೆಯೋ ನಮ್ಮ ಜೀವನವನ್ನು ಎರಕ ಹೊಯ್ಯುವ ಆತುರ ಎಲ್ಲ ಕ್ಷೇತ್ರಗಳಲ್ಲೂ ಕಂಡುಬರುತ್ತಿದೆ. ನಮ್ಮ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಇತ್ಯಾದಿ ಪ್ರತಿಯೊಂದು ಕ್ಷೇತ್ರದಲ್ಲೂ ಭಾರತವನ್ನು ಪರದೇಶ, ಪರಸಂಸ್ಕೃತಿಗಳ ಅಗ್ಗದ ನಕಲಾಗಿ ಮಾಡುವ ಪ್ರಯತ್ನವೇ ನಡೆದಿದೆ. ನಮ್ಮ ರಾಷ್ಟ್ರೀಯ ಪ್ರತಿಭೆ, ಪರಂಪರೆ, ತತ್ವಜ್ಞಾನ, ಜೀವನಾದರ್ಶ ಇವೆಲ್ಲಕ್ಕೂ ಇಂದು ಗ್ರಹಣ ಹಿಡಿದಂತಾಗಿದೆ.

ಹೀಗಾಗಿ ಇಂದು ಕೋಟಿಕೋಟಿ ಭಾರತೀಯರ ಹೃದಯಕ್ಕೆ ನಮ್ಮ ಸ್ವತಂತ್ರ ರಾಷ್ಟ್ರಜೀವನದ ಅಮೃತಸ್ಪರ್ಶ ಅನುಭವಕ್ಕೆ ಬರುತ್ತಿಲ್ಲ. ನಮ್ಮ ಜನಸಾಮಾನ್ಯರ ಅಂತಃಕರಣವನ್ನು ತಟ್ಟಿ ಎಬ್ಬಿಸುವ ರಾಷ್ಟ್ರೀಯ ಆದರ್ಶಗಳಿಲ್ಲದೆಹೋದಲ್ಲಿ ರಾಷ್ಟ್ರದ ಪುನರುತ್ಥಾನಕ್ಕಾಗಿ ಅವರಲ್ಲಿ ಸ್ವಯಂಪ್ರೇರಣೆ, ಕಾರ್ಯೋತ್ಸಾಹ, ತ್ಯಾಗ, ಪೌರುಷಗಳು ಬೆಳೆದು ನಿಲ್ಲುವುದಾದರೂ ಹೇಗೆ? ಆದ್ದರಿಂದಲೇ ಇಂದು ರಾಷ್ಟ್ರದ ಆಗುಹೋಗುಗಳ ಬಗೆಗೆ ಸರ್ವತ್ರ ಉದಾಸೀನತೆ, ಕ್ರಿಯಾಶೂನ್ಯತೆ, ವಿಫಲತೆಗಳೇ ತಾಂಡವವಾಡುತ್ತಿವೆ. ಎಂದ ಮೇಲೆ ಜನರೆದೆಗೆ ಸ್ಫೂರ್ತಿ, ಉತ್ಸಾಹಗಳನ್ನೆರೆಯಬಲ್ಲ ಭಾರತೀಯತೆಯ ಆದರ್ಶವನ್ನು ಎತ್ತಿಹಿಡಿಯುವುದು ಇಂದು ತೀರ ಅನಿವಾರ್ಯ ಹಾಗೂ ತುರ್ತು ಕರ್ತವ್ಯವಾಗಿದೆ. ಭಾರತವು 'ತನ್ನತನ'ದಿಂದ ಎದ್ದುನಿಂತಾಗಲೇ ಅದು ಜಗತ್ತಿನಲ್ಲಿ ತಲೆಯೆತ್ತಿ ಬಾಳುವಂತಾದೀತು ಎಂಬುದು ಸ್ಪಷ್ಟವಿದೆ.

ನಮ್ಮ ಭಾರತೀಯತೆಯ – ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸ, ತತ್ವಜ್ಞಾನ, ಜೀವನಾದರ್ಶಗಳ – ಹಿರಿಮೆ ಈ ಲೋಕದಲ್ಲಿ ಸಾಟಿಯಿಲ್ಲದ್ದು. ನೂರಾರು ಶತಮಾನಗಳವರೆಗೆ ನಮ್ಮ ರಾಷ್ಟ್ರಜೀವನವನ್ನು ವೈಭವಶಾಲಿಯಾಗಿ ಮಾಡಿದ್ದಷ್ಟೆ ಅಲ್ಲ, ಜಗತ್ತಿಗೆಲ್ಲ ದಿವ್ಯಜೀವನದ ಸುಧೆ ಕುಡಿಸಿದಂತಹ ಅದ್ಭುತ ಚೈತನ್ಯ ಅದರಲ್ಲಿದೆ. ಇಂದಿಗೂ ಸಹ ಆಧುನಿಕ ಜೀವನದ ಅನೇಕ ವಿಕಟ ಸಮಸ್ಯೆ-ಸವಾಲುಗಳಿಗೆ ಸಮರ್ಪಕವಾಗಿ ಸಮಾಧಾನ ನೀಡಬಲ್ಲಂತಹ ಸಮಗ್ರ ಜೀವನದೃಷ್ಟಿ, ವಿಚಾರಸಂಪತ್ತು ಅದರಲ್ಲಿದೆ.

ರಾಷ್ಟ್ರೋತ್ಥಾನದ ಅಡಿಗಲ್ಲಾದ ನಮ್ಮ ಭಾರತೀಯ ಜೀವನದ ಜ್ಞಾನ-ನಿಷ್ಠೆಗಳನ್ನು ಜನಮನದಲ್ಲಿ ಬೇರೂರಿಸುವ ಈ ಚರಿತಾರ್ಹ ಕಾರ್ಯಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್ತು ಜನ್ಮತಾಳಿದೆ.

ಪರಿಷತ್ತು ಈ ನಿಟ್ಟಿನಲ್ಲಿ ಇಟ್ಟಿರುವ ಮೊದಲ ಹೆಜ್ಜೆ ಎಂದರೆ, 'ರಾಷ್ಟ್ರೋತ್ಥಾನ ಸಾಹಿತ್ಯ' ಎಂಬ ನೂತನ ಪ್ರಕಾಶನದ ಸ್ಥಾಪನೆ. ಪ್ರಕಾಶನದ ಮುಖ್ಯಯೋಜನೆ ಹೀಗಿದೆ :

* ಸುಲಭ ಬೆಲೆಯಲ್ಲಿ ಸಾಮಾಜಿಕ ಚಿಂತನಪ್ರಧಾನವಾದ ಗ್ರಂಥಗಳನ್ನು ಹೊರ ತರುವುದು. ಇಂದು ಕನ್ನಡ ಸಾಹಿತ್ಯಲೋಕದಲ್ಲಿ ಎಲ್ಲಕ್ಕಿಂತ ಹೆಚ್ಚಿನ ಕೊರತೆ, ಅಗತ್ಯತೆ ಇರುವುದು ಅಂತಹ ಗ್ರಂಥಗಳಿಗೇ. ಈ ಕೊರತೆಯನ್ನು ತುಂಬಲು ಮೂಲ ಕನ್ನಡ ಕೃತಿಗಳ ಜತೆಗೆ ಇತರ ಭಾಷೆಗಳಿಂದಲೂ ಉತ್ತಮ ರಾಷ್ಟ್ರೀಯ ಸಾಹಿತ್ಯವನ್ನು ಕನ್ನಡಕ್ಕೆ ತರುವುದು.

* ನಿಜವಾದ ರಾಷ್ಟ್ರೀಯ ಇತಿಹಾಸದ ಗ್ರಂಥಗಳಿಗಂತೂ ಕನ್ನಡದಲ್ಲೇ ಏಕೆ, ಇಡೀ ದೇಶದಲ್ಲೇ ತೀವ್ರ ಕೊರತೆ ಇದೆ. ಇದುವರೆಗೆ ಪಾಶ್ಚಾತ್ಯ ವಿದ್ವಾಂಸರ ಗ್ರಂಥಗಳು, ಅವರ ದೃಷ್ಟಿ-ಧೋರಣೆಗಳ ಜಾಡಿನಲ್ಲೇ ನಮ್ಮ ಇತಿಹಾಸದ ಅಧ್ಯಯನ ಸಾಗಿದೆ. ಇನ್ನಾದರೂ ನಮ್ಮ ರಾಷ್ಟ್ರೀಯ ದೃಷ್ಟಿಯಿಂದ ಚರಿತ್ರೆಯನ್ನು ಬರೆಯುವ, ಓದುವ ಅಭ್ಯಾಸವಾಗುವಂತೆ ರಾಷ್ಟ್ರೀಯ ಇತಿಹಾಸ ಗ್ರಂಥಗಳಿಗೆ 'ರಾಷ್ಟ್ರೋತ್ಥಾನ ಸಾಹಿತ್ಯ'ದಲ್ಲಿ ಅಗ್ರಸ್ಥಾನ ಕೊಡುವುದು.

* ಸಮಾಜದಲ್ಲಿ ಸತ್ಸಂಸ್ಕಾರಗಳನ್ನು ಮೂಡಿಸುವ, ಸದಭಿರುಚಿಯ ಕಾದಂಬರಿ, ಕಥೆ-ಕವನ-ಲೇಖನ ಸಂಗ್ರಹಗಳನ್ನು ಪ್ರಕಟಿಸುವುದು.

* ಸರಳ ಹಾಗೂ ಉದ್ಬೋಧಕ ರೀತಿಯಲ್ಲಿ ಸ್ತ್ರೀಸಾಹಿತ್ಯ, ಶಿಶುಸಾಹಿತ್ಯಗಳನ್ನು ಹೊರತರುವುದು.

ಈ ಯೋಜನೆ ರೂಪುಗೊಳ್ಳುತ್ತಿದ್ದಂತೆಯೇ ನಮ್ಮ ದೇಶದ ಮೇಲೆ ದೊಡ್ಡ ಪ್ರಮಾಣದಲ್ಲಿ ಪಾಕಿಸ್ತಾನದ ದುರಾಕ್ರಮಣ ನಡೆಯಿತು. ಭಾರತವೂ ಅದಕ್ಕೆ ತಕ್ಕ ಪರಾಕ್ರಮದ ಉತ್ತರ ನೀಡಿ, ತನ್ನ ವಿಜಯಧ್ವಜವನ್ನು ಮೆರೆಸಿತು. ಅದರ ಸಂಸ್ಮರಣೆಯಾಗಿ ಸ್ವತಂತ್ರ ಭಾರತದ ಸಮರಶೂರರ ಕೆಚ್ಚು ಕಲಿತನಗಳನ್ನು ಪರಿಚಯಿಸುವ ಸತ್ಯ ಘಟನೆಗಳ ಕಥಾಚಿತ್ರಣ 'ರಣವೀಳ್ಯ' ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಥಮ ಪುಷ್ಪವಾಗಿ ಅರಳಿತು. ನಾಡಿನ ಜನತೆಯಿಂದ ಅದಕ್ಕೆ ದೊರೆತ ಆತ್ಮೀಯ ಸ್ವಾಗತ ನಮ್ಮ ಮುಂದಿನೆಲ್ಲ ಪ್ರಯತ್ನಗಳಿಗೆ ಶುಭ ಹರಕೆಯಾಯಿತು.

ತಾಯಿ ಭಾರತಿಯ ದಿವ್ಯಮಂದಿರದಲ್ಲಿ ಮತ್ತೊಮ್ಮೆ ಹೊತ್ತಿರುವ ಈ ಜ್ಞಾನದ ಸೊಡರಿಗೆ ಜನರ ಒಲವು ನೆರವುಗಳ ತೈಲಧಾರೆ ಹೀಗೆಯೇ ನಿರಂತರವಾಗಿ ಒದಗಿಬರಲಿ ಎಂಬುದೊಂದೇ ನಮ್ಮ ಹೃದಯದಾಳದ ಹಾರೈಕೆ.

ವಿಶ್ವಾವಸು–ಮಾರ್ಗಶಿರ ಶುದ್ಧ ಏಕಾದಶಿ
ಗೀತಾಜಯಂತಿ : ೪–೧೨–೧೯೬೫

ಪ್ರಕಾಶಕರು

ಪುಸ್ತಕವನ್ನು ಕುರಿತು

ಭಾರತೀಯ ಸಂಸ್ಕೃತಿಯನ್ನು ಸಾವಿರಾರು ವರ್ಷಗಳಿಂದ ರೂಪಿಸಿಕೊಂಡು ಬಂದಿರುವ ಜೀವನಮೌಲ್ಯಗಳನ್ನು ಕುರಿತ ಪ್ರಬಂಧಗಳ ಸಂಕಲನ ಇದು. ಸುದ್ದಿಮಾಧ್ಯಮಗಳು ಇಂದು ವಿಕೃತಿಗಳಿಗೇ ಪ್ರಾಧಾನ್ಯ ಕೊಡುವ ಪರಿಪಾಠ ಬೆಳೆದಿದೆ. ಸದ್ಗುಣಗಳ ಪೋಷಣೆಯಲ್ಲಿ ಬಾಹ್ಯ ಪರಿಸರಕ್ಕೂ ಒಂದು ಮುಖ್ಯ ಪಾತ್ರವಿದೆ. ಜೀವನದ ಮೂಲಾಧಾರತತ್ವಗಳಾದ ಶ್ರದ್ಧೆ, ಉದ್ಯೋಗಶೀಲತೆ ಮುಂತಾದವನ್ನು ಕುರಿತು ಮಾತನಾಡಲೂ ಜನ ಹಿಂಜರಿಯುವ ಪರಿಸ್ಥಿತಿ ಇಂದು ಇದೆ. ಆದ್ದರಿಂದ ಭಾರತೀಯ ಸಂಸ್ಕೃತಿಯ ಸಮರ್ಥ ಹಾಗೂ ಮನೋಜ್ಞ ವ್ಯಾಖ್ಯಾಕಾರರಾದ ಪ್ರ. ಗ. ಸಹಸ್ರಬುದ್ಧೆ ಅವರ ಈ ಅರ್ಥಪೂರ್ಣ, ಲಲಿತ, ಸುಲಭಗ್ರಾಹ್ಯ ಪ್ರಬಂಧಗಳನ್ನು ಕನ್ನಡ ವಾಚಕರಿಗೆ ಒದಗಿಸುವುದು ಅತ್ಯಂತ ಅಪೇಕ್ಷಣೀಯವೆಂದು ಭಾವಿಸಿದ್ದೇವೆ. ಮೂಲ ಮರಾಠಿಯ ಮೂರೂ ಸಂಪುಟಗಳನ್ನು ರಾಷ್ಟ್ರೋತ್ಥಾನ ಸಾಹಿತ್ಯ ಕ್ರಮಶಃ ಪ್ರಕಟಿಸಲಿದೆ.

ಮೂಲ ಬರಹದ ಯಥಾವತ್ ತರ್ಜುಮೆಯಾಗದೆ ಮೂಲದ ಭಾವನಾಪರಿಸರ ಮೂಡುವಂತೆ ಅನುವಾದದಲ್ಲಿ ಶ್ರಮವಹಿಸಲಾಗಿದೆ. ನಮ್ಮ ಬೇಡಿಕೆಯಂತೆ ಅತ್ಯಲ್ಪ ಕಾಲದಲ್ಲಿ ಈ ಭಾವಾನುವಾದವನ್ನು ಸಿದ್ಧಪಡಿಸಿಕೊಟ್ಟ ಗುಲ್ಬರ್ಗದ ಶ್ರೀಮತಿ ಶಕುಂತಲಾ ಎನ್. ರಾವ್ ಅವರಿಗೂ, ಪ್ರಕಾಶನಕಾರ್ಯದಲ್ಲಿ ನೆರವಾದ ಶ್ರೀ ಉಮೇಶ ಕುಲಕರ್ಣಿ ಅವರಿಗೂ ನಾವು ಕೃತಜ್ಞತೆ ಸಲ್ಲಿಸುತ್ತಿದ್ದೇವೆ.

ಶ್ರೀ ವಿಭವ ಸಂ॥ ಯುಗಾದಿ — ಪ್ರಕಾಶಕರು

೧೮-೩-೧೯೮೮

ಪ್ರಸ್ತಾವನೆ

ಇತಿಹಾಸ, ಸಮಾಜಶಾಸ್ತ್ರ, ಸಾಹಿತ್ಯ ಹಾಗೂ ಮಹಾಪುರುಷರ ಚರಿತ್ರೆ ಇವುಗಳನ್ನು ಅಭ್ಯಸಿಸಿದಾಗ, ವ್ಯಕ್ತಿಯ ಅಥವಾ ಸಮಾಜದ ಉನ್ನತಿಗಾಗಿ ಕೆಲವು ಗುಣಗಳು ಅತ್ಯಂತ ಆವಶ್ಯಕವಾದವು ಎಂದು ತಿಳಿದುಬರುತ್ತದೆ. ಆ ಗುಣಗಳೇ ಮಾನವತೆಯ ಒರೆಗಲ್ಲು. ಈ ಗುಣಗಳು ಎಷ್ಟು ಹೆಚ್ಚು ಪ್ರಮಾಣದಲ್ಲಿ ಆ ವ್ಯಕ್ತಿ ಅಥವಾ ಸಮಾಜದಲ್ಲಿ ಕಂಡುಬರುವವೋ ಆ ಸಮಾಜ ಅಷ್ಟೇ ಉನ್ನತ ಮಟ್ಟದ್ದೆಂದು ತಿಳಿದುಬರುತ್ತದೆ. ಶ್ರೀರಾಮಚಂದ್ರನಿಂದ ಹಿಡಿದು ವಿದ್ಯಾನಿಧಿ ಬಾಬಾಸಾಹೇಬ ಅಂಬೇಡಕರರವರೆಗೆ ಎಲ್ಲ ಮಹಾಪುರುಷರ ಜೀವನಗಳು ಈ ಮಹಾನ್ ಗುಣಗಳಿಂದ ಶೃಂಗಾರಗೊಂಡಿವೆ.

ಈ ಗುಣಗಳು ವ್ಯಕ್ತಿಯ, ಸಮಾಜದ ಹಾಗೂ ಮಾನವತೆಯ ಅಸ್ತಿತ್ವಕ್ಕೆ ಅತ್ಯಾವಶ್ಯಕ. ಯಾವುದೇ ಜಾತಿ, ಪಂಥ, ಸಮಾಜ ಅಥವಾ ರಾಷ್ಟ್ರವೂ ಈ ಮಾತನ್ನು ಅಲ್ಲಗಳೆಯಲಾರದು.

ಈ ಲೇಖಕನಲ್ಲಿ ಈ ಗುಣಗಳಿವೆಯೆ ? ಇಲ್ಲ. ವಾಸ್ತವ ಜೀವನದಲ್ಲಿ ಕಂಡದ್ದು, ನೋಡಿದ್ದು, ಕೇಳಿದ್ದು, ಅನಿಸಿದ್ದು, ಓದಿದ್ದು, ಇವುಗಳಿಂದ ಉಂಟಾದ ವೈಚಾರಿಕತೆ, ಭಾವುಕತೆಗಳನ್ನು ಮುಕ್ತಮನಸ್ಸಿನಿಂದ ಈ ಲೇಖನಗಳಲ್ಲಿ ಬರೆಯಲಾಗಿದೆ. ತನ್ನ ಸಮಾಜದ, ದೇಶದ ಬಗೆಗಿನ ಕಾಳಜಿ ಹಾಗೂ ದೇಶದ ದುರ್ದೆಸೆಯ ಬಗೆಗಿನ ಕಳಕಳಿ, ಉನ್ನತಿಯ ಬಗೆಗಿನ ತಳಮಳವೇ ನನ್ನ ಅಧಿಕಾರವಾಗಿದೆ. ಇಷ್ಟೇ ನನ್ನ ಅಧಿಕಾರ ! ಭಾವನೆಯ ಭರದಲ್ಲಿ ಅರಿಯದೆ ಯಾರ ಮೇಲಾದರೂ ದೋಷಾರೋಪಣೆಯಾಗಿದ್ದರೆ, ಶಬ್ದಗಳು ಕಟುವಾಗಿ ಕಂಡಿದ್ದರೆ, 'ಪುಟ್ಟ ಬಾಯಿಗೆ ದೊಡ್ಡ ತುತ್ತು' ಎಂಬಂತೆ ಕಂಡಿದ್ದರೆ, ಆ ಬಗ್ಗೆ ನಮ್ರನಾಗಿ ಕ್ಷಮೆ ಯಾಚಿಸುತ್ತೇನೆ.

ನಮ್ಮ ದೇಶ, ಮಹಾ ವಿಭೂತಿಗಳ ದೇಶ. ಪ್ರಭು ರಾಮಚಂದ್ರನಿಂದ ಮಹಾತ್ಮ ಗಾಂಧಿಯವರವರೆಗೆ ವಿಶ್ವಮಾನ್ಯರಾದ ನೂರಾರು ಮಹಾಪುರುಷರು ಜನ್ಮತಾಳಿದರು. ಆದರೆ ಮಹಾಪುರುಷರ ಹುಟ್ಟಿನಿಂದಲೇ ದೇಶ ದೊಡ್ಡದಾಗುವುದಿಲ್ಲ. ದೇಶದ ಸಾಮಾನ್ಯರಲ್ಲಿ ಸಾಮಾನ್ಯನ ಜೀವನಮಟ್ಟವೂ ಶ್ರೇಷ್ಠವಾಗಬೇಕು. ಇದು ಪ್ರತಿಯೊಬ್ಬನೂ ಮಾಡಬೇಕಾದ ಕೆಲಸ, ಪ್ರತಿಯೊಬ್ಬನೂ ಸ್ವೀಕರಿಸಬೇಕಾದ ಕೆಲಸ. ಈ ಕೆಲಸದ ಬಾಹ್ಯ ಸ್ವರೂಪ ಗೌಣವಾಗಿದೆ ! ಆಂತರಿಕ ಸ್ವರೂಪ ಮಹತ್ವದ್ದಾಗಿದೆ. ದೇಶದ ಎಲ್ಲ ಮತ ಪಂಥಗಳೂ, ಆಬಾಲವೃದ್ಧರೂ ಈ ಕೆಲಸದ ಹೊಣೆ ಹೊತ್ತಾಗಲೇ ಏನಾದರೂ ಸಾಧ್ಯವಾದೀತು.

ನಾಗಪುರದ ರಾಮಕೃಷ್ಣಾಶ್ರಮದಿಂದ ಪ್ರಕಟವಾಗುವ 'ಜೀವನ ವಿಕಾಸ' ಮಾಸಪತ್ರಿಕೆಯಲ್ಲಿ ಈ ಎಲ್ಲ ಲೇಖನಗಳು ಬೆಳಕು ಕಂಡಿವೆ. ಅದರ ಸಂಚಾಲಕರಾದ ಸ್ವಾಮಿ

ಭಾಸ್ಕರೇಶ್ವರಾನಂದ. ಪ್ರಧಾನ ಸಂಪಾದಕರಾದ ಸ್ವಾಮಿ ಶಿವತತ್ವಾನಂದ ಮತ್ತು ಸಂಪಾದಕ ಸ್ವಾಮಿ ವ್ಯೋಮರೂಪಾನಂದ – ಇವರುಗಳು ನನಗೆ ಪ್ರೋತ್ಸಾಹಿಸಿ ಮಾರ್ಗದರ್ಶನ ಮಾಡಿದ್ದಾರೆ. ಅವರಿಗೆ ನಾನು ಕೃತಜ್ಞನಾಗಿದ್ದೇನೆ. ವಯಸ್ಸು, ಅನುಭವ ಮತ್ತು ಕರ್ತೃತ್ವ ಇವುಗಳಲ್ಲಿ ನನಗಿಂತ ಹಿರಿಯರಾದ ಶ್ರೀ ವಾ. ನಾ. ದೇಶಪಾಂಡೆಯವರು ಸಹಜಸ್ನೇಹದಿಂದ, ಅನೇಕ ಸಲಹೆ-ಸೂಚನೆಗಳನ್ನು ಕೊಟ್ಟು, ಮಾರ್ಗದರ್ಶನ ಮಾಡಿದ್ದಾರೆ. ಆ ಬಗ್ಗೆ ನಾನೆಷ್ಟು ಆಭಾರಿಯಾದರೂ ಸಾಲದು. ಶ್ರೀ ರಾ. ರಾ. ಗೋವಿಂದರಾವ್ (ಆಬಾಸಾಹೇಬ ಏಕಬೋಟೆ) ಇವರು ನನಗೆ ಪಿತೃಸಮಾನ ಪೂಜ್ಯರು. ಅವರ ಆಶೀರ್ವಾದ ಮತ್ತು ಮಾರ್ಗದರ್ಶನ ನನ್ನ ದೊಡ್ಡ ಬಂಡವಾಳವೆಂದು ಭಾವಿಸುತ್ತೇನೆ. ಈ ಲೇಖನ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿರುವಾಗ ಅನೇಕ ವಾಚಕರಿಂದ ನನಗೆ ಪತ್ರಗಳು ಬಂದಿವೆ. ಅನೇಕರು ತಮ್ಮ ಅಭಿಪ್ರಾಯಗಳನ್ನು ತಿಳಿಸಿ ನನ್ನನ್ನು ಪ್ರೋತ್ಸಾಹಿಸಿದ್ದಾರೆ. ಅವರೆಲ್ಲರಿಗೂ ನಾನು ಆಭಾರಿ.

ಖಾಮಗಾಂವ್, ಮಹಾರಾಷ್ಟ್ರ — **ಪ್ರ. ಗ. ಸಹಸ್ರಬುದ್ಧೆ**
೧೩–೬–೧೯೮೦

ಸಹೃದಯನಾದ ವಾಚಕ, ಲೇಖಕನ ಹೃದಯದ ಭಾವವನ್ನು ಅರಿಯುತ್ತಾನೆ. ಅವನಿಗೆ ಶಬ್ದಗಳ ದೊಂಬರಾಟ ಮುಖ್ಯವಲ್ಲ. ಆತನ ಭಾವನೆ, ಆ ಭಾವನೆಯ ಹಿಂದಿನ ಉದ್ದೇಶ, ಮತ್ತು ಉದ್ದೇಶಸಾಧನೆಗಾಗಿ ಬೇಕಾದ ಕಳಕಳಿ ಮುಖ್ಯವಾದವುಗಳು.

ಅದೇ ವಿಚಾರ ಸರಣಿಯಲ್ಲಿ ಈ ಪುಸ್ತಕದ ಅನುವಾದವನ್ನು ಎತ್ತಿಕೊಂಡಿದ್ದೇನೆ. ಇದು ಕೇವಲ ಶಬ್ದಗಳ ಅನುವಾದವಲ್ಲ. ಲೇಖಕರ ಭಾವನೆಯ ಭಾವಾನುವಾದವಾಗಿದೆ.

ಇಂದಿನ ಅಸಂತೃಪ್ತ ಬದುಕಿಗೆ, ಧ್ಯೇಯಹೀನ ಬದುಕಿಗೆ ಈ ಪುಸ್ತಕ ಒಂದು ಬೆಳಕಿನ ಕಿರಣವನ್ನು ಬೀರುವಲ್ಲಿ ಯಶಸ್ವಿಯಾದರೆ ಲೇಖಕರ ಉದ್ದೇಶ, ಅನುವಾದಕರ ಶ್ರಮ ಸಾರ್ಥಕ.

ಗುಲಬರ್ಗ — **ಶಕುಂತಲಾ ಎನ್. ರಾವ್**
೨೫–೧೨–೧೯೮೭ — ಅನುವಾದಕಿ

ಪರಿವಿಡಿ

೧ # ಶ್ರದ್ಧೆ

೧

ಶ್ರದ್ಧೆಯೇ ಮನುಷ್ಯಜೀವನದ ಆಧಾರವಾಗಿದೆ. ಆಧಾರವಿಲ್ಲದೆ ಆಧೇಯ ಇರಲು ಸಾಧ್ಯವಿಲ್ಲ. ಆಧೇಯಕ್ಕೆ ಭದ್ರತೆ ಒದಗಿಸಬೇಕಾದರೆ, ಆಧಾರವು ಸಶಕ್ತ, ಸ್ವಚ್ಛ ಮತ್ತು ಸುಂದರವಾಗಿರಬೇಕು. ನೀರು ಇಡಬೇಕಾದರೆ ಅದಕ್ಕೆ ಒಂದು ಪಾತ್ರೆ ಬೇಕು. ಕೆಲವರಲ್ಲಿ ಕೇವಲ ಬೊಗಸೆ ಇರಬಹುದು, ಕೆಲವರಲ್ಲಿ ಮಡಕೆ ಇರಬಹುದು. ಗಾಜಿನ, ಹಿತ್ತಾಳೆಯ ಇಲ್ಲವೇ ಬೆಳ್ಳಿಯ ಪಾತ್ರೆ ಕೆಲವರಲ್ಲಿದ್ದರೆ, ರತ್ನಖಚಿತ ಸುವರ್ಣ ಪಾತ್ರೆಯೂ ಹಲವರಲ್ಲಿ ಇದ್ದೀತು. ಒಟ್ಟಿನಲ್ಲಿ ಆಧಾರದ ಹೊರತು ಜೀವನದಲ್ಲಿ, ಕೊಡು – ಕೊಳ್ಳುವುದಷ್ಟೇ ಏಕೆ, ಅದರ ಅಸ್ತಿತ್ವವೂ ಇರಲಾರದು.

ನೀರು ಶುದ್ಧವಾಗಿ, ಸ್ವಚ್ಛವಾಗಿ ಇರಬೇಕಾದರೆ, ನೀರಿನ ಪಾತ್ರೆಯನ್ನೂ ಉಜ್ಜಿ ಒರೆಸಿ ಥಳಥಳ ಹೊಳೆಯುವಂತೆ ಇಡಬೇಕಾಗುತ್ತದೆ. ಅದರಂತೆ ಜೀವನದ ಆಧಾರವಾದ ಶ್ರದ್ಧೆಯನ್ನೂ ಸಹ ಯಾವ ಕಲ್ಮಶ ದಿಂದಲೂ ಕಲಂಕಿತವಾಗದಂತೆ ಕಾಪಾಡಬೇಕಾಗುತ್ತದೆ.

ಶ್ರದ್ಧೆ ಕೇವಲ ಆಶ್ರಯಸ್ಥಾನ ಮಾತ್ರವಲ್ಲ, ಅದು ಮಹಾನ್ ಪ್ರೇರಕ ಶಕ್ತಿಯೂ ಆಗಿದೆ. ವ್ಯಕ್ತಿಯೊಬ್ಬನಿಗೆ ಎತ್ತರದಿಂದ ಕೆಳಕ್ಕೆ ಹಾರಬೇಕಾಗಿದ್ದರೆ ಕೆಳಗಿನ ಭೂಭಾಗವು ಗಟ್ಟಿಯಾಗಿರಬೇಕು. ಆ ನೆಲ ಪೊಳ್ಳಾಗಿದ್ದರೆ ? ಆ ಭಾಗ ನೀರಿನಿಂದ ಕೊರೆದ ದಂಡೆಯಾಗಿದ್ದರೆ ? ಅದರೊಂದಿಗೆ ಅವನು ಕೂಡಾ ಕೆಳಕ್ಕೆ ಕುಸಿಯುತ್ತಾನೆ. ಆ ಭೂಭಾಗವು ಹಸಿಯಾಗಿ ಕೆಸರು ಮಣ್ಣಿನದಾಗಿರಬಾರದು, ಟೊಳ್ಳಾಗಿರಬಾರದು.

ಆಧಾರವು ಭದ್ರವಾಗಿರಬೇಕು. ಆಧಾರದ ಎಲ್ಲ ಪರಂಪರೆಯೂ ಶಕ್ತಿಶಾಲಿಯಾಗಿರಬೇಕು. ನೀರಿನ ಆಧಾರವಾದ ಕೊಡವು ಸೋರಬಾರದು. ಕೊಡದ ಆಧಾರವಾದ ಅಡ್ಡಣಿಗೆಯೂ ಸರಳವಾಗಿರಬೇಕು ; ಅದು ಕುಂಟಬಾರದು. ಅಡ್ಡಣಿಗೆಯ ಆಧಾರವಾದ ಜಮೀನು ಸಮತಟ್ಟಾಗಿರಬೇಕು. ಇಳಿಜಾರಾಗಲಿ, ಕೊರಕಲಾಗಲಿ ಇರಕೂಡದು. ಅಂತೆಯೇ ಶ್ರದ್ಧೆಯ ಪರಂಪರೆಯೂ ಸಶಕ್ತವಾಗಿರಬೇಕು. ಯಾವುದಾದರೂ ಒಂದು ವಸ್ತುವನ್ನು ತಗಲುಹಾಕಬೇಕಾದರೆ ಮೊಳೆ ಅಥವಾ ಗೂಟ ಭದ್ರವಾಗಿರಬೇಕು. ಇಲ್ಲದಿದ್ದರೆ ಗೂಟವೂ ಕಿತ್ತೀತು, ವಸ್ತುವೂ ಬಿದ್ದುಹೋದೀತು. ಅದೇ ರೀತಿ ಶ್ರದ್ಧೆಯ ಸ್ಥಾನವನ್ನು ನೋಡಿ ಪರೀಕ್ಷಿಸಿ ನಿಶ್ಚಯಿಸಬೇಕು. ನೀರನ್ನು ಸೋಸಿ ಕುಡಿಯಬೇಕು. ಮುಂದೆ ನೋಡಿ ಹೆಜ್ಜೆಯಿಡಬೇಕು. ಅದರಂತೆ ಶ್ರದ್ಧೆಯನ್ನು ಪರೀಕ್ಷಿಸಿಡಬೇಕು.

೨

ಮನುಷ್ಯನೆಂದರೆ ಶ್ರದ್ಧೆಯ ನಾನಾ ಬಗೆಯ ಮೂಟೆ. ಶ್ರದ್ಧೆ ಇಲ್ಲದೆ ಮನುಷ್ಯ ಜೀವಿಸಲಾರ. ಅಶ್ರದ್ಧೆಯುಳ್ಳವನೆಂದು ನಾವು ಯಾರನ್ನು ಸಂಬೋಧಿಸುತ್ತೇವೆಯೋ, ಅವನಿಗೂ ಒಂದಲ್ಲ ಒಂದರ ಮೇಲೆ ವಿಶ್ವಾಸ ಇದ್ದೇ ಇರುತ್ತದೆ. ಒಬ್ಬ ಹೇಳುತ್ತಾನೆ – "ದೇವರು ಧರ್ಮದ ಮೇಲೆ ನನಗೆ ವಿಶ್ವಾಸವಿಲ್ಲ. ನಾನು ಭಗವಂತನ ಅಸ್ತಿತ್ವವನ್ನು ನಂಬುವುದಿಲ್ಲ. ದೇವರನ್ನು ನಂಬುವುದೆಂದರೆ ಅದು ಅಂಧಶ್ರದ್ಧೆ." ಆಗ ಯಾರೊ ಒಬ್ಬರು ಅವನಿಗೆ ಹೇಳಿದರು – "ಅಪ್ಪಾ, ದೇವರನ್ನು ನಂಬುವುದು, ಒಂದು ಪಾಲು ಅಂಧಶ್ರದ್ಧೆಯಾದರೆ, ದೇವರನ್ನು ನಂಬದಿರುವುದು ಹತ್ತು ಪಾಲು ಅಂಧಶ್ರದ್ಧೆಯಾಗಿದೆ. ಪರಮಾತ್ಮನಲ್ಲಿ ಶ್ರದ್ಧೆಯುಳ್ಳವನು ತಿಳಿದೂ ತಿಳಿದೂ ತನ್ನ ಶರಣಾಗತಿಯನ್ನು ಬರೆದುಕೊಟ್ಟಿದ್ದಾನೆ, ಎಂದು ನಾವು ಭಾವಿಸೋಣ. ಆದರೆ ನೀನು ! ದೇವರೇ ಇಲ್ಲವೆಂದು ಹೇಳುವ ನೀನು ಯಾವ ಆಧಾರದ ಮೇಲೆ ಹೀಗೆ ಹೇಳುತ್ತಿ ? ಸಂಪೂರ್ಣ ವಿಶ್ವವನ್ನು ಸುತ್ತಿ ಬಂದಿದ್ದೀಯಾ ? ಸೂರ್ಯ ಚಂದ್ರರ ವಿವರ ತಿಳಿದಿದ್ದೀಯಾ ? ಹೋಗಲಿ, ನೀನು ಕುಣಿದು ಕುಪ್ಪಳಿಸುವ ಭೂಮಿಯ ಬಗ್ಗೆಯಾದರೂ

ಸಂಪೂರ್ಣ ಅರಿತಿದ್ದೀಯಾ ? ನಿನಗಿನ್ನೂ ವಿಶ್ವದ ಅಣುವಿನ ರಹಸ್ಯವನ್ನೂ ಭೇದಿಸಲಾಗಿಲ್ಲ. ನಿನ್ನೆಲ್ಲ ಬಡಾಯಿ ಇರುವುದು, ನಿನ್ನ ಪಂಚೇಂದ್ರಿಯಗಳ ಮೇಲೆ. ಆದರೆ ಅದರ ಶಕ್ತಿ ಅತ್ಯಲ್ಪವಾಗಿದೆ. ಆ ವಿಷಯದಲ್ಲಿ ಅನೇಕ ಪಶುಪಕ್ಷಿಗಳಷ್ಟೇ ಅಲ್ಲ, ಕ್ಷುದ್ರ ಕ್ರಿಮಿ ಕೀಟಗಳ ಸಾಮರ್ಥ್ಯ ಕೂಡಾ ನಿನಗಿಂತ ಹೆಚ್ಚಾಗಿದೆ. ಹೀಗಿರುವಾಗ ದೇವರೇ ಇಲ್ಲವೆಂದು ನೀನು ಖಾತ್ರಿಯಿಂದ ಹೇಗೆ ಹೇಳಬಲ್ಲೆ ? ಈ ಜಗತ್ತಿನ ಮೂಲೆ ಮೂಲೆಯನ್ನು ನೀನು ನೋಡಿದ್ದಿ, ಅದರ ಎಲ್ಲ ರಹಸ್ಯವನ್ನೂ ನೀನು ತಿಳಿದಿರುವಿ ಎಂದು ಹೇಳಬಲ್ಲೆಯಾ ? ಕಣ್ಣಿನಿಂದ – ವೈಜ್ಞಾನಿಕವಾದ ಕಣ್ಣಿನಿಂದ – ಕಾಣುವ ಜಗತ್ತು ಕೂಡಾ ಅಖಿಲ ವಿಶ್ವದ ಸಾವಿರದಲ್ಲಿ ಒಂದಂಶವೂ ಆಗಿಲ್ಲ ಎಂದು ಹೇಳುತ್ತಾರೆ. ನೀನು ತಿಳಿದುಕೊಂಡಿರುವ ಪೃಥ್ವಿ, ಅಪ್, ತೇಜ, ವಾಯು, ಆಕಾಶ ಇವುಗಳ ಶಕ್ತಿಯ ಸಾವಿರಾರುಪಟ್ಟು ಶಕ್ತಿಯು ನಿನಗಿನ್ನೂ ಅಜ್ಞಾತವಾಗಿದೆ. ಹೀಗಿರುವಾಗ ಈ ಎಲ್ಲದರ ರಕ್ಷಕನೂ ಶಿಕ್ಷಕನೂ ಇಲ್ಲವೆಂದು ನೀನು ನಿರ್ಧಾರಪೂರ್ವಕವಾಗಿ, ಆಗ್ರಹದಿಂದ ಹೇಗೆ ಹೇಳುತ್ತಿ? ಆ ಬಗ್ಗೆ ಹೇಳಬೇಕೆಂದರೆ – 'ದೇವನಿಲ್ಲ' ಎಂದು ಹೇಳುವ ನಿನ್ನ ಶ್ರದ್ಧೆಯು ಕೇವಲ ಅಂಧಶ್ರದ್ಧೆಯಾಗಿದೆ, ಹತ್ತುಪಟ್ಟು ಅಂಧಶ್ರದ್ಧೆಯಾಗಿದೆ."

ಮುರುಕು ಅಡ್ಡಣಿಗೆಯ ಮೇಲಿನ ಒಡೆದ ಮಡಕೆಯ ನೀರು ಇದ್ದರೂ ಇಲ್ಲದಂತೆ. ಅದೇ ರೀತಿ ದುರ್ಬಲ ಶ್ರದ್ಧೆಯು ಅಶ್ರದ್ಧೆಯೆಂದೇ ಹೇಳಲಾಗುತ್ತದೆ. ಅಶ್ರದ್ಧೆಯು ಅಹಂಕಾರಜನ್ಯವಾದದ್ದು. ಶರೀರದ ಮೇಲಿನ ಮೋಹ ಮತ್ತು ಆತ್ಮದ ಉಪೇಕ್ಷೆಯಿಂದಲೇ ಅಶ್ರದ್ಧೆಯು ಹುಟ್ಟುತ್ತದೆ. ಅಲ್ಲಿಂದ ಒಂದು ವಿಷಚಕ್ರ ಆರಂಭವಾಗುತ್ತದೆ. ಇಂದ್ರಿಯಗಳ ದಾಸ್ಯದಿಂದ ಅಶ್ರದ್ಧೆ ಹುಟ್ಟುತ್ತದೆ. ಮತ್ತು ಅಶ್ರದ್ಧೆಯಿಂದ ಮನುಷ್ಯನು ಇನ್ನೂ ಹೆಚ್ಚುಹೆಚ್ಚಾಗಿ ಇಂದ್ರಿಯಗಳ ದಾಸನಾಗುತ್ತಾ ಹೋಗುತ್ತಾನೆ. ಬೇಟೆಗಾರನು ಗಿಳಿಯನ್ನು ಹಿಡಿಯಲು ಒಂದು ಬಲೆಯನ್ನು ಹಾಕಿ, ಅದಕ್ಕೆ ಒಂದು ಕೊಳವೆಯನ್ನು ಇಟ್ಟು ಅದು ಅಲ್ಲಾಡುವಂತೆ ಮಾಡುತ್ತಾನೆ. ಗಿಳಿಯು ಅದನ್ನು ಗಟ್ಟಿಯಾಗಿ ಹಿಡಿದುಕೊಂಡು ಕುಳಿತುಕೊಳ್ಳುತ್ತದೆ. ಮತ್ತು ತನಗೆ ರೆಕ್ಕೆಗಳಿರುವುದನ್ನೇ ಮರೆಯುತ್ತದೆ. ಬಲೆಯಲ್ಲಿ ಸಿಕ್ಕಿಬೀಳುತ್ತದೆ. ಮನುಷ್ಯನ ಗತಿಯೂ ಹಾಗೇ ಆಗುತ್ತದೆ

ಅಶ್ರದ್ಧೆಯಿಂದ ಅವನು ಚಂಚಲ ಇಂದ್ರಿಯಗಳ ಆಮಿಷಕ್ಕೆ ಬಲಿಯಾಗಿ, ಕೊನೆಗೆ ದುರ್ಗುಣಗಳ ಮುಷ್ಟಿಯಲ್ಲಿ ಸಿಲುಕುತ್ತಾನೆ.

೩

ಪವಿತ್ರ ಆಚರಣೆಯಿಂದಲೇ ಶ್ರದ್ಧೆಯು ನಿರ್ಮಾಣವಾಗುತ್ತದೆ. ಒಂದು ವೇಳೆ ವ್ಯಕ್ತಿಯಲ್ಲಿ ಸತ್ಯನಿಷ್ಠೆ, ಪಾವಿತ್ರ್ಯ, ನಿಃಸ್ವಾರ್ಥ ಬುದ್ಧಿಗಳಿದ್ದರೆ ಜನ ಆತನೆಡೆಗೆ ಆಕರ್ಷಿತರಾಗುತ್ತಾರೆ. ಅವನ ಮಾತಿಗೆ ಬೆಲೆ ಬರುತ್ತದೆ. ಆತನು ಪ್ರತಿಯೊಬ್ಬರ ಹೃದಯಕ್ಕೆ ಲಗ್ಗೆ ಹಾಕುತ್ತಾನೆ. ಶ್ರದ್ಧೆಯ ಅಲೆ ನಿರ್ಮಾಣವಾಗುತ್ತದೆ.

ಒಂದು ಊರಿನಲ್ಲಿ ಒಬ್ಬ ಶಿಕ್ಷಕ ಮಕ್ಕಳಿಗೆ ಬೇಸಿಗೆ ರಜದಲ್ಲಿ ಈಜು ಕಲಿಸುತ್ತಿದ್ದ. ಊರಿನಲ್ಲಿ ನದಿ ಅಥವಾ ಕೆರೆ ಇರಲಿಲ್ಲ. ಒಂದು ದೊಡ್ಡ ಬಾವಿ ಇದ್ದಿತು. ಬಾವಿಯಲ್ಲಿ ಅವನು ಸ್ವತಃ ಈಜುತ್ತಾ, ಮಕ್ಕಳಿಗೆ ಮೇಲಿನಿಂದ ಹಾರುವಂತೆ ಹೇಳುತ್ತಿದ್ದ – "ನನ್ನಲ್ಲಿ ವಿಶ್ವಾಸವಿಡು. ಜಿಗಿ, ನಾನು ನಿನಗೆ ಮುಳುಗಲು ಬಿಡುವುದಿಲ್ಲ." ಇಷ್ಟು ಕೂಡಾ ಧೈರ್ಯವಿಲ್ಲದವನು ಈಜಲಿಕ್ಕೆ ಹೇಗೆ ಕಲಿತಾನು ? ಅನಂತರ ಹುಡುಗ ಧೈರ್ಯದಿಂದ ನೀರಿನಲ್ಲಿ ಜಿಗಿಯುತ್ತಿದ್ದ. ಶಿಕ್ಷಕ ಕೂಡಲೇ ಅವನನ್ನು ಕೈಮೇಲೆ ಎತ್ತಿ ಹಿಡಿದು ಈಜು ಕಲಿಸುತ್ತಿದ್ದ. ಹೀಗೆ ನೂರಾರು ಮಕ್ಕಳಿಗೆ ಈಜಿನಲ್ಲಿ ತರಬೇತಿ ಕೊಟ್ಟ. ಶಿಕ್ಷಕನ ಮಾತಿನಿಂದ, ಪ್ರತ್ಯಕ್ಷವಾಗಿ ಅನೇಕ ಸಲ ಅವನ ವರ್ತನೆಯನ್ನು ನೋಡುವುದರಿಂದ ಮಕ್ಕಳಿಗೆ ಅವನಲ್ಲಿ ನಂಬಿಕೆ ಹುಟ್ಟಿತು. ಏನು ಬೇಕಾದರೂ ಮಾಡಿಯಾರು, ಆದರೆ ನಮಗೆ ಎಂದೆಂದೂ ಮುಳುಗುವಂತೆ ಮಾಡುವುದಿಲ್ಲ ಎನ್ನುವ ದೃಢವಿಶ್ವಾಸ ಮಕ್ಕಳಲ್ಲಿ ಉಂಟಾಗಿತ್ತು. ಆ ಮಕ್ಕಳ ವಿಶ್ವಾಸ ಎಂದೆಂದೂ ಕುಂದದಂತೆ ಶಿಕ್ಷಕನ ಆಚರಣೆಯಿದ್ದಿತು. ಹೀಗೆ ಜೀವನದ ಪ್ರತಿಯೊಂದು ರಂಗದಲ್ಲಿಯೂ ಈ ರೀತಿ ವಿಶ್ವಾಸ ಸಂಪಾದಿಸಿರುವ ಶಿಕ್ಷಕರು ಮತ್ತು ಆ ವಿಶ್ವಾಸದ ಆಧಾರದ ಮೇಲೆ ಧುಮುಕಲು ಸಿದ್ಧರಾದ ಶಿಷ್ಯರ ಆವಶ್ಯಕತೆ ಇದೆ.

ಬಾವಿಯಲ್ಲಿ ಈಜುವವರ ಮಾತೇ ಭವಸಾಗರವನ್ನು ಈಜುವವರಿಗೆ ಕೂಡಾ ಅನ್ವಯಿಸುತ್ತದೆ. ಸಮರ್ಥ ರಾಮದಾಸರು ತಮ್ಮ ಶಿಷ್ಯನಿಗೆ ಬಾವಿ

ಯಲ್ಲಿ ಧುಮುಕಲು ಹೇಳಿದರು. ಅವರಲ್ಲಿ ವಿಶ್ವಾಸವಿಟ್ಟಿದ್ದ ಶಿಷ್ಯ ಬಾವಿಯಲ್ಲಿ ಧುಮುಕಿದ. ತನ್ನ ಉದ್ಧಾರವಾಯಿತೆಂದು ತಿಳಿದ. ಗುರುಗಳು ನಿಜವಾಗಿಯೂ ಅವನ ಜೀವನವನ್ನು ಕಲ್ಯಾಣಮಯವಾಗಿಸಿದರು. ಅವನ ಬಾಳು ಬಂಗಾರವಾಯಿತು.

ರಾಮಕೃಷ್ಣ ಪರಮಹಂಸರ ಶಿಷ್ಯ, ನರೇಂದ್ರನಾಥ ದತ್ತರು ಅತ್ಯಂತ ಬುದ್ಧಿವಂತ ಮತ್ತು ಮೇಧಾವಿಯಾಗಿದ್ದರು. ಪಾಶ್ಚಾತ್ಯ ವಿಚಾರ ಪ್ರಣಾಳಿಕೆಯಿಂದ ಪ್ರಭಾವಿತರಾಗಿದ್ದರೂ, ಪರಮಹಂಸರ ಕಡೆ ಮೇಲಿಂದ ಮೇಲೆ ಹೋಗುತ್ತಿದ್ದರು, ಚರ್ಚಿಸುತ್ತಿದ್ದರು. ಅವರನ್ನು ಅನೇಕ ಬಗೆಯಾಗಿ ಪರೀಕ್ಷಿಸಿದರು. ನಂತರ ಸರ್ವಸ್ವವನ್ನೂ ಗುರುಚರಣದಲ್ಲಿ ಸಮರ್ಪಿಸಿ ವಿವೇಕಾನಂದರಾದರು.

ಶ್ರದ್ಧೆ ಮತ್ತು ಬುದ್ಧಿಗಳ ಸಂಬಂಧ ಹಗಲು ರಾತ್ರಿಯಂತೆ, ಬೆಳಕು ಕತ್ತಲೆಯಂತೆ ಎಂದು ತಿಳಿಯುವುದು ತಪ್ಪು ಗ್ರಹಿಕೆಯಾಗಿದೆ. ಹಾಗಿದ್ದರೆ ವ್ಯಾಸ, ಶಂಕರಾಚಾರ್ಯ, ವಿವೇಕಾನಂದರಂಥ ಪ್ರಖರ ಬುದ್ಧಿಮತ್ತೆಯುಳ್ಳ ಮಹಾವ್ಯಕ್ತಿಗಳು, ತಮ್ಮ ಸಂಪೂರ್ಣ ಜೀವನವನ್ನು ಶ್ರದ್ಧೆ ಸ್ಥಾಪಿಸುವುದಕ್ಕಾಗಿ ಕಳೆಯುತ್ತಿರಲಿಲ್ಲ. "ಅರಿತು ನಡೆವುದೇ ಔಷಧಿ, ಅದು ನರಕದ ಸಂಪರ್ಕವನ್ನೂ ತಪ್ಪಿಸುವುದು" ಎಂದು ಬಲ್ಲವರು ಸುಮ್ಮನೆ ಹೇಳಿಲ್ಲ. ತರ್ಕದಿಂದ, ಬುದ್ಧಿಯಿಂದ ಶ್ರದ್ಧೆಯು ದೃಢಗೊಳ್ಳುತ್ತದೆ. ಶ್ರದ್ಧೆಯಿಂದ ಜೀವನಕ್ಕೆ ಒಂದು ಅರ್ಥ, ಒಂದು ಗುರಿ ಸಿಗುತ್ತದೆ. ಅದಕ್ಕೊಂದು ದಿಕ್ಕು, ಒಂದು ಗತಿ ಲಭಿಸುತ್ತದೆ. ನಿಧಾನವಾಗಿ ಜೀವನದ ಮಟ್ಟ ಹೆಚ್ಚುತ್ತಾ ಹೋಗುತ್ತದೆ. ನಿರಹಂಕಾರ, ನಿರಾಲಸ್ಯ, ಉದ್ಯಮಶೀಲತೆ, ತ್ಯಾಗ, ವಿನಯ ಮೊದಲಾದ ಗುಣಗಳಿಂದ ಜೀವನ ವೃಕ್ಷವು ಸಮೃದ್ಧಿಗೊಳ್ಳುತ್ತದೆ. ಶ್ರದ್ಧೆಯು ಈ ಅಲೆಯು ಸಂಪೂರ್ಣ ಸಮಾಜದಲ್ಲಿ ಹರಡುತ್ತದೆ. ಶಂಕರಾಚಾರ್ಯ, ವಿವೇಕಾನಂದರಿಂದ ತೊಡಗಿ ದಾಸತ್ರಯರವರೆಗೆ ಎಲ್ಲರೂ ಶ್ರದ್ಧೆಯ ಬೀಜವನ್ನು ಬಿತ್ತಿದರು. ಸಮಾನ ಶ್ರದ್ಧೆಯುಳ್ಳ ವ್ಯಕ್ತಿಗಳ ಸಮೂಹವೇ ರಾಷ್ಟ್ರವೆನಿಸುತ್ತದೆ. ರಾಷ್ಟ್ರದ ಅಂಗ ಪ್ರತ್ಯಂಗಗಳಲ್ಲಿ, ಶ್ರದ್ಧೆಯು ಸಮಾನ ರೂಪದಿಂದ ಪ್ರಸ್ಥಾಪಿತಗೊಂಡಾಗ, ರಾಷ್ಟ್ರ ಒಂದು ವಿರಾಟ್ ಶಕ್ತಿಯುಳ್ಳದ್ದಾಗುತ್ತದೆ. ಸುಖ, ಸಮೃದ್ಧಿ ಮತ್ತು ಐಶ್ವರ್ಯ ಪ್ರಾಪ್ತವಾಗುತ್ತದೆ.

೪

ಗೀತೆಯಲ್ಲಿ ಭಗವಂತನು ಕನಿಷ್ಠ ಹದಿನೈದು ಕಡೆಗಳಲ್ಲಿ ಶ್ರದ್ಧೆಯ ಮಹತ್ವವನ್ನು ವರ್ಣಿಸಿದ್ದಾನೆ. ಮೂರನೆಯ ಅಧ್ಯಾಯದಲ್ಲಿಯಂತೂ ಜ್ಞಾನಿಗಳಿಗೇ ಎಚ್ಚರಿಕೆ ಕೊಡಲಾಗಿದೆ – ನೀವು ಜ್ಞಾನಿಗಳಾಗಿದ್ದೀರೆಂದು ಅಜ್ಞಾನಿಗಳನ್ನು ನೋಡಿ ನಗಬೇಡಿರಿ. ಅವರ ಶ್ರದ್ಧೆಯನ್ನು ಅಳಿಯಬೇಡಿರಿ. ಈಜು ಕಲಿತವನು ಈಜುಕಾಯನ್ನು ಕಟ್ಟಿಕೊಂಡೇ ಕಲಿತಿರುತ್ತಾನೆ. ತನಗೆ ಈಜಲು ಬಂದ ಮೇಲೆ, ಹೊಸದಾಗಿ ಈಜುಕಾಯಿ ಕಟ್ಟಿಕೊಂಡವನನ್ನು ನೋಡಿ ನಗುತ್ತಾನೆ. ಅವರಲ್ಲಿ ಬುದ್ಧಿಭೇದವನ್ನುಂಟುಮಾಡುತ್ತಾನೆ. ಈ ರೀತಿ ಮಾಡುವುದು ಎಲ್ಲ ದೃಷ್ಟಿಯಿಂದಲೂ ಘಾತಕವಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಶ್ರದ್ಧೆಯುಳ್ಳವನಿಗೇ ಜ್ಞಾನ ಪ್ರಾಪ್ತಿಯಾಗುವುದೆಂದು ಭಗವಂತನು ಹೇಳಿದ್ದಾನೆ :

ಶ್ರದ್ಧಾವಾಂಲ್ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ ।
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ॥

(ಅಧ್ಯಾಯ ೪, ಶ್ಲೋಕ ೩೯)

"ಜಿತೇಂದ್ರಿಯನೂ, ಕರ್ತವ್ಯಪರನೂ, ಶ್ರದ್ಧೆಯುಳ್ಳವನೂ ಆದ ಮನುಷ್ಯನಿಗೆ ಜ್ಞಾನ ಲಭಿಸುತ್ತದೆ. ಮತ್ತು ಆ ಜ್ಞಾನದಿಂದಲೇ ಉತ್ತಮ ಮಟ್ಟದ ಶಾಂತಿ ಅವನಿಗೆ ಲಭಿಸುತ್ತದೆ." ಶ್ರದ್ಧೆ ಇಲ್ಲದವರಿಗೆ, ಸಂಶಯ ವೃತ್ತಿಯವರಿಗೆ ಇಹಪರದಲ್ಲಿ ದುಃಖವನ್ನೇ ಸಹಿಸಬೇಕಾಗುತ್ತದೆ.

ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ ।
ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥

(ಅಧ್ಯಾಯ ೪, ಶ್ಲೋಕ ೪೦)

ನಮ್ಮ ದೇಶದಲ್ಲಿ ಎಲ್ಲ ಕಡೆ ಈ ಮಾತಿನ ಸತ್ಯತೆಯು ಗೋಚರಿಸುತ್ತದೆ. ನಮ್ಮಲ್ಲಿ ಎಲ್ಲಾ ಕಡೆ ಸಂಶಯದ ವಾತಾವರಣ ಇದೆ. ಅಶ್ರದ್ಧೆ ಇದೆ. ಇದರಿಂದ ಮನೆ ಮನೆಗಳಲ್ಲಿ ಚಿಂತೆ, ಅಸ್ಥಿರತೆ, ನಿರಾಶೆಯ ಸಾಮ್ರಾಜ್ಯವೇ ಹರಡಿದೆ. ಮನಸ್ಸು ರುಕ್ಷವಾಗಿದೆ, ಶರೀರ ಶಿಥಿಲಗೊಂಡಿದೆ. ಸಂಪೂರ್ಣ ಸಮಾಜವೇ ವಿನಾಶದ ಕಂದಕದೆಡೆಗೆ ವೇಗದಿಂದ ಜಾರುತ್ತಿದೆ

ಎಂಬಂತೆ ತೋರುತ್ತದೆ. ಸಂಶಯ ಪಿಶಾಚಿಯು ಎಲ್ಲೆಲ್ಲೂ ಅಂಗೈಯಲ್ಲೇ ಕುಳಿತಿದೆ. ಮತ್ತು ಬಾಳಿನಲ್ಲಿ ವಿಷವನ್ನು ಬೆರೆಸುತ್ತಿದೆ.

ಒಂದು ಊರಿನಲ್ಲಿ ಒಬ್ಬ ಗೃಹಸ್ಥನಿದ್ದ. ಅವನಿಗೆ ಒಂದು ಸ್ವಲ್ಪ ಹೊಲ, ಒಂದು ಮನೆ ಇದ್ದಿತು. ಆತ ಒಂದು ದಿನ ಅಕಸ್ಮಾತ್ ಮರಣಿಸಿದ. ಪರ ಊರುಗಳಲ್ಲಿದ್ದ ಆತನ ಮಕ್ಕಳೆಲ್ಲ ಬಂದರು. ಹನ್ನೆರಡು ದಿನ ಆಗುವಷ್ಟರಲ್ಲೆ ಅವರು ತಮ್ಮ ತಮ್ಮಲ್ಲಿ ಆಸ್ತಿಗಾಗಿ ಬಡಿದಾಡತೊಡಗಿದರು. ಅವರಿಗೆ ಕುಟುಂಬ ವ್ಯವಸ್ಥೆಯಲ್ಲಿ ವಿಶ್ವಾಸವಿದ್ದಿಲ್ಲ, ತಾಯಿಯಲ್ಲಿ ವಿಶ್ವಾಸವಿರಲಿಲ್ಲ, ಹಿರಿಯರಲ್ಲಿ ಅಥವಾ ತಮ್ಮ ತಮ್ಮಲ್ಲೇ ನಂಬಿಕೆ ಇರಲಿಲ್ಲ. ಇಂಥ ಪ್ರಸಂಗದಲ್ಲಿ ಪ್ರಕರಣವನ್ನು ನ್ಯಾಯಾಲಯಕ್ಕೆ ಕೊಂಡೊಯ್ದರು. ಎಲ್ಲರೂ ತಮ್ಮ ತಮ್ಮ ವಕೀಲರನ್ನಿಟ್ಟರು. ವಕೀಲನಿಗೆ ಬೇಕಾದಷ್ಟು ಹಣ ಕೊಟ್ಟರು. ಆದರೆ ಕಚೇರಿಯಿಂದ ಹೊರಬರುವಾಗ ಅವರಿಗೆ ಅನಿಸುತ್ತಿತ್ತು : "ನಾನು ಹಣವನ್ನೇನೋ ಕೊಟ್ಟಿರುವೆ, ನಿಜ. ಆದರೆ ಈ ಮನುಷ್ಯ ಮನಸ್ಸಿಟ್ಟು ಕೆಲಸ ಮಾಡುವನೋ ಇಲ್ಲವೊ ?" ವಕೀಲನು ಹಾಗೆಯೇ ಯೋಚಿಸುತ್ತಾನೆ, "ಇಂದೇ ನನ್ನ ಕೈಗೆ ಸಿಕ್ಕಿದ್ದಾನೆ. ಸಿಕ್ಕಿದಷ್ಟು ಎಳೆದರೆ ಆಯಿತು. ನಾಳಿನ ಸುದ್ದಿ ನಾಳೆ."

ಹೊರಬಂದ ಮೇಲೆ ತನ್ನ ಕಕ್ಷಿದಾರನಿಗೆ ಹೇಳುತ್ತಾನೆ, "ನ್ಯಾಯಾಧೀಶನು ಲಂಚಕೋರನಿದ್ದಾನೆ, ಅವನು ಕೊಟ್ಟ ನ್ಯಾಯವೇ ನಿಜ."

ತನ್ನ ಮೇಲೆ, ಮತ್ತೊಬ್ಬರ ಮೇಲೆ, ಕಡೆಗೆ ಭಗವಂತನ ಮೇಲೆಯೂ ನಂಬಿಕೆ ಇಲ್ಲ. ಒಮ್ಮೆ ನಾಲ್ಕಾರು ಜನ ಕಳ್ಳರು ಕಳ್ಳತನ ಮಾಡಲು ಹೊರಟರು. ಒಬ್ಬ ಒಳಗಡೆ ನುಗ್ಗಿದ. ಉಳಿದವರು ಹೊರಗಡೆ ಕಾಯುತ್ತಿದ್ದರು. "ಅಕ್ಕಪಕ್ಕದಲ್ಲಿ ಯಾರೂ ಇಲ್ಲ, ನಿನ್ನ ಕೆಲಸ ಬೇಗನೆ ಮುಗಿಸು" ಎಂದು ಒಳಗಿರುವವನಿಗೆ ಸೂಚನೆಗಳನ್ನು ಕೊಡುತ್ತಿದ್ದರು. ಸ್ವಲ್ಪ ಸಮಯದ ನಂತರ ಒಳಗಿದ್ದ ಕಳ್ಳನು ಬರಿಗೈಯಿಂದ ಬಂದ. "ಅಕ್ಕಪಕ್ಕದವರಾರೂ ನೋಡುತ್ತಿರಲಿಲ್ಲ ನಿಜ, ಆದರೂ ಮೇಲಿನವನು ಒಂದೇ ಸಮನೆ ನೋಡುತ್ತಿದ್ದ" ಎಂದು ಹೇಳಿದ. ಮುಂದೆಂದೂ ಆತ ಕಳ್ಳತನ ಮಾಡಲಿಲ್ಲ.

ಇಂದು ಇಂಥ ಕಳ್ಳನನ್ನು ನೋಡಿ ಜನ ನಕ್ಕಾರು, ಹುಚ್ಚನೆಂದಾರು. ಮೇಲಿನವನು ಎಂಬವನು ಯಾರೂ ಇಲ್ಲ; ಈಶ್ವರನಿಲ್ಲ, ಆತ್ಮನಿಲ್ಲ, ಪಾಪ

ಪುಣ್ಯವಿಲ್ಲ, ಇವೆಲ್ಲ ಕೇವಲ ಕಲ್ಪನೆ ಎಂದಾರು. ಹಾಗೆಂದೇ ಎಲ್ಲೆಲ್ಲೂ ಅನಾಚಾರ ಮತ್ತು ಸಂಶಯಗಳು ಕೊಬ್ಬಿನಿಂದ ಬೆಳೆಯುತ್ತಿವೆ. ಮನೆಯಲ್ಲಿ ಯಾರಿಗಾದರೂ ಅನಾರೋಗ್ಯವಾದರೆ ವೈದ್ಯನ ಬಳಿ ಹೋಗುತ್ತಾರೆ. ಆದರೆ ವೈದ್ಯನ ಕೆಲಸದ ಬಗ್ಗೆ ನಂಬಿಕೆ ಇಲ್ಲ. ಔಷಧಿ ಅಂಗಡಿಗೆ ಹೋಗುತ್ತಾರೆ. ಆದರೆ ಆ ಔಷಧದ ಮೇಲೆ ನಮೂದಿಸಿದ ಘಟಕಗಳು ಇರುವ ಬಗ್ಗೆ ಖಾತ್ರಿ ಇಲ್ಲ. ವಿದ್ಯಾರ್ಥಿಯು ವಿದ್ಯಾಲಯ, ಮಹಾವಿದ್ಯಾಲಯಗಳಲ್ಲಿ ವರ್ಷಗಟ್ಟಲೆ ಕಳೆಯುತ್ತಾನೆ. ಆದರೆ ಆ ಶಿಕ್ಷಣವನ್ನು ಪಡೆಯಲೇಬೇಕೆಂಬ ದೃಢನಿಶ್ಚಯ ಆತನಲ್ಲಿರುವುದಿಲ್ಲ. ಈ ಶಿಕ್ಷಣದಿಂದ ತನ್ನ ಭಾವೀ ಜೀವನವು ಉಜ್ಜ್ವಲವಾದೀತೆಂಬ ಭರವಸೆ ಆತನಿಗಿಲ್ಲ. ಹಣ ಕೊಟ್ಟು ವಸ್ತುವನ್ನು ಖರೀದಿಸುತ್ತೇವೆ. ಆದರೆ ಎಷ್ಟೇ ಹೆಚ್ಚು ಹಣ ಕೊಟ್ಟರೂ ಆ ವಸ್ತುವಿನಲ್ಲಿ ಕಲಬೆರಕೆ ಕೃತ್ರಿಮತೆ ಇರಬಹುದು, ಅದು ಕಳಪೆಯಾಗಿರಬಹುದು ಎಂದು ಸತತವಾಗಿ ಮನಸ್ಸನ್ನು ಕೊರೆಯುತ್ತದೆ. ನಾಳೆ ಏನಾದೀತು ಎಂಬ ಭರವಸೆ ಇಲ್ಲ. ಕಪ್ಪುಬಿಳುಪಿನ ವಿಚಾರ ಮಾಡದೆ ಧನಸಂಗ್ರಹ ನಡೆದೇ ಇರುತ್ತದೆ. ಕೂಲಿಕಾರರು ಕಡಿಮೆ ಕೆಲಸ ಮಾಡಿ ಹೆಚ್ಚು ಕೂಲಿ ಪಡೆಯುವ ಪ್ರಯತ್ನದಲ್ಲಿರುತ್ತಾರೆ, ಮಾಲಿಕನು ಕಡಿಮೆ ಹಣ ಕೊಟ್ಟು ಹೆಚ್ಚು ಕೆಲಸ ಮಾಡಿಸುವ ಸನ್ನಾಹದಲ್ಲಿರುತ್ತಾನೆ. ಒಟ್ಟಿನಲ್ಲಿ ವಕೀಲ, ವೈದ್ಯ, ವಿದ್ಯಾರ್ಥಿ, ವ್ಯಾಪಾರಿ, ಕೂಲಿಗಾರ, ಮಾಲಿಕ ಎಲ್ಲರಿಗೂ ಒಂದೇ ಚಿಂತೆ. ನಾಳೆ ನನ್ನ ಗತಿ ಏನಾದೀತು? ನನ್ನ ಹೊಟ್ಟೆ ಹೇಗೆ ತುಂಬಿಸಲಿ, ನನ್ನ ಶರೀರ ಹೇಗೆ ಕಾಪಾಡಲಿ ಎಂಬುದೇ ಆಗಿದೆ. ಜೀವನಾವಶ್ಯಕವಾದ ವಸ್ತುಗಳು ಎಲ್ಲರಿಗೂ ಸುಲಭವಾಗಿ ಲಭಿಸುವ ವ್ಯವಸ್ಥೆ ಸಮಾಜದಲ್ಲಿಲ್ಲ, ವ್ಯವಸ್ಥೆ ಇದ್ದಾಗಲೂ ವ್ಯಕ್ತಿಯ ಮನಸ್ಸು ಸಮಾಧಾನ ಸ್ಥಿತಿಯಲ್ಲಿರುವುದಿಲ್ಲ. ಶರೀರದ ಹೊರತು ಇನ್ನೂ ಏನಾದರೂ ಇದೆ ಎಂದು ಅವನಿಗೆ ಅನಿಸುವುದೇ ಇಲ್ಲ. ಅದಕ್ಕಾಗಿ ಸುಳ್ಳು ಮಾತನಾಡುತ್ತಾನೆ, ಠಕ್ಕತನ ಮಾಡುತ್ತಾನೆ, ಉದರಂಭರಣಕ್ಕಾಗಿಯೇ ಆತ್ಮವನ್ನು ತುಂಡು ತುಂಡು ಮಾಡಿ ಮಾರಿಕೊಳ್ಳುತ್ತಾನೆ, ಮತ್ತು ವಿನಾಶದ ಬೀಜಗಳನ್ನು ಸಮಾಜದಲ್ಲಿ ಬಿತ್ತುತ್ತಾನೆ. ಮಾವು, ಹಲಸು, ತೆಂಗು ಮೊದಲಾದ ಮರಗಳು ಫಲ ಕೊಡುವಲ್ಲಿ ವರ್ಷಗಟ್ಟಲೆ ಸಮಯ ಬೇಕು. ಆದರೆ ವಿಷಪೂರಿತವಾದ ಮುಳ್ಳಿನ ಗಿಡಗಳು ಕೂಡಲೇ ಬೆಳೆಯುತ್ತವೆ ; ಕಡಿಮೆ ನೀರು-ಭೂಮಿಯಲ್ಲಿ

ಹಾಂ ಹಾಂ ಅನ್ನುವುದರಲ್ಲಿ ಬೆಳೆದು ಅಡ್ಡಾದಿಡ್ಡಿಯಾಗಿ ಬೆಳೆದು ಅಡವಿಯಾಗುತ್ತದೆ.

ಇಂದು ನಮ್ಮ ಸಮಾಜದಲ್ಲಿ ದುರ್ಗುಣಗಳ ಕಾಡೇ ಹಬ್ಬಿದೆ. "ಇದೇ ಏನು ಅವತಾರಿ ಪುರುಷರ, ಸಾಧು ಸಂತರ, ಕರ್ಮವೀರರ ಭೂಮಿ !" ಈ ಎಲ್ಲ ದುರ್ಗುಣಗಳ ಉಗಮ ಸಂಶಯದಿಂದಲೇ ಆಗಿದೆ. ಸಂಶಯವು ಅಶ್ರದ್ಧೆಯ ಸಂತಾನವಾಗಿದೆ. ಅಂತರಂಗದ ಅಶ್ರದ್ಧೆಯಿಂದ ಬಾಹ್ಯ ಅವ್ಯವಸ್ಥೆಯು ಉದಿಸಿದೆ. ಆಧ್ಯಾತ್ಮಿಕ, ಲೌಕಿಕ ಇವು ಒಂದೇ ನಾಣ್ಯದ ಎರಡು ಮುಖಗಳು. ಅಧ್ಯಾತ್ಮವು ಅಡಿಪಾಯವಾಗಿದೆ. ವ್ಯವಹಾರವು ಅದರ ಮೇಲೆ ನಿಂತ ಕಟ್ಟಡವಾಗಿದೆ. ಬುನಾದಿ ಸಡಿಲವಾಗಿದ್ದರೆ ಗೋಡೆಗಳು ಸೀಳು ಬಿಡುತ್ತಿವೆ.

೨೨

ಅನೇಕ ಚಿಕ್ಕ ದೊಡ್ಡ ಕಾರ್ಯಕರ್ತರು ಇಂದಿನ ಸಮಾಜ ವ್ಯವಸ್ಥೆಯ ವಿರುದ್ಧ ವ್ಯಕ್ತಿ ವ್ಯಕ್ತಿಯಲ್ಲಿರುವ ದುರ್ಗುಣಗಳ ವಿರುದ್ಧ ಕೂಗೆಬ್ಬಿಸುವುದನ್ನು ಕಾಣುತ್ತೇವೆ. ಕ್ವಚಿತ್ತಾಗಿ ಉಪಾಯವನ್ನು ಯೋಚಿಸಿರುತ್ತಾರೆ. ಆದರೆ ಇದೆಲ್ಲಾ ತೋರಿಕೆಯದಾಗಿರುತ್ತದೆ. ಕಾರಣ ಸಂಶಯದ ವಿಷಬಾಧೆ ಅವರಿಗೂ ಉಂಟಾಗಿದೆ. ಬಹುಶಃ ಬೇರೆಯವರಿಗಿಂತ ಹೆಚ್ಚು. ಒಂದು ಕಡೆ ತ್ಯಾಗದ, ಸೇವೆಯ ಭಾಷಣ ಮಾಡುತ್ತಾರೆ; ಇನ್ನೊಂದೆಡೆ ಕೆಸರಿನಲ್ಲಿ ಹುದುಗಿದ ಕ್ರಿಮಿಯಂತೆ ಭೋಗದಲ್ಲಿ ಮುಳುಗಿರುತ್ತಾರೆ. ಶುದ್ಧವಾದ ಉಪದೇಶವನ್ನು ಕೊಡುತ್ತಾರೆ. ಆದರೆ ಶ್ವಾಸಕ್ಕೊಮ್ಮೆ ಸುಳ್ಳು ಠಕ್ಕುಗಳನ್ನು ಮಾಡುತ್ತಾರೆ. ನಾಳೆ ನನ್ನ ಗತಿ ಏನು, ಮಕ್ಕಳ ಗತಿ ಏನಾದೀತು ಇದೇ ಚಿಂತೆ ಹಗಲಿರುಳು ಅವರನ್ನು ಕಾಡುತ್ತಿರುತ್ತದೆ. ಈ ಜಗತ್ತಿನಲ್ಲಿ ಭಗವಂತನಿದ್ದಾನೆಂಬ ನೆನಪು ಸಹ ಅವರಿಗಿರುವುದಿಲ್ಲ. 'ನಾ' 'ನಾ'(ನು) ಎಂದು ಜಗತ್ತನ್ನು ಗೆದ್ದವರೆಲ್ಲಾ ಮಣ್ಣಲ್ಲಿ ಅಡಿಗಿದರು ಎಂದವರು ಯೋಚಿಸುವುದಿಲ್ಲ. ಹಣ, ಪ್ರತಿಷ್ಠೆ, ಕೀರ್ತಿ, ಮನೆ, ಆಸ್ತಿ ಮತ್ತು ಇತರ ಸುಖೋಪಭೋಗಗಳ

ಕಡೆಗೆ ಅವರ ಗಮನವಿರುತ್ತದೆ. ಇದೇ ದೃಷ್ಟಿಯಿಂದ ಅವರು ತಮ್ಮನ್ನು ಮತ್ತು ಸಮಾಜವನ್ನು ನೋಡುತ್ತಾರೆ. ಆದ್ದರಿಂದ ಅವರು ಸೂಚಿಸಿರುವ ಎಲ್ಲ ಯೋಜನೆಗಳು ಕೇವಲ ತೋರಿಕೆಯದಾಗಿವೆ. ವಿಷವೃಕ್ಷದ ಕೊಂಬೆರೆಂಬೆಗಳನ್ನು ಕತ್ತರಿಸಿ ಬೇರನ್ನು ಮಾತ್ರ ಹಾಗೆಯೇ ಬಿಟ್ಟಂತೆ ಇದೆ ಅವರ ಎಲ್ಲಾ ಉಪಾಯಗಳು. ಇದರ ಪರಿಣಾಮವಾಗಿ ವಿಷವೃಕ್ಷ ಕತ್ತರಿಸಿದಂತೆಲ್ಲಾ ಹುಲುಸಾಗಿ ಬೆಳೆಯುತ್ತಿದೆ.

ಈ ವಿಷವೃಕ್ಷದ ನಿರ್ಮೂಲನೆಯಾಗಬೇಕಾದರೆ ಎಲ್ಲೆಡೆ ವಿಶ್ವಾಸವನ್ನು ಬಿತ್ತಬೇಕು, ಶ್ರದ್ಧೆಯನ್ನು ನೆಡಬೇಕು. ಸಾತ್ವಿಕ ಶ್ರದ್ಧೆ ಬೇಕು. ಪರಂಪರೆಯ ಶ್ರದ್ಧೆ ಬೇಕು. ಪರಮಾತ್ಮನಲ್ಲಿ ಶ್ರದ್ಧೆ ಬೇಕು. ಈ ಜಗತ್ತನ್ನು ಸೃಷ್ಟಿಸಿದವನು ಪರಮಾತ್ಮ, ಮಾನವಕುಲವನ್ನು ಸೃಷ್ಟಿಸಿದವನೂ ಅವನೇ ಎನ್ನುವ ಶ್ರದ್ಧೆ ಬೇಕು. ನಾನು ಭಗವಂತನ ಪುತ್ರನಿದ್ದೇನೆ, ಪ್ರಾಣಿ ಮಾತ್ರರೆಲ್ಲ ನನ್ನ ಬಾಂಧವರು, ಪ್ರತಿಯೊಬ್ಬರ ಜೀವನಕ್ಕೂ ಏನಾದರೂ ಅರ್ಥ ಇದ್ದೇ ಇದೆ ಎಂಬ ಶ್ರದ್ಧೆ ಬೇಕು. ದೇಹಕ್ಕಿಂತಲೂ ಶೀಲ ಚಾರಿತ್ರ್ಯ ಅಧಿಕ ಬೆಲೆಯುಳ್ಳದ್ದು. ಪ್ರಾಣವನ್ನು ಬಲಿ ಕೊಟ್ಟಾದರೂ ಅದನ್ನು ಕಾಪಾಡಬೇಕೆಂಬ ಶ್ರದ್ಧೆ ಬೇಕು. ಸ್ವಂತ ಕರ್ತೃತ್ವಶಕ್ತಿಯ ಮೇಲೆ ಶ್ರದ್ಧೆ ಇರಬೇಕು. ಸರ್ವಶಕ್ತಿವಂತನಾದ ನನ್ನ ಅಂತರಂಗ ಪರಮಾತ್ಮನು ದಲ್ಲಿದ್ದಾನೆ, ನಾನು ಅವನ ಅಂಶವೇ ಆಗಿರುವೆ – ಎಂಬ ಶ್ರದ್ಧೆ ಬೇಕು. ಜೀವಿಗಳಲ್ಲಿಯೂ ಈಶನಿದ್ದಾನೆ. ನಾನು ಶಿವನಿದ್ದೇನೆ ಮತ್ತು ಶಿವನಲ್ಲಿಯೇ ಲೀನನಾಗುವವನು ಎಂಬ ಶ್ರದ್ಧೆ ಬೇಕು.

೨ ಉದ್ಯೋಗಶೀಲತೆ

೧

ಬ್ರಿಟಿಷರು ನಮ್ಮ ದೇಶವನ್ನು ಆಳುತ್ತಿರುವಾಗ ಕೆಲವು ತಪ್ಪುತಿಳಿವಳಿಕೆಗಳನ್ನು ಹರಡಿದರು. ಹಿಂದುಸ್ಥಾನದಲ್ಲಿ ಬಿಸಿಲು ಹೆಚ್ಚಾಗಿರುವುದರಿಂದ ಇಲ್ಲಿನ ಜನರು ಸೋಮಾರಿಗಳಾಗಿದ್ದಾರೆ. ಇದು ಉಷ್ಣದೇಶ. ಬೆವರು ಸುರಿಯುತ್ತದೆ. ಮನೆಯಲ್ಲಿರಲಿಕ್ಕೆ ಆಗುವುದಿಲ್ಲ, ಹೊರಗೆ ಹೊಗಲಿಕ್ಕೆ ಆಗುವುದಿಲ್ಲ. ಯಾವಾಗಲೂ ನಿದ್ದೆ ಬರುತ್ತದೆ.... ಇತ್ಯಾದಿ. ಮತ್ತು ಇದೆಲ್ಲಾ ಸಹಜವೇ ಆಗಿದೆ. ಕಾರಣ ಇಲ್ಲಿಯ ಹವಾಮಾನ. ಇಲ್ಲಿ ಒಂದೇ ಬಗೆಯ ಬೆಳೆ ಬೆಳೆಯುತ್ತಿದೆ. ಅದೆಂದರೆ ಆಲಸ್ಯ, ಆಲಸ್ಯ. ಬರಿ ಆಲಸ್ಯ.

ಇಂಗ್ಲಿಷರು ಕುತ್ಸಿತತನದಿಂದ ಆಗಿನ ಕಾಲಕ್ಕೆ ಭಾರತೀಯರ ಮನಸ್ಸಿನಲ್ಲಿ ನೆಟ್ಟ ವಿಚಾರಗಳು ಇಂದು ಭಯಂಕರ ರಕ್ಕಸಿ ರೂಪ ಪಡೆದಿವೆ. ಮನೆ ಮನೆಗಳಲ್ಲಿ, ಅದೇ ಅಪಸ್ವರದ ಛಾಯೆಯಲ್ಲಿ ಸಮಗ್ರ ಸಮಾಜ ಜೀವನವೇ ಕಂಗೆಟ್ಟಿದೆ. ನಗರಗಳಲ್ಲಿ, ಹಳ್ಳಿಗಳಲ್ಲಿ, ಸುಶಿಕ್ಷಿತರಲ್ಲಿ, ಸ್ತ್ರೀ ಪುರುಷ, ಆಬಾಲ ವೃದ್ಧರೆಲ್ಲರನ್ನೂ ಆಲಸ್ಯ ಪಿಶಾಚಿ ಹಿಡಿದುಕೊಂಡಿದೆ. ಅದರಿಂದ ಆಯುಷ್ಯ ಕಡಿಮೆಯಾಗಿದೆ, ದಿನವು ಚಿಕ್ಕದಾಗಿದೆ, ಕೆಲಸದ ವೇಳೆ ಬಹಳ ಕಡಿಮೆ ಉಳಿಯುತ್ತಿದೆ. ಸಾಮಾನ್ಯ ಜನರ ಜೀವನದಲ್ಲಿ ಹುಮ್ಮಸ್ಸೇ ಇಲ್ಲ. ಯಾರಿಂದಲಾದರೂ, ಯಾವ ಕಡೆಯಿಂದಾದರೂ ದಾಳಿಯಾದರೆ ಮಾತ್ರ ಸ್ವಲ್ಪ ಕೈಕಾಲು ಆಡಿಸುತ್ತೇವೆ. ಮಾಡದೇ ವಿಧಿ ಇಲ್ಲ ಎನ್ನುವಾಗ ಮಾತ್ರ ಕೆಲಸ ಮಾಡುತ್ತೇವೆ. ಅನ್ಯಥಾ ಎತ್ತಿನ ಬಂಡಿಯಂತೆ ಜೀ ಜೀ ಎಂದು ನಮ್ಮ ಜೀವನ ನಡೆದಿದೆ. ಉದ್ಯೋಗ ಒಂದು ಅಪವಾದವಾಗಿದೆ. ಆಲಸ್ಯವು ನಮ್ಮ ಸ್ವಭಾವವೇ ಆಗಿದೆ.

ಸಮಗ್ರ ಆಯುಸ್ಸು ಹತಾಶೆಯಿಂದ, ಉದಾಸತನದಿಂದ, ತೇಗುವಿಕೆಯಿಂದ, ಆಕಳಿಕೆಯಿಂದ ತುಂಬಿದೆ. ಭಾರತೀಯ ಜನಜೀವನವೇ ಒಂದು ದೀರ್ಘ ಆಕಳಿಕೆಯಾಗಿದೆ !

ಆಕ್ರಮಣವಾದಾಗ ಸಮಾಜವು ಎಚ್ಚೆತ್ತುಕೊಳ್ಳುವುದು ನಿಜ. ಬೆಂಗಳೂರು, ಮುಂಬಯಿ, ಕಲಕತ್ತಾಗಳಂಥ ಪಟ್ಟಣಗಳಲ್ಲಿ ಕಾರ್ಖಾನೆಗಳು ಹಗಲಿರುಳು ಕೆಲಸ ಮಾಡುವುದೂ ನಿಜ. ಆದರೆ ದೇಶದ ವಿಶಾಲತೆಯನ್ನು ಗಮನಿಸಿದಾಗ, ಸಾಧಿಸಬೇಕಾದ ಸ್ಥಿರವಾದ ಪ್ರಗತಿಯನ್ನು ಗಮನಿಸಿದಾಗ, ಇದೆಲ್ಲಾ ಕೇವಲ ಬಾಹ್ಯ ಪರಿಸ್ಥಿತಿಯಿಂದ ಹುಟ್ಟಿದ ಅಪವಾದ ದೃಶ್ಯಗಳಾಗಿವೆ. ಆಂತರಿಕ ಚೈತನ್ಯದಿಂದ ಪ್ರಕಟವಾದ ಸಾರ್ವತ್ರಿಕ ದೃಶ್ಯಗಳಲ್ಲ.

ನಾವು ದೇಶದ ಪ್ರಗತಿಗಾಗಿ ಅನೇಕ ಯೋಜನೆಗಳನ್ನು ರೂಪಿಸುತ್ತೇವೆ. ಸುಖ, ಸಂಪತ್ತು ಲಭಿಸಲಿ ಎಂದು ಬಯಸುತ್ತೇವೆ. ಆದರೆ ಅದಕ್ಕಾಗಿ ಅತ್ಯವಶ್ಯವಾಗಿ ಬೇಕಾದ ಉದ್ಯೋಗಶೀಲತೆಯನ್ನು ಮಾತ್ರ ಉಪೇಕ್ಷಿಸು ತ್ತಿದ್ದೇವೆ. 'ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ' – ಉದ್ಯೋಗಿ ಯಾದ ಪುರುಷನಿಗೇ ಲಕ್ಷ್ಮಿ ಒಲಿಯುತ್ತಾಳೆ. ಈ ಸತ್ಯವು ಕೇವಲ ವ್ಯಕ್ತಿಗಷ್ಟೇ ಅಲ್ಲ, ಸಮಾಜಕ್ಕೂ ಅನ್ವಯಿಸುತ್ತದೆ. ಅತಿ ಚಿಕ್ಕದಾದ ಆದರೆ ಒಂದು ಕಾಲಕ್ಕೆ ಇಡಿ ಜಗತ್ತಿನ ಮೇಲೆ ಪ್ರಭಾವ ಬೀರಿದ ಇಂಗ್ಲೆಂಡಿನ ಇತಿಹಾಸ ನೋಡಿರಿ. ಜಗತ್ತು ಗದಗುಟ್ಟಿ ನಡುಗುವಂತೆ ಮಾಡಿದ ಹಿಡಿಯಷ್ಟು ಜಪಾನನ್ನು ಅಭ್ಯಾಸ ಮಾಡಿರಿ, ಅಥವಾ ಮೇಲಿಂದ ಮೇಲೆ ಭೀಕರ ಆಘಾತವನ್ನು ಎದುರಿಸಿ ಪುನಃ ದಿಟ್ಟತನದಿಂದ ಎದ್ದುನಿಲ್ಲುವ ಜರ್ಮನಿಯೆಡೆ ನೋಡಿರಿ : ತಮ್ಮ ಉದ್ಯೋಗಶೀಲತೆಯಿಂದಲೇ ಪ್ರಗತಿ ಯನ್ನು ಸಾಧಿಸಿದವರು. ಕ್ಲೈವ್, ವಾರನ್ ಹೇಸ್ಟಿಂಗ್ಸ್, ಮ್ಯಾಲಕಮ್, ಮೆಟ್‌ಕಾಫ್, ಎಲಫಿನ್‌ಸ್ಟನ್ ಇವರುಗಳ ಚರಿತ್ರೆಯನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದರೆ, ಅವರ ಕಠಿಣ ಪರಿಶ್ರಮ ನಮ್ಮ ಮನಸ್ಸಿನ ಮೇಲೆ ಮುದ್ರೆಯೊತ್ತುತ್ತದೆ. ದೇಶ ಬೇರೆ, ಭಾಷೆ ಬೇರೆ, ರೀತಿ-ನೀತಿಗಳೂ ಬೇರೆ. ಇಂಥ ಎಷ್ಟೋ ವೈರುಧ್ಯಗಳಲ್ಲೂ ಕಠಿಣ ಪರಿಶ್ರಮದಿಂದ ಎಲ್ಲ ತೊಂದರೆ ಗಳನ್ನು ನಿವಾರಿಸಿ ಸಫಲರಾದರು. ಇಲ್ಲಿನ ಭಾಷೆ ಕಲಿತರು, ರೀತಿ-ನೀತಿ

ಗಳನ್ನು ತಿಳಿದುಕೊಂಡರು. ಒಮ್ಮೆ ರಣದಲ್ಲಿ, ಒಮ್ಮೆ ಕಣದಲ್ಲಿ ಕೆಲಸ ಮಾಡಿದರು. ಸಾಮ್ರಾಜ್ಯಗಳನ್ನು ಸಂಪಾದಿಸಿದರು. ರಾಜ್ಯಗಳು ವಿನಾಕಾರಣ ಅಳಿಯಲಿಲ್ಲ, ಸಾಮ್ರಾಜ್ಯಗಳು ಪುಕ್ಕಟೆ ಸಿಗಲಿಲ್ಲ. ನಮ್ಮ ರಾಜ್ಯಗಳು ಹೋದವು. ಅದಕ್ಕೂ ಕಾರಣವಿದೆ. ಇಂಗ್ಲಿಷರಿಗೆ ರಾಜ್ಯ ದೊರೆಯಿತು. ಅದಕ್ಕೂ ಕಾರಣಗಳಿವೆ. ಉದ್ಯೋಗ, ಸಾಹಸ, ಧೈರ್ಯ, ಬುದ್ಧಿ ಮತ್ತು ಪರಾಕ್ರಮಗಳೇ ಭಗವಂತನನ್ನು ಪ್ರಸನ್ನಗೊಳಿಸುತ್ತವೆ.

ಉದ್ಯಮಃ ಸಾಹಸಂ ಧೈರ್ಯಂ, ಬುದ್ಧಿಃ ಶಕ್ತಿಃ ಪರಾಕ್ರಮಃ ।
ಏತಾನಿ ಯತ್ರ ವರ್ತಂತೇ ತತ ದೇವಃ ಪ್ರಸೀದತಿ ॥

೨

ನಮ್ಮ ರಾಷ್ಟ್ರವನ್ನು ಭಗವಂತನು ಅನುಗ್ರಹಿಸುವಂತಾಗಬೇಕಾದರೆ, ಮೇಲೆ ಕಾಣಿಸಿದ ಗುಣಗಳ ನೈವೇದ್ಯ ಮಾಡಬೇಕಾಗಿದೆ. ಈ ಗುಣಾವಳಿಯಲ್ಲಿನ ಪ್ರಥಮ ಮತ್ತು ಆಧಾರಭೂತವಾದ ಗುಣವೇ ಉದ್ಯಮಶೀಲತೆ. ದಟ್ಟವಾದ ಕಾಡಿನಲ್ಲಿ ಧೊ ಧೊ ಎಂದು ಸುರಿಯುವ ಜಲಪಾತ ! ಅಗಾಧ ಜಲಶಕ್ತಿ ನಷ್ಟವಾಗುತ್ತಿದೆ. ಅದರಂತೆ ವಿರಾಟ ಭಾರತೀಯ ಜನಜೀವನವು ಕಾಲದ ಅಪವ್ಯಯ ಮಾಡುತ್ತಲಿದೆ. 'ನಾಳೆ ಅಂದವನ ಮನೆ ಹಾಳು' ಎಂಬಂತೆ ಇಲ್ಲಿ ಸಾವಿರಾರು ಜನರ ಸಾವಿರಾರು ನಾಳೆಗಳು ವ್ಯರ್ಥವಾಗಿ ಕಳೆಯುತ್ತವೆ.

ಕಾಲೇಜು ವಿದ್ಯಾರ್ಥಿಗಳನ್ನೇ ನೋಡಿರಿ. ಇವರಿಗೆ ಎರಡು ಮೂರು ತಿಂಗಳು ಬೇಸಿಗೆ ರಜ ಇರುತ್ತದೆ. ರಜ ಕಳೆದ ಮೇಲೆ ಸಹಜವಾಗಿ ವಿದ್ಯಾರ್ಥಿಯೊಬ್ಬನನ್ನು ಕೇಳಿರಿ. ರಜೆಯಲ್ಲಿ ವಿಶೇಷ ಕೆಲಸ ಏನಾದರೂ ಮಾಡಿದೆಯಾ ? ಪ್ರವಾಸ ಹೋಗುವುದು, ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದು, ಸಮಾಜಕ್ಕೆ ಉಪಯೋಗಿಯಾದ ಚಿಕ್ಕಪುಟ್ಟ ಕೆಲಸ ಏನಾದರೂ ಮಾಡಿದೆಯಾ? ಆಸ್ಪತ್ರೆಗೆ ಹೋಗಿ ರೋಗಿಗಳ ಸೇವೆ ಅಥವಾ ಕೊಳಚೆ ಪ್ರದೇಶಕ್ಕೆ ಹೋಗಿ ಅಲ್ಲಿ ಏನಾದರೂ ಉಪಯುಕ್ತ ಕೆಲಸ ಮಾಡುವುದು ? – ಎಂದಾಗ ಯಾವ ಕೆಲಸವೂ ನನ್ನಿಂದ ಮಾಡಲಾಗಲಿಲ್ಲ ಎಂದೇ ಉತ್ತರ ಬಂದೀತು.

ದೇಶದ ಸಾವಿರಾರು ಯುವಕರ ಕ್ರಿಯಾಶಕ್ತಿ ಈ ರೀತಿ ವರ್ಷದಲ್ಲಿ ಮೂರು ತಿಂಗಳು ಅಪವ್ಯಯಗೊಂಡಾಗ ಆ ದೇಶದ ಉನ್ನತಿ ಹೇಗಾದೀತು ? ಇದರ ಅರ್ಥ ರಜೆ ಬೇಡವೆಂದಲ್ಲ. ಆದರೆ ರಜೆಯ ಅವಧಿಯನ್ನು ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ ಯಾವುದಾದರೂ ರಚನಾತ್ಮಕ ಕೆಲಸಗಳಲ್ಲಿ ತೊಡಗಿಸಬೇಕು.

ರಜ ಇರುವುದೇ ಮಜವಾಗಿ ಕಳೆಯುವುದಕ್ಕೆ ಎಂದು ಹೇಳಿಯಾರು, ಆದರೆ ಇದು ರಜ ಇರುವ ಅಥವಾ ರಜ ಕಳೆಯುವ ಪ್ರಶ್ನೆಯಲ್ಲ. ನಮ್ಮ ನಡತೆಯ ಪ್ರಶ್ನೆ ಇದು. ರಜ ಕಳೆದುಹೋದುದಕ್ಕೆ ದುಃಖವಿಲ್ಲ. ನಡತೆ ಕಳೆದುಕೊಂಡಿದ್ದಕ್ಕೆ ದುಃಖವಿದೆ ; ನಿರುದ್ಯೋಗತನದ ಅಭ್ಯಾಸ ವಾಗುತ್ತಿದೆ. ಅದು ಬೇರೆ ಸಮಯದಲ್ಲಿಯೂ ಪ್ರಕಟವಾಗುತ್ತದೆ. ಪರೀಕ್ಷೆಗೆ ನಾಲ್ಕು ಪುಸ್ತಕಗಳು ನಿಯಮಿತವಾಗಿವೆ. ಪರೀಕ್ಷಕರು ಈ ಪುಸ್ತಕಗಳೊಂದಿಗೆ, ಇದಕ್ಕೆ ಸಂಬಂಧಿಸಿದ ಇನ್ನೂ ನಾಲ್ಕು ಪುಸ್ತಕಗಳನ್ನು ಓದಬೇಕೆಂದು ಹೇಳುತ್ತಾರೆ. ಆದರೆ ಇತರ ಪುಸ್ತಕಗಳ ಮಾತಂತೂ ದೂರವೇ ಉಳಿಯಿತು. ನಿಯಮಿತವಾದ ಪುಸ್ತಕಗಳನ್ನೇ ಓದದೆ ಟಿಪ್ಪಣಿ ಗೈಡ್‌ಗಳನ್ನು ಉರು ಹೊಡೆದು ಹೇಗೊ ಒಂದು ತೇರ್ಗಡೆಯಾಗುತ್ತಾರೆ.

೩

ಇದು ಕೇವಲ ವಿದ್ಯಾರ್ಥಿಗಳ ಒಂದು ಉದಾಹರಣೆ. ಜೀವನದ ಎಲ್ಲ ಕ್ಷೇತ್ರಗಳಲ್ಲೂ ಇದೇ ಪ್ರವೃತ್ತಿ ಎದ್ದು ಕಾಣುತ್ತದೆ. ವೈದ್ಯ, ಶಿಕ್ಷಕ, ವ್ಯಾಪಾರಿ, ಕಾರಕೂನ, ಕೂಲಿಕಾರ, ರೈತ, ಮಾಲಿಕ–ಹೀಗೆ ಎಲ್ಲ ವೃತ್ತಿಯವರಲ್ಲೂ ಇದೇ ಪ್ರವೃತ್ತಿ ಎದ್ದು ಕಾಣುತ್ತದೆ. ಕೆಲವು ವರ್ಷಗಳ ಹಿಂದೆ ಹಳ್ಳಿಗರ ಜೀವನವು ನಸುಕಿನ ನಾಲ್ಕು ಗಂಟೆಗೇ ಪ್ರಾರಂಭವಾಗುತ್ತಿತ್ತು. ಹಿಂದೆ ನಸುಕಿನಲ್ಲಿ ಮನೆಮನೆಗಳಲ್ಲಿ ಬೀಸುವಕಲ್ಲಿನ ರಾಗದೊಂದಿಗೆ ಉದಯರಾಗದ ಸುಸ್ವರ ಕೇಳಿಬರುತ್ತಿತ್ತು. ಆದರೆ ಆ ಸ್ಥಳದಲ್ಲಿ ಇಂದು ಹಿಟ್ಟಿನ ಗಿರಣಿಗಳು ಬಂದಿವೆ. ಆ ಸಮಯದಲ್ಲಿ ಬೇರೆ ಕೆಲಸ ಆಗುತ್ತಿರುವುದೇ ಇಲ್ಲ. ಆ ಸಮಯ ನಿದ್ದೆಗೆ ಮೀಸಲಾಗಿದೆ.

ಪಟ್ಟಣಗಳಲ್ಲಿಯೂ ಚಿಕ್ಕ ದೊಡ್ಡ ಕಚೇರಿ ಕಾರ್ಖಾನೆಗಳಲ್ಲಿಯೂ ಕೆಲಸ ತಪ್ಪಿಸುವುದನ್ನೆ ಕಾಣುತ್ತೇವೆ. ಜೀವನವೇ ಒಂದೇ ಉಡಾಫೆಯಾಗಿದೆ! ದೀರ್ಘವಾದ ನೂಕುನಡೆಯಾಗಿದೆ. ಅಷ್ಟೇ ಅಲ್ಲ, ಕರ್ತವ್ಯ ದಕ್ಷತೆ, ಉದ್ಯೋಗಶೀಲತೆ ಇಲ್ಲಿ ಉಪಹಾಸಕ್ಕೆ ಗುರಿಯಾಗಿವೆ. 'ದಕ್ಷ ಕೆಲಸಗಾರನು ಹುಂಬ, ಕೆಲಸಗಳ್ಳನೇ ಜಾಣ' ಎಂಬ ಸೂತ್ರ ಇಂದಿನದಾಗಿದೆ. ಮೊಂಡು ಮೂಗಿನವರದೇ ಒಂದು ಊರು, ಅಲ್ಲಿಗೆ ಒಬ್ಬ ಸಂಡಿಗೆ ಎಸಳಿನಂತಿರುವ ಮೂಗಿನ ಮನುಷ್ಯ ಹೋದಾಗ ಎಲ್ಲರೂ ಅವನನ್ನು ಪರಿಹಾಸ್ಯ ಮಾಡಿದರಂತೆ. ಕುರುಡರೇ ಇದ್ದ ಊರಿಗೆ ಕಣ್ಣಿದ್ದವನು ಹೋದರೂ ಇದೇ ಹಣೆಬರಹ. "ಕಾಣುವುದು ? ಹಾಗಂದರೇನು ? ಇವನಿಗೆ ತಲೆ-ಗಿಲೆ ಕೆಟ್ಟಿರಬೇಕು" ಎಂದರಂತೆ ಅಲ್ಲಿನ ಕುರುಡರು. ಇಂದು ನಮ್ಮ ಭಾರತೀಯ ಉದ್ಯೋಗ ಜೀವನದಲ್ಲಿಯೂ ಇಂಥದೇ ಪ್ರವೃತ್ತಿ ಹೆಚ್ಚಾಗುತ್ತಿದೆ.

ಹಿಂದೆ ನಮ್ಮ ದೇಶದಲ್ಲಿ ಅನ್ನಛತ್ರಗಳಿರುತ್ತಿದ್ದವು, ಅರವಟ್ಟಿಗೆಗಳಿರುತ್ತಿದ್ದವು. ಆದರೆ ಯಾವ ಗೌರವಸ್ಥನೂ ಅಲ್ಲಿ ಊಟ ಮಾಡುತ್ತಿರಲಿಲ್ಲ, ನೀರು ಕುಡಿಯುತ್ತಿರಲಿಲ್ಲ. "ಪುಕ್ಕಟೆ ನನಗೆ ಯಾರ ವಸ್ತುವೂ ಬೇಡ" ಎನ್ನುವುದು ಆಗಿನ ಕಾಲದ ಸಮಾಜದ ಸರ್ವಸಮ್ಮತ ಧೋರಣೆಯಾಗಿತ್ತು. ಹಿಂದಿನವರು "ನಾನು ಬೆವರು ಸುರಿಸಿ ಸಂಪಾದಿಸಿದ ಹಣವಿದು, ಅನ್ಯಾಯದ ಗಳಿಕೆಯಲ್ಲ" ಎಂದು ಅಭಿಮಾನದಿಂದ ಹೇಳುತ್ತಿದ್ದರು. ಬೆವರು ಸುರಿಸುವುದು ದುಡಿಯುವುದು, ಆಗಿನ ಕಾಲದಲ್ಲಿ ಅಭಿಮಾನದ ಸಂಗತಿ ಎಂದು ತಿಳಿಯುತ್ತಿದ್ದರು. ಆದರೆ ಇಂದು ವಿವಿಧ ಕ್ಷೇತ್ರಗಳಲ್ಲಿನ ಜನರ ಮಾತಿನ ಸರಣಿಯನ್ನು ಗಮನಿಸಿದಾಗ, ಇಂದಿನ ಅಭಿಮಾನಾಸ್ಪದ ಸಂಗತಿಗಳು ಬೇರೆಯೇ ಆಗಿವೆ ಎಂದು ಕಂಡುಬರುತ್ತದೆ. ವಿದ್ಯಾರ್ಥಿ ಎನಿಸಿಕೊಳ್ಳುವವನು ಅಭ್ಯಾಸ ಮಾಡದಿರುವಲ್ಲಿಯೇ ಆನಂದ ಪಡೆಯುತ್ತಾನೆ, ಹೆಮ್ಮೆಪಡುತ್ತಾನೆ. ಸಿಪಾಯಿ ಎನಿಸಿಕೊಳ್ಳುವವನು ರಕ್ಷಣೆ ಮಾಡುವುದು ತನ್ನ ಕೆಲಸವಲ್ಲ, ಭಕ್ಷಣೆಯೇ ತನ್ನ ಕರ್ತವ್ಯವೆಂದು ತಿಳಿಯುತ್ತಾನೆ. ಅಧ್ಯಾಪಕರು, ಶಿಕ್ಷಕರು ತಾವು ಅತಿ ಕಡಿಮೆ ಕಲಿಸುವುದರಲ್ಲೇ ಗೌರವವೆಂದು ತಿಳಿಯುತ್ತಾರೆ. ಗುಮಾಸ್ತರು, ಅಧಿಕಾರಿಗಳು, ವ್ಯಾಪಾರಿಗಳು ಎಲ್ಲರೂ ಇದನ್ನೇ ಮಾಡುತ್ತಾರೆ. ವ್ಯಾಪಾರಿ ತಾನು ಪಡೆದ ಹಣದಲ್ಲಿ

ಯೋಗ್ಯ ವಸ್ತು ಕೊಡದೆ ವಂಚನೆ ಮಾಡುತ್ತಾನೆ. ಕಾರಣ ಮೋಸಗಾರನೇ ಹುಷಾರಿ ಎನ್ನುವುದು ಇಂದಿನ ಸೂತ್ರವಾಗಿದೆ. ಕಡಿಮೆ ಕೆಲಸ ಮಾಡುವುದು, ಮತ್ತು ಪುಕ್ಕಟ್ಟೆ ತಿನ್ನುವುದು ಚತುರತೆಯ ಲಕ್ಷಣವಾಗಿದೆ.

ಲಂಚಗುಳಿತನ, ಕಳವು, ಠಕ್ಕು ಇವೆಲ್ಲ ಈ ವಿಷವೃಕ್ಷದ ಹೂ ಕಾಯಿಗಳಾಗಿವೆ. ಕಷ್ಟಪಡದೆ ಕೆಲಸವಾಗಬೇಕು, ಹಣ ಸಿಗಬೇಕು. ಆಂದಾಗ ಮನುಷ್ಯ ಪಾಪಮಾರ್ಗವನ್ನು ಹಿಡಿಯುತ್ತಾನೆ. ಮಾನವನ ಶಾರೀರಿಕ ಮಾನಸಿಕ ಶಕ್ತಿಗಳು ಉದ್ಯೋಗದಲ್ಲಿ ಸಂಲಗ್ನಗೊಂಡಾಗ, ಜೀವನದಲ್ಲಿ ತನ್ನಿಂದ ತಾನೇ, ಅಚ್ಚುಕಟ್ಟುತನ ಹಾಗೂ ಸೌಂದರ್ಯ ಒದಗುತ್ತವೆ. ಮನಸ್ಸು ಮತ್ತು ಶರೀರಗಳು ನಿರುದ್ಯೋಗಿಯಾಗಿದ್ದಾಗಲೇ ದುಷ್ಟ ಪ್ರವೃತ್ತಿಗಳು ಅಲ್ಲಿ ಮನೆ ಮಾಡುತ್ತವೆ.

೪

ಕೆಲಸದ ವೇಳೆ ಕಡಿಮೆಯಾಗಬೇಕು, ಸಂಬಳ ಜಾಸ್ತಿಯಾಗಬೇಕು – ಈ ಬಗ್ಗೆ ಹೋರಾಡಲು ಅನೇಕ ಸಂಸ್ಥೆಗಳು ನಮ್ಮ ದೇಶದಲ್ಲಿವೆ. ಆದರೆ ಉದ್ಯೋಗಶೀಲತೆ, ಕರ್ತವ್ಯದಕ್ಷತೆ, ಕಾರ್ಯಕುಶಲತೆ ಹೆಚ್ಚಬೇಕು – ಈ ರೀತಿಯ ಪ್ರಯತ್ನಗಳು, ನಿಃಸ್ವಾರ್ಥ ಬುದ್ಧಿಯಿಂದ ರಾಷ್ಟ್ರಹಿತಕ್ಕಾಗಿ ಆಗಲಿಕ್ಕೆ ಬೇಕು ಎನ್ನುವ ಬಗ್ಗೆ, ಅನೇಕ ವಿದ್ಯಾವಂತ ವಿಚಾರವಂತರೂ ಅಲಕ್ಷಿಸುತ್ತಿದ್ದಾರೆ.

ಸಮಾಜದ ಉನ್ನತಿ ಆಗಬೇಕು ಎಂದು ನಮಗನಿಸುತ್ತಿದ್ದರೆ ಅದಕ್ಕಾಗಿ ಉದ್ಯೋಗವನ್ನೇ ಆಶ್ರಯಿಸಬೇಕು. 'ಕಾಯಕವೇ ಕೈಲಾಸ' – ಇದು ಭಾರತೀಯ ಜೀವನದ ಸ್ಥಾಯೀಭಾವವಾಗಬೇಕು. ನಮ್ಮ ಪೂರ್ವಜರ ಜೀವನವು ಬ್ರಾಹ್ಮೀಮುಹೂರ್ತಕ್ಕೆ ಶುರುವಾಗುತ್ತಿತ್ತು. ಪ್ರಾತಃಕಾಲ ನಾಲ್ಕು ಗಂಟೆಗೇ ಏಳುತ್ತಿದ್ದರು. ಅಂತರಂಗದ ಗುಹೆಯಲ್ಲಿ ವಿರಾಜಮಾನನಾದ ಈಶ್ವರನ ಸಾಕ್ಷಾತ್ಕಾರ ಮಾಡಿಕೊಂಡು, ತಮ್ಮಲ್ಲಿ ಅಡಕವಾದ ಪ್ರಚಂಡ ಶಕ್ತಿಯ ಅನುಭವ ಪಡೆಯುತ್ತಿದ್ದರು. ಅನಂತರ ಅವರ ದೈನಂದಿನ ಕ್ರಮ ಆರಂಭವಾಗುತ್ತಿತ್ತು. ಅವರ ಬಾಳಿನ ಪ್ರತಿಯೊಂದು

ವಿವರವೂ ಒಂದು ಮಹಾನ್ ಯಜ್ಞವೇ ಆಗಿರುತ್ತಿತ್ತು. ನಾವು ಅವರ ವಂಶಜರೇ ಆಗಿದ್ದೇವೆ. ಆ ಎಲ್ಲ ಶಕ್ತಿಗಳು ನಮ್ಮಲ್ಲಿಯೂ ಇವೆ! ಶಸ್ತ್ರಗಳನ್ನು ಬಳಸದಿದ್ದರೆ ನಿರುಪಯುಕ್ತವಾಗುತ್ತವೆ. ಅದರಂತೆಯೇ ಮಾನಸಿಕ ಶಕ್ತಿಯೇ ಇರಲಿ ಶಾರೀರಿಕ ಶಕ್ತಿಯೇ ಆಗಲಿ, ಉದ್ಯೋಗದಲ್ಲಿ ತೊಡಗಿಸಿದರೆ ಮಾತ್ರ ಅವು ಪ್ರಕಟವಾಗುತ್ತವೆ. ಉದ್ಯೋಗವಿಲ್ಲದಿದ್ದರೆ ಅವು ಅಲ್ಲಿಯೇ ಒದ್ದಾಡಿ ಸಾಯುತ್ತವೆ.

ಉದ್ಯೋಗ ಮಾಡುವವನಿಗೆ ಎಲ್ಲರಿಂದಲೂ ಸಹಾನುಭೂತಿ ಸಿಗುತ್ತದೆ. ಸಾಕ್ಷಾತ್ ಭಗವಂತನೂ ಕೂಡಾ ಕಠಿಣ ಪರಿಶ್ರಮ ಮಾಡುವವನಿಗೆ ಸಹಾಯ ಮಾಡುತ್ತಾನೆ ಎಂಬರ್ಥದ ವೇದವಾಕ್ಯ ಪ್ರಸಿದ್ಧವಾಗಿದೆ : 'ನ ಋತೇ ಶ್ರಾಂತಸ್ಯ ಸಖ್ಯಾಯ ದೇವಾಃ ।'

೩

ನಿರ್ಭಯತೆ

೧

ವ್ಯಕ್ತಿಯೇ ಆಗಿರಲಿ ಸಮಾಜವೇ ಆಗಿರಲಿ, ಐಹಿಕ ಉನ್ನತಿ ಸಾಧಿಸುವುದಿರಲಿ ಪಾರಮಾರ್ಥಿಕ ಉನ್ನತಿ ಸಾಧಿಸುವುದಿರಲಿ, ಅದಕ್ಕಾಗಿ ನಿರ್ಭಯತೆ ಅವನಲ್ಲಿರಬೇಕಾದದ್ದು ಆವಶ್ಯಕವಾಗಿದೆ. ಗೀತೆಯ ಹದಿನಾರನೆ ಅಧ್ಯಾಯದಲ್ಲಿ, ದೈವೀ ಸಂಪತ್ತಿನ ಬಗ್ಗೆ ಹೇಳುವಾಗ, ಭಗವಂತನು ಹೇಳಿದ ಮೊದಲನೆ ಗುಣವೇ "ಅಭಯ" :

ಅಭಯಂ ಸತ್ತ್ವಸಂಶುದ್ಧಿರ್ಜ್ಞಾನಯೋಗವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್ ॥

೨

ಅಭಯ ಎಂದರೆ ನಿರ್ಭಯತೆ, ಭಯವಿಲ್ಲದಿರುವಿಕೆ. ಈ ಸ್ಥಿತಿ ಹೇಗೆ ಲಭಿಸೀತು? ನಿಜವಾಗಿಯೂ ಈ ಸ್ಥಿತಿಯ ಕಲ್ಪನೆಯೇ ಅದೆಷ್ಟು ಆನಂದ ದಾಯಕವಾಗಿದೆ – ನನಗೆ ಯಾರ ಭಯವೂ ಇಲ್ಲ ಎನ್ನುವಂತಾದರೆ ! ಮನೆಯಲ್ಲಿ ಭಯವಿಲ್ಲ, ಹೊರಗಡೆ ಇಲ್ಲ, ಜನರಲ್ಲಿಲ್ಲ, ವನದಲ್ಲಿಲ್ಲ, ಜೀವನದಲ್ಲಿಲ್ಲ, ಮೃತ್ಯುವಿನಲ್ಲಿಲ್ಲ. ಯಾವುದೇ ಭೀತಿಯಿಲ್ಲ. ಆ ಸ್ಥಿತಿ ಹೇಗಿದ್ದೀತು ! ಮತ್ತು ಸಂಪೂರ್ಣ ಸಮಾಜವೇ ಈ ಬಗೆಯ ನಿರ್ಭೀತಿಯಿಂದ ಆವೃತವಾದರೆ, ಭೂಮಿಯಲ್ಲಿ ಸ್ವರ್ಗ ಅವತರಿಸೀತಲ್ಲವೆ ? ನಿರ್ಭಯತೆಯಿಂದ ನಿರ್ವೈರ, ನಿರ್ದ್ವಂದ್ವವೂ ನಿರ್ಮಾಣವಾದೀತು. ಪರಸ್ಪರರ ಮೇಲೆ ವಿಶ್ವಾಸ, ಸಹೃದಯತೆ ಮತ್ತು ಸತ್ಕಾರ್ಯಗಳ ರಾಮರಾಜ್ಯ ಹರಡುವುದು, ಸಂಪೂರ್ಣ ಮಾನವಜಾತಿಯೇ ಸನ್ಮಾರ್ಗದಲ್ಲಿ ಅಡಿಯಿಡುವುದು.

ಆದರೆ ಇದೆಲ್ಲಾ ಕನಸು ! ಬಹಳ ದೂರದ ಕನಸು ! ಅದು ನಿಜವಾಗುವ ಕಾಲ ಯಾವಾಗಲೋ. ಆದರೆ ಇಂದು ಮಾತ್ರ ಪರಿಸ್ಥಿತಿಯ ವೈರುಧ್ಯ ಎಲ್ಲ ಕಡೆ ಕಂಡುಬರುತ್ತಿದೆ. ಪ್ರಾಚೀನ ಕಾಲದಲ್ಲಿ ಮುನಿಗಳ ಆಶ್ರಮದಲ್ಲಿ ಹುಲಿ, ಸಿಂಹ, ಜಿಂಕೆ, ಆಕಳು ಒಟ್ಟಿಗೆ ವಾಸಿಸುತ್ತಿದ್ದವು ಎನ್ನುವ ವರ್ಣನೆಯನ್ನು ನಾವು ಓದುತ್ತೇವೆ. ಆ ನಿರ್ಭಯ ವಾತಾವರಣದ ಕೇವಲ ಕಲ್ಪನೆಯಿಂದಲೇ ಮೈ ರೋಮಾಂಚನಗೊಳ್ಳುತ್ತದೆ. ಆದರೆ ಇಂದಿನ ಪ್ರತ್ಯಕ್ಷ ಜೀವನದಲ್ಲಿ ಪ್ರಾಣಿಗಳ ಮಾತು ಬಿಡಿ, ಮನುಷ್ಯನನ್ನು ಕಂಡರೆ ಮನುಷ್ಯನೇ ಭೀತಿಗೊಳ್ಳುತ್ತಾನೆ, ಮತ್ತು ಮನುಷ್ಯನನ್ನು ಮನುಷ್ಯನೇ ಕಬಳಿಸುತ್ತಿದ್ದಾನೆ ! ಭೀತಿ, ಭೀತಿ ! ನಾಲ್ಕೂ ಕಡೆ ಭಯದ ವಾತಾವರಣವೇ ಹರಡಿದೆ. ಅದರಿಂದಲೇ ಅನೇಕ ದುರ್ಗುಣಗಳು ಗಿಜಗಿಜಿಗುಟ್ಟುವುದು.

೩

ಈ ಭೀತಿ ಎನ್ನುವ ವಸ್ತುವಾದರೂ ಯಾವುದು ? ಅದು ಹೇಗೆ ಹುಟ್ಟುತ್ತದೆ ? ಅದು ಹೇಗೆ ಬೆಳೆಯುತ್ತದೆ ? ಅದು ಎಲ್ಲಿ ಇರುತ್ತದೆ ? ಅದು ಬರುವುದು ಹೇಗೆ ? ಮತ್ತು ಹೋಗುವುದು ಹೇಗೆ ? ಅದರ ದೃಶ್ಯ, ಅದೃಶ್ಯ ರೂಪಗಳಾದರೂ ಯಾವುವು ? ಈ ಎಲ್ಲ ಪ್ರಶ್ನೆಗಳ ಉತ್ತರ ಹುಡುಕಲು ಬಹಳ ದೂರ ಹೋಗಬೇಕಾಗಿಲ್ಲ. ನಮ್ಮ ಒಳ-ಹೊರಗು ಎಲ್ಲೆಲ್ಲೂ ದೊಡ್ಡ ಅಕ್ಷರಗಳಲ್ಲಿ ಉತ್ತರ ಬರೆದಿದೆ.

ಭೀತಿ ಮನುಷ್ಯನ ಮನದಲ್ಲೇ ಇದೆ. ಇದು ಮನಸ್ಸಿನ ಒಂದು ಅವಸ್ಥೆಯಾಗಿದೆ. ಅಪರಿಚಿತವಾದ, ವಿಕಾರವಾದ ವಸ್ತು ಭೀತಿಯನ್ನು ಹುಟ್ಟಿಸುತ್ತದೆ. ಒಬ್ಬ ಯುವಕ ಅಪರಿಚಿತ ದೊಡ್ಡ ನಗರಕ್ಕೆ ಹೋಗುವಾಗ ಅವನಿಗೆ ಭಯವಾಗುತ್ತದೆ – 'ಅಲ್ಲಿನ ಸ್ಥಳ ಹೇಗಿದ್ದೀತು ? ಜನ ಹೇಗಿದ್ದಾರು ?' ಎಂದು ಮನಸ್ಸಿನಲ್ಲಿ ಚಿಂತಿಸುತ್ತಾನೆ.

ಭೀತಿಯು ವ್ಯಕ್ತಿಗತವಾದದ್ದು. ಸಮಾನ ಪರಿಸ್ಥಿತಿಯಲ್ಲಿ ಮನುಷ್ಯನ ಮನೋಭಾವದ ಪ್ರಕಾರ ಬೇರೆ ಬೇರೆ ಪ್ರತಿಕ್ರಿಯೆ ಕಾಣಿಸುವುದು. ರಸ್ತೆಯಲ್ಲಿ ಎದುರಿನಿಂದ ಒಂದು ಹುಲಿ ಬಂದರೆ ಪಟ್ಟಣದಲ್ಲಿರುವ ಮನುಷ್ಯ

ಗಾಬರಿಪಡುತ್ತಾನೆ. ಆದರೆ ಕಾಡಿನಲ್ಲಿ ವಾಸಿಸುವವನಿಗೆ ಅದರಲ್ಲಿ ವಿಶೇಷ ವೇನೂ ಕಾಣಿಸುವುದಿಲ್ಲ. ಬೇಟೆಗಾರನೊಬ್ಬನಿಗೆ ಹುಲಿ ಕಂಡಾಗ ಅತ್ಯಂತ ಆನಂದವಾಗುತ್ತದೆ. ಅದರಂತೆ ನಗರವಾಸಿಗಳಲ್ಲಿಯೂ ಬೇರೆ ಬೇರೆ ತರದ ಪ್ರತಿಕ್ರಿಯೆ ಕಾಣಬಹುದು. ಒಬ್ಬನು ಅಳಬಹುದು, ಒಬ್ಬನು ಕಿರುಚ ಬಹುದು. ಇನ್ನೊಬ್ಬನ ಬಾಯಿಂದ ಶಬ್ದಗಳೇ ಹೊರಡಲಾರವು, ನಾಲಿಗೆ ಗಂಟಲಿಗೆ ಅಂಟಿಕೊಳ್ಳಬಹುದು. ಒಬ್ಬನು ಪಟ್ಟೆಂದು ಕೂಡಬಹುದು, ಇನ್ನೊಬ್ಬ ಗಿಡದ ಮೇಲೆ ಹತ್ತಬಹುದು, ಮತ್ತೊಬ್ಬ ಭೀತಿಯಿಂದ ಗಟ್ಟಿಯಾಗಿ ಕಣ್ಣು ಮುಚ್ಚಿಕೊಳ್ಳಬಹುದು. ಇವೆಲ್ಲ ಭೀತಿಯು ನಿರ್ಮಿಸುವ ಲಕ್ಷಣಗಳು.

೪

ಭಯ ಮತ್ತು ಕ್ರೋಧ ಇವು ಬಾಹ್ಯ ಸ್ವರೂಪದಲ್ಲಿ ಪರಸ್ಪರ ವಿರೋಧಿಯಾಗಿ ಕಂಡರೂ ಇವೆರಡೂ ದುರ್ಬಲತೆಯ ಸಂತಾನಗಳೇ. ಕ್ರೋಧವು ಕಾಣಲಾರದ ದುರ್ಬಲತೆ; ಭಯವು ಕಾಣಬಹುದಾದ ದುರ್ಬಲತೆ. ತಮಗೆ ಒಗ್ಗುವುದಿಲ್ಲ, ತಿಳಿಯುವುದಿಲ್ಲ, ತಿಳಿಸಲು ಬರುವುದಿಲ್ಲ, ಉತ್ತರ ಕೊಡಲು ಬರುವುದಿಲ್ಲ, ಎನ್ನುವ ಭಾವನೆಯಿಂದ ಜನ ಸಿಟ್ಟಿಗೆ ಏಳುತ್ತಾರೆ. ಸುದ್ದಿಯಿಂದ 'ಗುದ್ದಿಗೆ' ಬರುತ್ತಾರೆ. ಇನ್ನೊಬ್ಬನನ್ನು ತೆಗಳಿ ತಪ್ಪಿತಸ್ಥನೆಂದು ನಿರ್ಧರಿಸಿ, ದೇಹದಂಡನೆಯ ಭೀತಿ ತೋರಿಸಿ, ಅವರು ತಮ್ಮ ಸ್ವಂತದ ದೌರ್ಬಲ್ಯವನ್ನು, ಅಯೋಗ್ಯತೆಯನ್ನು ಮುಚ್ಚಿಟ್ಟು ಕೊಳ್ಳುತ್ತಾರೆ. ತಮ್ಮ ಸ್ವಂತದ ದೋಷವನ್ನು ಒಪ್ಪಿಕೊಳ್ಳುವ ಪ್ರಾಮಾಣಿಕತೆಯೂ ಅವರಲ್ಲಿರುವುದಿಲ್ಲ, ಅಂಥವರು ಕುಣಿಯಲು ಬಾರದಿದ್ದರೂ ನೆಲ ಡೊಂಕೆಂದು ಹೇಳುತ್ತಾರೆ. ಅಂತೆಯೇ ಬಹುಶಃ ದುರ್ಬಲ ಮನುಷ್ಯರು ಕ್ರೋಧಿಗಳಾಗಿರುತ್ತಾರೆ; ಕ್ರೋಧಿಗಳು ದುರ್ಬಲರಾಗಿರುತ್ತಾರೆ.

ಸಿಟ್ಟು ಮನುಷ್ಯನನ್ನು ಆಕ್ರಮಣಕಾರಿಯನ್ನಾಗಿ ಮಾಡಿದರೆ ಭಯ ಅವನನ್ನು ಪಲಾಯನವಾದಿಯನ್ನಾಗಿ ಮಾಡುತ್ತದೆ. ಪ್ರಬಲನಾದ ಪ್ರತಿಸ್ಪರ್ಧಿ ಎದುರಾದಾಗ, ಅವನ ಮುಂದೆ ತನ್ನದೇನೂ ನಡೆಯುವುದಿಲ್ಲ

ಅವನು ಶಕ್ತಿಶಾಲಿ ಎಂದು ತಿಳಿದಾಗ ಭಯ ಹುಟ್ಟುತ್ತದೆ. ಆದರೆ ಎದುರಾಳಿ ದುರ್ಬಲನಾಗಿದ್ದಾನೆ, ಅವನನ್ನು ನಾವು ಸಹಜವಾಗಿ ದಂಡಿಸಬಹುದು ಎಂದು ತಿಳಿದಾಗ ಕ್ರೋಧ ಹುಟ್ಟುತ್ತದೆ. ಕ್ರೋಧದಿಂದ ಕಣ್ಣು ಕೆಂಪಗಾಗಿ ಮುಖ ವಿಕಾರಗೊಳ್ಳುತ್ತದೆ. ಮುಷ್ಟಿ ಬಿಗಿಯುತ್ತದೆ. ಮನುಷ್ಯ ಮುನ್ನುಗ್ಗುತ್ತಾನೆ. ಭಯಗೊಂಡಾಗ ಕಣ್ಣು ಬೆಳ್ಳಗಾಗುತ್ತವೆ, ಮುಖ ನಿಸ್ತೇಜವಾಗುತ್ತದೆ, ಕೈಕಾಲು ಸಡಿಲಗೊಳ್ಳುತ್ತದೆ, ಭಯದಿಂದ ಓಡಿ ಹೋಗಬಹುದು ಇಲ್ಲವೇ ನಿಂತಲ್ಲಿಯೇ ಮೂರ್ಛೆ ಬೀಳಬಹುದು.

ಃ

ಭೀತಿಗ್ರಸ್ತ ಅವಸ್ಥೆಯಲ್ಲಿ ಯಾವುದೇ ರೀತಿಯ ಪ್ರಗತಿ ಅಸಾಧ್ಯ. ಆ ಅವಸ್ಥೆಯಲ್ಲಿ ಮನುಷ್ಯನ ಬುದ್ಧಿ ಕುಂಠಿತಗೊಳ್ಳುತ್ತದೆ. ಮನುಷ್ಯನ ಕಲ್ಪನಾಶಕ್ತಿ ಕುಂದುತ್ತದೆ. ಶರೀರದ ಗತಿ ಮಂದವಾಗುತ್ತದೆ, ಇಲ್ಲವೆ ವಿಕೃತಗೊಳ್ಳುತ್ತದೆ. ಭೋಗವಸ್ತುಗಳು ನಾಲ್ಕೂ ಕಡೆಯಿಂದ ಲಭ್ಯ ವಾಗಿದ್ದರೂ ಅವನ್ನು ಅನುಭವಿಸಲು ಸಾಧ್ಯವಾಗುವುದಿಲ್ಲ. ಅನುಭವಿಸಿದರೂ ಅದು ಶರೀರಕ್ಕೆ ಒಗ್ಗುವುದಿಲ್ಲ. ಚಿಂತೆಯೂ ಭೀತಿಯದೇ ಸ್ವಲ್ಪ ಚೆಲುವಾದ ರೂಪ. ಆದರೆ ಸ್ವಭಾವದಿಂದ ಅಷ್ಟೇ ರಕ್ಕಸನಂತೆ ಇರುವುದು. ಚಿಂತೆಯು ಎಂಥ ಅತಿರಥರನ್ನೂ ಕೊರೆಯುತ್ತದೆ. ಆದ್ದರಿಂದಲೇ ಚಿಂತೆಯನ್ನು ಚಿತೆಗಿಂತಲೂ ಭಯಂಕರವೆಂದು ಹೇಳುತ್ತಾರೆ. ಚಿತೆಯು ಮೃತನನ್ನು ದಹಿಸುತ್ತದೆ, ಚಿಂತೆಯು ಜೀವಂತ ಮನುಷ್ಯನನ್ನೇ ದಹಿಸುತ್ತದೆ. ಭೀತಿಯು ಶಾರೀರಿಕವಾದದ್ದು, ಚಿಂತೆಯು ಮಾನಸಿಕ ವಾದದ್ದು. ಭೀತಿ ಅಲ್ಪಕಾಲೀನವಾದದ್ದು, ಚಿಂತೆ ದೀರ್ಘಕಾಲೀನವಾದದ್ದು. ಭೀತಿಯ ಸ್ವರೂಪ ಸ್ಥೂಲವಿರುತ್ತದೆ, ಚಿಂತೆಯ ಸ್ವರೂಪ ಸೂಕ್ಷ್ಮ ವಿರುತ್ತದೆ.

ಒಮ್ಮೆ ಒಬ್ಬ ರಾಜ ಒಂದು ಕುರಿಮರಿಯನ್ನು ತನ್ನ ಪ್ರಧಾನಿಯ ವಶಕ್ಕೆ ಕೊಟ್ಟು ಈ ರೀತಿ ಹೇಳಿದ – "ಇದಕ್ಕೆ ಚೆನ್ನಾಗಿ ಆಹಾರ ಕೊಡು. ಆದರೆ ಇದರ ತೂಕ ಮಾತ್ರ ಹೆಚ್ಚಬಾರದು. ಒಂದು ತಿಂಗಳ ನಂತರ ಈ ಮರಿಯನ್ನು ನನ್ನ ಬಳಿ ತೆಗೆದುಕೊಂಡು ಬಾ."

ಪ್ರಧಾನಿಯು ರಾಜನು ತಿಳಿಸಿದಂತೆ ಅದಕ್ಕೆ ಒಳ್ಳೆಯ ಆಹಾರ ಕೊಟ್ಟು ಒಂದು ತಿಂಗಳ ನಂತರ ರಾಜನಲ್ಲಿಗೆ ಒಯ್ದ. "ಸಾಕಷ್ಟು ತಿನ್ನುಣ್ಣಲು ಸಿಕ್ಕರೂ ಇದು ಹಿಂದಿಗಿಂತ ಏಕೆ ಕೃಶವಾಗಿದೆ"? ಎಂದು ರಾಜ ಕೇಳಿದ. ಚತುರನಾದ ಪ್ರಧಾನಿಯು ಹೀಗೆ ಉತ್ತರಿಸಿದ: "ಇದಕ್ಕೆ ಕಾರಣ ಭಯ. ನಾನು ಇದಕ್ಕೆ ಒಳ್ಳೆಯ ಆಹಾರ ಕೊಟ್ಟು, ಅದನ್ನು ಹುಲಿಯ ಪಂಜರದ ಎದುರಿನಲ್ಲಿ ಕಟ್ಟಿಹಾಕಿದ್ದೆ. ಆದ್ದರಿಂದ ಇಷ್ಟೆಲ್ಲಾ ತಿಂದರೂ ಅದು ಬಡವಾಗಿದೆ." ಈ ರೀತಿ ಭೀತಿಯಿಂದ ಶಾರೀರಿಕ ಹಾನಿಯಾಗುತ್ತದೆ.

ಭೀತಿಯಿಂದ ಬುದ್ಧಿಭ್ರಮಣೆ ಮತ್ತು ಬುದ್ಧಿಭೇದವಾಗುತ್ತದೆ. ಮಹಾಭಾರತ ಯುದ್ಧದ ಆರಂಭದಲ್ಲಿ ಅರ್ಜುನನ ಮನಸ್ಸಿನಲ್ಲಿ ಧರ್ಮ ವಿಷಯಕವಾದ ಭೀತಿ ಹುಟ್ಟಿತ್ತು. "ನನಗೆ ಈಗ ನನ್ನೆದುರಿನಲ್ಲಿರುವ ನೆಂಟರಿಷ್ಟರನ್ನು, ಗುರುಜನರನ್ನು ಕೊಲ್ಲಬೇಕಾಗುತ್ತದೆ. ನನ್ನ ಕೈಯಿಂದ ಇವರೆಲ್ಲಾ ಹತರಾಗುತ್ತಾರೆ. ಇದರಿಂದ ಭಯಂಕರವಾದ ಅಧರ್ಮ ಸಂಭವಿಸುತ್ತದೆ. ಎಷ್ಟು ದೊಡ್ಡ ಪಾಪ ತಗಲುತ್ತದೆ!" ಹೀಗೆ ಅಜ್ಞಾನ ಮೂಲವಾದ ಭೀತಿಯು ಅರ್ಜುನನ ಮನಸ್ಸಿನಲ್ಲಿ ಉತ್ಪನ್ನವಾದ ತತ್‌ಕ್ಷಣ ಸಮಸ್ತ ಕ್ಷತ್ರಿಯರ ಶಿರೋಮಣಿಯಂತೆ ಶೋಭಿಸುವ ಆ ಅರ್ಜುನ ಕೂಡಾ ಗಾಬರಿಗೊಂಡ! ಯುದ್ಧದಲ್ಲಿ ಶಿವನನ್ನು ಚಕಿತಗೊಳಿಸುವ ನಿವಾತಕವಚನನ್ನು ಸೋಲಿಸುವ ಮತ್ತು ಗಂಧರ್ವನನ್ನು ಗೆಲ್ಲುವಂಥ ಅರ್ಜುನನು ಗಾಬರಿಗೊಂಡ. ಆತನ ಸರ್ವಾಂಗಗಳೂ ಶಿಥಿಲಗೊಂಡು ಬಾಯಿ ಒಣಗಿತು. ಮೈಯ ರೋಮಗಳು ನಿಮಿರಿದವು. ಆತನ ಕೈಯಿಂದ ಗಾಂಡೀವ ಧನುಸ್ಸು ಕಳಚಿಬಿದ್ದಿತು. "ನನಗೆ ಈ ಯುದ್ಧವೂ ಬೇಡ, ಈ ರಾಜ್ಯವೂ ಬೇಡ" ಎಂದು ಅರ್ಜುನ ರಣರಂಗವನ್ನು ಬಿಟ್ಟು ಹೊರಡುತ್ತಾನೆ. ಶತ್ರುವಿಗೆ ಬೆನ್ನು ತೋರಿಸಲು ಸಿದ್ಧನಾಗುತ್ತಾನೆ.

೬

ಅತ್ಯುಗ್ರವಾದ ವಿಷದ ಒಂದು ಹನಿ ಶರೀರದ ಚಲನೆಯನ್ನು ನಿಲ್ಲಿಸುತ್ತದೆ, ಕೊನೆಗೆ ಪ್ರಾಣವನ್ನೂ ಸೆಳೆಯುತ್ತದೆ. ಅದೇ ರೀತಿ ಭಯವು

ವ್ಯಕ್ತಿಯು ಇಲ್ಲವೇ ಸಮಾಜದ ಗುಣಗಳನ್ನು ಅಳಿಸಿ ಸರ್ವನಾಶವನ್ನುಂಟು ಮಾಡುತ್ತದೆ. ಇಡೀ ಪ್ರಪಂಚದಲ್ಲೆ ಕೀರ್ತಿಶಾಲಿಯಾದ ನಮ್ಮ ದೇಶದ ಸ್ಥಿತಿಯೂ ದುರ್ದೈವದಿಂದ ಇದೇ ರೀತಿಯಾಗಿದೆ. ಕಗ್ಗತ್ತಲೆಯಲ್ಲಿ ವೃದ್ಧನೊಬ್ಬ ಕಾಡಿನಲ್ಲಿ ಭಯಂಕರವಾದ ಪಿಶಾಚಿಯನ್ನು ಕಂಡು ಭಯದಿಂದ ನಡುಗುತ್ತಾನೆ. ಹೆಜ್ಜೆ ಮುಂದಿಡಲು ಆಗುವುದಿಲ್ಲ. ಕಾಲು ಎತ್ತಿದರೆ ಹಿಂದೆಯಾದರೂ ಬೀಳುತ್ತದೆ, ಅಡ್ಡವಾದರೂ ಬೀಳುತ್ತದೆ, ಮುಂದೆ ಮಾತ್ರ ಹೋಗುವುದಿಲ್ಲ. ಇದೇ ಸ್ಥಿತಿ ಇಂದಿನ ನಮ್ಮ ಸಮಾಜದ್ದಾಗಿದೆ.

ನನ್ನ ಹೊಟ್ಟೆ ಹೇಗೆ ತುಂಬಿಸಲಿ? ಆಹಾರ ವಸ್ತುಗಳು ಸಿಕ್ಕುವವೇ? ನನ್ನ ಉದ್ಯೋಗ ವ್ಯಾಪಾರ ಚೆನ್ನಾಗಿ ನಡೆದೀತೆ? ನನ್ನ ಪರಿವಾರ, ನನ್ನ ಸಂಪತ್ತು ಸುರಕ್ಷಿತವಾಗಿ ಉಳಿದೀತೆ? ನನ್ನ ಮನೆಗೆ, ನನ್ನ ಅಂಗಡಿಗೆ ಬೆಂಕಿ ಬಿದ್ದರೆ ಹೇಗೆ?– ಇಂಥ ನಾನಾ ಬಗೆಯ ಶಂಕೆ, ಕುಶಂಕೆಯಿಂದ ಮನಸ್ಸು ಭಾರವಾಗಿರುತ್ತದೆ. "ಈಗಿನ ಕಾಲದಲ್ಲಿ ಯಾವಾಗ ಏನಾದೀತು ಎಂಬ ನಿಯಮವಿಲ್ಲ." ಈ ವಾಕ್ಯ ಬಾಳಿನ ಶೋಕಗೀತೆಯ ಪಲ್ಲವಿಯಾಗಿದೆ. ಅನೇಕ ಬಗೆಯ ಭೀತಿಯ ಭೂತಗಳು ಹಗಲಿರುಳೂ ಕಾಡುತ್ತಿರುವಾಗ, ಸಾವಿರಾರು ವರ್ಷ ಪರತಂತ್ರದಲ್ಲಿ ಕೊಳೆಯುತ್ತಾ ಬಿದ್ದಿರುವ ಸಮಾಜವು ಕುಸಿದು ಬೀಳದಿದ್ದರೇ ಆಶ್ಚರ್ಯ.

೭

ಮನುಷ್ಯ ಬಯಸಿದ್ದು ಸಿಗುವುದಿಲ್ಲ. ಆದರೆ ಬೇಡವಾದದ್ದು ಅನಿವಾರ್ಯವಾಗಿ ಪಾಲಿಗೆ ಬರುತ್ತದೆ, ಎಂದಾಗ ಮನುಷ್ಯ ಭಯಗೊಳ್ಳುತ್ತಾನೆ. ಒಂದು ಅಪರಿಹಾರ್ಯವಾದ ಸಂಕಟ ನನಗೆ ಒದಗಲಿದೆ ಎಂದು ಅನಿಸಿದ ಕೂಡಲೆ ಮನುಷ್ಯ ಹತಾಶನಾಗುತ್ತಾನೆ, ದುರ್ಬಲನಾಗುತ್ತಾನೆ. ಅವ್ಯಕ್ತವಾಗಿದ್ದ ಅವನ ದುರ್ಬಲತೆ ಭೀತಿಯಿಂದ ಪ್ರಕಟಗೊಳ್ಳುತ್ತದೆ. ಆಗ ಮನುಷ್ಯ ಹೇಡಿಯಾಗುತ್ತಾನೆ. ತನ್ನ ಸುತ್ತ ಭೀತಿಯ ವಲಯಗಳನ್ನು ನಿರ್ಮಿಸಿಕೊಳ್ಳುತ್ತಾನೆ. ಅವನ ಸಹವಾಸದಿಂದ ಇತರರೂ ಭಯಪಡುತ್ತಾರೆ. ಭಯದಿಂದ ಭಯ ಹುಟ್ಟುತ್ತದೆ.

ಭಯಗ್ರಸ್ತವಾದ ಪರಿಸರದಲ್ಲಿ ಮಾನಸಿಕ, ಬೌದ್ಧಿಕ ಪ್ರಗತಿ ಸಾಧ್ಯವಿಲ್ಲ. ವ್ಯಾಪಾರ, ಕಲೆ, ವಿದ್ಯೆ ಪ್ರಗತಿಹೊಂದಬೇಕಾದರೆ ಸ್ಥಿರವಾದ ನಿರ್ಭಯತೆ ಅವಶ್ಯವಾಗಿದೆ. ಇಂದು ಜಗತ್ತು ಪ್ರಜಾತಂತ್ರದ ಮಾತಾಡುತ್ತದೆ. ಭಯರಹಿತವಾದ ಸ್ವಚ್ಛಂದ ವಾತಾವರಣದಲ್ಲಿ ಪ್ರಜಾಸತ್ತೆ ಜೀವಿಸುತ್ತದೆ. ಆದರೆ ಸಾಮಾನ್ಯ ಜನರಿಗೆ ತಮ್ಮ ಮತವನ್ನು ನೀಡುವಲ್ಲಿ ಮುಕ್ತ ವಾತಾವರಣ ಇಲ್ಲದಿದ್ದರೆ, ಅಲ್ಲಿ ಪ್ರಜಾಪ್ರಭುತ್ವ ಬಾಳಲಾರದು. ಅಧಿಕಾರ ಶಾಹಿಯೇ ಅಲ್ಲಿ ಪ್ರಜ್ವಲಿತವಾಗುತ್ತದೆ. ಇಂದು ಜಗತ್ತಿನಲ್ಲಿ ಅನೇಕ ಕಡೆಗಳಲ್ಲಿ ಚಕ್ರಾಧಿಪತ್ಯ ಇಲ್ಲದಿದ್ದರೂ ಅದಕ್ಕೆ ಬೇಕಾದ ಪರಿಸರವಿದೆ. ಅಶಿಕ್ಷಿತರು, ಸುಶಿಕ್ಷಿತರು, ಹಳ್ಳಿಗರು, ಪಟ್ಟಣಿಗರು. ಶ್ರೀಮಂತ, ಬಡವ – ಹೀಗೆ ಎಲ್ಲರೂ ಅಂಜುಗುಳಿಗಳಾಗಿದ್ದಾರೆ. ಕ್ರೂರ ಮೃಗಗಳಿಗಿಂತ ಇಂದು ಕ್ರೂರ ಮಾನವನ ಭೀತಿಯೇ ಹೆಚ್ಚಾಗಿದೆ. ಇಂದು ಮಾನವ ಹುಲಿಯಂತೆ ಹಿಂಸಕನಾಗಿದ್ದಾನೆ: ಸಿಂಹದಂತೆ ಭಯಾನಕನೂ, ತೋಳದಂತೆ ಕ್ರೂರಿಯೂ, ನರಿಯಂತೆ ಕಪಟಿಯೂ ಆಗಿದ್ದಾನೆ. ಸಮಗ್ರ ಮಾನವ ಜೀವನವೇ ಭಯಗ್ರಸ್ತವಾಗಿದೆ. ನಿರ್ಭಯ ಪುರುಷನ ಸಂಚಾರವಾಗ ತೊಡಗಿದರೆ ಭಯೋತ್ಪಾದಕನೂ ಭಯಪಡುತ್ತಾನೆ. ನಿರ್ಭಯ ಮನುಷ್ಯನ ದರ್ಶನದಿಂದಲೇ ನಿರ್ಭಯತೆಯ ಸಂಚಾರವಾಗುತ್ತದೆ. ಅವನ ವಾಣಿಯಿಂದ. ಅವನ ಕೃತಿಯಿಂದ, ಅವನ ಸಹವಾಸದಿಂದಲೇ ಭಯ ಇಲ್ಲದಂತಾಗುತ್ತದೆ.

ತಾನಾಜಿ ಯುದ್ಧದಲ್ಲಿ ಮಡಿದ ತತ್‌ಕ್ಷಣ ಉಳಿದ ಸೈನಿಕರು ಓಡ ತೊಡಗುತ್ತಾರೆ. ಆದರೆ ಅಷ್ಟರಲ್ಲಿ ಸಿಡಿಲಿನಂಥ ಧ್ವನಿ ಮೊಳಗುತ್ತದೆ: "ಅರೆ, ಹೀಗೇಕೆ ಓಡುತ್ತೀರಿ? ನಿಮ್ಮ ತಂದೆ ಇಲ್ಲಿ ಸತ್ತುಬಿದ್ದಿದ್ದಾನೆ. ಅದರ ಸೇಡು ತೀರಿಸಿಕೊಳ್ಳುವುದಿಲ್ಲವೆ?" ಸೂರ್ಯಾಜಿಯ ಈ ಆವೇಶಯುಕ್ತ ವಾಣಿಯಿಂದ ಅವರೆಲ್ಲ ಹಿಂದಿರುಗಿ, ಕೆಚ್ಚಿನಿಂದ ಹೋರಾಡಿ ವಿಜಯ ಸಂಪಾದಿಸಿದರು.

೮

ಶಾರೀರಿಕ ದುರ್ಬಲತೆಯಿಂದಲೇ ಭಯ ಹುಟ್ಟುತ್ತದೆ. ಅನಾರೋಗ್ಯದಿಂದಲೂ ಮನಸ್ಸು ಪುಕ್ಕಲು ಆಗುತ್ತದೆ. ಯುವಕರಿಗಿಂತಲೂ ವೃದ್ಧರು

ಹೆಚ್ಚು ಅಂಜುಗುಳಿಗಳಾಗಿರುತ್ತಾರೆ. ಅಂಜಿಕೆಯನ್ನು ಓಡಿಸುವುದಕ್ಕಾಗಿ ದೃಢಕಾಯರಾಗುವುದೂ ಅವಶ್ಯವಿದೆ. ಆದರೂ ಒಟ್ಟಿನಲ್ಲಿ ಹೆದರಿಕೆಯಲ್ಲಿ ಶರೀರದ ಸ್ಥಾನ ಗೌಣವಾಗಿದ್ದು, ಮನಸ್ಸಿನ ದುರ್ಗುಣವೇ ಮಹತ್ವದ್ದಾಗಿದೆ.

ಒಂಟಿತನದ ಭಾವನೆಯಿಂದಲೂ ಭೀತಿ ಹುಟ್ಟುತ್ತದೆ. ರಾತ್ರಿ ಸಮಯದಲ್ಲಿ ಒಂಟಿಯಾಗಿ ಹೋಗುವುದಕ್ಕಿಂತಲೂ ನಾಲ್ಕಾರು ಜನ ಹೋದರೆ ಧೈರ್ಯವಿರುತ್ತದೆ. ನನ್ನ ಜೊತೆ ಬೇರೆಯವರು ಇದ್ದಾರೆ, ಅವರ ಸಹಾಯ ನನಗಿದೆ ಎನ್ನುವ ಮಾನಸಿಕ ಬಲವೇ ಮನುಷ್ಯನಿಗೆ ಶಕ್ತಿಯನ್ನು ಕೊಡುತ್ತದೆ.

ಇಂದು ನಮ್ಮಲ್ಲಿ ಏಕಾಕಿತನ ಹೆಚ್ಚುತ್ತಿದೆ. ಅಂತೆಯೇ ಭಯವೂ ಹೆಚ್ಚುತ್ತಿದೆ. ಹಿಂದೆ ಬಹಳ ದೊಡ್ಡ ಕುಟುಂಬಗಳು ಒಟ್ಟಿಗೆ ವಾಸಿಸುತ್ತಿದ್ದವು. ಕುಟುಂಬದ ಪ್ರತಿಯೊಬ್ಬ ಸದಸ್ಯನಿಗೂ 'ನಾನೊಬ್ಬನೇ ಇಲ್ಲ : ನನ್ನನ್ನು ಕಾಪಾಡುವವರು, ನನಗೆ ಸಹಾಯ ಮಾಡುವವರು ಅನೇಕ ಜನರಿದ್ದಾರೆ' ಎಂಬ ಭಾವನೆ ಇರುತ್ತಿತ್ತು, ಹಾಗೂ ಈ ಭಾವನೆಯಿಂದಲೇ ಮನುಷ್ಯನಿಗೆ ಬಲ ದೊರೆಯುತ್ತಿತ್ತು. ಆದರೆ ಇಂದು ಈ ಬಲದಿಂದ ನಾವು ವಂಚಿತರಾಗಿದ್ದೇವೆ. ಪತಿ, ಪತ್ನಿ ಇಬ್ಬರದೇ ಸಂಸಾರ, ಒಬ್ಬ ಕಾಯಿಲೆ ಮಲಗಿದ ಇಲ್ಲವೆ ಸತ್ತ ಎಂದಾದರೆ ಇನ್ನೊಬ್ಬನ ಪಾಲಿಗೆ ಜಗತ್ತೇ ಶೂನ್ಯವಾಗುತ್ತದೆ. ಈ ಕುಟುಂಬದ ಹೊರಗೆ ಜಾತಿಯ ವಲಯವೊಂದಿರುತ್ತಿತ್ತು. ಸುಖ ದುಃಖದ ಪ್ರಸಂಗಗಳಲ್ಲಿ ಜಾತಿಯವರೆಲ್ಲ ಒಟ್ಟುಗೂಡಿ ಕೆಲಸ ಮಾಡುತ್ತಿದ್ದರು, ನಾವೆಲ್ಲ ಒಂದೇ ಎನ್ನುವ ಭಾವನೆ ಪ್ರತಿಯೊಂದು ಪಂಗಡಗಳಲ್ಲಿರುತ್ತಿತ್ತು. ಇಂದು ಆ ವ್ಯವಸ್ಥೆಯು ಶಿಥಿಲವಾಗಿದೆ. ಜಾತಿಗಿಂತಲೂ ದೊಡ್ಡದಾದ ಹಾಗೂ ಶ್ರೇಷ್ಠವಾದ ರಾಷ್ಟ್ರೀಯ ಭಾವನೆಯೊಂದಿರುತ್ತಿತ್ತು. ಸಂಪೂರ್ಣ ರಾಷ್ಟ್ರ ನಮ್ಮ ಬೆಂಬಲಕ್ಕಿದೆ ಎನ್ನುವ ಬಲದಿಂದಲೇ ಎಳೆಯ ಇಂಗ್ಲಿಷರು ಹಿಂದುಸ್ಥಾನಕ್ಕೆ ಬಂದು ನಿರ್ಭಯದಿಂದ ವ್ಯವಹರಿಸಿದರು. ಕ್ಲೈವನಿಂದ ಹಿಡಿದು ಎಲ್‌ಫಿನ್‌ಸ್ಟನ್‌ನವರೆಗೆ ಭಾರತಕ್ಕೆ ಬಂದ ಬ್ರಿಟಿಷರು ಹದಿನಾರು-ಹದಿನೆಂಟು ವರ್ಷದವರಾಗಿದ್ದರು. ಅನೇಕ ವಿಪತ್ತುಗಳನ್ನು ಕಡಿದೊಗೆದು ತಮ್ಮ ಸಾಮ್ರಾಜ್ಯವನ್ನು ನಿಲ್ಲಿಸಿದರು.

ಈ ಸಾಮರ್ಥ್ಯ ಅವರಿಗೆ "ನಾನೊಬ್ಬನೇ ಇಲ್ಲ, ನನ್ನ ಹಿಂದೆ ಸಮಗ್ರ ಬ್ರಿಟನ್ ರಾಷ್ಟ್ರವೇ ನಿಂತಿದೆ" ಎಂಬುದರಿಂದ ಬಂದಿತ್ತು.

ಬೆಂಬಲಕ್ಕಿರುವ ಮನುಷ್ಯ ಪ್ರಬಲವಿದ್ದಷ್ಟೂ ಬಲ ಹೆಚ್ಚುತ್ತ ಹೋಗುತ್ತದೆ. ಪರಿವಾರ, ಜಾತಿ, ಸಮಾಜ, ರಾಷ್ಟ್ರ ಎಂದು ಏರುತ್ತಾ "ವಿಶ್ವವೇ ನನ್ನ ಕುಟುಂಬ" ಎನ್ನುವ ಭಾವನೆ ಬಲಗೊಳ್ಳುತ್ತಾ ಹೋದಾಗ ಅಸಾಮಾನ್ಯ ಧೈರ್ಯ ಒಂದುಗೂಡುತ್ತದೆ. ಚಿತ್ತದಲ್ಲಿ 'ಈಶ್ವರನು ಯಾವಾಗಲೂ ನನ್ನ ಕಾವಲಿಗಿದ್ದಾನೆ' ಎಂಬ ಅರಿವು ಉಳ್ಳವನ ಬಗ್ಗೆ ಹೇಳುವುದೇ ಬೇಡ.

ಅಜ್ಞಾನದಿಂದಲೂ ಭಯ ಹುಟ್ಟುತ್ತದೆ. ಚಿಕ್ಕ ಮಗು ಹಲಸಿನ ಹಣ್ಣು ಕಂಡು ಭಯಪಡಬಹುದು. ಭಾರತಕ್ಕೆ ರೈಲುಬಂಡಿ ಹೊಸದಾಗಿ ಬಂದಾಗ, ಜನರು ಅದರಲ್ಲಿ ಕುಳಿತುಕೊಳ್ಳಲು ಹೆದರುತ್ತಿದ್ದರು. ಚಂದ್ರ ಗ್ರಹಣ, ಸೂರ್ಯಗ್ರಹಣಗಳು, ಧೂಮಕೇತು ಗುಡ್ಡಗಾಡು ಜನರಿಗೆ ಭಯಪ್ರದವಾಗಿವೆ. ಕತ್ತಲೆಯಲ್ಲಿ ಮರದ ಮೇಲೆ ಅಸ್ಪಷ್ಟ ಆಕೃತಿ ಕಾಣುತ್ತದೆ. ಕೂಡಲೇ ಮನಸ್ಸಿಗೆ ಅದರ ಕ್ರೂರವಾದ ಕಣ್ಣುಗಳು, ಉದ್ದ ವಾದ ಉಗುರುಗಳು ಕಾಣತೊಡಗುತ್ತವೆ. ಅಷ್ಟರಲ್ಲಿ ಚೀಲದಲ್ಲಿರುವ ಕೈದೀಪ ನೆನಪಿಗೆ ಬರುತ್ತದೆ. ಗುಂಡಿಯನ್ನು ಒತ್ತುತ್ತೇವೆ. ಝಗ್ಗನೆ ಪ್ರಕಾಶ ಮಿಂಚಿ, ಭೂತವೂ ಇಲ್ಲದಂತಾಗುತ್ತದೆ. ಜ್ಞಾನದ ತೇಜಸ್ಸಿನಿಂದ ಅಜ್ಞಾನದ ಭೂತ ಕೂಡಾ ಓಡಿಹೋಗುತ್ತದೆ. ಸಮಾಜದಲ್ಲಿ ನಿರ್ಭಯತೆಯ ಪೈರು ಬೆಳೆಯಬೇಕಾದರೆ ಜ್ಞಾನದ ನೀರಾವರಿ ಬೇಕು. ಶರೀರ ಮತ್ತು ಮನಸ್ಸು ದೃಢಿಷ್ಠವಾಗಲು ನಮ್ಮಲ್ಲಿ ಅನೇಕ ವ್ಯಾಯಾಮಶಾಲೆಗಳಿವೆ. ಆದರೆ ಅವೆಲ್ಲ ಇಂದು ಬರಿದಾಗಿವೆ.

ಧ್ಯೇಯಹೀನನಾದ ಮನುಷ್ಯನು ಭೀತನಾಗಿರುತ್ತಾನೆ. ಜೀವನದಲ್ಲಿ ಒಂದು ಗುರಿ, ಒಂದು ನಿಶ್ಚಯ, ಒಂದು ಹುಚ್ಚು ಇದ್ದವನು ನಿರ್ಭಯ ನಾಗಿರುತ್ತಾನೆ. ತುಲಸೀದಾಸರಿಗೆ ಪೂರ್ವಾಶ್ರಮದಲ್ಲಿ ಹೆಂಡತಿಯ ವ್ಯಾಮೋಹವಿತ್ತು. ಆ ಮೋಹದಿಂದಾಗಿ, ಕಗ್ಗತ್ತಲೆಯದಾಗಲಿ, ಕಾಡಿನ ದಾಗಲಿ, ನೆರೆ-ಕರೆಯದಾಗಲಿ, ಹಾವು ಹುಲಿಗಳದಾಗಲಿ, ಭೀತಿಯುಂಟಾಗ

ಲ್ಲ. ಆದರೆ ಪತ್ನಿಯ ಜರೆಯುವಿಕೆಯಿಂದ ತನ್ನತನ ಜಾಗೃತಗೊಂಡಿತು. ುಚ್ಛವಾದ ಈ ಸ್ತ್ರೀಮೋಹವೇ ಇಷ್ಟು ಬಲ ಕೊಡುವುದಾಗಿದ್ದರೆ ಆ ್ರಭು ಶ್ರೀರಾಮಚಂದ್ರನ ಮೇಲಿನ ಮೋಹ ಎಷ್ಟು ಬಲಶಾಲಿಯಾದೀತು! ಎಂಬ ವಿಚಾರ ಮನದಲ್ಲಿ ಮಿಂಚಿತು. ತುಲಸೀದಾಸರ ಜೀವನಮಾರ್ಗವೇ ುದಲಾಯಿತು. ಧ್ಯೇಯವಾದದಲ್ಲಿ ನಿರ್ಭಯತೆ ಹುಟ್ಟಿಸುವ ಸಾಮರ್ಥ್ಯ ುದೆ. ಸ್ಥಿರವಾದ ನಿರ್ಭಯತೆಯಿಂದ ಧ್ಯೇಯವು ವಿಶಾಲತೆಯನ್ನು ಡೆಯುತ್ತದೆ.

ಶರೀರ ಮತ್ತು ಮನಸ್ಸಿನ ವ್ಯಾಯಾಮ, ಜ್ಞಾನದ ಉಪಾಸನೆ, ಾನು ಒಬ್ಬಂಟಿಯಲ್ಲ ಎನ್ನುವ ಭಾವನೆ, ಭಗವಂತನಲ್ಲಿ ಶ್ರದ್ಧೆ, ಅದರಿಂದ ುಂಟಾಗುವ ಆತ್ಮವಿಶ್ವಾಸ – ಇವೆಲ್ಲ ನಿರ್ಭಯತೆಯ ಬೀಗದಕೈಗಳಾಗಿವೆ. ುನ್ನತಿಯ ಕೋಟೆಯನ್ನು ಗೆಲ್ಲಬೇಕಾದರೆ ಈ ಬೀಗದಕೈಗಳನ್ನು ಶಪಡಿಸಿಕೊಳ್ಳುವುದು ಅವಶ್ಯವಾಗಿದೆ.

೬

ಪಾಪದಿಂದಲೂ ಭೀತಿ ಹುಟ್ಟುತ್ತದೆ. ಪುಣ್ಯವಂತನಾದ ಮನುಷ್ಯನು ರ್ಭೀತನಾಗಿರುತ್ತಾನೆ, ಪಾಪಿಯಾದವನು ಪರರಿಗೆ ತೊಂದರೆ ಕೊಡುವುದರಲ್ಲಿ ಾನಂದವನ್ನು ಹೊಂದುತ್ತಾನೆ. ಪುಣ್ಯವಂತನು ಪರೋಪಕಾರದಲ್ಲಿ ಜೀವನದ ನ್ಯತೆಯನ್ನು ಕಂಡುಕೊಳ್ಳುತ್ತಾನೆ. ಸ್ವಾರ್ಥ ಮತ್ತು ಸಂಕುಚಿತ ದೃಷ್ಟಿ ುಳ್ಳವನು ಪಾಪಿ. ನಿಃಸ್ವಾರ್ಥಿಯಾದ ವಿಶಾಲ ಮನೋಭಾವನೆಯುಳ್ಳ ುನುಷ್ಯನೇ ಪುಣ್ಯವಂತ. ಜೀವನದಲ್ಲಿ ಉಚ್ಚ ಧ್ಯೇಯವುಳ್ಳವನು; ್ರೇಷ್ಠವಾದದ್ದನ್ನು ಸಾಧಿಸುವ ಛಲವಿದ್ದವನು, ಆತ್ಮೋನ್ನತಿಗಾಗಿ ಸತತ ್ರಯತ್ನಶೀಲನಾದವನು ಪುಣ್ಯವಂತ. ಭಗವಂತನು ಕೊಟ್ಟ ಶರೀರ, ಶಕ್ತಿ, ುದ್ಧಿ ಮೊದಲಾದವುಗಳ ದುರುಪಯೋಗ ಮಾಡುವವನು ಮತ್ತು ಿನಗಳನ್ನು ವ್ಯರ್ಥವಾಗಿ ಕಳೆಯುವವನು ಪಾಪಿ! ಭೀತಿಯು ಇಂಥ ಜನರನ್ನು ಲ್ಲರಿಗಿಂತ ಮೊದಲು ಸುತ್ತಿಕೊಳ್ಳುತ್ತದೆ. ಪಾಪಿ ದುರ್ಬಲತೆಯಿಂದ ುಟ್ಟುತ್ತಾನೆ. ಅಹಂಕಾರದಿಂದ ದುರ್ಬಲತೆ ಹುಟ್ಟುತ್ತದೆ. ಅಶ್ರದ್ಧೆಯಿಂದ ಹಂಕಾರ ಹುಟ್ಟುತ್ತದೆ. ಅಶ್ರದ್ಧೆಯು ಅಜ್ಞಾನದಿಂದ ಹುಟ್ಟುತ್ತದೆ.

ಭೀತಿಯ ಬೇರುಗಳು ತುಂಬಾ ಆಳದವರೆಗೆ ಇಳಿದಿರುತ್ತವೆ. ಅವನ್ನೆಲ್ಲಾ ಬುಡ ಸಮೇತ ಕಿತ್ತು ಬಿಸಾಡಿದ ಹೊರತು ವ್ಯಕ್ತಿಯ ಅಥವಾ ಸಮಾಜದ ಪ್ರಗತಿ ಅಸಾಧ್ಯ.

ವ್ಯಕ್ತಿಗತ ಮತ್ತು ರಾಷ್ಟ್ರೀಯ ಉನ್ನತಿಗಾಗಿ ನಮಗೆ ನಿರ್ಭಯತೆ ಅವಶ್ಯವಾಗಿದೆ. ಮೃತ್ಯುವಿನ ದವಡೆಯಲ್ಲಿ ನುಗ್ಗುವಂಥ ನಚಿಕೇತರಿಗೆ ಜ್ಞಾನ ಲಭಿಸುತ್ತದೆ. ಶ್ರೇಷ್ಠ ಮಟ್ಟದ ಜ್ಞಾನವನ್ನು ಪಡೆಯಬೇಕಾದರೆ ನಚಿಕೇತನ ನಿರ್ಭಯತೆ ಬೇಕು. ಹಾಲಾಹಲವನ್ನು ಕಂಠದಲ್ಲಿ ಧರಿಸಿದ ಮಹಾದೇವನು ಜಗತ್ತಿಗೆ ಸುಖವನ್ನು ನೀಡಿದ. ಜಗತ್ತಿಗೆ ಸುಖವನ್ನು ನೀಡುವ ಮಹಾಪುರುಷನಾಗಬೇಕಾದರೆ ಮಹಾದೇವನಂತೆ ನಿರ್ಭಯತೆಯನ್ನು ಅಂಗೀಕರಿಸಿಕೊಳ್ಳಬೇಕು. ನಾವು ಶಂಕರನ ಭಕ್ತರು. ಅವನು ಮಸಣದಲ್ಲಿ ಇರುತ್ತಾನೆ. ಆದರೆ ನಾವು ಮಸಣದ ಹೆಸರೆತ್ತಿದರೆ ಹೆದರುತ್ತೇವೆ. ಶಂಕರನು ಚಿತಾಭಸ್ಮ ಧರಿಸುತ್ತಾನೆ. ಸರ್ಪವು ಆತನ ಕಂಠಾಭರಣ. ಭೂತಪ್ರೇತ ಪಿಶಾಚಿಗಳು ಆತನ ಸಹಚರರು. ಇಂಥ ಶಂಕರನು ನಿರ್ಭಯತೆಯ ಮೂರ್ತಿಯೇ ಆಗಿದ್ದಾನೆ! ಹತ್ತನೆ ವಯಸ್ಸಿನಲ್ಲಿ ಬಾಲಕ ಧ್ರುವ ಘೋರವಾದ ಅರಣ್ಯದಲ್ಲಿ ತಪಸ್ಸಿಗೆ ಕುಳಿತ. ಹುಲಿ ಸಿಂಹಗಳ ಗರ್ಜನೆಗೆ ಅವನು ಹೆದರಲಿಲ್ಲ. ದೃಢವಾದ ಧ್ಯೇಯವೇ ಅವನನ್ನು ನಿರ್ಭೀತನನ್ನಾಗಿ ಮಾಡಿತು. ಆ ನಿರ್ಭಯತೆಯಿಂದ ಅವನಿಗೆ ಸ್ಥಿರಪಟ್ಟ ಸಿಕ್ಕಿತು. ಇಂದು ನಮ್ಮೊಳಗೆ ಇಂಥ ನಿರ್ಭಯತೆ ಮೈಗೂಡಬೇಕಾಗಿದೆ.

ಬೆಟ್ಟದಿಂದ ನೂಕಿದರೂ, ಆನೆಯ ಕಾಲಿನಿಂದ ತುಳಿಸಿದರೂ, ಕುದಿಯುವ ಎಣ್ಣೆಯಲ್ಲಿ ಹಾಕಿದರೂ, ಗರಗಸದಿಂದ ಕೊಯ್ದರೂ ಕೂಡಾ ಪ್ರಹ್ಲಾದನು ಭಯಪಡಲಿಲ್ಲ. ಅವನು ನಿರ್ಭಯನಾಗಿದ್ದ. ಆತನ ನಿರ್ಭಯತೆಯಿಂದಲೇ ನರಸಿಂಹನ ಅವತಾರವಾಯಿತು. ದುಷ್ಟ ಹಿರಣ್ಯಕಶಿಪುವಿನ ಹೊಟ್ಟೆ ಬಗಿಯುವಂಥ ನರಸಿಂಹ ನಮಗಿಂದು ಬೇಕಾಗಿದ್ದಾನೆ. ಅದಕ್ಕಾಗಿ ನಾವು ನಿರ್ಭಯರಾಗಬೇಕು. ನಾವು ಭಾರತೀಯರು. ದುಷ್ಯಂತಪುತ್ರನಾದ ಭರತನ ದೇಶದವರು. ಆ ಭರತನೆಂದರೆ ನಿರ್ಭಯತೆಯ ಮೂರ್ತಿಯೇ ಆಗಿದ್ದ.

ಅರ್ಧಪೀತಸ್ತನಂ ಮಾತುರಾಮರ್ದಕ್ಲಿಷ್ಟಕೇಸರವ್ ।
ಪ್ರಕ್ರೀಡಿತುಂ ಸಿಂಹಶಿಶುಂ ಬಲಾತ್ಕಾರೇಣ ಕರ್ಷತಿ ॥

ಕಾಳಿದಾಸ ಹೀಗೆ ಆ ಭರತನ ವರ್ಣನೆಯನ್ನು ಮಾಡಿದ್ದಾನೆ. ಸಿಂಹಿಣಿಯ ಬಳಿ ಹೋಗಿ, ಅದರ ಮರಿಯನ್ನು ಬಲಾತ್ಕಾರದಿಂದ ಎಳೆದು ಅದರ ಹಲ್ಲು ಎಣಿಸುವ, ಕೇಸರದೊಂದಿಗೆ ಆಡುವ, ಬಾಲವನ್ನು ಎಳೆಯುವ ಭರತ ನಿರ್ಭಯತೆಯ ಪ್ರತೀಕವಾಗಿದ್ದ. ನಾವು ಅವನ ವಂಶಜರು, ನಿರ್ಭಯತೆಯ ವಾರಸುದಾರರು.

೧೦

ನಿರ್ಭಯತೆಯು ನಮಗೆ ಐಹಿಕ ಮತ್ತು ಪಾರಲೌಕಿಕ ಯಶಸ್ಸಿನ ಮಾರ್ಗ ತೋರಿಸುತ್ತದೆ. ಕೊಲಂಬಸ್ ಒಂದು ಸಾದಾ ಹಡಗನ್ನು ಏರಿ ಹೊರಟ. ಅಮೆರಿಕಾ ಖಂಡವನ್ನು ಶೋಧಿಸಿದ. ಸಾವಿರಾರು ಮೈಲಿ ಸುತ್ತಿಬಳಸಿ ಪ್ರಳಯಂಕರವಾದ ಜಲರಾಶಿಯನ್ನು ಹಿಂದೆಹಾಕಿ ವಾಸ್ಕೊ-ಡಿ-ಗಾಮಾ ಹಿಂದುಸ್ಥಾನಕ್ಕೆ ಬಂದ. ಅವನ ಹಿಂದೆಯೇ, ಫ್ರೆಂಚರು, ಡಚ್ಚರು. ಇಂಗ್ಲಿಷರು ಬಂದರು. ನಿರ್ಭಯತೆಯಿಂದ ಅವರು ಪೂರ್ವಗೋಲಾರ್ಧದಲ್ಲಿ ಸಂಚರಿಸಿ, ರಾಜ್ಯಗಳನ್ನು ಸಂಪಾದಿಸಿದರು.

ಶಂಕರಾಚಾರ್ಯರು ಭರತಖಂಡದಲ್ಲಿ ಸಂಚರಿಸಿ ಸಾಮಾನ್ಯ ಜನರಿಗೆ ಯೋಗ್ಯ ಉಪದೇಶ ಮಾಡುತ್ತಾ ಜಗದ್ಗುರುಗಳಾದರು. ಪ್ರಬಲವಾದ ಪರರಾಜ್ಯಗಳು ಸುತ್ತುವರಿದಿದ್ದರೂ, ಶಿವಾಜಿ ಮಹಾರಾಜರು ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಸಿಂಹದ ಗುಹೆಯಲ್ಲಿ ನುಗ್ಗಿದಂತೆ ಔರಂಗಜೇಬನ ಪ್ರಚಂಡ ಸೇಯಲ್ಲಿ ನುಗ್ಗಿ ನಿರ್ಭಯತೆಯಿಂದ ಕಾದಿದರು.

ನಮ್ಮ ಸಾಮ್ರಾಜ್ಯರವಿಯು ಎಂದಿಗೂ ಅಸ್ತಂಗತನಾಗುವುದಿಲ್ಲ ಎಂದು ದರ್ಪದಿಂದ ಹೇಳುವ ರಾಕ್ಷಸೀ ಶಕ್ತಿಯ ವಿರುದ್ಧ, ನಿಃಶಸ್ತ್ರರಾದ ಲೋಕಮಾನ್ಯ ತಿಲಕರು ಎದೆಗಾರಿಕೆಯಿಂದ ಎದ್ದು ನಿಂತು – "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ಅದನ್ನು ನಾನು ಪಡೆದೇ ಪಡೆಯುವೆ" ಎಂಬ ಬೀಜಮಂತ್ರವನ್ನು ಭಾರತೀಯರಿಗೆ ಕೊಟ್ಟರು. ಅವರ ನಿರ್ಭಯತೆ, ನಮಗಿಂದು ಅವಶ್ಯವಾಗಿದೆ.

ಸಿಂಹದ ಈ ನಾಡಿನಲ್ಲಿ ಎಲ್ಲೆಲ್ಲೂ ಕುರಿಗಳ ಸ್ವರವೇ ಕೇಳಿಬರುತ್ತಿದೆ. ಇದೆಂಥಾ ದೌರ್ಭಾಗ್ಯ ! 'ಕೊಲ್ಲುವವನೂ ಕಾಪಾಡುವವನೂ ಪರಮೇಶ್ವರ, ನಾನು ನಿಮಿತ್ತ ಮಾತ್ರ' ಎಂಬುದು ಇಲ್ಲಿಯ ಮೂಲಮಂತ್ರವಾಗಿದೆ. ಆದರೆ ಇಂದು ಜನರು, ನಾಳಿನ ತಮ್ಮ ಹಣೆಬರಹಕ್ಕಾಗಿ ಚಿಂತೆಗೀಡಾಗಿದ್ದಾರೆ. 'ಆತ್ಮ ಅಮರ, ಮರಣವೆಂದರೆ ಬಟ್ಟೆ ಬದಲಾಯಿಸಿದಂತೆ' ಎಂಬ ಪಾಠವನ್ನು ಕಲಿತಿರುವ ನಾವು ಪುಕ್ಕರಂತೆ ದೇಹಾಭಿಮಾನದಲ್ಲಿ ಮುಳುಗಿದ್ದೇವೆ. ಇದೊಂದು ದೈವೀ ದುರ್ವಿಲಾಸ !

ನಮಗಿಂದು ನಿರ್ಭಯತೆ ಬೇಕಾಗಿದೆ. ಇಹ-ಪರದ ಶ್ರೇಯಕ್ಕಾಗಿ ನಾವು ಪೃಥ್ವಿಯ ಗರ್ಭವನ್ನು ಹೊಕ್ಕು, ಹಿಮಾಲಯವನ್ನು ಮೆಟ್ಟಿ ನಿಂತು ಸೂರ್ಯಮಂಡಲಕ್ಕೆ ಜಿಗಿದು, ಜ್ವಾಲಾಮುಖಿಯ ದವಡೆಯಲ್ಲಿ ನುಗ್ಗಿ ಅನಂತ ಅಂತರಿಕ್ಷದಲ್ಲಿ ವಿಹರಿಸುವೆವು. ಸಮುದ್ರತಳವನ್ನು ಶೋಧಿಸಿ ಮರಣವನ್ನು ತುಚ್ಛೀಕರಿಸಿ, ಕಠಿಣ ಪರಿಶ್ರಮದಿಂದ ಜ್ಞಾನದ ಅದ್ಭುತ ಕಲಶವನ್ನು ಪಡೆಯುವೆವು ! ಅದಕ್ಕಾಗಿ ನಿರ್ಭಯತೆಯ ಮಾರ್ಗವನ್ನು ಕ್ರಮಿಸಬೇಕಾಗಿದೆ. ನಿರ್ಭಯತೆಯಿಂದಲೇ ಸುಖವಾದ, ಸಮೃದ್ಧವಾದ, ಸಂಪದ್ಭರಿತವಾದ, ಪವಿತ್ರವಾದ ದೈವೀಜೀವನ ನಮ್ಮದಾಗುತ್ತದೆ.

೪ ಸಾತ್ವಿಕತೆ

೧

ಯಾವುದು ಸತ್-ಚಿತ್-ಆನಂದವಾಗಿದೆಯೋ, ಆದರ ಸೋಪಾನ ವೇರುವುದೇ ಸಾತ್ವಿಕತೆ ಆಗಿದೆ. ಮನಸ್ಸು ಅಧೋಗತಿಯಿಂದ ಊರ್ಧ್ವ ಗತಿಯತ್ತ ಚಲಿಸುವುದೇ ಸಾತ್ವಿಕತೆ. ಕಲ್ಯಾಣಕಾರಿಯಾದದ್ದನ್ನು, ಶ್ರೇಷ್ಠವಾದದ್ದನ್ನು ಪಡೆಯುವ ಆಕಾಂಕ್ಷೆಯೇ ಸಾತ್ವಿಕತೆ. ಜೀವನ ಸಾಫಲ್ಯದ, ಮೋಕ್ಷದ ಮಾರ್ಗಕ್ಕೆ ತಲಪಿಸುವ ಹತ್ತಿರದ ಮೆಟ್ಟಲೇ ಸಾತ್ವಿಕತೆ.

ಸತ್ವ, ರಜ, ತಮ ಈ ಮೂರು ಗುಣಗಳು ವಿಶ್ವವನ್ನು ವ್ಯಾಪಿಸಿವೆ. ಮಾನವನ ಮನಸ್ಸು ಕೂಡಾ ಈ ಮೂರು ಗುಣಗಳಿಂದ ಕೂಡಿದ್ದಾಗಿದೆ. ಮನಸ್ಸಿನ ಈ ತ್ರಿಗುಣಾತ್ಮಕ ಆವರಣ ಆತ್ಮವನ್ನು ಮುಚ್ಚಿಬಿಟ್ಟಿದೆ. ಕ್ರಮವಾಗಿ ತಮದಿಂದ ರಜೋಗುಣಕ್ಕೆ ಏರಿ, ರಜೋಗುಣದಿಂದ ಸಾತ್ವಿಕತೆಯ ವಲಯದಲ್ಲಿ ಲೀನವಾಗಿ ಕೊನೆಗೆ ಅದರಿಂದಲೂ ಬೇರ್ಪಟ್ಟು ಆತ್ಮ ಸ್ವರೂಪದ ದರ್ಶನ ಪಡೆಯುವುದು ಹಿಂದೂಧರ್ಮದ ಪರಮ ಗುರಿಯಾಗಿದೆ.

ಮಾನವಜೀವನದ ಎಲ್ಲ ಏಳು-ಬೀಳುಗಳು, ಸುಖ-ದುಃಖಗಳು ಈ ತ್ರಿಗುಣಗಳಿಂದ ಕೂಡಿದ್ದಾಗಿವೆ. ಈ ಗುಣಗಳ ವ್ಯಾಪಕತೆ ನೋಡಿದಾಗ, ಇವು ಎಂದಿಗೂ ಇಲ್ಲದಂತಾಗಲಾರವು ಎಂದೆನಿಸುವುದು ಸಹಜವಾಗಿದೆ. ಆದರೆ ಯಾವುದೇ ಸಂಗತಿ, ಪೂರ್ಣವಾಗಿ ನಷ್ಟವಾಗುವುದಾಗಲಿ, ಹೊಸದಾಗಿ ನಿರ್ಮಾಣವಾಗುವುದಾಗಲಿ ಸಾಧ್ಯವಿಲ್ಲ. ಸೃಷ್ಟಿ-ಲಯ ಇವು ಕೇವಲ ರೂಪಾಂತರಗಳಾಗಿವೆ. ಜಾಲಿಯ ಗಿಡದ ಮುಳ್ಳುಗಳು ನಿರುಪಯೋಗಿಯಷ್ಟೇ ಅಲ್ಲ, ತೊಂದರೆಯುಳ್ಳವೂ ಆಗಿವೆ. ಆ ಮುಳ್ಳು

ಗಳನ್ನೇ ಮಾವಿನಗಿಡಕ್ಕೆ ರಕ್ಷಣೆಗೆಂದು ಹಚ್ಚಲು ಬರುವಂತಿದ್ದರೆ ? ಜೀವನ ದಲ್ಲಿಯು ಎಲ್ಲ ಶಕ್ತಿಗಳನ್ನೂ ಇದೇ ರೀತಿ ಪರಿವರ್ತಿಸುವಂತಿದ್ದರೆ ?

ಮಹಾಪುರುಷರ ಜೀವನವನ್ನು ನೋಡಿರಿ. ಸಂಪದ್ಭರಿತವಾದ ಯಶಸ್ವೀ ರಾಷ್ಟ್ರಗಳ ಇತಿಹಾಸವನ್ನು ನೋಡಿರಿ. ಅವರಲ್ಲಿಯೂ ಈ ಮೂರು ಗುಣಗಳೇ ಇದ್ದುವು. ಆದರೆ ಅವರು ಇದರ ಸದುಪಯೋಗವನ್ನು ಮಾಡಿಕೊಂಡರು ಮತ್ತು ಸಫಲತೆಯನ್ನು ಪಡೆದರು. ಮನಸ್ಸಿನ ಸರ್ವ ಶಕ್ತಿಯನ್ನು ಉಚ್ಚತಮ ಶಿಖರದೆಡೆಗೆ ಕೊಂಡೊಯ್ಯುವುದು, ವ್ಯಕ್ತಿಯ ಅಥವಾ ರಾಷ್ಟ್ರದ ಉನ್ನತಿಯ ರಹಸ್ಯವಾಗಿದೆ.

ಊಟಕ್ಕೆ ಕುಳಿತಾಗ ತಟ್ಟೆಗೆ ಮಣ್ಣು ಹಾಕುತ್ತಾರೆಯೆ ? ಆದರೆ ಅದೇ ಮಣ್ಣಿನಿಂದ ತಟ್ಟೆಯನ್ನು ಉಜ್ಜುತ್ತಾರೆ. ಯೋಗ್ಯ ರೀತಿಯಿಂದ ಉಪಯೋಗಿಸಿದಾಗ ತಮೋಗುಣ ರಜೋಗುಣಗಳು ಕೂಡಾ ಸಾತ್ವಿಕತೆಯ ರೂಪ ಪಡೆಯುತ್ತವೆ. ಮಣ್ಣು ಮತ್ತು ನೀರನ್ನು ಉಪಯೋಗಿಸಿ ಮುಸರೆ ಪಾತ್ರೆಗಳನ್ನು ತೊಳೆಯುತ್ತೇವೆ. ಮಾನವ ಜೀವನದ ಈ ಪಾತ್ರೆಯನ್ನು ಕೂಡಾ, ತಾಮಸ ಮತ್ತು ರಾಜಸ ಗುಣಗಳಿಂದ ತೊಳೆಯಬೇಕಾಗಿದೆ ಮತ್ತು ಭಗವಂತನಲ್ಲಿ ನಿವೇದಿಸುವುದಕ್ಕಾಗಿ ಇದನ್ನು ಉಪಯೋಗಿಸಬೇಕಾಗಿದೆ. ಪರುಷಮಣಿಯ ಸ್ಪರ್ಶದಿಂದ ಎಲ್ಲ ಲೋಹಗಳು ಸುವರ್ಣವಾಗುವಂತೆ ಹಿಂದಿನ ಎಲ್ಲ ಪ್ರವೃತ್ತಿಗಳೂ ಇಲ್ಲ ದಂತಾಗುತ್ತವೆ. ತನ್ನ ಪೂರ್ವಾಶ್ರಮದಲ್ಲಿ ತಮ್ಮ ಪತ್ನಿಯನ್ನು ಉತ್ಕಟವಾಗಿ ಪ್ರೀತಿಸುವ ತುಲಸೀದಾಸರು, ಅಷ್ಟೇ ಏಕಾಗ್ರತೆಯಿಂದ ಶ್ರೀರಾಮಚಂದ್ರ ನನ್ನು ಪ್ರೀತಿಸತೊಡಗುತ್ತಾರೆ. ದಾರಿಹೋಕರನ್ನು ಸುಲಿಯುತ್ತಿದ್ದ ವಾಲ್ಮೀಕಿ ರಾಮಾಯಣದ ತುಂಬೆಲ್ಲಾ ಭಕ್ತಿರಸವನ್ನು ಹರಿಸಿದ್ದಾನೆ. ಹುಳಿಯಾಗಿದ್ದ ಮಾವಿನಕಾಯಿಯು ಬಿಸಿಲಿನ ಝಳದಿಂದ ಮಧುರವಾದ ಹಣ್ಣಾಗಿ ರೂಪಾಂತರ ಹೊಂದುತ್ತದೆ. ಅಷ್ಟೇ ಅದ್ಭುತವಾದದ್ದು ಈ ಮಾನಸಿಕ ಸ್ಥಿತ್ಯಂತರ.

೨

ತಮ ಎಂದರೆ ಅಂಧಕಾರ. ಅಜ್ಞಾನದ ಕತ್ತಲೆ. ತಾಮಸ ಜನರಿಗೆ ಅದರಲ್ಲಿಯೇ ಆನಂದವೆನಿಸುತ್ತದೆ. ಸೂರ್ಯೋದಯವಾಗುತ್ತಲೆ ಗೂಬೆಯು

ಮರೆಯಾಗುವಂತೆ, ಜ್ಞಾನದ ಪ್ರಕಾಶದಿಂದ ತಾಮಸಜನರು ದೂರ ಸರಿಯುತ್ತಾರೆ. ಒಳ್ಳೆಯ ಮಾತುಗಳನ್ನು ಅಥವಾ ಹಿತವಚನಗಳನ್ನು ಅವರಿಗೆ ಯಾರಾದರೂ ಹೇಳಿದರೆ ಕೋಪಗೊಳ್ಳುತ್ತಾರೆ. ಸಿಟ್ಟಿಗೆದ್ದು ಅವರನ್ನು ನಾಶಮಾಡಲು ಬರುತ್ತಾರೆ. ಇಸೋಪನ ನೀತಿಯ ಒಂದು ಕಥೆಯಿದೆ. ಒಮ್ಮೆ ಧೊ ಧೋ ಎಂದು ಮಳೆ ಸುರಿಯುತ್ತಿತ್ತು. ಗಿಡದ ಮೇಲಿದ್ದ ಮಂಗಗಳು ಮಳೆಯಲ್ಲಿ ನೆನೆಯುತ್ತಿದ್ದವು. ಅದೇ ಗಿಡದ ಮೇಲಿದ್ದ ಪಕ್ಷಿಗಳು ಸುಂದರವಾದ ಗೂಡನ್ನು ಕಟ್ಟಿಕೊಂಡಿದ್ದವು. ಅವುಗಳಿಗೆ ಮಳೆಯ ಒಂದು ಹನಿಯೂ ಸೋಕುತ್ತಿರಲಿಲ್ಲ. ಆ ಪಕ್ಷಿಗಳು ಮಂಗಗಳನ್ನು ಕೇಳಿದವು—"ದೇವರು ನಿಮಗೆ ಮನುಷ್ಯರಂತೆ ಇಷ್ಟು ಒಳ್ಳೆಯ ಕೈಗಳನ್ನು ಕೊಟ್ಟಿದ್ದಾನೆ. ನೀವೇಕೆ ಮನೆಗಳನ್ನು ಕಟ್ಟಿಕೊಳ್ಳುವುದಿಲ್ಲ ?" ಅದಕ್ಕೆ ಮಂಗಗಳು ಹೇಳಿದವು— "ಮಳೆ ನಿಲ್ಲಲಿ, ಇದಕ್ಕೆ ನಂತರ ಉತ್ತರವನ್ನು ಕೊಡುತ್ತೇವೆ." ಮಳೆ ನಿಂತಿತು. ಮಂಗಗಳು ಕೊಂಬೆಯೇರಿದವು. ಪಕ್ಷಿಗಳ ಸುಂದರವಾದ ಗೂಡುಗಳನ್ನು ಕಿತ್ತು ಬಿಸಾಡಿದವು. ಮೊಟ್ಟೆಗಳನ್ನು ಎಸೆದವು. ತಾಮಸ ಜನರು ಹೀಗೆಯೇ ಇರುತ್ತಾರೆ. ತಾವೂ ಸುಖವಾಗಿರುವುದಿಲ್ಲ, ಮತ್ತೊಬ್ಬರಿಗೂ ಸುಖ ವಾಗಿರಲು ಬಿಡುವುದಿಲ್ಲ. ಸುಖವಾಗಿದ್ದವರನ್ನು ಕಂಡರೆ ಅಸೂಯೆಗೊಳ್ಳು ತ್ತಾರೆ. ಸಾಕ್ರಟೀಸನ ಜ್ಞಾನಾನಂದವನ್ನು ಸಹಿಸದವರು ಅವನನ್ನು ಕೊಂದರು. ಅಂಥವರೇ ಯೇಸುಕ್ರಿಸ್ತನನ್ನು ಶಿಲುಬೆಗೇರಿಸಿದರು.

ತಮೋಗುಣಿಯು ಕ್ರೋಧಿಯಾಗಿರುತ್ತಾನೆ. ತಾಯಿ-ತಂದೆ, ಅಣ್ಣ-ತಂಗಿ, ಹೆಂಡತಿ-ಮಕ್ಕಳು ಅಷ್ಟೇ ಏಕೆ ತನ್ನ ಮೇಲೆಯೂ ಆತ ಸಿಟ್ಟಿಗೇಳು ತ್ತಾನೆ. ಅವನು ಚಂಚಲನಾಗಿರುತ್ತಾನೆ. ಯಾವುದನ್ನೂ ನಿರ್ಧರಿಸುವ ಸಾಮರ್ಥ್ಯ ಅವನಲ್ಲಿರುವುದಿಲ್ಲ. ಏಕಾಗ್ರತೆ ಇಲ್ಲದವನಿಗೆ ಯಶಸ್ಸು ಸಿಗುವುದೇ ? ಆದರೆ ಇದು ಅವನಿಗೆ ತಿಳಿಯುವುದಿಲ್ಲ. ಅದರಿಂದ ಅವನು ಬೇರೆಯವರ ಪ್ರಗತಿಯನ್ನು ಕಂಡು ಮತ್ಸರಗೊಳ್ಳುತ್ತಾನೆ. ಕ್ರೋಧದಿಂದ ಅವನು ಹೆಚ್ಚು ಹೆಚ್ಚು ತಪ್ಪುಗಳನ್ನು ಮಾಡುತ್ತಾನೆ. ಅದರಿಂದ ಅವನ ಅಪಕೀರ್ತಿಯು ಹೆಚ್ಚುತ್ತದೆ. ಬಡಿ, ಹೊಡಿ, ಕಡಿ ಎನ್ನುವ ಭಾಷೆಯಲ್ಲೇ ಆನಂದ ಸಿಗುತ್ತದೆ. ಕಂಸ, ಶಿಶುಪಾಲ, ಜರಾಸಂಧ ಮೊದಲಾದ ರಾಕ್ಷಸರು, ಚಂಗೀಸಖಾನ್, ತೈಮೂರ್‌ಲಂಗ್, ಘಜನಿ ಮಹಮದ್ ಮೊದಲಾದ

ಐತಿಹಾಸಿಕ ರಾಕ್ಷಸರು, ತಮೋಗುಣದ ಪ್ರತೀಕವಾಗಿದ್ದರು. ತಮೋಗುಣದ ಜನರು ಒಂದು ಒಳ್ಳೆಯ ಕೆಲಸವನ್ನೂ ಕೂಡ ತಾಮಸ ಗುಣದಿಂದಲೇ ಮಾಡುತ್ತಾರೆ. ರೋಗಿಯೊಬ್ಬನಿಗೆ ವೈದ್ಯ ಹಸುವಿನ ಹಾಲನ್ನು ಕುಡಿಯುವಂತೆ ಹೇಳಿದ. ಅವನು ಬೆಳಗ್ಗೆ ಎದ್ದವನೇ ಮೂರು ಸೇರು ಹಾಲು ಕುಡಿದ! ಅತಿ ಆಸೆಯಿಂದ ಹಿಂದು ಮುಂದಿನ ವಿಚಾರವಿಲ್ಲದೆ ಕುಡಿದ. ಹಸುವಿನ ಹಾಲು ಸಾತ್ವಿಕವಾದದ್ದು. ಆದರೆ ಅವನು ತಾಮಸ ತನದಿಂದ ಕುಡಿದ. ಹಿರಣ್ಯಕಶಿಪು, ರಾವಣ ಮೊದಲಾದವರು ಭಗವದ್ಭಕ್ತಿ ಯನ್ನು ಕೂಡಾ ತಾಮಸದಿಂದಲೇ ಮಾಡಿದರು.

> ಸತ್ಪುರುಷನವನು ಸ್ವಾರ್ಥ ತ್ಯಜಿಸಿ ಪರಹಿತವ ಬಗೆವನು
> ಮಧ್ಯಮನವನು ಸ್ವಾರ್ಥದಲಿ ಪರಹಿತವ ಸಾಧಿಪನು
> ಅಧಮನಾತನೆ ಸ್ವಕಾರ್ಯದಲಿ ಅನ್ಯರನು ಹಿಂಸಿಸುವ
> ಅಧಮರೊಳಗಧಮನು ವ್ಯರ್ಥ ಪರರನು ಧ್ವಂಸಿಸುವನು

೩

ತಮೋಗುಣಿಗಳು ಮೂರ್ಖರಾಗಿರುತ್ತಾರೆ. ಸರಳ ವ್ಯವಹಾರ ಜ್ಞಾನವೂ ಅವರಿಗಿರುವುದಿಲ್ಲ. ತಾವು ಕುಳಿತ ಕೊಂಬೆಯನ್ನೆ ಕಡಿಯುತ್ತಾರೆ. ಕೆಳಗಡೆ ಇದ್ದ ಬಾವಿಯೂ ಅವರಿಗೆ ಕಾಣುವುದಿಲ್ಲ. ರಾಜಸ ಗುಣದವರಿಗೆ ಸ್ವಲ್ಪ ವ್ಯವಹಾರ ಅಥವಾ ಸ್ವಾರ್ಥದ ಜ್ಞಾನವಿದೆ! ಆದರೆ ಇಷ್ಟೇ ಇದೆ. ಅದರ ಮುಂದಿನದು ಅವರಿಗೆ ತಿಳಿಯುವುದಿಲ್ಲ. ತಮೋಗುಣಿಯು ಇಂದಿನ ದನಷ್ಟೇ ವಿಚಾರ ಮಾಡುತ್ತಾನೆ. 'ಇಂದು ಖುಶಿಪಡಿರಿ, ನಾಳಿನ ಕಥೆ ನಾಳೆಗೆ', 'ಋಣಂ ಕೃತ್ವಾ ಘೃತಂ ಪಿಬೇತ್' ಎಂಬುದು ಇವರ ಧೋರಣೆ. ಆದರೆ ರಾಜಸ ಗುಣದವನು ಸ್ವಲ್ಪ ನಾಳೆಯದನ್ನೂ ನೋಡುತ್ತಾನೆ. ಹೆಂಡತಿ ಮಕ್ಕಳು ಎಂದೇ ಆಗಲಿ, ಅಲ್ಲಿಯವರೆಗೆ ಯೋಚಿಸುತ್ತಾನೆ. ಆದರೆ ಸತ್ವಗುಣಿ ಬಹಳ ಮುಂದಾಲೋಚನೆಯುಳ್ಳವನೂ, ವಿಶಾಲ ದೃಷ್ಟಿಯುಳ್ಳ ವನೂ ಆಗಿರುತ್ತಾನೆ. ಕೆಲವೊಮ್ಮೆ ಪುನರ್ಜನ್ಮ, ಮತ್ತು ಅನಂತತೆಯ ಬಗ್ಗೆಯೂ ಚಿಂತಿಸುತ್ತಾನೆ.

ರಜೋಗುಣದವನು ದೇಹದ ಮೇಲೆ ಮೋಹ ಉಳ್ಳವನು, ಅಹಂಕಾರ ಪ್ರವೃತ್ತಿಯುವನು ಆಗಿರುತ್ತಾನೆ. ನನ್ನ ಹೆಂಡತಿ, ನನ್ನ ಮಕ್ಕಳು, ನನ್ನ ಮನೆ ಎಂಬ ಸಂಕುಚಿತ ಸ್ವಭಾವದವನಾಗಿರುತ್ತಾನೆ.

'ಬಿನ್ನಹಕೆ ಬಾಯಿಲ್ಲವಯ್ಯಾ' ಎಂಬ ದಾಸರ ವಚನದಂತೆ 'ಶಿಶುಮೋಹ ಸತಿಮೋಹ' ಎಂದು ಅಸುರಾರಿಯನ್ನು ಮರೆತ ರಜೋಗುಣಿಯು, ಅನ್ನಮದ, ಅರ್ಥಮದ, ಪ್ರಾಯಮದ, ರೂಪಮದಗಳಿಂದ ಕೂಡಿರುತ್ತಾನೆ. ಹೀಗೆ ಬಾವಿಯಲ್ಲಿನ ಕಪ್ಪೆಯಂತೆ, ತನ್ನ ಸುತ್ತ ಸೀಮಿತ ವಲಯವನ್ನು ನಿರ್ಮಿಸಿಕೊಂಡು ತನ್ನ ಸಮಾನರಿಲ್ಲ ಎನ್ನುವ ಭಾವನೆಯಿಂದ ಆನಂದಿತನಾಗಿರುತ್ತಾನೆ.

೪

ಸಾತ್ವಿಕ ವ್ಯಕ್ತಿಯು ಇದಕ್ಕಿಂತಲೂ ಎತ್ತರಕ್ಕೆ ತಲಪುತ್ತಾನೆ. ಹೋದಲ್ಲೆಲ್ಲಾ ಅವನು ಸಾತ್ವಿಕತೆಯನ್ನು ಕಾಣುತ್ತಾನೆ. ತನ್ನಲ್ಲಿನ ಆತ್ಮವನ್ನು ಗುರುತಿಸುವಂತೆ ಜಗತ್ತಿನ ಎಲ್ಲದರಲ್ಲಿರುವ ಆತ್ಮವನ್ನು ಗುರುತಿಸುತ್ತಾನೆ. ಪ್ರತಿಯೊಂದು ವಿಚಾರವನ್ನೂ ಆಳವಾಗಿ ಯೋಚಿಸುತ್ತಾನೆ.

'ವಿಶ್ವವೇ ನನ್ನ ಮನೆ, ಲೋಕವೇ ನನ್ನ ಕುಟುಂಬ' ಎಂಬುದು ಆತನ ಮನಃಸ್ಥಿತಿಯಾಗಿರುತ್ತದೆ. ಅವನ ಊಟ ಉಡುಪಿನಲ್ಲಿಯೂ ಸಾತ್ವಿಕತೆ ತೋರುತ್ತದೆ. ಗರುಡ ಪಕ್ಷಿಯು ಯಾವ ದಿಕ್ಕಿಗೆ ಹಾರಿದರೂ ಅದರ ಗಮನ ಗೂಡಿನ ಕಡೆಗೆ ಇರುತ್ತದೆ. ಅದರಂತೆಯೇ ಸಾತ್ವಿಕ ಮನುಷ್ಯ ಯಾವ ಕೆಲಸ ಮಾಡಿದರೂ ಅವನ ಲಕ್ಷ್ಯ ಸತ್ವದ ಕಡೆಗೆ ಇರುತ್ತದೆ.

ಸಾತ್ವಿಕ ಮನುಷ್ಯ ಮೋಹಕ್ಕೆ ಬಲಿಯಾಗುವುದಿಲ್ಲ. ಅವನ ವಿವೇಕ ಬುದ್ಧಿಯು ಸದಾ ಜಾಗೃತವಿರುತ್ತದೆ. ವಿಷಯಭೋಗದಿಂದ ಸಿಗುವ ಸುಖವು ತುಚ್ಛವಾದದ್ದು ಅಥವಾ ಅದು ಸುಖವೇ ಅಲ್ಲ ಎನ್ನುವ ಸ್ಪಷ್ಟ ಕಲ್ಪನೆ ಆತನಿಗಿದೆ. ಬೂದಿ ಮುಚ್ಚಿದ ಕೆಂಡದಿಂದ, ಬೂದಿಗೆ ಯಾವುದೇ ಪರಿಣಾಮವಾಗುವುದಿಲ್ಲ. ಅದರಂತೆ ಸುತ್ತಮುತ್ತಲಿನ ವ್ಯಾಮೋಹಕ್ಕೆ

ವಶನಾಗದೆ, ಸಾತ್ವಿಕ ಪುರುಷ ಅವುಗಳನ್ನು ಮೆಟ್ಟಿ ತನ್ನ ಸತ್ವದಿಂದ ಗೆಲ್ಲುತ್ತಾನೆ.

ವ್ಯಕ್ತಿಯೇ ಇರಲಿ, ಸಮಾಜವೇ ಆಗಲಿ, ಸತ್ವ ಕಳೆದುಕೊಂಡರೆ ಎಲ್ಲವನ್ನೂ ಕಳೆದುಕೊಂಡಂತೆ. ಹರಿಶ್ಚಂದ್ರನು ಬಗೆಬಗೆಯ ಕಷ್ಟಗಳನ್ನು ಅನುಭವಿಸಿದರೂ, ತನ್ನ ಸತ್ಯವನ್ನು ಬಿಡಲಿಲ್ಲ. ಆದಕ್ಕಾಗಿಯೇ ಶ್ರೀರಾಮ ನಂಥವರು, ಧರ್ಮರಾಜನಂಥವರು ವನವಾಸವನ್ನು ಅನುಭವಿಸಿದರು. ವಿವೇಕಾನಂದರ ಸಾತ್ವಿಕ ತೇಜಸ್ಸು ಜಗತ್ತಿನ ಕಣ್ಣು ಕುಕ್ಕಿಸಿತು. ಹಿಂದೂ ಧರ್ಮಧ್ವಜ ಎತ್ತರಕ್ಕೇರಿತು.

೫

ಸತ್ವ, ರಜ, ತಮ ಇವುಗಳು ಆತ್ಮದ ಗುಣಗಳಲ್ಲ. ಆತ್ಮವು ಸ್ವಯಂಭೂ, ಸ್ವಯಂಪೂರ್ಣ ಹಾಗೂ ತ್ರಿಗುಣಗಳಿಂದ ದೂರವಾದುದು. ಆದರೆ ಮಾಯೆಯಿಂದ ಹುಟ್ಟಿದ ಈ ತ್ರಿಗುಣಗಳು ಆತ್ಮದ ಸಾಕ್ಷಾತ್ಕಾರದಲ್ಲಿ ಅಡ್ಡಿಯಾಗಿವೆ. ಇವು ತ್ರಿಗುಣಾತೀತವಾದ ಆತ್ಮವನ್ನು ತೆರೆಗಳಂತೆ ಮುಸುಕಿವೆ. ಇದರಲ್ಲಿ ಒಂದು ಪರದೆ ಅತಿಶಯ ಕೃಷ್ಣವರ್ಣದ್ದಾಗಿದೆ. ಇದರೊಳಗಿನಿಂದ ಏನೂ ಕಾಣಿಸುವುದಿಲ್ಲ. ಎರಡನೆಯ ತೆರೆ ಸ್ವಲ್ಪ ಧವಳ ಛಾಯೆಯಲ್ಲಿದೆ. ಒಳಗಿರುವ ವಸ್ತುವಿನ ಬಗ್ಗೆ ಸ್ವಲ್ಪ ಅರಿವು ಮೂಡುತ್ತದೆ. ಮೂರನೇ ತೆರೆಯು ಸಂಪೂರ್ಣ ಪಾರದರ್ಶಕವಿದೆ. ಅದರ ಮೂಲಕ ಒಳಗಿದ್ದ ಆತ್ಮ ಕಾಣತೊಡಗುತ್ತದೆ. ಅದರ ಆಕರ್ಷಣೆ ಹೆಚ್ಚುತ್ತಾ ಹೋಗುತ್ತದೆ. ಈ ಪರದೆ ಯಾವಾಗ ಸರಿದೀತು, ಒಳಗಿರುವ ಆತ್ಮದ ದರ್ಶನ ಯಾವಾಗ ಆದೀತು ಎಂಬ ತಳಮಳ ಹುಟ್ಟುತ್ತದೆ. ಮನುಷ್ಯನಲ್ಲಿ ವೈರಾಗ್ಯ ಉದಿಸಿದ ಕೂಡಲೇ ಈ ಮೂರೂ ತೆರೆಗಳು ಬಿದ್ದುಹೋಗುತ್ತವೆ. ಸಾತ್ವಿಕ ವಾತಾವರಣ, ಸಾತ್ವಿಕ ಆಹಾರ, ಸಾತ್ವಿಕ ವಾಚನ-ಲೇಖನ ಮತ್ತು ಸಾತ್ವಿಕ ಸಹವಾಸ – ಇವುಗಳಿಂದ ರಾಜಸ ಮತ್ತು ತಾಮಸ ಗುಣಗಳು ನಾಶವಾಗುತ್ತವೆ. ಸತ್ವಗುಣವು ಬಲಗೊಂಡು ಸದ್ಧರ್ಮದ ಕಡೆ ಸೆಳೆಯುತ್ತದೆ. ಸಾತ್ವಿಕತೆಯ ಪರಮೋನ್ನತಿಯೇ ಶ್ರೇಷ್ಠಧರ್ಮವಾಗಿದೆ.

೬

ತನ್ನ ಆಚರಣೆಯಿಂದ ಶತಕಗಳಿಂದಲೂ ಜಗತ್ತಿಗೆ ಸಾತ್ವಿಕತೆಯ ಪಾಠ ಕಲಿಸುತ್ತಿರುವ ಭರತಭೂಮಿಯು, ಇಂದು ತಾನೇ ತಮಸ್ಸಿನಲ್ಲಿ ಮುಳುಗಿದೆ. ಹಳ್ಳಿಗಳಲ್ಲಿದ್ದ ಶಾಂತ ಮುಗ್ಧ ವಾತಾವರಣ ಇಲ್ಲದಂತಾಗಿದೆ. ದುಡಿಯುವ ಇಚ್ಛೆ ಇಲ್ಲ. ಊಟ ತಿಂಡಿಗಳಲ್ಲಿಯೂ ಶಿಸ್ತು ಇಲ್ಲ. ಸಮಾಧಾನ ಚಿತ್ತವಿಲ್ಲ. ಒಳ್ಳೆಯ ನಡತೆಯಿಲ್ಲ. ಇದು ಗ್ರಾಮವಾಸಿಗಳ ಸ್ಥಿತಿಯಾಗಿದೆ. ಪ್ರತಿಯೊಬ್ಬನೂ ನಗರಕ್ಕೆ ಓಡುತ್ತಾನೆ. ಹಳ್ಳಿಯಲ್ಲಿದ್ದರೂ ನಗರದ ಕಡೆಗೇ ಅವನು ಆಕರ್ಷಿತನಾಗಿರುತ್ತಾನೆ. ನಗರಗಳಲ್ಲಿ ಇಂದು ನಿರ್ಜೀವ ಯಾಂತ್ರಿಕತೆಯ ವಾತಾವರಣ ನಿರ್ಮಾಣಗೊಂಡಿದೆ. ನಗರಗಳು ಪ್ರಚಂಡ ಗಾಣಗಳಾಗಿವೆ. ಶರೀರ ಮತ್ತು ಮನಸ್ಸು ಅದರಲ್ಲಿ ಹಿಂಡಿಹಿಪ್ಪೆಯಾಗುತ್ತಿವೆ. ಮನಸ್ಸು, ದೇಹಗಳು ಹಸಿದಿವೆ. ಭಾವನೆ, ಬುದ್ಧಿ ಮತ್ತು ವಿವೇಕ ಈ ಮೂರೂ ಲೋಪಗೊಂಡಿವೆ.

ಪಟ್ಟಣಗಳಲ್ಲಿ ಯಂತ್ರಗಳ ಗಡಗಡಾಟ, ಅಸಂಖ್ಯ ವಾಹನಗಳ ಖಡ ಖಡಾಟ ಕೇಳಿಬರುತ್ತಿದೆ. ಮನೆ, ಶಾಲೆ, ವಿಶ್ರಾಮಸ್ಥಳಗಳು, ಉದ್ಯಾನ ಗಳು ಹೀಗೆ ಎಲ್ಲಿ ನೋಡಿದರೂ ಗದ್ದಲ-ಸದ್ದು ತುಂಬಿದೆ. ಸ್ವಚ್ಛ ಶುದ್ಧ ಪರಿಸರ ಎಲ್ಲಿಯೂ ಕಾಣದು. ಹೊಗೆಯಿಂದ ಉಸಿರು ಕಟ್ಟುತ್ತದೆ. ಕಿವಿಯ ಪರದೆ ಹರಿಯುವಂತೆ ಕಾರಖಾನೆಯ ಸದ್ದು ಮತ್ತು ಹೊಗೆಯ ಸುರುಳಿಗಳಿಂದ ಆಕಾಶ ತುಂಬಿದೆ. ಋಷಿ-ಮುನಿಗಳ ಈ ನಾಡಿನಲ್ಲಿ ಇಂದು ಎಲ್ಲೆಲ್ಲೂ ತಾಮಸತನವೇ ತುಂಬಿದೆ. ಅನಾದರ, ಅಶ್ರದ್ಧೆ, ಅವಿಶ್ವಾಸಗಳ ಪರಿಸರದಲ್ಲಿ ಸಾತ್ವಿಕತೆಯು ಹೇಗೆ ಅರಳೀತು ?

ನಮ್ಮ ಆಹಾರ ಕೂಡಾ ಇಂದು ಅನುಚಿತದ್ದಾಗಿದೆ. ಸಾತ್ವಿಕ ಆಹಾರದ ವರ್ಣನೆಯು ಗೀತೆಯ ಹದಿನೇಳನೆಯ ಅಧ್ಯಾಯದ ಎಂಟನೇ ಶ್ಲೋಕದಲ್ಲಿ ಹೀಗಿದೆ :

ಆಯುಃ ಸತ್ವಬಲಾರೋಗ್ಯಸುಖಪ್ರೀತಿವಿವರ್ಧನಾಃ ।
ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸಾತ್ವಿಕಪ್ರಿಯಾಃ ॥

ಸಾತ್ವಿಕ ಆಹಾರವು ಆಯುಷ್ಯ, ಬಲ, ಆರೋಗ್ಯ, ಸುಖ ಮತ್ತು ಪ್ರೀತಿಯನ್ನು ಹೆಚ್ಚಿಸುವಂತಹುದು. ಇಂದು ನಮ್ಮ ಆಹಾರಪದ್ಧತಿಯು

ತಾಮಸಗುಣವುಳ್ಳದ್ದಾಗಿದೆ. ಇದರಿಂದ ಮೇಲೆ ಹೇಳಿದ ಎಲ್ಲ ಗುಣಗಳೂ ವಿನಾಶಗೊಳ್ಳುತ್ತವೆ.

ಗ್ರಂಥವೆಂದರೆ ರಾಷ್ಟ್ರದ ಅಂತರಂಗದ ಪ್ರತಿಬಿಂಬವೇ ಆಗಿದೆ. ಆಯಾ ರಾಷ್ಟ್ರದ ವಿಚಾರಗಳು, ಸುಖ-ದುಃಖಗಳು, ಆಸೆ-ಆಕಾಂಕ್ಷೆಗಳನ್ನು ಆಯಾ ರಾಷ್ಟ್ರದ ಸಾಹಿತ್ಯಸಂಪತ್ತಿನಿಂದ ಅರಿಯಬಹುದಾಗಿದೆ. ಇಂದು ನೀವು ವಾಚನಾಲಯಗಳಲ್ಲಿ ನೋಡಿರಿ, ಪುಸ್ತಕ ವ್ಯಾಪಾರಿಗಳಲ್ಲಿ ನೋಡಿರಿ, ಎಲ್ಲ ಕಡೆ ಉಚ್ಛೃಂಖಲ, ವಿಕಾರ, ವಿಕ್ಷಿಪ್ತ ಸಾಹಿತ್ಯ ತುಂಬಿದೆ. ಅವುಗಳನ್ನು ಓದುವುದರಿಂದ ಅಶ್ಲೀಲ ಸಂಗತಿಗಳ ಮನನ, ಚಿಂತನ, ಹೀಗೆ ಕುವಿಚಾರಗಳ ಪ್ರಸಾರವಾಗುತ್ತದೆ. ಇದರಿಂದ ಮನಸ್ಸು ಮತ್ತು ಶರೀರಗಳು ಕೊರಕಲಾಗುತ್ತವೆ. ಇಂಥ ಹುಳುಹಿಡಿದ ಸವೆದ ಕಂಬದ ಆಧಾರದ ಮೇಲೆ ಸಾತ್ವಿಕತೆಯ ಮಂದಿರ ನಿಲ್ಲುವುದೆ ?

೭

ಒಂದು ಕಾಲದಲ್ಲಿ ಭಗವಂತನ ಭಕ್ತಿಯನ್ನು ಪ್ರೇರೇಪಿಸುವ ಆಕಾಂಕ್ಷೆ ನಮ್ಮ ದೇಶದ ಸಾಧು-ಸಂತರದಾಗಿತ್ತು. ಆ ಪ್ರಯಾಸದಲ್ಲಿ ಅವರು ತಮ್ಮ ಜೀವನವನ್ನು ಸಮರ್ಪಿಸಿದರು. ಮಠಮಂದಿರಗಳನ್ನು ಸ್ಥಾಪಿಸಿದರು. ಶಿಷ್ಯ ಸಂಪ್ರದಾಯಗಳ ಪರಂಪರೆಯನ್ನು, ಭಜನೆ ಕೀರ್ತನೆಗಳ ಸಂಘಗಳನ್ನು ಕಟ್ಟಿದರು. ಅಂತಿಮವಾಗಿ ಪರಿವರ್ತನೆಯನ್ನು ತಂದರು. ಆದರೆ ಇಂದು ತಕ್ಕಡಿ ತಿರುವುಮುರುವಾಗಿದೆ. ಭಜನೆ ಕೀರ್ತನೆಗಳ ಸಂಖ್ಯೆ ಇಳಿಮುಖವಾಗಿದೆ. ಅಂಥಲ್ಲಿ ಜನ ಕಡಿಮೆ ಸಂಖ್ಯೆಯಲ್ಲಿ ಸೇರುತ್ತಾರೆ. ಆದರೆ ಚಿತ್ರಮಂದಿರಗಳು ಮಾತ್ರ ನಾಲ್ಕು ಪ್ರದರ್ಶನಗಳು, ವಿಪುಲವಾದ ಜನದಟ್ಟಣೆಯಿಂದ ತುಂಬಿರುತ್ತವೆ. ಜನರು ಹಣ ಖರ್ಚು ಮಾಡಿ ಚಿತ್ರಗಳನ್ನು ನೋಡುತ್ತಾರೆ. ಪರೋಕ್ಷವಾಗಿ ತಾಮಸ ಜೀವನವನ್ನು ಪುರಸ್ಕರಿಸುತ್ತಾರೆ. ಅವರೇ ಲೌಕಿಕವಾಗಿ ಯಶಸ್ವಿಗಳೆಂದು ಹೆಸರು ಗಳಿಸುತ್ತಾರೆ. ಉಳಿದವರು ಉರುಳಿ ಬೀಳುತ್ತಾರೆ.

ಇಂದಿನ ನಮ್ಮ ಸಮಾಜಜೀವನ ಈ ರೀತಿಯದಾಗಿದೆ. ಅದರ ಆಸೆ ಆಕಾಂಕ್ಷೆಗಳು, ವಾಚನ, ಲೇಖನ, ವಿಚಾರ, ಭಾಷಣ, ಮನರಂಜನೆ, ಆಹಾರ,

ವಿಹಾರ ಎಲ್ಲವೂ ತಾಮಸವಾಗಿವೆ. ಅದರ ಸಹವಾಸ, ಸಂಗತಿ ಎಲ್ಲವೂ ಅದೇ ಸ್ವರೂಪದ್ದಾಗಿದೆ.

ಈ ಸ್ಥಿತಿ ಸಂಪೂರ್ಣ ಬದಲಾಯಿಸಬೇಕಾಗಿದೆ. ನಾವು ಎಲ್ಲೋ ಎಡವುತ್ತಿದ್ದೇವೆ, ಭಯಂಕರ ಅಪರಾಧ ಮಾಡುತ್ತಿದ್ದೇವೆ, ಇದನ್ನು ಸರಿಪಡಿಸಬೇಕು – ಎಂದು ಪ್ರತಿಯೊಬ್ಬನೂ ತಿಳಿದುಕೊಂಡು ಪ್ರಯತ್ನ ಪಡಬೇಕು. ನಾವು ಅಧಃಪತನದ ಕಂದಕದ ಕಡೆಗೆ ವೇಗದಿಂದ ಜಾರುತ್ತಿದ್ದೇವೆ ಎನ್ನುವ ಅರಿವು ಎಲ್ಲರಲ್ಲೂ ಉಂಟಾಗಬೇಕು. ಎಲ್ಲ ಶಕ್ತಿಯನ್ನು ಒಟ್ಟುಗೂಡಿಸಿ ಈ ಪತನದ ಅಂಚಿನಲ್ಲಿರುವ ಸಮಾಜವನ್ನು ರಕ್ಷಿಸಬೇಕು. ಅದಕ್ಕಾಗಿ ಸಾತ್ವಿಕತೆಯ ರಕ್ಷಣೆ ಮತ್ತು ಆರಾಧನೆ ಆಗಲೇಬೇಕು. ಹಣ್ಣಿನ ತಿರುಳನ್ನು ಮಾತ್ರ ಸೇವಿಸಿ ಅದರಲ್ಲಿರುವ ನಾರು ಮತ್ತು ಸಿಪ್ಪೆಯನ್ನು ಎಸೆಯುತ್ತೇವೆ. ಆದರಂತೆ ತಾಮಸವೃತ್ತಿಯನ್ನು ತ್ಯಜಿಸಿ, ವಿಶ್ವದಲ್ಲಿನ ಸಾರವನ್ನಷ್ಟೇ ಗ್ರಹಿಸುವವನ ಕೃತಿ, ಕೆಲಸ ಮತ್ತು ಮಾತಿನಲ್ಲಿ ಸಾತ್ವಿಕತೆ ತನ್ನಿಂದ ತಾನೇ ಪ್ರಕಟಗೊಳ್ಳುತ್ತದೆ.

೮

ಮನುಸ್ಮೃತಿಯ ಹನ್ನೆರಡನೆಯ ಅಧ್ಯಾಯದಲ್ಲಿ ಬಹಳ ಸುಂದರವಾಗಿ ಇದನ್ನು ವಿವೇಚಿಸಲಾಗಿದೆ, ಚರಾಚರ ಜಗತ್ತು ತ್ರಿಗುಣಗಳಿಂದ ಕೂಡಿದೆ. ಆದರೂ ಸತ್ವ, ರಜ, ತಮೋಗುಣಗಳಲ್ಲಿ ಯಾವುದರ ಆಧಿಪತ್ಯವಿದೆಯೋ ಆ ಗುಣವುಳ್ಳ ವ್ಯಕ್ತಿ ಅಥವಾ ಸಮಾಜವನ್ನು ಗುರುತಿಸಬಹುದಾಗಿದೆ. ಸತ್ಯ ಸ್ವರೂಪವನ್ನು ಅರಿಯುವ ಅಭಿಲಾಷೆಯುಳ್ಳವನು ಸಾತ್ವಿಕನು, ವಿಷಯದ ಅಭಿಲಾಷೆಯುಳ್ಳವನು ರಜೋಗುಣದವನು.

ಸಹೃದಯತೆ, ನಿರ್ಭಯತೆ, ಪ್ರೀತಿ, ತನ್ನಲ್ಲೂ ಪರರಲ್ಲೂ ಸಮಾನತೆಯನ್ನು ಕಾಣುವ ಇಚ್ಛೆ, ಜ್ಞಾನವನ್ನು ಪಡೆಯುವ ಹಂಬಲ – ಇವು ಸಾತ್ವಿಕತೆಯ ಪರಮ ಲಕ್ಷಣಗಳು.

ಅಸತೋ ಮಾ ಸದ್ಗಮಯ । ತಮಸೋ ಮಾ ಜ್ಯೋತಿರ್ಗಮಯ ।

– ಎನ್ನುವುದು ಆತನ ಧ್ಯೇಯವಾಗಿರುತ್ತದೆ.

ಯಾರಲ್ಲಿ ದೇಹಾಭಿಮಾನ, ಇಂದ್ರಿಯಸುಖಾಪೇಕ್ಷೆ ಇರುವುದೋ, ಯಾರಿಗೆ ತತ್ವಜ್ಞಾನವು ಹಿಡಿಸುವುದಿಲ್ಲವೋ, ಮತ್ತು ಪ್ರತಿಯೊಂದು ಮಾತಿಗೂ ಏನಾದರೂ ಲಾಭ ಪಡೆಯಲು ಇಚ್ಛಿಸುವನೋ ಅವನು ರಜೋಗುಣಿ.

ಧನವೇ ಸರ್ವಸ್ವವೆಂದು ಭಾವಿಸುವವನು, ನಿದ್ರೆ, ಆಲಸ್ಯ, ಕರ್ತವ್ಯ ಬಾಹಿರತೆ–ಇವುಗಳಲ್ಲಿ ಆನಂದವನ್ನು ಕಾಣುವವನು ಮತ್ತು ಕ್ರೂರತೆ, ಪರಪೀಡನೆ ಯಾರ ಸಹಜ ಗುಣಗಳೋ ಅವನು ತಾಮಸಿ.

ಕರ್ಮ ಮಾಡಿದ ಮೇಲೆ, ಮಾಡುವಾಗ ಅದಕ್ಕಾಗಿ ಲಜ್ಜೆ ಪಟ್ಟುಕೊಳ್ಳುವ ಪ್ರವೃತ್ತಿಯುವನು ತಾಮಸಲಕ್ಷಣವುಳ್ಳವನು.

ಕೀರ್ತಿ ಮತ್ತು ಫಲಾಪೇಕ್ಷೆಯಿಂದ ಕರ್ಮ ಮಾಡುವವನು ರಜೋಗುಣವುಳ್ಳವನೆಂದು ತಿಳಿಯಬೇಕು. ನಿಃಸ್ವಾರ್ಥ ಬುದ್ಧಿಯಿಂದ, ಧರ್ಮಬುದ್ಧಿಯಿಂದ ಭಗವದರ್ಪಣಭಾವದಿಂದ ಕೆಲಸ ಮಾಡುವವನು ಸಾತ್ವಿಕ. ಗೀತೆಯ ಹದಿನೆಂಟನೆಯ ಅಧ್ಯಾಯದಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಹೀಗೆ ಹೇಳಿದೆ :

> **ಪ್ರವೃತ್ತಿಂ ಚ ನಿವೃತ್ತಿಂ ಚ ಕಾರ್ಯಾಕಾರ್ಯೇ ಭಯಾಭಯೇ ।**
> **ಬಂಧಂ ಮೋಕ್ಷಂ ಚ ಯಾ ವೇತ್ತಿ ಬುದ್ಧಿಃ ಸಾ ಪಾರ್ಥ ಸಾತ್ವಿಕೀ ॥ ೩೦ ॥**

ಪ್ರವೃತ್ತಿ-ನಿವೃತ್ತಿ, ಕರ್ತವ್ಯ-ಅಕರ್ತವ್ಯ, ಭಯ-ಅಭಯ ಇದರ ಕಾರಣಗಳನ್ನು ತಿಳಿಯುವವನು, ಬಂಧನ ಯಾವುದರಿಂದ, ಮೋಕ್ಷ ಯಾವುದರಿಂದ ಎಂದು ಸ್ಪಷ್ಟವಾಗಿ ತಿಳಿದಿರುವವನು ಸಾತ್ವಿಕ.

> **ಯಯಾ ಧರ್ಮಮಧರ್ಮಂ ಚ ಕಾರ್ಯಂ ಚಾಕಾರ್ಯಮೇವ ಚ ।**
> **ಅಯಥಾವತ್ ಪ್ರಜಾನಾತಿ ಬುದ್ಧಿಃ ಸಾ ಪಾರ್ಥ ರಾಜಸೀ ॥ ೩೧ ॥**

ಧರ್ಮ ಅಧರ್ಮ, ಕಾರ್ಯ ಅಕಾರ್ಯ ಇವುಗಳ ನಡುವೆ ಗೊಂದಲ ಮಾಡುವ ಬುದ್ಧಿ, ನಿರ್ಣಯಿಸಲಾರದ ಬುದ್ಧಿಯು ರಾಜಸವಾದದ್ದು.

ಅಧರ್ಮಂ ಧರ್ಮಮಿತಿ ಯಾ ಮನ್ಯತೇ ತಮಸಾವೃತಾ ।
ಸರ್ವಾರ್ಥಾನ್ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸೀ ॥ ೩೨ ॥

ಪಾರ್ಥ, ತಮಸ್ಸಿನಿಂದ ಆವರಿಸಲ್ಪಟ್ಟ ಬುದ್ಧಿಯು ಅಧರ್ಮವನ್ನೇ ಧರ್ಮವೆಂದು ತಿಳಿಯುತ್ತದೆ. ಮತ್ತು ಪ್ರತಿಯೊಂದು ಸಂಗತಿಗೂ ವಿರುದ್ಧ ಅರ್ಥ ತಿಳಿದುಕೊಳ್ಳುವುದು ತಾಮಸ.

ಭರತಖಂಡದಲ್ಲಿ ಇಂದು ದುರ್ಭಾಗ್ಯವಶದಿಂದ ತಾಮಸಬುದ್ಧಿಯೇ ಕೆಲಸ ಮಾಡುತ್ತಿದೆ. ಇದನ್ನು ತಡೆಯಬೇಕು. ಎಲ್ಲ ರಂಗದಲ್ಲಿ ಸಾತ್ವಿಕತೆಯು ಉದಯವಾಗಬೇಕು, ಆಗಲೇ ನಿಜವಾದ ಪ್ರಗತಿ, ಸುಖ, ಶಾಶ್ವತ ಆನಂದ ಲಭಿಸುತ್ತದೆ.

೧

ಧರ್ಮರಾಜನ ವಿದ್ಯಾರ್ಥಿಜೀವನದ ಒಂದು ಕಥೆ. ಒಂದು ದಿನ ಗುರುಗಳು ಕೌರವ ಪಾಂಡವರೆಲ್ಲರಿಗೂ ಒಂದು ಪಾಠ ಹೇಳಿದರು – 'ಸತ್ಯಂ ವದ, ಧರ್ಮಂ ಚರ, ಸ್ವಾಧ್ಯಾಯಾನ್ಮಾ ಪ್ರಮದಃ.' "ನಾಳೆ ಈ ಪಾಠವನ್ನು ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಬನ್ನಿರಿ" ಎಂದು ಹೇಳಿದರು. ತರಗತಿ ಮುಗಿಯಿತು. ವಿದ್ಯಾರ್ಥಿಗಳು ಸ್ವಸ್ಥಾನಕ್ಕೆ ಹೋದರು. ಮರುದಿನ ಪಾಠ ಶಾಲೆ ಆರಂಭವಾಯಿತು. ಆಚಾರ್ಯರು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಕೇಳಿದರು –"ನಿನ್ನೆ ಹೇಳಿದ ಪಾಠ ಅಭ್ಯಾಸ ಆಯಿತೆ ?" ಎಲ್ಲ ವಿದ್ಯಾರ್ಥಿಗಳೂ ಉತ್ತರಿಸಿದರು –"ಓ ಆಯಿತು ; ಅದರಲ್ಲೇನಿದೆ, ಮೂರು ವಾಕ್ಯಗಳು ಮಾತ್ರ ಇದ್ದವು." ಆದರೆ ಧರ್ಮರಾಜನ ಸರದಿ ಬಂದಾಗ ಆತ ಹೀಗೆ ನುಡಿದ – "ಕ್ಷಮಿಸಬೇಕು ಗುರುಗಳೇ, ನನ್ನ ಪಾಠ ಅಭ್ಯಾಸವಾಗಿಲ್ಲ." ಗುರುಗಳಿಗೆ ಸ್ವಲ್ಪ ಕೋಪ ಬಂತು. "ನಾಳೆಯಾದರೂ ಚೆನ್ನಾಗಿ ಅಭ್ಯಾಸ ಮಾಡು" ಎಂದು ಎಚ್ಚರಿಸಿದರು. ಆದರೆ ಮರುದಿನವೂ ಯುಧಿಷ್ಠಿರನಿಂದ ಅಭ್ಯಾಸ ಆಗಿರಲಿಲ್ಲ. ಮೂರನೆ ನಾಲ್ಕನೆ ದಿನವೂ ಆಗಿರಲಿಲ್ಲ. ಆದರೆ ಐದನೆ ದಿನ ಮಾತ್ರ ಧರ್ಮರಾಜನ ಮುಖದಲ್ಲಿ ಸಮಾಧಾನವಿತ್ತು. ಅವನು ಆನಂದ ದಿಂದ ಗುರುಗಳ ಬಳಿ ಹೋದ. ಗುರುಗಳಿಗೆ ಆ ಪಾಠ ಹೇಳಿ ಒಪ್ಪಿಸಿದ. ಗುರುಗಳು ಸಮಾಧಾನಗೊಂಡರು. ಹಾಗೆಯೇ ಒಂದು ಪ್ರಶ್ನೆ ಕೇಳಿದರು : "ಯುಧಿಷ್ಠಿರ, ನಿನಗೆ ಇಷ್ಟು ಸಣ್ಣ ವಾಕ್ಯ ಅಭ್ಯಾಸಮಾಡಲು ಇಷ್ಟುದಿನ ಹಿಡಿಯಿತಲ್ಲ, ಏಕೆ ?" ಅದಕ್ಕೆ ಯುಧಿಷ್ಠಿರನೆಂದ: "ಏನು ಮಾಡಲಿ ಗುರುಗಳೇ, ನಾನು ಬಹಳ ಪ್ರಯತ್ನಪಟ್ಟೆ. ಒಮ್ಮೆ ತಿಳಿದು ಒಮ್ಮೆ ತಿಳಿಯದೇ, ಒಮ್ಮೆ ವಿನೋದದಲ್ಲಿ, ನನ್ನಿಂದ ಅಸತ್ಯ ಮಾತು ಹೊರ

ಬರುತ್ತಿತ್ತು. ಕೊನೆಗೆ ನಿನ್ನೆಯಿಂದ ಇವತ್ತಿನವರೆಗೆ ನಾನು ಒಮ್ಮೆಯೂ ಸಿಟ್ಟುಮಾಡಲಿಲ್ಲ. ಆದ್ದರಿಂದ ನಾನು ನಿಸ್ಸಂಶಯವಾಗಿ ನನ್ನ ಪಾಠ ಅಭ್ಯಾಸವಾಗಿದೆಯೆಂದು ಹೇಳಬಲ್ಲೆ." ಯುಧಿಷ್ಠಿರನ ಮಾತಿನಿಂದ ಆಚಾರ್ಯರು ಚಕಿತಗೊಂಡರು. "ಧನ್ಯ ಯುಧಿಷ್ಠಿರ, ನೀನು ಗುರುವಿಗೆ ಗುರುವಾದೆ. ಅಭ್ಯಾಸ ಮಾಡುವುದರ ನಿಜವಾದ ಅರ್ಥ ನೀನು ನಮಗೆ ತಿಳಿಸಿದೆ. ನಾವು ಇಂದಿನವರೆಗೆ ಮಕ್ಕಳಿಗೆ ಬಾಯಿಪಾಠ ಮಾಡಿಸುತ್ತಿದ್ದೆವು. ಶಬ್ದಾರ್ಥ ಹೇಳಿಕೊಡುತ್ತಿದ್ದೆವು. ಆದರೆ ನಾವು ಓದಿದ ಪಾಠ ಹೃದಯದಲ್ಲಿ ಬೇರೂರಬೇಕು, ಕೃತಿಯಲ್ಲಿ ಇಳಿಯಬೇಕು ಎನ್ನುವ ಕಡೆ ನಮ್ಮ ಗಮನವಿರಲಿಲ್ಲ. ಈ ರೀತಿಯಿಂದ ಎಲ್ಲರೂ ಜ್ಞಾನವನ್ನು ಸಂಪಾದಿಸಿದರೆ ಭೂಮಿಯ ಮೇಲೆ ಸ್ವರ್ಗ ಇಳಿದುಬಂದೀತು."

೨

ಧರ್ಮರಾಯನ ಈ ಕಥೆ ಭಾರತೀಯ ಸಂಸ್ಕೃತಿಯ ಸಾರವೇ ಆಗಿದೆ. ಜ್ಞಾನಪ್ರಾಪ್ತಿಯ ಆದರ್ಶಗಳನ್ನು ಸ್ಪಷ್ಟಗೊಳಿಸಿ ಶಿಕ್ಷಣವನ್ನು ಹೇಗೆ ಕೊಡಬೇಕು ಮತ್ತು ಪಡೆಯಬೇಕು ಎನ್ನುವುದನ್ನು ಈ ಕಥೆ ಹೇಳುತ್ತದೆ. ಜ್ಞಾನ ಮತ್ತು ಕರ್ಮಗಳ ಸಮನ್ವಯವನ್ನು ಹೇಳಿದೆ. ಮಂಗಳಕರವಾದ ಮತ್ತು ಯಶಸ್ಕರವಾದ ಕರ್ಮದಿಂದ ಪ್ರಕಟಗೊಳ್ಳುವ ಜ್ಞಾನವೇ ಶ್ರೇಷ್ಠವಾದದ್ದು. ಅಹಂಕಾರ, ದುರಭಿಮಾನ, ವಾಚಾಳಿತನ ಹುಟ್ಟಿಸುವ ಜ್ಞಾನವು ನಿಜವಾದ ಜ್ಞಾನವಲ್ಲ. ಶಾಂತಿ ಸಮಾಧಾನ ನೀಡಿ ಶ್ರೇಷ್ಠತೆಯ ಕಡೆಗೆ ಒಯ್ಯುವ ಜ್ಞಾನವೇ ಉನ್ನತವಾದದ್ದು. ವಿನಯವೂ ತನ್ಮಯತೆಯೂ ಉಳ್ಳ, ತನ್ನಲ್ಲಿರುವ ಕೊರತೆಯನ್ನು ಒಪ್ಪಿಕೊಳ್ಳುವ ಜ್ಞಾನವೇ ನಿಜವಾದದ್ದು. ಪ್ರಕಾಶವನ್ನು ನೀಡದವನು ಸೂರ್ಯನೇ ? ಸೌಂದರ್ಯ, ಸುಗಂಧ ಇಲ್ಲದ ಹೂವು ಹೂವೇ ? ನೀರಿಲ್ಲದ ನದಿ ಎಂಥದು ? ಅಂತೆಯೇ ಜೀವನವನ್ನು 'ಸತ್ಯ ಶಿವ ಸುಂದರ'ವನ್ನಾಗಿ ಮಾಡಲಾರದ ಮತ್ತು ಸಾತ್ವಿಕತೆಯನ್ನು ನೀಡಲಾಗದ ಜ್ಞಾನಕ್ಕೆ ಜ್ಞಾನವೆಂದು ಹೇಳಲಾಗದು.

ನಮ್ಮ ಪ್ರಾಚೀನ ಋಷಿ ಮುನಿಗಳು ಜ್ಞಾನ ಮತ್ತು ಕರ್ಮದ ಸಂಗಮವನ್ನು ಅತ್ಯವಶ್ಯವೆಂದು ತಿಳಿದಿದ್ದರು. ಜ್ಞಾನ ಮತ್ತು ಕರ್ಮ

ಯೋಗಗಳ ಸರಿಯಾದ ಹೊಂದಾಣಿಕೆ ಇರಬೇಕು ಎಂದು ಒತ್ತಾಯ ಪೂರ್ವಕ ಹೇಳಿದ್ದಾರೆ. ನುಡಿದಂತೆ ನಡೆಯುವವರು ವಂದನೀಯರು. ಕೆಲಸ ವಿಲ್ಲದ ಮಾತುಗಾರಿಕೆ ವ್ಯರ್ಥವೆಂದು ಹೇಳಿದ್ದಾರೆ.

ಆತ್ಮವು ಅಮರವಾದದ್ದು. ಅದು ಜನನ ಮರಣ ರಹಿತ. ಭೇದಿಸಲಾಗದ್ದು, ದಹಿಸಲಾಗದಿದ್ದರೂ ಕೂಡಾ ಅದು ಶರೀರವನ್ನು ಧರಿಸಿರುತ್ತದೆ. ಆಕಾರ, ರೂಪ, ವರ್ಗಗಳಿಂದ ಅದರ ಅಸ್ತಿತ್ವವನ್ನು ಗುರುತಿಸುತ್ತೇವೆ. ಅದರಂತೆ ಜ್ಞಾನವು ಕೂಡಾ ಕರ್ಮದ ಮೂಲಕ ವ್ಯಕ್ತವಾಗುತ್ತದೆ. ನಗು, ಅಳು, ಮಾತು-ಕತೆ, ಊಟ, ಉಪಚಾರ ಎಲ್ಲದರಲ್ಲೂ ಆ ಕರ್ಮ ಅಸಾಮಾನ್ಯವಾಗಿರುತ್ತದೆ. ಆ ಕರ್ಮವು ಹರಿಶ್ಚಂದ್ರನ ರಾಜ್ಯದಾನ, ಶಿಬಿಯ ದೇಹದಾನಗಳಂತೆ ಉಜ್ವಲವಾಗಿರುತ್ತದೆ. ಅಂತರಂಗದಲ್ಲಿನ ಜ್ಞಾನದ ಪ್ರತೀತಿಯಾಗುವಂತೆ ಇರುತ್ತದೆ. ಸುಗಂಧದ್ರವ್ಯ ಮಾರುವವರ ಅಂಗಡಿಯೇ ಸುವಾಸನೆ ಬೀರುವಂತೆ, ಗಂಧದ ಮರದ ಸಾಮೀಪ್ಯದಿಂದಲೆ ಸಾಧಾರಣ ಗಿಡಗಳೂ ಸುವಾಸನೆ ಹೊಂದುವಂತೆ ಪರಮ ಜ್ಞಾನಿಯಾದ ಮನುಷ್ಯನ ಕಾರ್ಯಗಳು, ಅಂದರೆ ಸಾಧಾರಣ ಕೆಲಸಗಳೂ ಕೂಡಾ ಭವ್ಯತೆಯಿಂದ ಕೂಡಿರುತ್ತವೆ.

ಜ್ಞಾನವಿರುವಲ್ಲಿ ನಿಷ್ಠೆಯೂ ಇರಬೇಕು. ಮಾತನಾಡುವಾಗ, ವಿಚಾರ ಮಾಡುವಾಗ ಇರುವ ನಿಷ್ಠೆಯು ಕೃತಿಯಲ್ಲಿಯೂ ಉಳಿಯಬೇಕು. ಜನನದಿಂದ ಮರಣದವರೆಗೆ, ಮನೆಯಲ್ಲಿ ಮತ್ತು ಹೊರಗೆ, ಹಗಲು ಮತ್ತು ರಾತ್ರಿ, ವ್ಯಕ್ತಿಗತ ಕೆಲಸಗಳಲ್ಲಿ ಮತ್ತು ಸಾಮಾಜಿಕ ಕೆಲಸಗಳಲ್ಲಿ ಅಖಂಡ ನಿಷ್ಠೆ ಇರಬೇಕು. ಆ ಪರಮ ವಸ್ತುವಿನಲ್ಲಿ ನಿಷ್ಕಲ್ಮಶ ನಿಷ್ಠೆ ಬೇಕು. 'ಆತ್ಮವತ್ ಸರ್ವ ಭೂತೇಷು' 'ತನ್ನಂತೆ ಪರರ ಬಗೆವವನು' ಎಂದೆಲ್ಲಾ ಗಿಳಿಪಾಠಮಾಡದೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜ್ಞಾನಿಗಳಾದ ಸಂತರು ಅದನ್ನು ಜೀವನದಲ್ಲಿ ಭಟ್ಟಿ ಇಳಿಸಿದರು. ಅದೇ ಅವರ ವೈಶಿಷ್ಟ್ಯ.

೩

ಇದು ಭಾರತೀಯ ಜೀವನದ ಸಾರವಾಗಿದೆ. ಭಾರತೀಯ ಶಾಸ್ತ್ರಗಳ ಮತ್ತು ವಿದ್ಯೆಗಳ ಗುರಿಯಾಗಿದೆ. ಪರಮ ಜ್ಞಾನದ ಪ್ರಕಾಶವು ಅಂತಃಕರಣದ

ಗುಹೆಯಲ್ಲಿ ಬೆಳಗಿ, ಆ ಬೆಳಕು ಸಂಪೂರ್ಣ ಜೀವನವನ್ನು ಆವರಿಸಬೇಕು ಎನ್ನುವುದೇ ಇಲ್ಲಿನ ವ್ಯವಸ್ಥೆಯಾಗಿದೆ. ಚಿತ್ತದಲ್ಲಿ ಜ್ಞಾನೋದಯವಾದ ಕೂಡಲೇ ಎಲ್ಲಾ ಕರ್ಮಗಳು ಅದಕ್ಕೆ ಅನುರೂಪವಾಗಿಯೇ ನಡೆಯಬೇಕು ಎಂಬುದೇ ಇಲ್ಲಿನವರ ಇಚ್ಛೆಯಾಗಿದೆ. ಜ್ಞಾನವು ಜೀವನದಲ್ಲಿ ಪ್ರಕಟವಾಗುತ್ತದೆ. ಪ್ರತಿಯೊಂದು ಜೀವ ಜಂತುಗಳ ಇರುವಿಕೆಯಲ್ಲಿ, ಹುಲ್ಲುಕಡ್ಡಿಗಳ ಚಲನೆಯಲ್ಲಿ ಅದು ವ್ಯಕ್ತವಾಗುತ್ತದೆ. ಇದನ್ನು ಅರಿತು, ಆತ್ಮಗತ ಮಾಡಿಕೊಂಡು ಕೃತಿಯಲ್ಲಿ ತೋರುವುದೇ ಭಾರತೀಯ ಸಂಸ್ಕೃತಿ. ಜ್ಞಾನವು ಪುರಾಣ ಪುಸ್ತಕಗಳಲ್ಲಿದೆ, ಮಠ ಮಂದಿರಗಳಲ್ಲಿದೆ, ಅಂತರಿಕ್ಷದಲ್ಲಿ ಅದು ಎಲ್ಲೋ ನೇತಾಡುತ್ತಿದೆ, ಮನುಷ್ಯಜೀವನದಿಂದ ಪ್ರತ್ಯೇಕವಾಗಿಯೇ ಇದೆ ಎಂದು ಇಲ್ಲಿನವರು ಎಂದೂ ಭಾವಿಸಿಲ್ಲ. 'ಜ್ಞಾನದಿಂದ ಕೂಡಿದ ಕರ್ಮ, ಕರ್ಮದಿಂದ ಕೂಡಿದ ಜ್ಞಾನ' – ಇದೇ ಇಲ್ಲಿನ ಘೋಷಣೆಯಾಗಿದೆ.

ಜೀವನದಲ್ಲಿ ಜ್ಞಾನ ಮತ್ತು ಕರ್ಮಗಳ ಸಂಯೋಗ, ನಿರಂತರ ಸಾಧನೆ ಮತ್ತು ಕಠಿಣ ಪರಿಶ್ರಮ ಬೇಕು. ಮೊದಲಿಗೆ ಯಾವುದೇ ಕೆಲಸ ಕಠಿಣವಷ್ಟೇ ಅಲ್ಲ; ಅಸಾಧ್ಯವೂ ಅನಿಸಬಹುದು. ಆದರೆ ರೂಢಿಯಿಂದ ಅದು ಸಾಧ್ಯವಾಗುತ್ತದೆ. ಈಜಲು ಬರಲಾರದ ವ್ಯಕ್ತಿಗೆ ಮೊಟ್ಟಮೊದಲು ನೀರಿನಲ್ಲಿ ಬಿದ್ದಾಗ ಅದೊಂದು ಸಂಕಟವೆಂದು ಕಾಣಿಸಬಹುದು. ಆದರೆ ಕ್ರಮೇಣ ಎಂಟು ಹತ್ತು ದಿನಗಳ ಪ್ರಯತ್ನದಿಂದ ಈಜುವ ರೂಢಿಯಾಗುತ್ತದೆ. ಸಹಜ ರೀತಿಯಿಂದ ಕೈಕಾಲು ಆಡತೊಡಗುತ್ತವೆ. ಕೆಲವು ತಿಂಗಳುಗಳ ಅಭ್ಯಾಸದಿಂದ ಮೀನಿನಂತೆ ಸಹಜವಾಗಿ ಈಜತೊಡಗುತ್ತಾನೆ. ಸತತ ಅಭ್ಯಾಸದಿಂದ ಸಂಪೂರ್ಣ ಜೀವನವು ಜ್ಞಾನಮಯವಾಗುತ್ತದೆ. ನಮ್ಮ ನಾಡಿನಲ್ಲಿ ಅನೇಕ ಬಗೆಯ ವ್ರತ ನಿಯಮಗಳನ್ನು ಆಚರಿಸುತ್ತಾರೆ. ಆ ಎಲ್ಲದಕ್ಕೂ ಇದೇ ಉದ್ದೇಶ ಪ್ರಮುಖವಾದದ್ದು. ಕೆಲವರು ವಾರದಲ್ಲಿ ಒಂದು ದಿನ ಊಟಮಾಡುವುದಿಲ್ಲ. ಏಕಾದಶಿ ಮೊದಲಾದ ವಿಶಿಷ್ಟ ದಿನಗಳಲ್ಲಿ ಆಹಾರ ತೆಗೆದುಕೊಳ್ಳುವುದಿಲ್ಲ. ಕೆಲವರು ಯಾತ್ರೆಗೆ, ಕೆಲವರು ದೇವಸ್ಥಾನಕ್ಕೆ ಹೋಗುತ್ತಾರೆ. ಇದನ್ನೆಲ್ಲಾ ಕಂಡು ಕೆಲವು ಜನರು ನಗುತ್ತಾರೆ. ಇದರಲ್ಲಿ ಯಾವ ಅರ್ಥವಿದೆ ? ಆದರೆ ಈ ವ್ರತ ನಿಯಮಗಳು ಒಂದು ರೀತಿಯಿಂದ ಹಿಂದೂಧರ್ಮದ ಸಂಕೇತವಾಗಿವೆ. ಯಾವ ಅರ್ಥದಿಂದ ? ಅವು

ಮನಸ್ಸು ನಂಬಿದ್ದನ್ನು ಅನುಸರಿಸುವ ರೀತಿಯು ಅಲ್ಪ ಪ್ರಯತ್ನವಾಗಿದೆ. ನಮ್ಮ ಧರ್ಮದಲ್ಲಿ ಕಾರಣ, ಉದ್ದೇಶ, ಪ್ರಾರಂಭ, ಮಾರ್ಗ, ಅಭ್ಯಾಸ, ಪ್ರಯತ್ನ ಈ ಎಲ್ಲ ಸಂಗತಿಗಳು ಮಹತ್ವದ್ದಾಗಿವೆ. ಈ ಎಲ್ಲದಕ್ಕೂ ವ್ರತ ನಿಯಮಗಳು ಪ್ರೇರಕವಾಗಿವೆ. ನಮಗೆ ತಿಳಿದ ಇಷ್ಟವಾದ, ಒಪ್ಪಿತವಾದ ತತ್ವಜ್ಞಾನವನ್ನು, ಬಾಳಿನಲ್ಲಿ ಕಣಕಣವಾಗಿ ಇಳಿಸುವ ಪ್ರಯತ್ನವೇ ಇದಾಗಿದೆ.

ಹಿಂದೂ ವೇದಾಂತ ದರ್ಶನವು ಎಲ್ಲ ರೀತಿಯಿಂದ ಆಚರಣೆಯಲ್ಲಿ ತರುವಂಥದ್ದಾಗಿದೆ. ಜೀವನದ ಪ್ರತಿಯೊಂದು ರಂಗದಲ್ಲಿಯೂ ಉಪಯುಕ್ತ ವಾಗಿದೆ. ಆಧ್ಯಾತ್ಮಿಕ ಜೀವನವೇ ಬೇರೆ, ಭೌತಿಕ ಜೀವನವೇ ಬೇರೆ, ಪ್ರಪಂಚವೇ ಬೇರೆ, ಪರಮಾರ್ಥವೇ ಬೇರೆ ಎಂದು ಸಾಮಾನ್ಯವಾಗಿ ಜನರು ಭಾವಿಸುತ್ತಾರೆ. ಆದರೆ ಇದು ತಪ್ಪು ಗ್ರಹಿಕೆಯಾಗಿದೆ. ಭಗವದ್ಗೀತೆಯು ಎಲ್ಲ ಉಪನಿಷತ್ತುಗಳ ಸಾರವಾಗಿದೆ. ಮತ್ತು ಆ ಗೀತೆಯ ಸಾರವೇ ಅನವರತ ಕರ್ಮಶೀಲತೆ: ನಿಷ್ಕಾಮ ಕರ್ಮಶೀಲತೆ, ಜ್ಞಾನಮಯ ಕರ್ಮಶೀಲತೆ – ಜ್ಞಾನ-ಯೋಗ-ಸಮನ್ವಯ.

೪

ನಿಷ್ಕ್ರಿಯತೆಯು ಜಡತೆಯ ಲಕ್ಷಣವಾಗಿದೆ, ಮೃತ್ಯುವಿನ ಲಕ್ಷಣ ವಾಗಿದೆ! ಅಂತೆಯೇ ಸೋಮಾರಿಗಳು, ಮೂರ್ಖರು, ಅಜ್ಞಾನಿಗಳು ಜೀವನ್ಮೃತರಾಗಿರುತ್ತಾರೆ.

ಜ್ಞಾನಿಪುರುಷನು ಶಾಂತನೂ ಸಂಯಮಿಯೂ ಇರುತ್ತಾನೆ. ಅವನು ಕೋಪಗೊಳ್ಳುವುದಿಲ್ಲ, ಅಳುವುದಿಲ್ಲ. ಅವನು ತನ್ನ ಕೆಲಸಗಳನ್ನು ತಿಳಿವಳಿಕೆ ಯಿಂದಲೂ, ಶಾಂತ ರೀತಿಯಿಂದಲೂ ಮಾಡುತ್ತಾನೆ.

ಜ್ಞಾನಿ ಪುರುಷನು ಹೊಸ ಮಾರ್ಗಗಳನ್ನು ಶೋಧಿಸುತ್ತಾನೆ. ಹಳೆಯ ಪರಂಪರೆಯಲ್ಲೇ ಕೊಳೆಯುವುದಿಲ್ಲ. ಸಂಕುಚಿತ ವೃತ್ತಿಯುವನಿರುವು ದಿಲ್ಲ.

ಜ್ಞಾನಿಯಾದವನಿಗೆ ಎಲ್ಲ ಕೆಲಸಗಳೂ ಪವಿತ್ರವೆನಿಸುತ್ತವೆ. ಪ್ರತಿಯೊಂದು ಕೆಲಸದ ಕಡೆ ದೂರದೃಷ್ಟಿಯಿಂದ ನೋಡುತ್ತಾನೆ. ಮಾನವ

ರೆಲ್ಲರನ್ನೂ ಸಮಾನ ಪ್ರೇಮದಿಂದ ನೋಡುತ್ತಾನೆ. ಎಲ್ಲರ ಹಿತಚಿಂತಕನಾಗಿ ಇರುತ್ತಾನೆ.

ಜ್ಞಾನಿ ಪುರುಷನ ದೃಷ್ಟಿಕ್ಷೇಪವಾದಲ್ಲಿ ಆನಂದದ ಕಮಲಗಳು ಅರಳುತ್ತವೆ. ಸುಖದ ಸುಗಂಧವು ಹರಡುತ್ತದೆ.

೫

ಆದಕ್ಕಾಗಿ ನಮಗಿಂದು ಜ್ಞಾನ-ಯೋಗ-ಸಮನ್ವಯ ಬೇಕಾಗಿದೆ. ಭಾರತೀಯ ಜನಜೀವನವು ಸುಖ ಸಮೃದ್ಧಿಯಿಂದ ಜಗತ್ತಿನಾದ್ಯಂತ ಪುನಃ ಸನ್ಮಾನ ಪಡೆದು ಮೆರೆಯಬೇಕೆಂಬ ಇಚ್ಛೆ ಇದ್ದರೆ, ನಾವು, ನಮ್ಮ ಮತ್ತು ಇತರರ ಜೀವನದಲ್ಲಿ ಜ್ಞಾನ-ಯೋಗಗಳ ಹೊಂದಾಣಿಕೆಯನ್ನು ತರಬೇಕು. ಜ್ಞಾನ-ಯೋಗ ಸಮನ್ವಯಗಳ ಅಸ್ತಿತ್ವವು ಇಲ್ಲವಾದಾಗ, ದಂಭ, ಸ್ವಾರ್ಥ, ಕಪಟ ಮೊದಲಾದ ದುರ್ಗುಣಗಳು ತಾಂಡವವಾಡುತ್ತವೆ. ಇವೆಲ್ಲ ದುರ್ಗುಣಗಳಿಂದ ನಮ್ಮನ್ನು ಮತ್ತು ಸಮಾಜವನ್ನು ರಕ್ಷಿಸಬೇಕಾದರೆ ಜ್ಞಾನ-ಯೋಗ-ಸಮನ್ವಯವಾಗಬೇಕು.

ಪುಸ್ತಕಗಳ ಗಿಳಿಪಾಠ ಜ್ಞಾನವಲ್ಲ. ಶಾಸ್ತ್ರಗಳಿಂದ ಮತ್ತು ಗುರುಮುಖದಿಂದ ಆತ್ಮ-ಪರಮಾತ್ಮ, ಬ್ರಹ್ಮ-ಮಾಯೆ, ಸಾರ-ಅಸಾರ ಇವನ್ನು ಕುರಿತು ಆದ ಬೋಧನೆ, ಮತ್ತು ಅದನ್ನು ಮನಸ್ಸು ಹಾಗೂ ಇಂದ್ರಿಯಗಳ ಮೂಲಕ ಪ್ರಕಟಪಡಿಸಿ ಹೆಜ್ಜೆಹೆಜ್ಜೆಗೂ, ಕ್ಷಣಕ್ಷಣಕ್ಕೂ ಅದನ್ನು ಅನುಭವಿಸುವ ವೈಚಾರಿಕತೆ ಬೇಕು. ಶಿಕ್ಷಣ ಮತ್ತು ವ್ಯವಹಾರಗಳ ಅವಿನಾಭಾವ ಸಂಬಂಧ ಏರ್ಪಡಬೇಕು.

೬

ದೌರ್ಭಾಗ್ಯದಿಂದ ಇಂದು ಎಲ್ಲೆಲ್ಲೂ ಇದರ ವಿರೋಧಾಭಾಸವೇ ಕಂಡು ಬರುತ್ತಿದೆ. ನೈತಿಕ ಶಿಕ್ಷಣಕ್ಕೆ ಮಾನ್ಯತೆ ಇಲ್ಲ. ಅಪ್ಪಿ ತಪ್ಪಿ ಎಲ್ಲಿಯಾದರೂ ಆ ಬಗ್ಗೆ ಒಂದು ವಾಕ್ಯ ಕಂಡರೆ ಅದನ್ನು ಉಪಹಾಸದಿಂದ ಕಾಣಲಾಗುತ್ತದೆ. ಸತ್ಯ, ಅಹಿಂಸೆ ಈ ಪದಗಳನ್ನು ಭಾಷಣಗಳಲ್ಲಿ ಅಷ್ಟೇ ಬಳಸಲಾಗುತ್ತಿದೆ.

ಹಿಂಸೆ ಮತ್ತು ಅಸತ್ಯವೇ ಜಯಿಸುತ್ತಿವೆ. ಈ ದೌರ್ಭಾಗ್ಯಪೂರ್ಣ ಪರಿಸ್ಥಿತಿಯನ್ನು ಅಂತ್ಯಗೊಳಿಸಿ ಜ್ಞಾನ-ಯೋಗ-ಸಮನ್ವಯ ಸಾಧಿಸುವುದು ಅತ್ಯಂತ ಅವಶ್ಯವಾಗಿದೆ.

ನಮಗೆ ತಿಳಿದ ಸಣ್ಣ ದೊಡ್ಡ ತತ್ವಗಳನ್ನು ಆಚರಣೆಯಲ್ಲಿ ತರುವ ಪ್ರಯತ್ನಗಳಾಗಬೇಕು. ಪ್ರಾರಂಭದಲ್ಲಿ ಚಿಕ್ಕ ಪುಟ್ಟ ಸುಲಭ ಸಂಗತಿಗಳನ್ನು ಸಾಧಿಸುತ್ತಾ ಬಂದರೆ, ಬರಬರುತ್ತಾ ಅಸಾಧ್ಯವಾದುದನ್ನೂ ಸಾಧಿಸ ಬಹುದು. ಇದೇನು ಕವಿಕಲ್ಪನೆಯಲ್ಲ, ಹಗಲುಗನಸಲ್ಲ! ಭಾರತವು ಇದನ್ನು ಸಾಧಿಸಲೇಬೇಕು.

ಫಾಹಿಯಾನನೆಂಬ ಚೀನಾ ದೇಶದ ಪ್ರವಾಸಿಯೊಬ್ಬ ೫ನೇ ಇಸವಿಯಲ್ಲಿ ಹಿಂದುಸ್ಥಾನಕ್ಕೆ ಬಂದಿದ್ದ. ಅವನು ಹದಿನೈದು ವರ್ಷ ಈ ದೇಶವನ್ನು ಸುತ್ತಿದ. ಆ ಕಾಲದಲ್ಲಿ ಚಂದ್ರಗುಪ್ತ ಮತ್ತು ಎರಡನೇ ವಿಕ್ರಮಾದಿತ್ಯ ರಾಜ್ಯಭಾರ ಮಾಡುತ್ತಿದ್ದರು. ಪಾಟಲೀಪುತ್ರದಲ್ಲಿ ಫಾಹಿಯಾನನು ಮೂರು ವರ್ಷಗಳವರೆಗೆ ಇದ್ದ. ಆ ಕಾಲದ ಭಾರತೀಯ ಸಮಾಜಜೀವನವನ್ನು ಅವನು ಹೀಗೆ ಚಿತ್ರಿಸಿದ್ದಾನೆ: ರಾಜ್ಯವ್ಯವಸ್ಥೆಯು ಉತ್ತಮವಾಗಿತ್ತು. ಎಲ್ಲೆಡೆ ಸುಖ, ಸಂಪತ್ತು ಸಮೃದ್ಧಿಯಾಗಿದ್ದವು. ಎಲ್ಲಾ ಜನರು ಸದ್ಗುಣಿಗಳೂ ಸಚ್ಚರಿತ್ರರೂ ಆಗಿದ್ದರು. ಅವರ ಎಲ್ಲ ಕೆಲಸಗಳಲ್ಲಿ ಉದಾರತೆ, ಸಹಕಾರ್ಯ, ಈಶ್ವರನಿಷ್ಠೆ ಕಂಡುಬರುತ್ತಿತ್ತು. ಪ್ರವಾಸಿಗರಿಗಾಗಿ ಧರ್ಮಶಾಲೆಗಳನ್ನು ಕಟ್ಟಿಸಿದ್ದರು. ಅಲ್ಲಿ ಉಚಿತ ವಸತಿ ಮತ್ತು ಊಟದ ವ್ಯವಸ್ಥೆ ಇದ್ದಿತು. ನಗರಗಳಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳಿರುತ್ತಿದ್ದವು. ಅಲ್ಲಿ ಸೇವಾಭಾವದಿಂದ ಕೆಲಸ ಮಾಡುವ ವೈದ್ಯರಿರುತ್ತಿದ್ದರು. ಅನೇಕ ಬಗೆಯ ಧಾರ್ಮಿಕ ಸಂಸ್ಥೆಗಳಿದ್ದವು. ಕಳ್ಳತನ, ಹೊಡೆದಾಟ, ದರೋಡೆ ಇವುಗಳ ಹೆಸರೇ ಇದ್ದಿಲ್ಲ. ಯಾರೂ ಮದ್ಯಪಾನ ಮಾಡುವುದಿಲ್ಲ, ವ್ಯಭಿಚಾರಿಗಳಲ್ಲ. ನಾನು ಜಗತ್ತನ್ನೆಲ್ಲಾ ಸುತ್ತಿದ್ದೇನೆ. ಆದರೆ ಭಾರತದಂಥ ಸುಖ. ಸಮೃದ್ಧ ಹಾಗೂ ನಿಯಮಬದ್ಧವಾದ ಜೀವನ ಬೇರೆಲ್ಲೂ ಕಾಣಿಸುವುದಿಲ್ಲ.

೬೩೦ನೇ ಇಸವಿಯಲ್ಲಿ ಹರ್ಷವರ್ಧನನ ಕಾಲಕ್ಕೆ ಹ್ಯೂಯನ್‌ತ್ಸಾಂಗ್ ಎಂಬ ಪ್ರವಾಸಿ ಭಾರತಕ್ಕೆ ಬಂದಿದ್ದ. ಅವನು ಕೂಡಾ ಭಾರತದ ಬಗ್ಗೆ

ಬರೆದಿದ್ದಾನೆ. ಅವನ ಅಭಿಪ್ರಾಯವೂ ಕೂಡ ಫಾಹಿಯಾನನ ಅಭಿಪ್ರಾಯಕ್ಕೆ ಅಕ್ಷರಶಃ ಹೊಂದುತ್ತದೆ.

೭

ಒಂದು ಕಾಲದಲ್ಲಿದ್ದ ಭಾರತೀಯ ಜೀವನ ಪರಂಪರೆಯ ಮಹಾನತೆಯನ್ನು ಮತ್ತೊಮ್ಮೆ ಸಾಧಿಸಬೇಕಾಗಿದೆ. ಅದಕ್ಕಾಗಿ ದೃಢನಿಶ್ಚಯದಿಂದ ಕೆಲಸ ಮಾಡಬೇಕಾಗುತ್ತದೆ. ಪ್ರತಿಯೊಂದು ನಗರದಲ್ಲಿ, ಹಳ್ಳಿ, ಪಟ್ಟಣಗಳಲ್ಲಿ, ಪ್ರತಿಯೊಬ್ಬರೂ ಕಠಿಣ ಪರಿಶ್ರಮ ಮಾಡಬೇಕು. ನಮ್ಮಲ್ಲಿ ಪ್ರಾತಃಕಾಲ ಏಳುವುದರೊಂದಿಗೆ, ರಾತ್ರಿ ಮಲಗುವವರೆಗೆ ವಿಶಿಷ್ಟ ದಿನಚರಿಯನ್ನು ವಿಧಿಸಲಾಗಿದೆ. ವಿಗ್ರಹವನ್ನು ಕೆತ್ತುವಾಗ ಶಿಲ್ಪಿಯು ಚಿಕ್ಕ ಉಳಿಯಿಂದ ಪೆಟ್ಟು ಹಾಕುತ್ತಾನೆ. ಅಥವಾ ನಾಜೂಕಾದ ಸೂಜಿಯಿಂದ ಕೊರೆಯುತ್ತಾನೆ. ಒಮ್ಮೆಲೆ ಕೊಡಲಿ ಅಥವಾ ಪಿಕಾಸಿಯಿಂದ ಎತ್ತಿ ಹಾಕುವುದಿಲ್ಲ. ರಾಷ್ಟ್ರಪುರುಷನ ದಿವ್ಯಮೂರ್ತಿಯನ್ನು ಸಾಕಾರಗೊಳಿಸಬೇಕಾದರೂ ಚಿಕ್ಕ ಪುಟ್ಟ ತತ್ವಗಳನ್ನು ಆಚರಣೆಯಲ್ಲಿ ತಂದು, ಅವನ್ನು ಬಲಪೂರ್ವಕವಾಗಿ ಸಂಸ್ಕರಿಸಬೇಕು. ಅಂದಾಗ ಮಾತ್ರ ಚಿತ್ತದಲ್ಲಿರುವ ಸಂಪೂರ್ಣ ಜ್ಞಾನವು ಕೃತಿಯಲ್ಲಿ ತೋರುತ್ತದೆ. ಆಗ ಪುರಾಣದ ಬದನೆಕಾಯಿಯಾಗಿ ಉಳಿಯುವುದಿಲ್ಲ. ದಯೆ, ಧರ್ಮ, ಸಮತೆ, ಸ್ಥಿತಪ್ರಜ್ಞೆ ಮೊದಲಾದವುಗಳಿಗೆ ಶಾಬ್ದಿಕ ವ್ಯಾಖ್ಯೆ ಉಳಿಯಲಾರದು. ಎಲ್ಲ ಮಹಾನ್ ತತ್ವಗಳು ಜೀವನದಲ್ಲಿ ಮತ್ತು ಕೃತಿಯಲ್ಲಿ ಪ್ರತ್ಯಕ್ಷ ಕಾಣತೊಡಗುತ್ತವೆ. ಆಗ ಜ್ಞಾನ-ಯೋಗ-ಸಮನ್ವಯ ಸಾಕಾರಗೊಳ್ಳುತ್ತದೆ. ಸಹಸ್ರಶೀರ್ಷ, ಸಹಸ್ರಬಾಹು, ಸಹಸ್ರಪಾದನಾದ ವಿರಾಟ್‌ಪುರುಷನು, ದಿವ್ಯ ಸಮನ್ವಯವನ್ನು ಸಾಧಿಸಿ ಕಾರ್ಯೋನ್ಮುಖನಾದಾಗ ವಿಶ್ವದಲ್ಲಿ ಸುಖ ಶಾಂತಿಯ ಅಮೃತಧಾರೆಯಾದೀತು.

೪]

7063

೬ ದಾನ

೧

'ದಾನ' ಶಬ್ದವನ್ನು ಉಚ್ಚರಿಸಿದ ಕೂಡಲೆ ಇಂದು ಯಾವ ಪ್ರತಿಕ್ರಿಯೆ ಬಂದೀತು ? "ಏನ್ರಿ, ಯಾವ ಸತ್ಯಯುಗದ ಮಾತಾಡುತ್ತಿದ್ದೀರಿ ? ಕರ್ಣ, ಹರಿಶ್ಚಂದ್ರ, ಶಿಬಿ ಇತ್ಯಾದಿಗಳೆಲ್ಲ ಕಾಲ್ಪನಿಕ ಕಥೆಗಳು. ನಾಟಕ ಬರೆಯಲು ಒಳ್ಳೆಯ ವಸ್ತುಗಳಾಗಿವೆ." ಕೆಲವರು ಹೇಳುತ್ತಾರೆ –"ದಾನ ? ಏನು ದಾನ ಕೊಡಬೇಕ್ರಿ, ಕೊಡಲಿಕ್ಕೆ ನಮ್ಮಲ್ಲಿ ಏನಿದೆ ? ಹಣವೇನು ಸುಮ್ಮನೆ ಬರುತ್ತದೆಯೇ ? ಬೆಲೆ ಏರಿಕೆಯ ಈ ದಿನಗಳಲ್ಲಿ ಎಷ್ಟು ಹಣ ಬಂದರೂ ಒಂದು ಪೈಸೆಯೂ ಉಳಿಯುವುದಿಲ್ಲ. ಮನೆಯಲ್ಲಿ ಅಕ್ಕಿ ಇದ್ದರೆ ಸಕ್ಕರೆ ಇಲ್ಲ, ಸಕ್ಕರೆ ಇದ್ದರೆ....ನಾವೇ ಕೈಚೀಲದೊಂದಿಗೆ ತಿರುಗುತ್ತಿದ್ದೇವೆ. ನಮಗೇ ಯಾರಾದರೂ ದಾನ ಕೊಟ್ಟರೆ ಚೆನ್ನಾಗಿರುತ್ತದೆ. ನಾವೇ ಭಿಕಾರಿಗಳಾಗಿದ್ದೇವೆ." ಇನ್ನೂ ಕೆಲವರ ವಿಚಾರ ಹೀಗಿದೆ: "ಹೌದ್ರಿ....ಆದರೆ ದಾನ ಯಾರಿಗೆ ಕೊಡಬೇಕು ? ಅಪಾತ್ರ ದಾನ ಒಳ್ಳೆಯದಲ್ಲ. ಆ ದೃಷ್ಟಿಯಿಂದ ನೋಡಿದರೆ ಸತ್ಪಾತ್ರರು ಸಿಗುವುದೇ ಇಲ್ಲ. ಬ್ರಾಹ್ಮಣರು ಬ್ರಾಹ್ಮಣರಂತೆ ಇರುವುದಿಲ್ಲ. ನಿಜವಾದ ಸಾಧುಸಂತರು ಎಲ್ಲಿಯೂ ಕಾಣಸಿಗುವುದಿಲ್ಲ. ನೀವು ರಸ್ತೆಯ ಬದಿಯಲ್ಲಿ ಕುಳಿತಿರುವ ಕುರುಡ ಕುಂಟರ ಬಗ್ಗೆ ಹೇಳುತ್ತೀರಾ ? ಅವರೂ ಮೋಸಗಾರರೇ ಆಗಿರುತ್ತಾರೆ. ಅವರಿಗೊಬ್ಬ ನಾಯಕನಿರುತ್ತಾನೆ. ಅವರಲ್ಲಿ ಕೆಲವರು ಕಳ್ಳರೂ ಇರುತ್ತಾರೆ. ಇಂಥವರಿಗೆ ದಾನ ಕೊಡಬೇಕೆ ? ಸಂಘ ಸಂಸ್ಥೆಗಳಿಗೆ ದಾನ ಮಾಡಬೇಕೆಂದರೆ ಅವು ಇನ್ನೂ ಕೀಳುಸ್ಥಿತಿಯಲ್ಲಿವೆ. ಅಲ್ಲೆಲ್ಲಾ ಹಣವನ್ನು ದೋಚುವ ಠಕ್ಕರ ಸಂತೆಯೇ ಇದೆ. ಅಂಥವರ ಮನೆ ತುಂಬವುದಕ್ಕಿಂತ ನಾವೇ ನೆಮ್ಮದಿಯಾಗಿದ್ದರಾಯಿತು.

K121.8
SAS

ಇನ್ನೂ ಕೆಲವರು ಹೇಳುತ್ತಾರೆ – "ರೀ, ದಾನ ಎನ್ನುವುದು ರಾಜಕೀಯ ಶಬ್ದವಾಗಿದೆ– ಭೂದಾನ, ಶ್ರಮದಾನ, ಗ್ರಾಮದಾನ ಇತ್ಯಾದಿ. ಇದರಿಂದ ಕೆಲವರ ಹೆಸರಿಗೆ ಮಾತ್ರ 'ಭೋ ಪರಾಕ್' ಆಗಿದೆ. ಇದರಿಂದ ಯಾರಿಗೆ ಅನುಕೂಲವಾಗಿದೆಯೋ ಕಾಣೆವು. ಆದರೆ ನಾವು ಮಾತ್ರ ಇದ್ದಲ್ಲಿಯೇ ಇದ್ದಂತೆಯೇ ಇದ್ದೇವೆ. ಜಾತಿ-ಧರ್ಮ-ನಿರಪೇಕ್ಷತೆ, ವಿಶ್ವಬಂಧುತ್ವ, ಪರಮತ ಸಹಿಷ್ಣುತೆ ಈ ಎಲ್ಲ ಟೊಳ್ಳು ಶಬ್ದ ಗಳಂತೆ ದಾನ ಕೂಡಾ ನಕಲಿಯಾಗಿದೆ. ಈ ಶಬ್ದದಿಂದ ನಾವು ಬೇಸತ್ತಿದ್ದೇವೆ."

"ದಾನದಿಂದಲೇ ಭಾರತದೇಶವು ಹಾಳಾಗಿದೆ. ದರಿದ್ರತನ ಬಂದಿದೆ. ಇದು ಹೀಗೆಯೇ ಮುಂದುವರಿಯಬೇಕೆ? ದಾನಶೀಲತೆ ಎನ್ನುವುದು ಒಂದು ಭೋಳೆತನದ ಅಂಧಶ್ರದ್ಧೆಯಾಗಿದೆ. ಹಾಗೆ ನೋಡಿದರೆ ಹರಿಶ್ಚಂದ್ರ ವಿಶ್ವಾಮಿತ್ರನ ಕತ್ತು ಹಿಡಿದು ತಳ್ಳಬೇಕಾಗಿತ್ತು. ಹುಚ್ಚನಂತೆ ಅವನಿಗೆ ರಾಜ್ಯ ಕೊಟ್ಟ. ನಾವು ಅವನಿಗಿಂತ ಹುಚ್ಚರು. ಹರಿಶ್ಚಂದ್ರ ನನ್ನು, ಹರಿಶ್ಚಂದ್ರನಂಥವರನ್ನು ಸ್ತುತಿಸುತ್ತೇವೆ. ಇಹಲೋಕದಲ್ಲಿ ದಾನ ಮಾಡಿದರೆ ಪರಲೋಕದಲ್ಲಿ ಸುಖ ಸಿಗುತ್ತದೆಯಂತೆ. ಇದಕ್ಕೆ ಏನಾದರೂ ಸಾಕ್ಷಿ ಇದೆಯೇ ? ಇದು ರಾಷ್ಟ್ರದ ಪ್ರಗತಿಗೆ ಮಾರಕವಾಗಿದೆ. ದಾನದಿಂದ ಜನರು ಸೋಮಾರಿಗಳೂ, ಅಜ್ಞಾನಿಗಳೂ, ಕೂತು ಉಂಡು ಹಾಳು ಮಾಡುವ ಮೂರ್ಖರೂ ಆಗುತ್ತಾರೆ. ಈ ಶಬ್ದದ ಉಚ್ಚಾರ ಕೂಡ ನಮ್ಮ ದೇಶದಲ್ಲಿ ಆಗಬಾರದು."

ದಾನ ಎಂದ ಕೂಡಲೇ ಕಂಡುಬರುವ ವಿವಿಧ ಮನೋವೃತ್ತಿಯ ಜನರ ಪ್ರತಿಕ್ರಿಯೆಗಳನ್ನು ಈವರೆಗೆ ಗಮನಿಸಿದೆವು. ಈ ಪ್ರತಿಕ್ರಿಯೆಗಳಲ್ಲಿ ತತ್ವಜ್ಞಾನ ಹಾಗೂ ಸಮಾಜಹಿತದ ಆವೇಶ ಕಂಡುಬಂದರೂ ಅದು ಅರ್ಥಹೀನವಾದದ್ದಾಗಿದೆ. ಭಾಷೆ ಭವ್ಯವಾಗಿದ್ದರೂ ಭಾವನೆ ಉಚ್ಚವಾದದ್ದಲ್ಲ. ಸಂಕುಚಿತ ಸ್ವಾರ್ಥ, ದೇಹಲಾಲಸೆ, ಆಲಸ್ಯ, ಅಕರ್ಮಣ್ಯತೆ, ಅಯೋಗ್ಯತೆಗಳಿಂದ ಈ ವಿಚಾರಗಳು ಹುಟ್ಟಿ ಕೊಂಡಿವೆ.

೨

ಶಬ್ದವು ಭಾವನೆಯನ್ನು ಹೊರಗೆಡಹುವಂಥದು. ದಾನ ಎಂದರೆ ಕೊಡುವುದು. ಈ ಭಾವನೆಯ ಮಹತ್ವವು ಇಂದಿಗೂ ಕಡಿಮೆಯಾಗಿಲ್ಲ. ಜಗತ್ತಿನಲ್ಲಿ ಈವರೆಗೆ ಆಗಿಹೋದ ಮಹಾಪುರುಷರೆಲ್ಲ ಒಂದೇ ಮಾತನ್ನು ಹೇಳುತ್ತಾ ಬಂದಿದ್ದಾರೆ – "ಕೊಡುತ್ತಾ ಇರಿ ; ಕೊಡುತ್ತಾ ಇರಿ. ಮಾನವ ಜೀವನದ ಸಾರ್ಥಕತೆ 'ಕೊಳ್ಳು'ವುದರಲ್ಲಿಲ್ಲ, ಕೊಡುವುದರಲ್ಲಿದೆ, ಸ್ವಾರ್ಥದಲ್ಲಿಲ್ಲ, ಪರಹಿತದಲ್ಲಿದೆ. ಪರೋಪಕಾರವೇ ಎಲ್ಲ ಕರ್ಮಗಳ ಆಧಾರವಾಗಿದೆ." ಆದ್ದರಿಂದ ದಾನವೆಂಬ ಶಬ್ದವು ತುಚ್ಛವಾದದ್ದಾಗಲಿ, ಜೀರ್ಣವಾದ ಹಳೆಯ ಶಬ್ದವಾಗಲಿ ಅಲ್ಲ. ದಾನವನ್ನು ನೀಡುವುದಕ್ಕೆ ಮಾನಸಿಕ ಸಿದ್ಧತೆ ಬೇಕು. ಪರಿಸ್ಥಿತಿಯೂ ಇಲ್ಲಿ ಗೌಣ. ಮನಸ್ಸು ವಿಶಾಲ ವಾಗಿದ್ದರೆ ಒಂದು ಎಳ್ಳುಕಾಳನ್ನು ಏಳು ಜನ ಹಂಚಿಕೊಂಡು ತಿನ್ನಬಹುದು. ಆದರೆ ಮನಸ್ಸು ಚಿಕ್ಕದಾಗಿದ್ದರೆ ಅಪಾರ ಸಂಪತ್ತಿದ್ದರೂ ಕಡಿಮೆಯೇ. ದಾಹ ಶಮನವಾಗುವುದಿಲ್ಲ, ಹಾಹಾಕಾರ ನಿಲ್ಲುವುದಿಲ್ಲ.

ಒಂದು ಕಡೆ ಪರಿಸ್ಥಿತಿ ಬಹಳ ಕೆಟ್ಟಿದೆ ಎಂದು ಹೇಳುವುದು, ಇನ್ನೊಂದು ಕಡೆ ಮೋಜು ಮಾಡುವುದು – ಹೀಗಾಗಿ ಇವೆರಡರ ನಡುವಿನ ಸಂಬಂಧ ಹೇಗೆ ಹೊಂದಿಕೆಯಾದೀತು ? ಮನರಂಜನೆಗಾಗಿ, ಆಡಂಬರಕ್ಕಾಗಿ, ಸ್ವಪ್ರತಿಷ್ಠೆಗಾಗಿ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಆದರೆ ಒಂದು ರೂಪಾಯಿ ದಾನ ಕೊಡಬೇಕಾದರೆ ಹುಬ್ಬುಗಂಟಿಕ್ಕುತ್ತೇವೆ. ಪರಿಸ್ಥಿತಿ ಸುಧಾರಿಸಿದ ಮೇಲೆ ದಾನ ಮಾಡುತ್ತೇವೆ ಎನ್ನುವವರು, ನದಿ ಪೂರ್ಣ ಹರಿದು ಹೋದಮೇಲೆ ಆಚೆ ದಡಕ್ಕೆ ಹೋಗುತ್ತೇವೆ ಎಂದಂತೆಯೇ ; ಇದನ್ನು ಒಪ್ಪಬಹುದೇ ?

ಪಾತ್ರಾಪಾತ್ರ ವಿವೇಚನೆ ಇರಬೇಕು ನಿಜ. ಆದರೆ ಆ ವಿವೇಚನೆಯಲ್ಲಿ ದಾನ ಭಾವನೆಯು ಉಚ್ಚಾಟನೆಯಾಗುವಂತಿದ್ದರೆ ಅದನ್ನು ವಿವೇಕವೆಂದು ಹೇಳಲಾಗದು. ತಾಜಾ ಆಹಾರವನ್ನು ಸೇವಿಸಬೇಕು, ನಿಜ. ಆದರೆ ಅದು ಸಿಗದಿದ್ದರೆ ಉಪವಾಸ ಇರುತ್ತೇವೆಯೆ ? ಸತ್ಪಾತ್ರನಾದ ಯಾಚಕನು ಸಿಗದಿದ್ದರೆ, ಅವನ ದಾರಿ ಕಾಯುತ್ತ ಕೂಡಬೇಕೇ ? ಎದುರು ಸಿಕ್ಕವನ

ಬಗ್ಗೆ ತಿಳಿದುಕೊಂಡು ನಮ್ಮ ಕಾರ್ಯ ಸಾಧಿಸಬೇಕು. ಅಪಾತ್ರನಿಗೆ ದಾನ ಕೊಡಬಾರದು ಎನ್ನುವ ನಿಯಮವಿದ್ದಂತೆ, ಅಪಾತ್ರನಿಂದ ದಾನ ಸ್ವೀಕರಿಸ ಬಾರದು ಎಂದೂ ನಿಯಮವಿದೆ. ಆದ್ದರಿಂದಲೇ ರಾಮಕೃಷ್ಣ ಪರಮ ಹಂಸರು ಸಿಕ್ಕಿದ್ದನ್ನೆಲ್ಲಾ ಸ್ವೀಕರಿಸುತ್ತಿರಲಿಲ್ಲ. ಪಾತ್ರಾಪಾತ್ರತೆಯ ವಿಚಾರ ಬಂದಾಗ ಸ್ವಂತದ ಯೋಗ್ಯತೆಯನ್ನು ಹೆಚ್ಚು ಪರೀಕ್ಷಿಸುವುದು ಒಳ್ಳೆಯದು.

ರಾಜಕಾರಣಿಗಳಾಗಲಿ, ಸಂಘ-ಸಂಸ್ಥೆಗಳಾಗಲಿ ದಾನದ ಹೆಸರನ್ನು ಕೆಡಿಸಿವೆ ಎನ್ನುವ ಅಭಿಪ್ರಾಯ ಸರಿಯಲ್ಲ. ಈ ಆರೋಪದಲ್ಲಿ ಪಕ್ಷಗಳು ಒಬ್ಬರ ಮೇಲೊಬ್ಬರು ಅಪಪ್ರಚಾರ ಮಾಡುತ್ತಿರುತ್ತಾರೆ. ಅದು ನಿಜವೆಂದು ತಿಳಿದರೂ ಕೂಡಾ ಅದರಿಂದಾಗುವ ಲಾಭವೇನು ? ದೇವಸ್ಥಾನಗಳಲ್ಲಿ ಅವ್ಯವಹಾರವಿದೆಯೆಂದು ಭಗವಂತನಲ್ಲಿ ಭಕ್ತಿ ಮಾಡುವುದನ್ನು ಬಿಡಬೇಕೆ ? ಮಠಗಳಲ್ಲಿ ಗೊಂದಲವಿದೆಯೆಂದು ವೈರಾಗ್ಯವೇ ಕೆಟ್ಟದ್ದೆ ? ಕೆಂಡದ ಮೇಲೆ ಬೂದಿ ಮುಚ್ಚಿದರೆ ಅದನ್ನು ಆಹಾರ ಬೇಯಿಸಲು ಉಪಯೋಗಿಸು ವುದಿಲ್ಲವೆ ? ಮಳೆಗಾಲದಲ್ಲಿ ನದಿಯ ನೀರು ರಾಡಿಯಾಗಿರುವುದೆಂದು ನೀರನ್ನೇ ಕುಡಿಯುವುದಿಲ್ಲವೆ ? ಅದನ್ನು ಸೋಸಿ ಕುದಿಸಿ ಕುಡಿಯಲು ಯೋಗ್ಯವನ್ನಾಗಿ ಮಾಡಿಕೊಳ್ಳುತ್ತೇವೆ. ಯಾವುದೋ ದಾರಿ ಹುಡುಕುತ್ತೇವೆ. ಇದೇ ಮಾತು ದಾನಕ್ಕೂ ಅನ್ವಯಿಸುತ್ತದೆ. ದಾನ ಕೊಡುವ ಅನುಕೂಲ ಇಲ್ಲವೆಂದೋ ಅಥವಾ ಸತ್ಪಾತ್ರನು ದಾನ ತೆಗೆದುಕೊಳ್ಳಲು ಸಿಗಲಿಲ್ಲವೆಂದೋ – ಇಂಥ ಯಾವ ಕಾರಣಕ್ಕೂ ದಾನದ ಮಹತ್ವ ಕಡಿಮೆಯಾಗುವುದಿಲ್ಲ.

೩

ಶ್ರೀ ಶಂಕರಾಚಾರ್ಯರು "ದಾನಂ ಯಥಾಶಕ್ತಿ ಸಂವಿಭಾಗಃ" ಎಂದು ಹೇಳಿದ್ದಾರೆ. ಅಂದರೆ ನಮ್ಮ ಯೋಗ್ಯತೆಗನುಸಾರವಾಗಿ ಧನ ವನ್ನು ಹಂಚುವುದು. ದಾನ ಕೊಡುವುದು ಮತ್ತೊಬ್ಬರಿಗಾಗಿ ಅಲ್ಲ, ನಮ್ಮ ಹಿತಕ್ಕಾಗಿಯೇ ಎಂದು ಭಾವಿಸಬೇಕೇ ಹೊರತು ಇನ್ನೊಬ್ಬನ ಲಾಭಾಲಾಭದ ವಿಚಾರ ಮಾಡುವುದು ಯೋಗ್ಯವಲ್ಲ. ದಾನ ಮಾಡುವಾಗ ಭಗವದ್‌ಭಾವ ಇರಬೇಕು. ಇದೆಲ್ಲ ಭಗವಂತನದೇ, ನಾನು ಅವನ ಸೇವಕ, ಅವನು ನನಗೆ ವಹಿಸಿದ ಕೆಲಸವನ್ನು ನಾನು ಚೆನ್ನಾಗಿ ಮಾಡಿದ್ದೇನೆ, ನನಗೆ

ಲಭ್ಯವಾಗಿರುವುದೆಲ್ಲಾ ಆತನದೇ ; ನಾವು ಯಾರಿಗೆ ದಾನ ಮಾಡು ತ್ತಿರುವೆವೋ, ಅವನೂ ಭಗವಂತನ ರೂಪವೆಂದೇ ತಿಳಿಯಬೇಕು. ಅನಾಥ, ಬಡವ, ದರಿದ್ರ, ಅಂಗಹೀನ, ಎಲ್ಲರೂ ಪರಮಾತ್ಮ ಸ್ವರೂಪರು. ಹೀಗೆ ಭಾವಿಸುವುದರಿಂದ 'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಬೇಡುವ' ಭಗವದರ್ಪಣಭಾವ ಹುಟ್ಟುತ್ತದೆ.

ಇದೆಲ್ಲಾ ನಾನು ಸಂಪಾದಿಸಿದ್ದೇನೆ, ಈ ಮನೆ, ಆಸ್ತಿ ಎಲ್ಲ ನನ್ನ ಪ್ರಯತ್ನದಿಂದ ಗಳಿಸಿದ್ದು. ಈ ಯಶಸ್ಸೆಲ್ಲಾ ನಾನು ದೊರಕಿಸಿದ್ದು ಎನ್ನುವ ಮಾತೆಲ್ಲ ಅಹಂಕಾರದಿಂದ ಕೂಡಿದ್ದು. ಅನಂತ ಆಕಾಶವನ್ನು ತೆರೆದ ಕಣ್ಣಿಂದ ನೋಡು, ಆಗ ನಿನ್ನ ಅಲ್ಪತೆಯ ಅರಿವು ನಿನಗಾಗುವುದು. ವಿಶ್ವದ ಈ ವಿಶಾಲವಾದ ಕ್ರಿಯೆಯಲ್ಲಿ ನೀನೊಂದು ಹುಲ್ಲುಕಡ್ಡಿ. ದಾನ ಕೊಡುವಾಗ ಅಹಂಕಾರವನ್ನು ಬದಿಗಿಟ್ಟು, 'ಎನಗಿಂತ ಕಿರಿಯರಿಲ್ಲ' ಎಂದು ಭಾವಿಸ ಬೇಕು.

ದಾನ ಮಾಡುವಾಗ ನಮ್ಮ ಭಾವನೆಯು ನಿರಪೇಕ್ಷವಾಗಿರಬೇಕು. ಪ್ರತಿಫಲಾಪೇಕ್ಷೆಯಿಂದ ಕೊಟ್ಟಿರುವ ದಾನವು ವ್ಯಾಪಾರವೆನಿಸುತ್ತದೆ. ದಾನವೆಂದು ನಾವು ಏನನ್ನಾದರೂ ಕೊಟ್ಟು, ಅದಕ್ಕೆ ಪ್ರತಿಯಾಗಿ ನಮಗೆ ಸನ್ಮಾನ ಸಿಗಬೇಕು, ಪದವಿ ಸಿಗಬೇಕು, ಹೆಸರು ಪಡೆಯಬೇಕು, ಕೀರ್ತಿ ಹರಡಬೇಕು ಎನ್ನುವ ಅಭಿಲಾಷೆಯು ಸರಿಯಲ್ಲ. ನಾವು ದಾನ ಮಾಡುತ್ತೇವೆ ಅಂದಾಗ ಉಪಕಾರ ಮಾಡುತ್ತಿದ್ದೇವೆ ಎಂಬ ಭಾವನೆ ಇರಬಾರದು. ಒಂದು ಆಶ್ರಮದಲ್ಲಿ ಕೆಲವು ಜನ ನಿರಾಶ್ರಿತರಿದ್ದರು. ಮಳೆಗಾಲ ಬಂದಿತು. ಆಗ ಕೆಲವು ಸಂನ್ಯಾಸಿಗಳು ಒಬ್ಬ ಶ್ರೀಮಂತನ ಬಳಿಗೆ ಹೋಗಿ – "ನಮ್ಮಲ್ಲಿ ಕೆಲವು ಜನ ನಿರಾಶ್ರಿತರಿದ್ದಾರೆ, ಅವರಿಗೆ ಕೆಲವು ಹಾಸಿಗೆ ಹೊದಿಕೆ ಕೊಟ್ಟರೆ ಉಪಕಾರವಾದೀತು" ಎಂದರು. ಶ್ರೀಮಂತನ ಮನೆಯಲ್ಲಿ ಬಹಳಷ್ಟು ಹಾಸಿಗೆಗಳಿದ್ದವು. ಆತ ಯಾವುದನ್ನು ಕೊಡಲಿ ಎಂದು ಯೋಚಿಸಿ ಕೊನೆಗೆ ಒಂದು ಹರಕು ಕಂಬಳಿ ಮತ್ತು ತೇಪೆ ಹಾಕಿದ್ದ ಜಮಖಾನೆ ಕೊಟ್ಟ. ಅದನ್ನೇ ನಗುಮುಖದಿಂದ ಸ್ವೀಕರಿಸಿ ಸಂನ್ಯಾಸಿಗಳು ಹೊರಟುಹೋದರು. ಸ್ವಲ್ಪ ಹೊತ್ತಿನಲ್ಲಿ ಕರ್ಮ ಧರ್ಮ ಸಂಯೋಗದಿಂದ ಪ್ರಚಂಡ ಬಿರುಗಾಳಿ ಬೀಸಿತು. ಶ್ರೀಮಂತನ ಮನೆಗೆ

ಸಿಡಿಲು ಬಡಿದು ಬೆಂಕಿ ಹೊತ್ತಿಕೊಂಡಿತು. ಕೆಲವೇ ಕ್ಷಣಗಳಲ್ಲಿ ಅವನ ಬಂಗಲೆ ಬೆಂದು ಬೂದಿಯಾಯಿತು. ಸರ್ವ ಸಂಪತ್ತೂ ನಾಶವಾಯಿತು. ಶ್ರೀಮಂತ ಮಾತ್ರ ಹೇಗೋ ಉಳಿದುಕೊಂಡ. ಆಸರೆಗಾಗಿ ಓಡುತ್ತಾ ಅದೇ ಸಂನ್ಯಾಸಿಗಳ ಆಶ್ರಮಕ್ಕೆ ಬಂದ. ಸಂನ್ಯಾಸಿಗಳು ಅವನನ್ನು ಪ್ರೀತಿಯಿಂದ ಸ್ವಾಗತಿಸಿದರು. 'ಆ ಕೋಣೆಗೆ ನಡೆಯಿರಿ, ಅಲ್ಲಿ ನಿಮಗಾಗಿ ಎಲ್ಲ ವ್ಯವಸ್ಥೆ ಮಾಡಲಾಗಿದೆ' ಎಂದರು. ಶ್ರೀಮಂತ ಅಲ್ಲಿಗೆ ಹೋಗಿ ನೋಡುತ್ತಾನೆ : ತಾನು ಬೆಳಿಗ್ಗೆ ದಾನವಾಗಿ ಕೊಟ್ಟ ಹರಕು ಕಂಬಳಿ ಮತ್ತು ಜಮಖಾನೆಗಳಿವೆ ! "ಅಯ್ಯೊ ! ನಾನು ಬೆಳಿಗ್ಗೆ ನನ್ನಲ್ಲಿರುವ ಇನ್ನೂ ಒಳ್ಳೆಯ ಹಾಸಿಗೆ, ಗಾದಿ, ದಿಂಬುಗಳನ್ನು ಕೊಟ್ಟಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು !" ಎಂದು ಯೋಚಿಸಿದ. ಈ ಕಥೆಯಿಂದ ತಿಳಿಯುವುದಿಷ್ಟು – "ಬಿತ್ತಿದ್ದನ್ನೇ ಬೆಳೆಯುವುದು, ಕೊಟ್ಟದ್ದನ್ನೇ ಪಡೆಯುವುದು."

ದಾನ ಕೊಡುವಾಗ ನಮ್ಮಲ್ಲಿ ಸೇವಾಭಾವ ಇರಬೇಕು. ಸಮಾಜ ರೂಪಿ ವಿರಾಟ್‌ಪುರುಷನನ್ನು ಹೂವಿನಿಂದಲ್ಲದಿದ್ದರೂ, ಹೂವಿನ ದಳದಿಂದ ಪೂಜಿಸುತ್ತಿದ್ದೇವೆ ಎಂಬ ಭಾವನೆಯು ಚಿತ್ತದಲ್ಲಿರಬೇಕು. ಪರಮಾತ್ಮನ ಅಸ್ತಿತ್ವವನ್ನು ಅಲ್ಲಗಳೆದರೂ ಸಮಾಜದ ಅಸ್ತಿತ್ವವನ್ನು ನಾವು ಅಲ್ಲಗಳೆಯಲಾರೆವು. ಅದರ ಮಹತ್ವವನ್ನು ಉಪೇಕ್ಷಿಸಲಾರೆವು. ಕಾರಣ ಅದನ್ನು ನಾವು ದಿನವೂ ನೋಡುತ್ತೇವೆ.

ನಾವು ಈ ಸಮಾಜದ ಅಂಗವಾಗಿದ್ದೇವೆ. ಅದಕ್ಕಾಗಿ ಕಿಂಚಿತ್ತಾದರೂ ಕೊಡುವುದು ನಮ್ಮ ಕರ್ತವ್ಯವಲ್ಲವೆ ?

೪

ನಾವು ಮಾಡುವ ನೌಕರಿಯಿಂದ, ಉದ್ಯೋಗದಿಂದ, ವ್ಯಾಪಾರದಿಂದ ಏನಾದರೂ ಪ್ರತಿಫಲ, ಸಂಬಳ ಸಿಗಬೇಕೆಂದು ಅಪೇಕ್ಷಿಸುವುದಿಲ್ಲವೇ ? ಅದರಂತೆ ನನಗೆ ಸಿಕ್ಕ ಪ್ರತಿಫಲದಲ್ಲಿ ಹತ್ತನೇ ಭಾಗ, ನೂರನೇ ಭಾಗ, ಇಲ್ಲವೇ ಸಾವಿರದಲ್ಲಿ ಒಂದಂಶವಾದರೂ ಸಮಾಜಕ್ಕೆ ಕೊಡಬೇಕೆಂಬ ನಿಶ್ಚಯ ನಮ್ಮಲ್ಲಿರಬೇಕು. ಸಮಾಜದ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಈ ದಾನಶೀಲತೆಯು

ಭಾವ ನಿರ್ಮಾಣವಾದರೆ ದೊಡ್ಡ ದೊಡ್ಡ ಕೆಲಸಗಳು ಕ್ಷಣಾರ್ಧದಲ್ಲಿ ಪೂರ್ಣಗೊಳ್ಳುತ್ತವೆ. ಎಲ್ಲ ಸಂಕಟಗಳೂ ದೂರವಾಗಿ ಅಭಿವೃದ್ಧಿ ಮತ್ತು ಸುಖ ದೊರೆಯುತ್ತವೆ.

ದಾನ ಕೊಡುವುದಕ್ಕಾಗಿ ಧೈರ್ಯ ಮತ್ತು ಆತ್ಮವಿಶ್ವಾಸಗಳು ಬೇಕಾಗುತ್ತವೆ. ಜಗತ್ತನ್ನು ಜಯಿಸಿ ತಂದ ಸಂಪತ್ತನ್ನೆಲ್ಲಾ ರಘುರಾಜನು ಮುಕ್ತಹಸ್ತದಿಂದ ಹಂಚಿದ. ಕೊನೆಗೆ ಅವನಲ್ಲಿ ಏನೂ ಉಳಿಯದೆ ಗಡಿಗೆ ಮಡಿಕೆಗಳನ್ನು ಹಂಚುವ ಪ್ರಸಂಗ ಬಂದಿತು. ಆದರೆ ತಾನು ಪುನಃ ಧನವನ್ನು ಸಂಪಾದಿಸುವೆನೆಂಬ ಆತ್ಮವಿಶ್ವಾಸ ಅವನಲ್ಲಿದ್ದಿತು. ಆತ್ಮವಿಶ್ವಾಸವಿದ್ದವನೇ ದಾನ ಮಾಡುವ ಶಕ್ತಿಯನ್ನು ಹೊಂದಿರುತ್ತಾನೆ. ಅಯೋಗ್ಯನಾದವನು, ಅಸಮರ್ಥನಾದವನು ಧನವನ್ನು ಅನುಭವಿಸದೇ ಕಾಯುತ್ತಾ ಕೂಡುತ್ತಾನೆ. ಈ ಜಗತ್ತಿನ ಕ್ಷಣಿಕತೆಯನ್ನು ಅರಿತವನೇ ದಾನ ಮಾಡುವುದು.

ಹಿಂದುಸ್ಥಾನವನ್ನು ಮೇಲಿಂದ ಮೇಲೆ ದಂಡೆತ್ತಿ ಬಂದ ಘಝ್ನಿ ಮಹಮ್ಮದನು ಅತಿಯಾದ ಧನಪಿಪಾಸುವಾಗಿದ್ದ. ಸಾಯುವಾಗ ಆತನು ಲೂಟಿ ಮಾಡಿ ತಂದ ಧನವನ್ನೆಲ್ಲ ತನ್ನ ಸುತ್ತ ಹರಡಿಕೊಂಡು – "ಅಯ್ಯೋ ಇದರಲ್ಲಿ ಒಂದು ಕಾಸನ್ನೂ ನನ್ನೊಂದಿಗೆ ಒಯ್ಯಲಾರೆನಲ್ಲ" ಎಂದು ಗೋಳಾಡಿದ. ಇಂಥ ಹುಚ್ಚು ವ್ಯಾಮೋಹವುಳ್ಳವನು ಎಂದೂ ದಾನ ಮಾಡಲಾರ.

ಇಸೋಪ ನೀತಿಯಲ್ಲಿ ಒಂದು ನಾಯಿಯ ಕಥೆ ಬರುತ್ತದೆ. ಅದು ದನದ ಕೊಟ್ಟಿಗೆಯಲ್ಲಿ ಕುಳಿತು ಒಂದೇ ಸಮನೆ ಬೊಗಳುತ್ತಿತ್ತು. ಆ ಕಡೆಯಿಂದ ಒಂದು ಎತ್ತು ಮೇವು ತಿನ್ನಲು ಬಂದಿತು. ಆದರೆ ನಾಯಿ ಬೊಗಳಿ ಬೊಗಳಿ ಎತ್ತನ್ನು ಓಡಿಸಿತು. ನಾಯಿ ತಾನಂತೂ ಮೇವು ತಿನ್ನುವುದಿಲ್ಲ. ಆದರೆ ಎತ್ತಿಗೂ ತಿನ್ನಲು ಬಿಡಲಿಲ್ಲ. ಈ ಜಗತ್ತಿನಲ್ಲಿಯೂ ಇಂಥವರು ಇರುತ್ತಾರೆ. ತಾವೂ ತಿನ್ನುವುದಿಲ್ಲ, ಇತರರಿಗೂ ಕೊಡುವುದಿಲ್ಲ.

ಇನ್ನೊಬ್ಬರಿಗೆ ಕೊಡುವ ಪ್ರವೃತ್ತಿಯು ಮಾನವತೆಯ ಲಕ್ಷಣ ವಾಗಿದೆ. ಪ್ರಾಣಿಗಳಲ್ಲಿ ಈ ಸ್ವಭಾವ ಕಂಡುಬರುವುದಿಲ್ಲ. ಮನುಷ್ಯನಲ್ಲಿ ಸಹಾನುಭೂತಿ ಇರುವುದರಿಂದಲೇ ಬೇರೆಯವರಿಗೆ ಸಹಾಯ ಮಾಡುವ

ಗುಣವೂ ಇರುತ್ತದೆ. ಸ್ವಂತ ಅನುಭವಿಸುವುದಕ್ಕಿಂತಲೂ ಪರರಿಗೆ ಕೊಡುವುದರಲ್ಲಿ ಹೆಚ್ಚಿನ ಆನಂದವಿದೆ. ಅಂತೆಯೇ ನಮ್ಮಲ್ಲಿ ನೈವೇದ್ಯ ಮತ್ತು ಅತಿಥಿಸತ್ಕಾರಕ್ಕೆ ಪ್ರಾಮುಖ್ಯ ಇದೆ. ನಾನು ಸಂಪಾದಿಸಿದ್ದು, ನಾನೇ ತಿನ್ನುತ್ತೇನೆ ಎನ್ನುವುದು ಪಶುವೃತ್ತಿ. ತಾನು ಸಂಪಾದಿಸಿ ಅದರಲ್ಲಿ ದಾನ ಮಾಡುವವನು ಮಾನವೀಯ ಗುಣವುಳ್ಳವನು. ಈ ಗುಣವು ಮನೆ ಮನೆಯಲ್ಲಿ ಬೆಳಗಬೇಕು.

೨೩

ನಾವು ನಾಲ್ಕೂ ಕಡೆ ಕಣ್ಣು ತೆರೆದು ನೋಡಿದರೆ, ಕಿವಿಗೊಟ್ಟು ಕೇಳಿದರೆ ಎಲ್ಲ ಕಡೆ ಆಕ್ರಂದನ ಕೇಳುತ್ತದೆ. ದುಃಖಿಗಳ, ಆರ್ತರ ಬಾಡಿದ ಮುಖಗಳು ಕಾಣುತ್ತವೆ.

ಎಷ್ಟೋ ಮನೆಗಳಲ್ಲಿ ಹಾಲಿನ ಆವಶ್ಯಕತೆಯುಳ್ಳ ಮಕ್ಕಳಿದ್ದಾರೆ. ಅವರಿಗೆ ಕೆಲವು ಬಟ್ಟಲು ಹಾಲನ್ನು ನಾವು ಕೊಡಲಾರೆವೇ ? ಎಷ್ಟೋ ಕಡೆಗಳಲ್ಲಿ ಔಷಧ, ಆಹಾರ ಹಣ್ಣು ಸಿಗದ ರೋಗಿಗಳಿದ್ದಾರೆ. ಅವರಿಗೆ ನಾವು ಸಹಾಯ ಮಾಡಲಾರೆವೇ ? ದುಃಖದಿಂದ ಪೀಡಿತರಾದ ಅಸಂಖ್ಯ ಜನರಿಗೆ ನಾಲ್ಕು ಮಧುರವಾದ ನುಡಿಗಳ ಆವಶ್ಯಕತೆ ಇದೆ. ಅದನ್ನು ಕೂಡಾ ಅವರಿಗೆ ಕೊಡಲಾರೆವೇ ? 'ಪತ್ರಂ, ಪುಷ್ಪಂ, ಫಲಂ, ತೋಯಂ' ಏನಾದರೂ ಕೊಡಿ. ಅದರಿಂದಲೇ ಸುಪ್ರೀತನಾಗುವ ಭಗವಂತನಂತೆ ಈ ಸಮಾಜಪುರುಷನು ಹೇಳುತ್ತಾನೆ. ನಾವು ಅವನಿಗೆ ಏನನ್ನಾದರೂ ಕೊಡ ಲಾರೆವೇ ? ಪ್ರತಿಯೊಬ್ಬರಿಗೂ ಅಲ್ಪಸ್ವಲ್ಪ ಅನುಕೂಲ ಇದ್ದೇ ಇರುತ್ತದೆ. 'ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ ; ಕೊಟ್ಟು ನಾ ಕೆಟ್ಟೆನೆನಬೇಡ ಮುಂದಕ್ಕೆ ಕಟ್ಟಿಹುದು ಬುತ್ತಿ ಸರ್ವಜ್ಞ' ಎಂದು ಸರ್ವಜ್ಞಕವಿಯೂ ಬಹಳ ಹಿಂದೆಯೇ ಹೇಳಿದ್ದಾನೆ.

ನಮ್ಮ ದೇಶದಲ್ಲಿ ಸರ್ವಸ್ವವನ್ನು ತ್ಯಾಗ ಮಾಡುವವನು ಶ್ರೇಷ್ಠನೆಂದು ತಿಳಿಯಲ್ಪಡುತ್ತಾನೆ, ದೊಡ್ಡ ದೊಡ್ಡ ಸಾಮ್ರಾಟರು ಕೂಡಾ ಕಾವಿಯುಟ್ಟ ಸಂನ್ಯಾಸಿಗಳ ಕಾಲಿಗೆ ಎರಗುತ್ತಿದ್ದರು ! ಇದೇ ಭರತ

ಭೂಮಿಯಲ್ಲಿ ದಧೀಚಿಯು ದೇವತೆಗಳ ರಕ್ಷಣೆಗಾಗಿ, ರಾಕ್ಷಸರ ವಧೆಗಾಗಿ ತನ್ನ ಶರೀರದ ಅಸ್ಥಿಗಳನ್ನೇ ದಾನವಾಗಿ ಕೊಟ್ಟ. ಅದೇ ವಜ್ರಾಯುಧವಾಯಿತು. ದಾನದ ಮತ್ತು ಬಲಿದಾನದ ದಿವ್ಯ ಪರಂಪರೆಯ ಇತಿಹಾಸ ನಮ್ಮ ಭರತಖಂಡಕ್ಕಿದೆ.

೬

ಋಗ್ವೇದದ ಹತ್ತನೆ ಮಂಡಲದ ನೂರಾಹದಿನೇಳನೆಯ ಸೂಕ್ತದಲ್ಲಿ ಭಿಕ್ಷು ಆಂಗಿರಸರು ಹೇಳುತ್ತಾರೆ – "ಹಸಿದವನಿಗೆ ಅನ್ನ ಕೊಡದವನು, ತಾನೊಬ್ಬನೇ ತಿನ್ನುವವನು ಅನೇಕ ಸಂಕಟಗಳಿಗೆ ಗುರಿಯಾಗಿ ಕೊನೆಗೆ ದರಿದ್ರನಾಗುತ್ತಾನೆ. ಅವನಿಗೆ ಸುಖ ಸಿಗುವುದಿಲ್ಲ. ಹಸಿದವನಿಗೆ ಅನ್ನ ಕೊಡುವವನ ಸಂಪತ್ತು ಎಂದೂ ಕಡಿಮೆಯಾಗುವುದಿಲ್ಲ."

"ಧನವಂತನಾದವನು ಯಾಚಕರಿಗೆ ದಾನ ಮಾಡಬೇಕು. ಅಂದರೆ ಅವನಿಗೆ ಸ್ವರ್ಗ ಪ್ರಾಪ್ತವಾಗುತ್ತದೆ. ರಥದ ಗಾಲಿಗಳು ಹೇಗೆ ಒಂದೇ ಕಡೆ ಇರುವುದಿಲ್ಲವೊ ಹಾಗೆಯೇ ದ್ರವ್ಯವೂ ಒಂದೇ ಕಡೆ ಇರುವುದಿಲ್ಲ. ಅದು ಒಬ್ಬನಿಂದ ಇನ್ನೊಬ್ಬನ ಕಡೆಗೆ ಹೋಗುತ್ತಿರುತ್ತದೆ." ಮುಂದೆ ಅವರು ಹೀಗೆ ಹೇಳುತ್ತಾರೆ:

> ಮೋಘಮನ್ನಂ ವಿಂದತೇ ಅಪ್ರಚೇತಾಃ । ಸತ್ಯಂ ಬ್ರವೀಮಿ ವಧ
> ಇತ್ ಸ ತಸ್ಯ ।
> ನಾರ್ಯಮಣಂ ಪುಷ್ಯತಿ ನೋ ಸಖಾಯಂ ಕೇವಲಾಘೋ ।
> ಭವತಿ ಕೇವಲಾದೀ ॥

"ಜಿಪುಣನಿಗೆ ಸಂಪತ್ತು ಇದ್ದರೂ ಇಲ್ಲದಂತೆ. ನಾನು ಸತ್ಯವನ್ನು ಹೇಳುತ್ತೇನೆ. ಯಾವನು ದೇವರಿಗೆ, ಪೋಷಕವರ್ಗದವರಿಗೆ ಅನ್ನ ಕೊಡದೆ ಒಬ್ಬನೇ ತಿನ್ನುತ್ತಾನೋ ಅವನು ಪಾಪರೂಪಿಯು. ಅವನ ಆ ಅನ್ನವೂ ವಿಷವಿದ್ದಂತೆ."

೧

ಭಾರತೀಯರ ಜೀವನದಲ್ಲಿ ಯಜ್ಞಕ್ಕೆ ಮಹತ್ವದ ಸ್ಥಾನವಿದೆ. ಯಜ್ಞವೆಂದರೆ ಕರ್ಮಕಾಂಡವಲ್ಲ. ಯಜ್ಞವೆಂದರೆ ಸಮರ್ಪಣೆ. ಯಜ್ಞವೆಂದರೆ ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ ಇವುಗಳ ಸಮ್ಮಿಲನ. ಯಜ್ಞವೆಂದರೆ ನಾಲ್ಕು ವರ್ಣಗಳ, ನಾಲ್ಕು ಆಶ್ರಮಗಳ ಆದರ್ಶವಿದ್ದಂತೆ. ಯಜ್ಞದ ಕಲ್ಪನೆಯೇ ಬಹಳ ಮಹೋನ್ನತವಾದದ್ದು. ಅಂತೆಯೇ ಇಂದಿನ ಸಂಕುಚಿತ ಸ್ವಾರ್ಥಿಯಾದ ಕೀಳು ಮನಸ್ಸಿಗೆ ಅದು ಸೊಗಸೆನಿಸುವುದಿಲ್ಲ, ರುಚಿಸುವುದಿಲ್ಲ, ತಿಳಿಯುವುದಿಲ್ಲ.

ಇಂದಿನ ಸಾಮಾನ್ಯ ಜನರು ಯಜ್ಞವೆಂದರೆ 'ಒಂದು ಕುಂಡವನ್ನು ನಿರ್ಮಿಸಿ ಅದರಲ್ಲಿ ಬೆಂಕಿ ಹಾಕಿ ಒಂದಿಷ್ಟು ಆಹಾರ ಪದಾರ್ಥಗಳನ್ನು ಹಾಕುವುದು, ಅದರೊಂದಿಗೆ ಏನಾದರೂ ಮಂತ್ರಗಳನ್ನು ಹೇಳುವುದು' ಎಂದು ತಿಳಿದಿದ್ದಾರೆ. ಆಗಿನ ಕಾಲದಲ್ಲಿ ಆರ್ಯರಿಗೆ ಬೆಂಕಿ ಎಂದರೆ ಒಂದು ಸೋಜಿಗದ ವಸ್ತುವಾಗಿತ್ತು. ಅದಕ್ಕಾಗಿ ವೇದಗಳಲ್ಲಿ ಅಗ್ನಿಯ ಅನೇಕ ಸ್ತುತಿಪರ ಮಂತ್ರಗಳಿವೆ. ಇಂದು ನಾವು ಎಷ್ಟೊಂದು ಪ್ರಗತಿಪರರಾಗಿದ್ದೇವೆಂದರೆ ನಿಮ್ಮ ಆ ಅಗ್ನಿದೇವನನ್ನು ಹತ್ತು ಹದಿನೈದು ಪೈಸೆಗಳಲ್ಲಿ ಖರೀದಿಸಿ ಜೇಬಿನಲ್ಲಿಟ್ಟುಕೊಂಡು ಬರುತ್ತೇವೆ! ಒಂದು ಚಿಕ್ಕ ಮಗುವು ಕಡ್ಡಿಗೀರಿದರೆ ಇಲ್ಲವೇ ಗುಂಡಿ ಒತ್ತಿದರೆ ಅವನು ನಮ್ಮ ಮುಂದೆ ಕೈ ಕಟ್ಟಿ ನಿಲ್ಲುತ್ತಾನೆ. ಅಗ್ನಿಯಲ್ಲಿ ಹಾಲು, ತುಪ್ಪ, ಜೇನು ಸುರಿಯಲು ಇಂದು ಹಿಂದಿನಂತೆ ಸಮೃದ್ಧಿಯಾದರೂ ಎಲ್ಲಿದೆ? ಅಂಥ ಹುಚ್ಚುತನವೂ ಈಗಿಲ್ಲ. ತಿನ್ನುವ ಪದಾರ್ಥಗಳನ್ನು ವಿನಾಕಾರಣ ಬೆಂಕಿಯಲ್ಲಿ ಸುಡುವುದೇ?' ಎನ್ನುತ್ತಾರೆ.

"ಯಜ್ಞ ನಾರಾಯಣನಿಗೆ ಬಲಿಕೊಟ್ಟರೆ ಆತನು ಎರಡೂ ಕೈಯಿಂದ ಅಮೃತಕಲಶವನ್ನು ತಂದುಕೊಡುತ್ತಾನೆ. ಅದನ್ನು ಕುಡಿದು ನಾವು ಅಮರರಾಗುವೆವು. ಯಜ್ಞದಿಂದ ಮಳೆ ಬರುತ್ತದೆ. ಯಜ್ಞವೇದಿಕೆಯಿಂದ ಶಸ್ತ್ರಾಸ್ತ್ರಗಳು ಲಭಿಸುತ್ತವೆ" – ಇತ್ಯಾದಿ ಕಟ್ಟುಕಥೆಗಳನ್ನು ನಂಬಲು ಜನರು ಇಂದು ಮೂರ್ಖರಾಗಿ ಉಳಿದಿಲ್ಲ. ಆದರೆ ನಮ್ಮದೇ ಆದ ಕಲ್ಪನೆಯಿಂದ ಯಜ್ಞಕ್ಕೆ ಈ ರೀತಿ ಅರ್ಥ ಹಚ್ಚುವುದು, ನಮ್ಮ ಪೂರ್ವಜರನ್ನು ಆರೋಪಿಸುವುದು, ನಾವು ಅದನ್ನು ಕಿತ್ತೆಸೆದೆವೆಂದು ನಮ್ಮ ಬೆನ್ನನ್ನು ನಾವೇ ಚಪ್ಪರಿಸಿಕೊಳ್ಳುವುದು, ನಮ್ಮ ಜಾಣತನ ತೋರಿಸುವುದು, ಇದು ಕೂಡಾ ಮೂರ್ಖತನ ಅಥವಾ ನಮ್ಮ ಹುಂಬತನ ಅಲ್ಲವೆ? ಒಬ್ಬ ರಾಜನು ಕನಸಿನಲ್ಲಿ ಒಬ್ಬ ಪರಾಕ್ರಮಿಯಾದ ರಾಕ್ಷಸನನ್ನು ಕೊಂದು, ಬೆಳಗ್ಗೆ ಎದ್ದು ವಿಜಯೋತ್ಸವವನ್ನು ಆಚರಿಸುವಂತೆ ತನ್ನ ಪ್ರಧಾನಿಗೆ ಹೇಳಿದನಂತೆ. ಅದೇ ರೀತಿ ಅಲ್ಲವೇ ?

೨

ಗೀತೆಯ ಮೂರನೆ ಅಧ್ಯಾಯದಲ್ಲಿ ಶ್ರೀಕೃಷ್ಣನು ಯಜ್ಞದ ಮಹಿಮೆಯನ್ನು ವರ್ಣಿಸಿದ್ದಾನೆ. ಬ್ರಹ್ಮದೇವನಿಗೆ ಸೃಷ್ಟಿಕಾರ್ಯ ಮಾಡಲು ಯಜ್ಞದಿಂದಲೇ ಸಾಧ್ಯವಾಯಿತು. ಸೃಷ್ಟಿಕಾರ್ಯವಾದ ನಂತರ ಎಲ್ಲ ಪ್ರಜೆಗಳಿಗೆ ಯಜ್ಞವನ್ನು ಆಚರಿಸುವಂತೆ ಆದೇಶ ನೀಡಿದ – "ನಿಮಗೆ ಉತ್ತರೋತ್ತರ ಪ್ರಗತಿ ಸಾಧಿಸಬೇಕೆಂದಿದ್ದರೆ ನೀವು ಯಜ್ಞ ಮಾಡಿರಿ. ಯಜ್ಞವು ನಿಮ್ಮ ಇಚ್ಛೆಯನ್ನು ಪೂರೈಸುವುದು. ಯಜ್ಞಗಳಿಂದ ದೇವತೆಗಳು ಪ್ರೀತರಾಗುವರು. ದೇವತೆಗಳು ಪ್ರಸನ್ನರಾದರೆ ನಿಮಗೆ ಇಹಪರಗಳಲ್ಲಿ ಸುಖ ಲಭಿಸುವುದು. ತ್ಯಾಗ, ಸೇವೆ ಮತ್ತು ಆರಾಧನೆಯ ಭಾವನೆಯಿಂದ ಯಜ್ಞ ಮಾಡಲಾರದೆ ಪಡೆದ ವಸ್ತುವಿನ ಉಪಭೋಗ ಮಾಡುವವನು ಕಳ್ಳನೆಂದು ತಿಳಿಯಬೇಕು. ಯಜ್ಞಶೇಷವನ್ನು ಪ್ರಸಾದ ವೆಂದು ಸ್ವೀಕರಿಸುವವನು ಪ್ರಪಂಚದ ಎಲ್ಲ ಸುಖಗಳನ್ನೂ ಹೊಂದಿ, ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ. ದುರಾಚಾರಿಯು ತನಗಾಗಿ ಪಾಕವನ್ನು ಮಾಡಿಕೊಂಡು ಸೇವಿಸುತ್ತಾನೆ. ಅವನು ಮಹಾಪಾಪದ ಪಾಲುಗಾರನಾಗು

ತ್ತಾನೆ. ಬ್ರಹ್ಮಾಂಡವೇ ಒಂದು ಯಜ್ಞಕುಂಡವಾಗಿದೆ. ಭಗವಂತನೇ ಯಜ್ಞರೂಪಿ. ಯಜ್ಞದ ಈ ಅರ್ಥವನ್ನು ತಿಳಿಯದೇ ಇಂದ್ರಿಯಗಳ ವಶನಾಗಿ ಜೀವಿಸುವವನು ಪಾತಕಿಯು, ಅವನ ಜೀವನವು ವ್ಯರ್ಥವಾಗಿರುತ್ತದೆ.

ಗೀತೆಯ ನಾಲ್ಕನೆ ಅಧ್ಯಾಯದಲ್ಲಿ, ಇಪ್ಪತ್ತನಾಲ್ಕರಿಂದ ಮುವತ್ತನೆ ಶ್ಲೋಕದವರೆಗೆ ಯಜ್ಞದ ವಿವರವಿದೆ. ಭಗವಂತನು ಈ ರೀತಿ ಹೇಳುತ್ತಾನೆ – "ಸ್ಥಿತಪ್ರಜ್ಞನ ಜೀವನ, ಜ್ಞಾನಿಯಾದವನ ಜೀವನ ಒಂದು ಯಜ್ಞವೇ ಆಗಿದೆ. ಬೇರೆ ಬೇರೆ ಮಾರ್ಗಗಳಿಂದ ಯಜ್ಞವನ್ನು ಆಚರಿಸುವವನ ಜೀವನಯಜ್ಞಕ್ಕೆ ಬೇರೆ ಬೇರೆ ಹೆಸರುಗಳಿವೆ. ಯಜ್ಞದ ಭೋಕ್ತನು, ಯಜ್ಞದ ಹವಿಸ್ಸು, ಹವನ ಇವುಗಳಲ್ಲಿ ಭೇದವನ್ನೆಣಿಸದೆ ಯಷ್ಟಾ, ಯಜ್ಞ, ಯಾಜನ, ಆಹುತಿ, ಮಂತ್ರ ಇತ್ಯಾದಿಗಳನ್ನು ಅವಿನಾಶಿ ಆತ್ಮಸ್ವರೂಪವೆಂದು ತಿಳಿಯುತ್ತಾನೆ. ಅವನು ಅಖಂಡ ವಿಶ್ವದ ಯೋಗಯಜ್ಞ ಮಾಡಿದವನೆಂದು ತಿಳಿಯಬೇಕು. ಇಂದ್ರಿಯಗಳನ್ನು ಜಯಿಸುವುದು ವೈರಾಗ್ಯಯಜ್ಞ. ಇದೇ ರೀತಿಯಿಂದ ದ್ರವ್ಯಯಜ್ಞ, ತಪೋಯಜ್ಞ, ವಾಗ್‌ಯಜ್ಞ ಮುಂತಾದ ವಿವಿಧ ರೀತಿಯ ಯಜ್ಞಗಳಿವೆ.

ಅನೇಕ ವಚನಕಾರರು, ದಾಸರು, ಜ್ಞಾನೇಶ್ವರ, ವಿವೇಕಾನಂದರಂಥ ಮಹಾಪುರುಷರು ವಾಗ್‌ಯಜ್ಞದ ಉದಾಹರಣೆಯಾಗಿದ್ದಾರೆ. ಅನೇಕ ಬಗೆಯ ಉದ್ಯೋಗ, ವ್ಯವಸಾಯ, ಕಲೆ, ವ್ಯಾಪಾರ ಎಲ್ಲವೂ ಯಜ್ಞವಾಗಬಲ್ಲವು. ಆದರೆ ಆ ಕೆಲಸದಲ್ಲಿ ಏಕಾಗ್ರತೆ, ನಮ್ರತೆ, ಉದ್ಯೋಗಶೀಲತೆ, ಉದಾರತೆ, ಗುರುಭಕ್ತಿ, ಆಸ್ತಿಕತೆ, ಕೃತಜ್ಞತೆ – ಈ ಎಲ್ಲ ಗುಣಗಳೂ ವ್ಯಕ್ತಿಯ ಅಂತರಂಗದಲ್ಲಿ ಮಿಡಿಯುತ್ತಿದ್ದು, ವಿಶ್ವಕಲ್ಯಾಣ ಭಾವನೆಯಿಂದ ಮಾಡಿದ ಯಾವುದೇ ಕೆಲಸ ಯಜ್ಞವಾಗುತ್ತದೆ.

೩

ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಜೀವನವನ್ನು ಯಜ್ಞಮಯವಾಗಿ ಮಾಡುವುದೇ ಭಾರತೀಯರ ಸಿದ್ಧಾಂತವಾಗಿದೆ. ಇದೇ ವೇದಗಳ ಸಾರವಾಗಿದೆ. ಮತ್ತು ಎಲ್ಲ ಶಾಸ್ತ್ರಗ್ರಂಥಗಳ ಆದೇಶವಾಗಿದೆ.

ಯಜ್ಞ ಶಬ್ದವು ಯಜ ಧಾತುವಿನಿಂದ ಆಗಿದೆ. ದೇವರ ಪೂಜೆ ಮಾಡುವುದು, ಸಂಬಂಧ ಕಲ್ಪಿಸುವುದು, ಸಂಘಟಿಸುವುದು, ದಾನಕೊಡು ವುದು ಹೀಗೆ ಆ ಶಬ್ದಕ್ಕೆ ಬೇರೆ ಬೇರೆ ಅರ್ಥಗಳಿವೆ. ಯಜ್ಞಗಳಲ್ಲಿ ಅನೇಕ ಬಗೆಯಾಗಿವೆ. ಅತ್ಯಂತ ಕಡಿಮೆ ಸಮಯದಲ್ಲಿ, ಕೆಲವೇ ಸಾಮಗ್ರಿಗಳಲ್ಲಿ ಮಾಡಬಹುದಾದ ಯಜ್ಞ ವೈಶ್ವದೇವ. ನಿತ್ಯಕರ್ಮಗಳಲ್ಲಿ ಸುಲಭವಾಗಿ ನೆರವೇರಿಸಬಹುದಾದ ಯಜ್ಞದಿಂದ ಹಿಡಿದು ಅನೇಕ ವಾರ, ತಿಂಗಳು, ವರ್ಷಗಳವರೆಗೆ ಮಾಡುವಂಥ ಯಜ್ಞಗಳಿವೆ. ರಾಜಸೂಯ, ವಾಜಪೇಯ, ಅಶ್ವಮೇಧ, ಅಗ್ನಿಷ್ಟೋಮ, ಅಗ್ನಿಹೋತ್ರ, ಅಗ್ನ್ಯಾಧಾನ, ಚಾತುರ್ಮಾಸ್ಯ ಇವು ಮಹತ್ವದ ಯಜ್ಞಗಳು. 'ಬ್ರಾಹ್ಮಣ' ಮತ್ತು 'ಸೂತ್ರ' ಗ್ರಂಥಗಳಲ್ಲಿ ಯಜ್ಞದ ಅನೇಕ ಪ್ರಕಾರಗಳನ್ನು ಹೇಳಿದೆ.

ಆರ್ಯರು ಯಜ್ಞವನ್ನು ಶ್ರೇಷ್ಠ ಕಾರ್ಯವೆಂದು ತಿಳಿಯುತ್ತಿದ್ದರು. 'ಯಜ್ಞೋ ವೈ ಶ್ರೇಷ್ಠತಮಂ ಕರ್ಮ'. ಋಗ್ವೇದದ ಒಂದನೆ ಮಂಡಲದಲ್ಲಿ ನೂರಾ ಅರವತ್ತನಾಲ್ಕನೆ ಸೂಕ್ತಿಯ ಐವತ್ತನೇ ಮಂತ್ರ ಯಜ್ಞದ ಮಹತ್ವವನ್ನು ಪ್ರಸ್ತಾಪಿಸಿದೆ :

> **ಯಜ್ಞೇನ ಯಜ್ಞಮಯಜಂತ ದೇವಾಂಸ್ತಾನಿ ಧರ್ಮಾಣಿ**
> **ಪ್ರಥಮಾನ್ಯಾಸನ್ । ತೇಹನಾಕಂ ಮಹಿಮಾನಃ ಸಚಂತೇ**
> **ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ।**

ಅಂದರೆ ಪ್ರಾಚೀನ ಕಾಲದಲ್ಲಿ ದೇವತೆಗಳು ಯಜ್ಞದಿಂದಲೇ, ಯಜ್ಞವನ್ನು ಅಂದರೆ ವಿಷ್ಣುವನ್ನು ಪೂಜಿಸಿದರು. ಆ ಯಜ್ಞಕಾರ್ಯ ದಿಂದಲೇ ಅವರಿಗೆ ಮಹತ್ವ ಬಂದಿತು ಮತ್ತು ಅವರ ಪೂರ್ವಜರಾದ ಮಹಾಪುರುಷರು ವಾಸಮಾಡುತ್ತಿದ್ದ ದುಃಖರಹಿತವಾದ ಸ್ವರ್ಗವನ್ನು ಸೇರಿದರು.

ಯಜ್ಞದ ಮಹತ್ವವನ್ನು ವರ್ಣಿಸುವ ಇಂಥ ನೂರಾರು ವಾಕ್ಯಗಳು ವೈದಿಕ ಸಾಹಿತ್ಯದಲ್ಲಿ ದೊರೆಯುತ್ತವೆ.

ಪ್ರಾರಂಭದಲ್ಲಿ ಯಜ್ಞವು ವ್ಯಕ್ತಿಗತರೂಪದ್ದಾಗಿರಬೇಕು. ಕ್ರಮೇಣ ಅದು ಸಾಮೂಹಿಕ ರೂಪ ತಾಳಿದೆ. ನಂತರ ರಾಷ್ಟ್ರೀಯ ಶ್ರದ್ಧಾಸ್ಥಾನ

ಅದಕ್ಕೆ ಪ್ರಾಪ್ತವಾಯಿತು. ಆರ್ಯರು ಹೋದಲ್ಲೆಲ್ಲಾ ಯಜ್ಞ ಮಾಡುತ್ತಿದ್ದರು. ಯಜ್ಞದಿಂದ ಅಸಂಸ್ಕೃತರನ್ನು ಸುಸಂಸ್ಕೃತರನ್ನಾಗಿ ಮಾಡುತ್ತಿದ್ದರು. ಅನಾಗರಿಕರನ್ನು ನಾಗರಿಕರನ್ನಾಗಿ ಮಾಡುತ್ತಿದ್ದರು. ಯಜ್ಞವೆಂದರೆ ಇಹಲೋಕ-ಪರಲೋಕಗಳ ಸಾಧನೆಯ ಮಾರ್ಗವಾಗಿತ್ತು. ಇದರಿಂದ ಸಮಾಜ ಮತ್ತು ವ್ಯಕ್ತಿಯ ಮೇಲೆ ಸುಸಂಸ್ಕಾರವುಂಟಾಗುತ್ತಿತ್ತು. ಸಾಮೂಹಿಕ ಚೈತನ್ಯ ನಿರ್ಮಾಣವಾಗುತ್ತಿತ್ತು. ಸದ್ಗುಣಗಳ ವಿಕಾಸವಾಗುತ್ತಿತ್ತು.

೪

ಯಜ್ಞ ಮಾಡಬೇಕಾದರೆ ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾಗುತ್ತಿತ್ತು. ಎಲ್ಲ ಸಾಧನ ಸಾಮಗ್ರಿಗಳನ್ನು ಹೊಂದಿಸಿಕೊಂಡು ಕೆಲಸವನ್ನು ವಿಭಾಗಿಸಬೇಕಾಗಿತ್ತು. ಪೂರ್ವಯೋಜನೆ ಮತ್ತು ಸರಿಯಾದ ಕಾರ್ಯವಿಧಾನವಿಲ್ಲದೆ ಆ ಕೆಲಸದಲ್ಲಿ ಯಶಸ್ಸು ಸಿಕ್ಕುವುದಿಲ್ಲ. ಯಜ್ಞವನ್ನು ಪ್ರಾರಂಭಿಸುವುದಕ್ಕೆ ಮೊದಲು ಈ ಕೆಳಕಂಡ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗಿತ್ತು.

ಯಜ್ಞಕ್ಕೆ ಮೊದಲು ಸಂಕಲ್ಪ ಇಲ್ಲವೆ ಪ್ರತಿಜ್ಞೆ ಸ್ವೀಕರಿಸಬೇಕಾಗಿತ್ತು. ಯಾವುದೇ ಕೆಲಸ ಮಾಡಬೇಕಾದರೂ, ದೃಢನಿಶ್ಚಯ ಹಾಗೂ ದೀಕ್ಷಾಬದ್ಧರಾಗಿ ಮಾಡಬೇಕು. ಒಮ್ಮೆ ಆ ಕೆಲಸ, ಒಮ್ಮೆ ಈ ಕೆಲಸ ಎಂದು ಎಲ್ಲವನ್ನೂ ಅರ್ಧದಲ್ಲಿ ಬಿಡುವುದು ಸರಿಯಲ್ಲ. ಶರೀರ ಮತ್ತು ಮನಸ್ಸಿಗೆ ಸ್ವಲ್ಪವೂ ದಣಿವಾಗಬಾರದೆನ್ನುವುದು, ಸ್ವಲ್ಪ ಕೆಲಸ ಮಾಡಿದ ಕೂಡಲೇ ಬೇಸರವಾಯಿತೆಂದು ಬಿಟ್ಟುಬಿಡುವುದು – ಇವೆಲ್ಲ ಆತ್ಮಘಾತಕ ಗುಣಗಳು. ಯಜ್ಞದಿಂದ ಈ ಕ್ರಿಯಾಶೂನ್ಯತೆ ನಾಶವಾಗಿ, ವ್ಯಕ್ತಿಯಲ್ಲಿ ದೃಢಸಂಕಲ್ಪದಿಂದ ಕಾರ್ಯ ಮಾಡುವ ಪ್ರವೃತ್ತಿ ಹೆಚ್ಚುತ್ತದೆ.

ಯಜ್ಞದಲ್ಲಿ ಚಿಕ್ಕ ಪುಟ್ಟ ಕೆಲಸಗಳನ್ನೂ ಹಂಚಿಕೊಡಲಾಗುತ್ತಿತ್ತು. ಪ್ರತಿಯೊಬ್ಬರೂ ಅದನ್ನು ಸಮಯಕ್ಕೆ ಸರಿಯಾಗಿ, ಮತ್ತು ಸಮರ್ಪಕವಾಗಿ ಮಾಡುತ್ತಿದ್ದರು. ಈ ಪದ್ಧತಿಯಿಂದ ಕರ್ತವ್ಯದಕ್ಷತೆ ಮತ್ತು ಸಹಕಾರ ಭಾವನೆ ಬೆಳೆಯುತ್ತಿತ್ತು.

ಯಜ್ಞದ ಸಲುವಾಗಿ ಹಳ್ಳಿಗರಿಂದ ಹಿಡಿದು ಸಾಮಾನ್ಯ ನಾಗರಿಕರ ವರೆಗೂ, ಸೇನಾಪತಿಯಿಂದ ಹಿಡಿದು ಅರಸನವರೆಗೂ ಲಕ್ಷಗಟ್ಟಲೆ ಜನರು ಒಂದೆಡೆ ಸೇರುತ್ತಿದ್ದರು. ಅಲ್ಲಿ ವಿವಿಧ ವಿದ್ಯೆ, ಕಲೆ, ಸಂಗೀತ, ನೃತ್ಯ ಮೊದಲಾದ ಮನರಂಜನೆಯ ಕಾರ್ಯಕ್ರಮಗಳು ನಡೆಯುತ್ತಿದ್ದವು. ಇದರಿಂದ ಜನರಲ್ಲಿ ಐಕ್ಯತೆ, ಲೋಕಸಂಗ್ರಹ ಬುದ್ಧಿ, ಪ್ರತಿಯೊಬ್ಬರ ಪ್ರವೃತ್ತಿ ಮತ್ತು ಅಭಿರುಚಿಗಳ ಪರೀಕ್ಷೆಯಾಗುತ್ತಿತ್ತು. ಸುಜ್ಞರಿಂದ ಎಲ್ಲರಿಗೂ ಉತ್ತಮ ಮಾರ್ಗದರ್ಶನ ದೊರೆಯುತ್ತಿತ್ತು.

ಯಜ್ಞದಿಂದಾಗಿ ಯಥೇಚ್ಛ ದಾನ ಧರ್ಮಗಳು ನಡೆಯುತ್ತಿದ್ದವು. ರಘುವಂಶದ ರಾಜ ವಿಶ್ವಜಿತ್ ಯಜ್ಞದಲ್ಲಿ ತನ್ನ ಸರ್ವಸ್ವವನ್ನೂ ದಾನ ಮಾಡಿದ. ಆ ಕಾಲದಲ್ಲಿ ಯಜ್ಞಗಳೆಂದರೆ ದಾನಶೀಲತೆಯ ಕೇಂದ್ರ ಗಳಾಗಿದ್ದವು.

ಈ ರೀತಿ ಯಜ್ಞಗಳು ಆ ಕಾಲದ ಐಹಿಕ ಪರಮಾರ್ಥದ ಕಲ್ಯಾಣದ ಸಾಧನಗಳಾಗಿದ್ದವು. ಆದರೆ ನಿರ್ಭಾಗ್ಯದಿಂದ ಯಜ್ಞದಲ್ಲಿನ ಈ ಸದುದ್ದೇಶ ಮಾಯವಾಗಿ, ಹೇಗೇ ಇರಲಿ ಯಜ್ಞಮಾಡಿದರೆ ಸಾಕು ಪರಲೋಕ ಸಿಕ್ಕುತ್ತದೆ ಎಂಬ ಅರ್ಥ ರೂಢವಾಯಿತು. ಯಜ್ಞದಲ್ಲಿನ ಹೊಸತನದ ಸಂಶೋಧನ ಪ್ರವೃತ್ತಿ ಇಲ್ಲವಾಗಿ ಅದೊಂದು ಅಚ್ಚು ಆಗಿ ಉಳಿಯಿತು. ಶಬ್ದದ ಅರ್ಥ ಅಸ್ಪಷ್ಟವಾಯಿತು ; ಅದರ ಮೂಲೋದ್ದೇಶ ಮರೆಯಾಯಿತು. ಯಜ್ಞದ ಹೆಸರಿನಲ್ಲಿ ಹಿಂಸಾಚಾರ ಪ್ರಚಲಿತವಾಯಿತು. ಕೊನೆಗೆ ಯಜ್ಞ ಸಂಸ್ಥೆಗಳು ಗತಪ್ರಾಣವಾಗಿ ನಾಮಾವಶೇಷವಾದವು.

೫

ಪ್ರಾಚೀನ ಕಾಲದ ಯಜ್ಞಗಳನ್ನು ಮತ್ತು ಅದರ ವಿಶಾಲವಾದ ಕಾರ್ಯಕ್ರಮಗಳನ್ನು ಆಚರಿಸಲು ಇಂದಿನ ಆಧುನಿಕ ಕಾಲದವರಿಗೆ ಸಾಧ್ಯ ವಾಗಲಿಕ್ಕಿಲ್ಲ. ಆದರೆ ಅದರ ಹಿಂದಿನ ಯಜ್ಞಭಾವನೆಯ ಸದುದ್ದೇಶ ಮಾತ್ರ ಇಂದು ಅವಶ್ಯವಿದೆ : ಪರರಿಗಾಗಿ ಸೇವಾಭಾವನೆಯಿಂದ ದೇಹವನ್ನು ಸವೆಸುವ ಪ್ರವೃತ್ತಿ, ಸಮರ್ಪಣಭಾವ ; ಆದರದಿಂದ, ಅಂತಃಕರಣದಿಂದ ನತಮಸ್ತಕನಾಗುವುದು – ಇವೆಲ್ಲ ಯಜ್ಞಭಾವನೆಗಳಾಗಿವೆ.

'ತೇನ ತ್ಯಕ್ತೇನ ಭುಂಜೀಥಾಃ' – ಎಂದರೆ ಇನ್ನೊಬ್ಬನಿಗೆ ಕೊಟ್ಟು ಮಿಕ್ಕಿರುವುದನ್ನು ಸೇವಿಸು. ಮೊದಲು ಇನ್ನೊಬ್ಬನ ಬಗ್ಗೆ ಚಿಂತಿಸು, ಅದರಲ್ಲಿ ಆನಂದವನ್ನು ಪಡೆ. ಈ ಆದರ್ಶವೆಂದರೆ ಯಜ್ಞಭಾವನೆ. ಊಟ ಮಾಡುವುದಕ್ಕಾಗಿ ಎಲೆಯ ಮುಂದೆ ಕೂಡುತ್ತೇವೆ. ಆಗ ಒಂದು ಕ್ಷಣ ಮಾತ್ರ ಕಣ್ಣು ಮುಚ್ಚಿ "ದೇವಾ, ಇದೆಲ್ಲ ನಿನ್ನದೇ ಇದೆ. ನಿನಗೆ ಅರ್ಪಿಸುತ್ತೇನೆ" ಎಂದು ಪ್ರಾರ್ಥಿಸಿದಾಗ ಉಂಟಾಗುವ ಅಂತರಂಗದ ತನ್ಮಯತೆಯು ಯಜ್ಞಭಾವನೆಯಾಗಿದೆ. ಒಂದು ಕ್ಷಣ ಕಣ್ಣು ಮುಚ್ಚಿ, ಇದೆಲ್ಲ ನಿನ್ನದೇ ಎನ್ನುವುದರಿಂದ ದೇವರೇನೂ ಬರುವುದಿಲ್ಲ, ತಿನ್ನುವುದಿಲ್ಲ. ಯಾವ ಖರ್ಚೂ ಇಲ್ಲದೆ ಒಂದು ಯಜ್ಞ ಸಾಧಿಸುತ್ತದೆ. ಅಷ್ಟೂ ನಮಗೆ ಬೇಡವಾಗಿದೆ! ಆ ಸರ್ವಶಕ್ತಿವಂತನಾದ ಭಗವಂತನಿಗೆ ಕಾಲ್ಪನಿಕ ಊಟ ಕೊಡಲೂ ನಾವು ಸಿದ್ಧರಿಲ್ಲ. ಆದರೆ ಅವನು ಮಾತ್ರ ಮೂರು ಹೊತ್ತೂ ರುಚಿಕಟ್ಟಾದ ಊಟ ನಮಗೆ ಕೊಡಬೇಕೆಂದು ಬಯಸುತ್ತೇವೆ. ನೈವೇದ್ಯ ಮಾಡುವುದರಿಂದ ನಾವು ಅವನಿಗೆ ಏನನ್ನೂ ಕೊಟ್ಟಂತಾಗುವುದಿಲ್ಲ. ಆ ಸರ್ವಶಕ್ತನಿಗೆ ಕೊಡಲು ನಾವೇನು ಕುಬೇರರೇ ? ಆ ನೈವೇದ್ಯ ನಮಗೇ ಸಿಗುತ್ತದೆ. ನಮ್ಮ ಆತ್ಮದ ಉದ್ಧಾರವೇ ಆಗುತ್ತದೆ. ಯಜ್ಞಭಾವನೆ ಜಾಗೃತವಾಗುತ್ತದೆ. 'ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' ಮಾಡದೆ ಯಜ್ಞಭಾವನೆಯಿಂದ ಮಾಡುವುದು ನಿಜವಾದ ಯಜ್ಞ.

೬

ಜೀವನವು ಯಜ್ಞಮಯವಾಗಲು ಮನುಷ್ಯನಿಗೆ ಒಂದು ಧ್ಯೇಯ ಬೇಕು. ಧ್ಯೇಯವುಳ್ಳ ಜೀವನವು ಯಜ್ಞದ ಜ್ವಾಲೆಯಂತಿರುತ್ತದೆ. ಧ್ಯೇಯವಿಲ್ಲದ ಜೀವನವು ಬೂದಿಯ ರಾಶಿಯಂತಿರುತ್ತದೆ.

'ಪ್ರೇಮಹೀನ ಜೀವನಕ್ಕಿಂತ ಪ್ರೇಮಭಂಗ ಜೀವನ ಲೇಸು' ಹೀಗೊಂದು ಇಂಗ್ಲಿಷ್ ಗಾದೆ ಇದೆ. ಇದು ಸ್ತ್ರೀ-ಪುರುಷರ ಜೀವನಕ್ಕೆ ಸಂಬಂಧಿಸಿದ್ದೆಂದು ಬಹಳ ಜನ ತಿಳಿಯುತ್ತಾರೆ. ಆದರೆ ಅದರ ವಿಶಾಲ ಅರ್ಥ, 'ಪ್ರೀತಿಸಿರಿ, ಉತ್ಕಟವಾಗಿ ಪ್ರೀತಿಸಿರಿ' ಎಂದು.

ಇಂಗ್ಲೆಂಡಿನಲ್ಲಿದ್ದಾಗ ಸ್ವಾಮಿ ವಿವೇಕಾನಂದರನ್ನು ಒಬ್ಬ ಮಹಿಳೆ ಕೇಳಿದಳು – "ನನಗೆ ಭಗವಂತನ ದರ್ಶನವಾದೀತೆ? ಎಲ್ಲ ಐಹಿಕ ಸಂಗತಿಗಳಿಂದ ಮನಸ್ಸನ್ನು ದೂರವಿಡುವಂತೆ ನೀವು ಹೇಳುತ್ತೀರಿ. ಆದರೆ ನನಗೆ ಮಾತ್ರ ಮಗನ ಮೇಲೆ ಅತಿಯಾದ ಮೋಹವಿದೆ." ಅದಕ್ಕೆ ಸ್ವಾಮಿಜೀ ಉತ್ತರಿಸಿದರು – "ಅಮ್ಮ, ನೀವು ನಿಮ್ಮ ಮಗನನ್ನೇ ಪರಮೇಶ್ವರನೆಂದು ತಿಳಿಯಿರಿ. ಮತ್ತು ಅವನನ್ನು ಪ್ರೀತಿಸಿರಿ. ಆಗ ನಿಮಗೆ ಈಶ್ವರದರ್ಶನವಾಗುವುದು." ಪ್ರೇಮಭಾವನೆ ಮಹತ್ವದ್ದಾಗಿದೆ. ಪ್ರೇಮ ಸ್ಥಾನ ನಿಮಿತ್ತ ಮಾತ್ರವಾಗಿದೆ. ವ್ಯಕ್ತಿ, ಸಂಸ್ಥೆ, ಸಮಾಜ, ದೇಶ, ಧರ್ಮ, ಆರಾಧ್ಯದೈವ ಇದರಲ್ಲಿ ಯಾವುದೇ ವಿಷಯ ನಿಮ್ಮ ಪ್ರೇಮ ಸ್ಥಾನವಾಗಿರಲಿ. ಅಂತರಂಗದಲ್ಲಿನ ಪ್ರೇಮಭಾವವು ಮಹತ್ವದ್ದಾಗಿದೆ. ಅಗ್ನಿಯ ಸಂಪರ್ಕದಿಂದ ಕಸಕಡ್ಡಿ, ಸೊಪ್ಪುಸೆದೆ ಎಲ್ಲವೂ ಸಾಕ್ಷಾತ್ ಅಗ್ನಿಯೇ ಆಗುತ್ತದೆ. ಅದರಂತೆ ಪ್ರೇಮಭಾವನೆಯು ಉದ್ದೀಪನ ಗೊಂಡಾಗ ಎಲ್ಲವೂ ಯಜ್ಞಮಯವಾಗಿ ಹೊಸ ಶಕ್ತಿಯ ಸಂಚಾರವಾಗುತ್ತದೆ. ಇದರಿಂದ ಧ್ಯೇಯಪೂರ್ತಿಗಾಗಿ ಅಖಂಡ ಪ್ರಯತ್ನ ಮತ್ತು ಹಂಬಲ ಪ್ರಕಟವಾಗುತ್ತದೆ. ಆ ಮಾರ್ಗದಲ್ಲಿ ಪರ್ವತಪ್ರಾಯವಾದ ಅಡ್ಡಿ ಆತಂಕಗಳು ಎದುರಾದರೂ ಅವೆಲ್ಲ ಕ್ಷುಲ್ಲಕವೆನಿಸುತ್ತವೆ. ನಿಜವಾದ ಪ್ರೇಮ ಸ್ವಾರ್ಥರಹಿತವಾಗಿರುತ್ತದೆ. ಅಲ್ಲಿ ತ್ಯಾಗ ಮತ್ತು ಸಮರ್ಪಣಭಾವನೆಗಳು ದೇದೀಪ್ಯಮಾನವಾಗಿ ಬೆಳಗುತ್ತವೆ.

೭

ನಮಗಿಂದು ಇಂಥದೇ ಪ್ರೇಮಮಯ, ಸಮರ್ಪಿತ ಜೀವನ, ಯಜ್ಞಮಯ ಜೀವನ ಬೇಕಾಗಿದೆ. ನಾವು ನಮಗಿಷ್ಟವಾದ, ನಮಗೆ ತಿಳಿದ, ನಮಗೆ ಬೇಕಾದ ಯಾವುದೇ ಧರ್ಮ ಅಥವಾ ದೇವರಲ್ಲಿ ನಂಬಿಕೆ ಇಟ್ಟು ಅದನ್ನು ನಿಯಮದಿಂದ ಪೂಜಿಸಿ, ಪಾಲಿಸಿಕೊಂಡು ಬರಬೇಕು.

ಎಷ್ಟೋ ಬಗೆಯ ದೇವರುಗಳು ನಮ್ಮ ನಿರೀಕ್ಷೆಯಲ್ಲಿದ್ದಾರೆ. ಎಷ್ಟೋ ಬಗೆಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಯಾಂತ್ರಿಕ, ವ್ಯಾವಸಾಯಿಕ

ರಂಗಗಳಿವೆ, ಅಲ್ಲಿ ಅನಂತ ಸಮಸ್ಯೆಗಳಿವೆ. ಅನೇಕ ಬಗೆಯ ಸೇವಾಕಾರ್ಯ ಗಳು ನಮ್ಮ ದಾರಿ ಕಾಯುತ್ತಾ ಕುಳಿತಿವೆ.

ಹದಿನಾಲ್ಕು ವಿದ್ಯೆಗಳಿವೆ. ಅರವತ್ತನಾಲ್ಕು ಕಲೆಗಳಿವೆ. ಜ್ಞಾನ, ವಿಜ್ಞಾನದ ಅಗಣಿತ ಶಾಖೆಗಳಿವೆ. ಇವೆಲ್ಲ ಭಕ್ತರ ಪ್ರತೀಕ್ಷೆಯಲ್ಲಿವೆ. ತನು-ಮನ-ಧನ ಸರ್ವಸ್ವವನ್ನೂ ಅರ್ಪಿಸಿ ಯಜ್ಞಕುಂಡವನ್ನು ಪ್ರಜ್ವಲಿಸುವ ಹೋತೃಗಳು ಬೇಕಾಗಿದ್ದಾರೆ.

ಭರತಖಂಡದ ಪ್ರತಿಯೊಂದು ಪ್ರಾಂತದಲ್ಲಿ, ಪ್ರತಿಯೊಂದು ನಗರದಲ್ಲಿ, ಹಳ್ಳಿಯಲ್ಲಿ, ಪ್ರತಿಯೊಬ್ಬನ ಹೃದಯದಲ್ಲಿ ಇಂಥ ಯಜ್ಞಕುಂಡ ಗಳು ಹೊತ್ತಿಕೊಂಡರೆ, ನಮ್ಮ ಸಂಪೂರ್ಣ ರಾಷ್ಟ್ರಜೀವನವು ಯಜ್ಞ ಮಯವಾಗಿ, ಅದರೊಳಗಿಂದ ಯಜ್ಞಪುರುಷನು ಪ್ರಕಟಗೊಳ್ಳುವನು. ಆಗ ಆತ್ಮದ ಮತ್ತು ಪ್ರಪಂಚದ ಉದ್ಧಾರವಾಗುವಂಥ ಅಮೃತಕುಂಭ ನಮಗೆ ಲಭಿಸೀತು ಎನ್ನುವುದರಲ್ಲಿ ಸಂಶಯವಿಲ್ಲ.

೧

ತಪೋ ಮೇ ಹೃದಯಂ ಸಾಕ್ಷಾದಾತ್ಮಾಽಹಂ ತಪಸೋಽನಘ

"ತಪಸ್ಸು ನನ್ನ ಹೃದಯವಾಗಿದೆ, ನಾನು ತಪಸ್ಸಿನ ಹೃದಯವಾಗಿದ್ದೇನೆ. ನಾನು ಮತ್ತು ತಪಸ್ಸು ಏಕರೂಪವಾಗಿದ್ದೇವೆ." ಹೀಗೆ ಭಗವಂತನು ಸ್ವತಃ ತನ್ನ ಬಗ್ಗೆ ಹೇಳಿದ್ದಾನೆ.

ಸೃಜಾಮಿ ತಪಸೈವೇದಂ ಗ್ರಸಾಮಿ ತಪಸಾ ಪುನಃ ।
ಬಿಭರ್ಮಿ ತಪಸಾ ವಿಶ್ವಂ ವೀರ್ಯಂ ಮೇ ದುಶ್ಚರಂ ತಪಃ ॥

– ಅಂದರೆ "ನಾನು ಈ ವಿಶ್ವವನ್ನು ತಪಸ್ಸಿನ ಬಲದಿಂದ ಸೃಷ್ಟಿಸುತ್ತೇನೆ. ನಂತರ ತಪಸ್ಸಿನ ಬಲದಿಂದಲೇ ವಿಲೀನಗೊಳಿಸಿಕೊಳ್ಳುತ್ತೇನೆ. ವಿಶ್ವವನ್ನು ತಪಸ್ಸಿನ ಬಲದಿಂದಲೇ ಕಾಪಾಡುತ್ತೇನೆ. ನನ್ನ ಅಸಾಮಾನ್ಯ ಬಲ ಈ ತಪಸ್ಸಿನಿಂದಲೇ ಸಂಭವಿಸಿದೆ."

ಈ ಮಾತು ಭಾಗವತದ ಎರಡನೇ ಸ್ಕಂಧದ ಒಂಬತ್ತನೇ ಅಧ್ಯಾಯದಲ್ಲಿ ಬರುತ್ತದೆ. ಭಗವಂತನು ತನ್ನ ಸರ್ವಶಕ್ತಿಸಂಪನ್ನತೆಯ ರಹಸ್ಯವನ್ನು ಬಯಲುಮಾಡಿದ್ದಾನೆ ಅದರಲ್ಲಿ.

ಆದಿದೇವನಾದ ಬ್ರಹ್ಮ ಕಮಲಾಸನದ ಮೇಲೆ ಚಿಂತಿತನಾಗಿ ಕುಳಿತಿದ್ದ. ಏನು ಮಾಡಬೇಕು ಏನು ಮಾಡಬಾರದು ಎಂದು ತಿಳಿಯದೆ ಮನಸ್ಸಿನಲ್ಲಿ ಗೊಂದಲವುಂಟಾಗಿತ್ತು. ಅಪೂರ್ವವಾದದ್ದನ್ನು ಮಾಡುವ ಸಾಮರ್ಥ್ಯ ಅವನಲ್ಲಿರಲಿಲ್ಲ. ಇಂಥ ಸಂದಿಗ್ಧ ಸ್ಥಿತಿಯಲ್ಲಿ 'ತಪ, ತಪ' ಎಂಬ ವಾಣಿ ಕೇಳಿಸಿತು. "ಈ ಧ್ವನಿ ಎಲ್ಲಿಂದ ಬಂದಿದ್ದು ? ಯಾರ ನುಡಿ ಇದು ?" ಎಂದು ಕಣ್ಣುಮುಚ್ಚಿ ಕ್ಷಣಕಾಲ ವಿಚಾರ ಮಾಡಿದ. ಆಗ

ಬ್ರಹ್ಮನಿಗೆ ಇದು ಭಗವಂತನ ಆದೇಶವೆಂದು ತಿಳಿಯಿತು. ಭಗವಂತನು ತನಗೆ ತಪಸ್ಸು ಮಾಡಲು ಹೇಳಿದ್ದಾನೆ ಎಂದು ತಕ್ಷಣ ತಪಸ್ಸಿಗೆ ಕುಳಿತ. ಇಂದ್ರಿಯಗಳನ್ನು ವಶವರ್ತಿಯಾಗಿಸಿಕೊಂಡು ಅನೇಕ ಸಹಸ್ರ ವರ್ಷಗಳ ವರೆಗೆ ತಪಸ್ಸು ಮಾಡಲು, ಆ ತಪಸ್ಸಿನಿಂದ ಎಲ್ಲಾ ಲೋಕಗಳೂ ಪ್ರಕಾಶಮಾನವಾದವು. ಆ ತಪಸ್ಸಿನಿಂದ ಶ್ರೀಹರಿಯು ಪ್ರಸನ್ನನಾಗಿ ಬ್ರಹ್ಮನನ್ನು ತನ್ನ ಲೋಕಕ್ಕೆ ಕರೆದೊಯ್ದ. ಅಲ್ಲಿ ಆ ಆನಂದಲೋಕದಲ್ಲಿ ಚಿಂತೆ, ಭಯ, ಮೋಹ ಇವುಗಳಿಗೆ ಸ್ಥಳವೇ ಇರಲಿಲ್ಲ. ಆತ್ಮಜ್ಞಾನವನ್ನು ಹೊಂದಿದ ದೇವತೆಗಳು ಭಗವಂತನ ಸ್ತುತಿ ಮಾಡುತ್ತಿದ್ದರು. ಆತನಿಗಿಂತ ಶ್ರೇಷ್ಠವಾದದ್ದು ಯಾವುದೂ ಇರಲಿಲ್ಲ. ಅವನು ಬ್ರಹ್ಮದೇವನನ್ನು ಸ್ಪರ್ಶಿಸಿ ವಾತ್ಸಲ್ಯದಿಂದ ನುಡಿದ– "ನೀನು ತಪಸ್ಸು ತಪಸ್ಸು ಎಂದು ಕೇಳಿದ ವಾಣಿಯನ್ನು ನಾನೇ ಉಚ್ಚರಿಸಿದ್ದೆ. ಆ ತಪಸ್ಸಿನಿಂದಲೇ ನೀನು ನನಗೆ ಪ್ರಿಯನಾಗಿರುವಿ. ತಪಸ್ಸು ನನ್ನ ಹೃದಯವೇ ಆಗಿದೆ. ನನ್ನ ಕರ್ತೃತ್ವ ಸಾಮರ್ಥ್ಯ, ನನ್ನ ಸಂಪನ್ನತೆ ಎಲ್ಲವೂ ತಪಸ್ಸಿನಿಂದಲೇ ಸಿದ್ಧಿಸಿದೆ."

ತಪಸ್ಸಿನ ಪ್ರಾಬಲ್ಯ ಇಷ್ಟೊಂದು ಘನವಾದದ್ದೆಂದು ತಿಳಿದೇ ನಮ್ಮಲ್ಲಿ ದೊಡ್ಡ ದೊಡ್ಡ ಮಹರ್ಷಿಗಳು, ರಾಜಾಧಿರಾಜರುಗಳು, ಸಾಧು-ಸಂತರು ದೀರ್ಘ ತಪಸ್ಸು ಮಾಡಿದರು. ಅಥವಾ ಆ ತಪಸ್ಸಿನಿಂದಲೇ ಅವರು ಶ್ರೇಷ್ಠರಾದರು.

೨

ತಪ ಎಂದರೆ ಕಾಸುವುದು ಎಂದರ್ಥ. ಚೆನ್ನಾಗಿ ಕಾಸಿದಾಗ ಚಿನ್ನಕ್ಕೆ ಬೇಕಾದ ಆಕಾರವನ್ನು ಕೊಡಬಹುದು. ಅದರಂತೆ ಜೀವನಕ್ಕೆ ಬೇಕಾದ ವಿಶಿಷ್ಟ ರೂಪ ಕೊಡುವ ಸಾಮರ್ಥ್ಯ ತಪಸ್ಸಿನಲ್ಲಿದೆ. ತಪ ಎಂದರೆ ಶರೀರಕ್ಕೆ ಕಷ್ಟ ಕೊಡುವುದು. ಭಗವದ್ಗೀತೆಯಲ್ಲಿ ಅನ್ಯ ವಿಷಯಕ್ಕೆ ಸಂಬಂಧಿಸಿ ಹೇಳಿದಂತೆ ತಪಸ್ಸಿನಲ್ಲಿಯೂ ಸತ್ವ ರಜ ತಮ ಎಂದು ಮೂರು ಪ್ರಕಾರಗಳನ್ನು ತಿಳಿಸಿವೆ.

ದೈಹಿಕ ಸುಖವನ್ನು ಕಡೆಗಣಿಸಿ ಈಶ್ವರಚಿಂತನೆಯಲ್ಲಿ ಮುಳುಗಿ ಸಾಧನೆ ಮಾಡುವುದು ಸಾತ್ವಿಕ ತಪಸ್ಸು. ಎಲ್ಲರ ಆತ್ಮದಲ್ಲೂ ಪರಮಾತ್ಮನನ್ನು

ಗುರುತಿಸಿ, ಜನಸೇವೆಗಾಗಿ ತನ್ನನ್ನು ಅರ್ಪಿಸಿಕೊಳ್ಳುವುದು ಸಾತ್ವಿಕ ತಪಸ್ಸು: ಭಕ್ತಿಯೋಗ, ಜ್ಞಾನಯೋಗ ಮತ್ತು ಕರ್ಮಯೋಗಗಳನ್ನು ಕಾಯಾ ವಾಚಾ ಮನಸಾ ಅನುಸರಿಸುವುದು. 'ದೇಹವನ್ನು ಹಳಿದು ಬ್ರಹ್ಮಾನಂದದಲ್ಲಿ ಕುಣಿದು' ಎನ್ನುವಂಥಾ ಮನಃಸ್ಥಿತಿಯು ಸಾತ್ವಿಕ ತಪಸ್ಸಿನದು. 'ಶ್ರೀಗಂಧದಂತೆ ದೇಹವನ್ನು ಸವೆಸಿ ಸಜ್ಜನರಿಗಾಗಿ ಅರ್ಪಿಸುವುದು' ಸಾತ್ವಿಕ ತಪಸ್ಸು. ಜ್ಞಾನ-ವಿಜ್ಞಾನದ ಸಿದ್ಧಿಗಾಗಿ ಲೌಕಿಕ ಸುಖವನ್ನು ತುಚ್ಛವಾಗಿ ಕಂಡು, ಯಮರಾಜನ ಬಾಗಿಲು ತಟ್ಟುವ ನಚಿಕೇತನದು ಸಾತ್ವಿಕ ತಪಸ್ಸು. ಯಮನು ನಚಿಕೇತನಿಗೆ ಎಷ್ಟೋ ಬಗೆಯ ಪ್ರಲೋಭನೆಗಳನ್ನು ಒಡ್ಡಿದ. "ಅಯ್ಯಾ, ನಿನಗೆ ನಾನು ಅಪಾರ ಐಶ್ವರ್ಯವನ್ನು ಕೊಡುವೆ. ನೂರು ವರ್ಷ ಆಯುಷ್ಯ ಕೊಡುವೆ. ಮಕ್ಕಳು ಮೊಮ್ಮಕ್ಕಳ ಪರಿವಾರ ಬೇಕಾದರೆ ಕೇಳು. ಸಾವಿರಾರು ಆನೆ, ಕುದುರೆ, ಆಕಳು ಕೊಡುವೆ. ಸಾಮ್ರಾಜ್ಯವೇ ಬೇಕಾದರೆ ಪಡೆದುಕೊ. ಒಟ್ಟಿನಲ್ಲಿ ಭೂಲೋಕದಲ್ಲಿ ಅಪ್ರಾಪ್ತವಾದ ಸುಖಭೋಗಗಳನ್ನೆಲ್ಲ ನೀಡುವೆ, ತೆಗೆದುಕೊ." ಆದರೆ ನಚಿಕೇತನು ಜಪ್ಪಯ್ಯ ಎನ್ನಲಿಲ್ಲ. ಸ್ಪಷ್ಟವಾಗಿ ಹೇಳಿದ– "ನನಗೆ ಆತ್ಮಜ್ಞಾನವೇ ಬೇಕು. ಬೇರೇನೂ ಬೇಡ." ಇಂಥ ನಿರ್ಮಲವಾದ ದೃಢಸಂಕಲ್ಪ ಮತ್ತು ಕಾರ್ಯತತ್ಪರತೆ ಇರುವುದು ಸಾತ್ವಿಕ ತಪಸ್ಸು.

ರಾಜ್ಯ, ಧನ, ಶಸ್ತ್ರಾಸ್ತ್ರ, ಕೀರ್ತಿ, ಅಧಿಕಾರ ಇವನ್ನೆಲ್ಲಾ ಪಡೆಯುವುದಕ್ಕಾಗಿ ಮತ್ತು ಹದಿನಾಲ್ಕು ವಿದ್ಯೆ, ಅರವತ್ತನಾಲ್ಕು ಕಲೆಗಳಲ್ಲಿ ಪಾರಂಗತನಾಗುವುದಕ್ಕಾಗಿ ತನ್ಮಯತೆಯಿಂದ ಶ್ರಮಿಸುವುದು ರಾಜಸ ತಪಸ್ಸು. ಜಗತ್ತಿನ ಅನೇಕ ವಿಜ್ಞಾನಿಗಳು ಪ್ರಯೋಗಶಾಲೆಯಲ್ಲಿ ವರ್ಷಗಟ್ಟಲೆ ಹೊಸಶಕ್ತಿಯ ಸಂಶೋಧನೆಗಾಗಿ, ಹಸಿವು ಬಾಯಾರಿಕೆಗಳನ್ನು ಮರೆತು ದುಡಿಯುತ್ತಾರೆ. ಅದರಿಂದ ಕೀರ್ತಿ, ಪ್ರತಿಷ್ಠೆ ಪಡೆಯುತ್ತಾರೆ. ಇದು ರಾಜಸ ತಪದ ಲಕ್ಷಣ. ಸ್ವಧರ್ಮ ಪ್ರಚಾರಕ್ಕಾಗಿ ಕ್ರೈಸ್ತಪಾದ್ರಿಗಳು ಪರದೇಶಗಳಿಗೆ ಹೋಗಿ ತನ್ನ ದೇಶ, ತನ್ನ ಜನರಿಂದ ದೂರವಾಗಿ, ಸ್ವಇಚ್ಛೆಯಿಂದ, ದೃಢನಿಶ್ಚಯದಿಂದ ಕೆಲಸ ಮಾಡುತ್ತಾರೆ. ಅಲ್ಲಿನ ಗುಡ್ಡಗಾಡು ಜನರ ಸಹವಾಸ ಮಾಡಿ ಅವರನ್ನು ಬಗೆಬಗೆಯಾಗಿ ಉಪಚರಿಸಿ ಅವರ ಸೇವೆ ಮಾಡುತ್ತಾರೆ. ಇದರಿಂದ ಒಂದು ಜನಾಂಗಕ್ಕೆ

ಜನಾಂಗವೇ ಅವರ ಅಧೀನವಾಗುತ್ತದೆ. ಅವರ ಈ ಯಶಸ್ಸಿನಿಂದ ಸೋಮಾರಿಗಳಾದ ಇತರರು ಹಲ್ಲು ಕಡಿಯುತ್ತಾರೆ. ದೃಢಮನಸ್ಕರಾಗಿ ಮಾಡಿದ ಅವರ ಈ ಧರ್ಮಪ್ರಚಾರವು ರಾಜಸ ತಪವೇ ಸರಿ.

ಒಬ್ಬ ವ್ಯಕ್ತಿ ಮನೆ, ತೋಟ, ಗದ್ದೆ ಎಂದು ಅಪಾರ ಸಂಪತ್ತನ್ನು ಗಳಿಸಿ ಯಶಸ್ವಿಯಾಗಿ ಬಾಳುವುದನ್ನು ಕಂಡಾಗ – 'ಇವನಿಗೆ ಇಷ್ಟೆಲ್ಲ ಸಂಪತ್ತು ಹೇಗೆ ಸಂಪಾದಿಸಲು ಸಾಧ್ಯವಾಯಿತು ?' ಎಂದು ಇತರರಿಗೆ ಅನಿಸುವುದು. ಅರೇಬಿಯನ್ ಕಥೆಯಲ್ಲಿನ ಸಿಂದಬಾದನ ಪ್ರಯಾಣದಲ್ಲಿನ ಒಂದು ಕಥೆ ಹೀಗಿದೆ : ಹಿಂದಬಾದ ಹೆಸರಿನ ಒಬ್ಬ ಭಿಕ್ಷುಕ ಭಿಕ್ಷೆ ಬೇಡುತ್ತಾ ಬೇಡುತ್ತಾ ಶ್ರೀಮಂತ ಸಿಂದಬಾದನ ಭವ್ಯ ಬಂಗಲೆಯೆದುರು ಬರುತ್ತಾನೆ. ಆ ಬಂಗಲೆಯ ವೈಭವವನ್ನು ನೋಡಿ ಹೀಗೆ ವಿಚಾರ ಮಾಡುತ್ತಾನೆ – "ದೇವಾ, ನಿನ್ನ ಲೀಲೆ ಎಷ್ಟು ವಿಚಿತ್ರ. ನನ್ನ ಮತ್ತು ಈ ಧನಿಕನ ಹೆಸರಿನಲ್ಲಿ ಒಂದು ಅಕ್ಷರ ಮಾತ್ರ ವ್ಯತ್ಯಾಸವಿದೆ. ಆದರೆ ನಮ್ಮಿಬ್ಬರ ಭಾಗ್ಯದಲ್ಲಿ ಎಷ್ಟೊಂದು ಅಂತರವಿದೆ. ಅವನು ಲಕ್ಷಾಧಿಪತಿ, ನಾನು ಭಿಕ್ಷಾಧಿಪತಿ" ಎಂದು ಉದ್ಗರಿಸುತ್ತಾನೆ. ಈ ಉದ್ಗಾರವನ್ನು ಮೇಲೆ ನಿಂತು ಕೇಳಿಸಿಕೊಂಡ ಸಿಂದಬಾದನು ಆತನನ್ನು ಕರೆಸಿ ಸುಖ ಭೋಜನ ಮತ್ತು ಒಳ್ಳೆಯ ವಸ್ತುಗಳಿಂದ ಸತ್ಕರಿಸುತ್ತಾನೆ. ನಂತರ "ಅಯ್ಯಾ, ನನಗೆ ಈ ಅಪಾರ ಸಂಪತ್ತು ಸುಮ್ಮನೆ ಸಿಗಲಿಲ್ಲ. ಅನಂತ ಕಷ್ಟನಷ್ಟಗಳನ್ನು ಅನುಭವಿಸಿ ಇದನ್ನೆಲ್ಲ ಸಂಪಾದಿಸಿದ್ದೇನೆ. ಉದ್ಯೋಗಶೀಲನಾದ, ಪರಿಶ್ರಮಿಯಾದ ಮನುಷ್ಯನಿಗೆ ಸಂಪತ್ತು ಲಭಿಸುತ್ತದೆ" ಎಂದು ಹೇಳಿ ತಾನು ಏಳು ಸಲ ಕೈಗೊಂಡ ಜಲಪರ್ಯಟನೆಯ ರೋಮಾಂಚಕಾರಿ ಕಥೆಯನ್ನು ಹೇಳುತ್ತಾನೆ.

ಸಂಗೀತದಲ್ಲಿ ಪ್ರಾವೀಣ್ಯವನ್ನು ಸಂಪಾದಿಸುವ ಸಂಗೀತಗಾರ ಒಂದೇ ರಾಗವನ್ನು, ಒಂದೇ ಆಲಾಪವನ್ನು ಗಂಟೆಗಟ್ಟಲೆ, ದಿನಗಟ್ಟಲೆ ಮಾಡಬೇಕಾಗುತ್ತದೆ. ಹಸಿದ ಹೊಟ್ಟೆ, ಹರಕು ಬಟ್ಟೆ ಯಾವುದನ್ನೂ ಲೆಕ್ಕಿಸದೆ ಸಾಧನೆಯಲ್ಲಿ ತೊಡಗಿರುತ್ತಾನೆ. ಆಗಲೇ ಸಂಗೀತಶ್ರೀ ಒಲಿಯುತ್ತಾಳೆ. ಇದು ರಾಜಸ ತಪ.

ಮತ್ತೊಬ್ಬನ ನಾಶಕ್ಕಾಗಿ ದ್ವೇಷದಿಂದ, ಈರ್ಷೆಯಿಂದ ಮಾಡುವ ಕೆಲಸ ತಾಮಸವಾದದ್ದು. ಇಂದ್ರಿಯಗಳ ಆಸೆಗಳನ್ನು ಪೂರೈಸಿಕೊಳ್ಳಲು ಅವುಗಳ ದಾಸನಾಗಿ, ಹೀನ ಕೆಲಸ ಮಾಡುವುದು ತಾಮಸ ತಪವಾಗಿದೆ.

ಕಳ್ಳರು, ಲೂಟಿಗಾರರು, ದರೋಡೆಕೋರರು ತಮ್ಮ ತಮ್ಮ ಕೆಲಸಗಳಲ್ಲಿ ಅನೇಕ ಕಷ್ಟಗಳನ್ನು ಸಹಿಸಬೇಕಾಗುತ್ತದೆ. ಓಡುವುದು, ಅಪಾಯದ ಸ್ಥಳಗಳಲ್ಲಿ ಏರುವುದು, ಹೊಂಚು ಹಾಕುವುದು ಮುಂತಾದ ಗಂಡಾಂತರದ ಕೆಲಸಗಳನ್ನು ಮಾಡಬೇಕಾಗುತ್ತದೆ. ಪುರಾಣಪ್ರಸಿದ್ಧರಾದ ಹಿರಣ್ಯಕಶಿಪು, ರಾವಣ, ಕುಂಭಕರ್ಣ, ಶಿಶುಪಾಲ ಮೊದಲಾದ ರಕ್ಕಸರು ಸಹನೆಯಿಂದ, ದೃಢತೆಯಿಂದ ದೀರ್ಘಕಾಲ ತಪಸ್ಸು ಮಾಡಿದರು. ಆದರೆ ಅವರ ಉದ್ದೇಶ ಕ್ರೂರವಾದದ್ದು. ಅದು ತಾಮಸ ತಪ.

೩

'ತಪ' – ಇದಕ್ಕೆ ಹನ್ನೆರಡು ವರ್ಷವೆಂದೂ ಅರ್ಥವಿದೆ. ಯಾವುದೋ ಒಂದು ಉದ್ದೇಶ ಸಾಧನೆಗಾಗಿ ಸತತವಾಗಿ ಹನ್ನೆರಡು ವರ್ಷ ಪರಿಶೀಲನೆ, ಅಭ್ಯಾಸದಲ್ಲಿ ಕಳೆಯುವುದು ತಪಸ್ಸೇ ಆಗಿದೆ. ಅದಕ್ಕಾಗಿ ಕಾಡಿಗೆ ಹೋಗಿ ಕೂಡಬೇಕೆಂದು ಹೇಳಿಲ್ಲ. ತಪಸ್ಸು ಮನೆಯಲ್ಲಿ, ವಿದ್ಯಾಲಯಗಳಲ್ಲಿ, ಪ್ರಯೋಗಶಾಲೆಯಲ್ಲಿ, ಇನ್ನೂ ಅನೇಕ ಕಡೆಗಳಲ್ಲಿ ಆಗಬಹುದು. ಆದರೆ ಏಕಾಂತ ಹೆಚ್ಚು ಅನುಕೂಲವಾದದ್ದು. ಅದಕ್ಕಾಗಿಯೇ ಪ್ರಾಚೀನ ಕಾಲದಲ್ಲಿ ಮುನಿಗಳು ಅರಣ್ಯಕ್ಕೆ ಹೋಗುತ್ತಿದ್ದರು.

ಮನಸ್ಸನ್ನು ವಿಚಲಿತಗೊಳಿಸುವ ಅನೇಕ ಸಾಧನಗಳನ್ನು, ವೈಭವ ವಿಲಾಸಗಳಿಂದ ತುಂಬಿದ ಜಗತ್ತಿನ ಎಲ್ಲ ಸಂಬಂಧಗಳನ್ನು ಕಡಿದೊಗೆದು, ವರ್ಷಗಳವರೆಗೆ ಸತತ ಅಭ್ಯಾಸಮಾಡಿ ಯಾವುದೇ ಒಂದು ವಿಷಯದಲ್ಲಿ ಪ್ರಾವೀಣ್ಯ ಗಳಿಸುತ್ತಿದ್ದರು.

ಚಾರ್ಲ್ಸ್ ಡಾರ್ವಿನ್ 'ಬೀಗಲ್' ಎನ್ನುವ ಹಡಗಿನಲ್ಲಿ ಏಳು ವರ್ಷಗಳವರೆಗೆ ಒಬ್ಬ ಕೂಲಿಯವನಂತೆ ದುಡಿದ. ಹಗಲು ರಾತ್ರಿ ನಿಸರ್ಗದ ವೀಕ್ಷಣೆಯಲ್ಲಿ ಕಳೆದ. ಐಸಾಕ್ ನ್ಯೂಟನ್ ಪ್ರಯೋಗ

ಶಾಲೆಯನ್ನು ಹೊಕ್ಕನೆಂದರೆ ಹಸಿವು ನಿದ್ರೆಗಳನ್ನು ಮರೆಯುತ್ತಿದ್ದ. ಗೆಲಿಲಿಯೊ, ಯೂಕ್ಲಿಡ್ ಮೊದಲಾದ ವಿಜ್ಞಾನಿಗಳೂ ಸಹ ಒಂದು ಉದ್ದೇಶ ಸಾಧನೆಗಾಗಿ ಮಗ್ನರಾಗಿ ದುಡಿದರು. ಇವರೆಲ್ಲ ಒಂದರ್ಥದಲ್ಲಿ ತಪಸ್ವಿಗಳೇ !

ಯಾವ ಸಮಾಜದಲ್ಲಿ ಇಂಥ ತಪಸ್ವಿಗಳ ಸಂಖ್ಯೆ ವಿಪುಲವಾಗಿದೆಯೋ ಅಂಥ ಸಮಾಜದ ಏಳಿಗೆಯಾಗುತ್ತದೆ. ಬಲ್ಲವರು ಹೇಳಿದ್ದಾರೆ – 'ಕೈ ಕೆಸರಾದರೆ ಬಾಯಿ ಮೊಸರು' ಎಂದು. ಕಷ್ಟಪಡದೆ ಸುಖ ಸಿಗುವುದಿಲ್ಲ. ಇಸೋಪನ ನೀತಿಕಥೆಯಲ್ಲಿ ಒಂದು ಮಿಡತೆಯು ಚಳಿಗಾಲದ ಒಂದು ದಿನ ಹಸಿವೆಯಿಂದ ಕಂಗಾಲಾಗಿರುತ್ತದೆ. ಆಗ ಇರುವೆಗಳ ಗುಂಪಿನ ಬಳಿಗೆ ಹೋಗಿ "ನನಗೆ ಹಸಿವೆಯಾಗಿದೆ, ತಿನ್ನಲು ಏನಾದರೂ ಕೊಡಿ" ಎಂದು ಕೇಳುತ್ತದೆ. ಆಗ ಇರುವೆಗಳು – "ನಾವು ಬೇಸಿಗೆಯಲ್ಲಿ ಆಹಾರ ಸಂಗ್ರಹಿಸುತ್ತೇವೆ. ನೀನು ಕೂಡಾ ಹಾಗೇಕೆ ಮಾಡುವುದಿಲ್ಲ?" ಎಂದು ಕೇಳಿದವು. ಅದಕ್ಕೆ ಮಿಡತೆ ಹೇಳಿತು – "ನಾನು ಬೇಸಿಗೆಯನ್ನು ಹಾರುವುದರಲ್ಲಿ ಕಳೆದೆ." ಅದಕ್ಕೆ ಇರುವೆಗಳು ಉತ್ತರಿಸಿದವು – "ಹಾಗಾದರೆ ನಿನ್ನಂಥವರು ಹಸಿವೆಯಿಂದ ಒದ್ದಾಡಿ ಸಾಯುವುದೇ ಒಳ್ಳೆಯದು."

ಇರುವೆ ಮತ್ತು ಜೇನುಗಳಂಥ ಅಲ್ಪಪ್ರಾಣಿಗಳು ಸದಾ ಹೊಟ್ಟೆ ತುಂಬಿಸಿಕೊಳ್ಳಲು ಇಷ್ಟೊಂದು ದುಡಿಯುತ್ತವೆ. ಮನುಷ್ಯರಾದ ನಾವು ಅವುಗಳಿಂದ ಪಾಠ ಕಲಿಯಬೇಕಾಗಿದೆ. ಬುದ್ಧಿ ಇಲ್ಲದ ಈ ಚಿಕ್ಕ ಜೀವಿಗಳು ಇಷ್ಟೊಂದು ಪರಿಶ್ರಮಿಗಳಾಗಿರುವಾಗ, ಮನಸ್ಸು, ಬುದ್ಧಿ ಮತ್ತು ಆತ್ಮಗಳನ್ನು ಹೊಂದಿರುವ ಮನುಷ್ಯ ಎಂಥ ಕಠಿಣ ಸಂಕಟಗಳನ್ನಾದರೂ ಎದುರಿಸಲು ಸಿದ್ಧನಾಗಿರಬೇಕು. ಆಗಲೇ ಅವನ ಆತ್ಮದ ಬೆಳವಣಿಗೆ ಯಾಗುವುದು.

೨

ವ್ಯರ್ಥವಾಗಿ ದೇಹವನ್ನು ದಂಡಿಸುವುದು ತಪಸ್ಸಲ್ಲ. ಆತ್ಮಸುಖಕ್ಕಾಗಿ ದೇಹಸುಖವನ್ನು ಕಡೆಗಣಿಸುವುದೇ ತಪಸ್ಸು. ನಮ್ಮಲ್ಲಿ ಇಂದು ತಪಸ್ಸಿನ

ಮನೋಭಾವ ಕಂಡುಬರುವುದಿಲ್ಲ. ಶ್ರೇಷ್ಠವಾದ ಆದರ್ಶಕ್ಕಾಗಿ ಹಸಿವು ಬಾಯಾರಿಕೆಗಳನ್ನು ಮರೆತು, ವರ್ಷಗಟ್ಟಲೆ ದೇಹವನ್ನು ದಂಡಿಸುವ ಜನರು ಇಂದಿಲ್ಲ. ಧ್ಯೇಯಸಿದ್ಧಿಗಾಗಿ ಹುಚ್ಚರಂತೆ ಹಂಬಲಿಸುವವರು ವಿರಳ. ಜ್ಞಾನಕ್ಕೆ ನಿಜವಾದ ಬೆಲೆ ಇಲ್ಲ, ತೋರಿಕೆಗೆ ಬೆಲೆ ಇದೆ. ಕೆಲವು ಅಕ್ಷರಗಳ ಪ್ರಮಾಣ ಪತ್ರ, ಪ್ರಶಸ್ತಿ ಪತ್ರ ದೊರೆತ ಕೂಡಲೇ ತಾವು ಬಹಳ ದೊಡ್ಡ ಕರ್ತವ್ಯಶಾಲಿಗಳೆಂದು ಭಾವಿಸುತ್ತಾರೆ. ಪುಕ್ಕಟ್ಟೆ ಯಾಗಿ ಮತ್ತು ಸುಲಭವಾಗಿ ಎಲ್ಲ ಸುಖಸಂಪತ್ತುಲಭಿಸಬೇಕೆಂದು ನಿರೀಕ್ಷಿಸು ತ್ತಾರೆ. ಆದರೆ ನಿಜವಾದ ಬೆಲೆ ತೆತ್ತ ಹೊರತು ಏನನ್ನೂ ಸಾಧಿಸಲು ಆಗುವುದಿಲ್ಲ. ಸಂಪದ್ಭರಿತವಾದ ಅನೇಕ ದೇಶಗಳು, ಒಂದಿಲ್ಲೊಂದು ಬಗೆಯ ತಪಸ್ಸಿನ ಬಲದಿಂದಲೇ ವೈಭವಶಾಲಿಗಳಾಗಿವೆ. ತಪಸ್ಸಿನ ಪುಣ್ಯಬಲ ಇರುವತನಕ ಸುಖವನ್ನು ಅನುಭವಿಸುತ್ತಾರೆ. ಆ ಬಲವು ಕ್ಷೀಣಗೊಂಡಾಗ ಅಧಃಪತನವಾಗಿ ರಸಾತಳಕ್ಕೆ ಬೀಳುತ್ತಾರೆ. ಭಾರತದ ಇಂದಿನ ಸ್ಥಿತಿ ಇದೇ ಆಗಿದೆ.

ಒಂದು ಕಾಲದಲ್ಲಿ ವೈಭವದ ಉತ್ತುಂಗ ಶಿಖರದಲ್ಲಿದ್ದ ಈ ದೇಶ ಇಂದು ದುಃಖ ದೈನ್ಯದ ಕಂದಕದಲ್ಲಿ ನರಳುತ್ತಿದೆ. ಆದರೆ ಈಗಲೂ ಅದು ತಪಸ್ಸಿನ ಹಿರಿಮೆಯನ್ನು ಅರಿತುಕೊಂಡಿಲ್ಲ. ಸಮಾಜದಲ್ಲಿನ ಯಾವುದೇ ಮಟ್ಟದ, ಯಾವುದೇ ವ್ಯವಸಾಯದ ವಿದ್ಯಾವಂತರು ಅವಿದ್ಯಾವಂತರು ಯಾರಿಗೂ ತಪಸ್ಸು ಅಂದರೆ ಪರಿಶ್ರಮ ಬೇಡವಾಗಿದೆ. ವೇತನ ವೃದ್ಧಿಗಾಗಿ ಹೋರಾಟ ಮಾಡುತ್ತಾರೆ. ಆದರೆ ಕಾರ್ಯ ಕೌಶಲ, ಜ್ಞಾನ, ಗುಣಮಟ್ಟ ಹೆಚ್ಚಬೇಕೆಂದು ಮಾತ್ರ ಯಾರಿಗೂ ಕಳಕಳಿ ಇರುವುದಿಲ್ಲ. "ಕುತಃ ವಿದ್ಯಾರ್ಥಿನಃ ಸುಖಂ ?" – ವಿದ್ಯಾರ್ಥಿಯಾದವನಿಗೆ ಸುಖವೆಲ್ಲಿಯದು ? ವಿದ್ಯಾರ್ಥಿಯಾದವನು ಎಲ್ಲ ಸುಖಗಳಿಂದ ದೂರನಾಗಿ ಕಠಿಣತರವಾದ ಶ್ರಮದಿಂದ ವಿದ್ಯೆಯನ್ನು ಸಂಪಾದಿಸಬೇಕಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಇಂದು ವಿದ್ಯಾರ್ಥಿಗಳ ಜೀವನದಲ್ಲಿ ತಪಸ್ಸಿನ ಅಂಶವಾದರೂ ಎಲ್ಲಿದೆ? ಅವರ ಆಹಾರ-ವಿಹಾರ, ನಿದ್ರೆ, ಅವರ ವ್ಯಸನಗಳು, ಮನೋರಂಜನೆ ಇವೆಲ್ಲಾ ನೋಡಿದಾಗ ವಿದ್ಯಾರ್ಥಿಯೆಂಬ ಹೆಸರು ಅವರಿಗೆ ಶೋಭಿಸುವುದಿಲ್ಲ. ಈಗಿನ ವಿದ್ಯಾರ್ಥಿಗಳು ಶೋಕೀಲಾಲರಾಗಿದ್ದಾರೆ.

ಪ್ರತಿಯೊಂದು ಊರಿನಲ್ಲಿ ವಿಭಿನ್ನ ವಿಷಯಗಳ ಮೇಲೆ ಬೇಕಾದಷ್ಟು ಪುಸ್ತಕಗಳಿರುವ ವಾಚನಾಲಯಗಳಿವೆಯೇ ? ಆ ವಾಚನಾಲಯಗಳಲ್ಲಿ ಗಂಟೆಗಟ್ಟಲೆ ಕುಳಿತು ಅಧ್ಯಯನ ಮಾಡುವ ವಿದ್ವಾಂಸರು ಕಾಣುತ್ತಾರೆಯೇ ? ಪ್ರಯೋಗಶಾಲೆಗಳಲ್ಲಿ, ಸಾಹಿತ್ಯದಲ್ಲಿ, ಕಲಾ ಕೇಂದ್ರಗಳಲ್ಲಿ ಎಲ್ಲಿಯೂ ಇಂದು ಹಸಿವು ಬಾಯಾರಿಕೆಗಳನ್ನು ಮರೆತು ಮನಃಪೂರ್ವಕವಾಗಿ ಕೆಲಸ ಮಾಡಬಲ್ಲ ಜನರು ಸಿಗುವುದಿಲ್ಲ. 'ತಪ' ಎಲ್ಲಿ ಇಲ್ಲವೋ ಅಲ್ಲಿ ಅದರ ವಿರುದ್ಧ ಅಂದರೆ 'ಪತ'(ನ) ಪ್ರಾರಂಭವಾಗುತ್ತದೆ. ವಿದ್ಯಾರ್ಥಿಗಳೇ ತಪಸ್ಸಿನಿಂದ ದೂರ ಸರಿದಾಗ ಬೇರೆಯವರ ಮಾತೇನು. ಆದ್ದರಿಂದಲೇ ಇಂದು ಎಲ್ಲೆಲ್ಲೂ ದಾರಿದ್ರ್ಯ ಪಸರಿಸಿದೆ.

ಎನ್ನ ಕುಲದವರಿಲ್ಲ, ಎನಗೊಬ್ಬ ಹಿತರಿಲ್ಲ, ಮನ್ನಿಸುವ ದೊರೆಯಿಲ್ಲ,
ಮನಕೆ ಜಯವಿಲ್ಲ, ಹೊನ್ನು ಚಿನ್ನಗಳಿಲ್ಲ, ಇನ್ನಿಲ್ಲಿ ತರವಲ್ಲ ....

ದೇಶ ಪರಿಚಯವಿಲ್ಲ, ದೇಹದೊಳು ಬಲವಿಲ್ಲ, ಬೇಸರ ಕಳೆವರಿಲ್ಲ ....
ಕರೆದುಕೊಡುವವರಿಲ್ಲ, ಕರುಣೆ ತೋರುವರಿಲ್ಲ ಕಮಲಾಕ್ಷನಲ್ಲದೇ
ಬೇರೆ ಗತಿಯಿಲ್ಲ

ಎಂಬ ದೈನ್ಯಭಾವವೇ ತುಂಬಿದೆ.

ಅನ್ನಕಿಲ್ಲವು ಎಂದು ಅತಿದೈನ್ಯ ಪಡಲೇನು !
ತನ್ನ ಶಿರ ಅಡಿ ಮಾಡಿ ತಪವ ಮಾಡಿದರೇನು !
ಮನ್ನಣೆಯ ಸೌಭಾಗ್ಯ ಬಯಸಲೇನು ! ತಾ ಪಡೆದು
ಬಂದದಕುಪಾಯವೇನು ! ಕೋಪದಲ್ಲಿ ಶ್ರೀಪತಿಯು ಶಪಿಸಿದರೇನು !

ಎಂದು ಹಗಲಿರುಳು ಪರಿತಪಿಸುವುದೇ ಜೀವನವಾಗಿದೆ.

೫

ತಪಸ್ಸು ಮಾಡುವುದಕ್ಕಾಗಿ ಮಾನವನಿಗೆ ಉನ್ನತ ಧ್ಯೇಯವಿರಬೇಕು. ಆ ಧ್ಯೇಯದ ಉನ್ನತ ಕಲ್ಪನೆಯು ಸ್ಪಷ್ಟವಾಗಿ ಚಿತ್ತದಲ್ಲಿ ಅರಿವಾಗಬೇಕು. ಆ ಅರಿವನ್ನು ಮೂಡಿಸಲು ಗುರುಜನರ ಮಾರ್ಗದರ್ಶನ ಅವಶ್ಯವಾಗಿದೆ. ತಪಸ್ಸನ್ನು ಸಾಧಿಸಲು ದೃಢನಿರ್ಧಾರ ಬೇಕು. ಅದಕ್ಕಾಗಿ ಮೊದಲು ಮಾನಸಿಕ ಮತ್ತು ಶಾರೀರಿಕ ಶಕ್ತಿಯನ್ನು ಹೊಂದಿಸಿಕೊಳ್ಳಬೇಕಾಗುತ್ತದೆ.

ಅಂದರೆ ಶ್ರಮವಹಿಸಿ ಕೆಲಸ ಮಾಡುವಾಗಲೂ ಒಂದು ರೀತಿಯ ಆನಂದ ದೊರೆಯುತ್ತದೆ. ಒಮ್ಮೆ ಒಬ್ಬ ಧನಿಕ ತನ್ನ ರೈತ ಮಿತ್ರನ ಮನೆಗೆ ಹೋದ. ಆತನ ಮನೆಯಲ್ಲಿ ಎಂಟು ದಿನ ಇದ್ದ. ಪ್ರತಿದಿನ ಅವನ ಜೊತೆ ಹೊಲದಲ್ಲಿ ಕೆಲಸ ಮಾಡಲು ಹೋಗುತ್ತಿದ್ದ. ಎಂಟು ದಿನಗಳು ಕಳೆದ ಮೇಲೆ ಅವನಿಗೆ ತನ್ನ ಈವರೆಗಿನ ಜೀವನ ವ್ಯರ್ಥವಾಗಿ ಕಳೆಯಿತೆಂದು ಪಶ್ಚಾತ್ತಾಪವಾಯಿತು. "ಗೆಳೆಯಾ, ಇದುವರೆಗೆ ನಾನು ರುಚಿಕರವಾದ ಊಟ ಮಾಡುವುದು, ಸುಖಾಸನದಲ್ಲಿ ಹೊರಳಾಡುವುದು ಇದನ್ನೇ ಸುಖವೆಂದು ಭಾವಿಸಿದ್ದೆ, ಆದರೆ ಬೆವರುಸುರಿಸಿ ದುಡಿಯುವುದರಲ್ಲಿ ಸಿಗುವ ಸುಖ ಅಮೂಲ್ಯವಾದದ್ದೆಂದು ನನಗಿಂದು ಅನಿಸಿತು" ಎಂದ.

ಈ ಅಮೂಲ್ಯ ಸುಖದ ಸವಿ ಸಮಾಜಕ್ಕೆ ಹತ್ತಿದಾಗ, ಇದರ ಶ್ರೇಷ್ಠತೆ ತಿಳಿದಾಗ ನಾಲ್ಕೂ ಕಡೆ ತಪಸ್ಸಿನ ವಾತಾವರಣ ನಿರ್ಮಾಣ ವಾಗುತ್ತದೆ. ಸಂಪೂರ್ಣ ರಾಷ್ಟ್ರವು ಅಭಿವೃದ್ಧಿ ಹೊಂದುತ್ತದೆ. ತಪಸ್ಸಿನಿಂದ ಧ್ರುವನಿಗೆ ಶಾಶ್ವತ ಪದವಿ ಸಿಕ್ಕಿತು. ವಿಶ್ವಾಮಿತ್ರನಿಗೆ ಪ್ರತಿಸೃಷ್ಟಿ ಮಾಡುವ ಯೋಗ್ಯತೆ ಲಭಿಸಿತು. ವಿಂಧ್ಯಪರ್ವತವನ್ನು ಅಡ್ಡಹಾಕಿ ಸಮುದ್ರವನ್ನು ಆಪೋಶನ ಮಾಡಲು ಅಗಸ್ತ್ಯಮುನಿಗೆ ತಪಸ್ಸಿನಿಂದಲೇ ಸಾಧ್ಯವಾಯಿತು.

ತಪಸ್ಸಿನಿಂದ ಭಗವಂತನೇ ಪ್ರತ್ಯಕ್ಷನಾಗುವಾಗ, ಐಹಿಕ ಸುಖ ಸಂಪತ್ತುಗಳು ದೊರೆಯುವುದು ಅಸಾಧ್ಯವೇ ? ಅಸಾಧ್ಯವಾದದ್ದು ತಪಸ್ಸಿನಿಂದ ಸಾಧ್ಯವಾಗುತ್ತದೆ. ಅಲಭ್ಯವಾದದ್ದು ಲಭ್ಯವಾಗುತ್ತದೆ.

ಇಂದು ನಮಗೆ ಅನೇಕ ಸಾಧನ ಸಾಮಗ್ರಿಗಳ ಆವಶ್ಯಕತೆ ಇದೆ. ಅದಕ್ಕಾಗಿ ಆಸೆಪಟ್ಟು ಬೇರೆಯವರ ಕಡೆ ನೋಡುತ್ತಾ ದೈನ್ಯದಿಂದ "ನನಗೆ ಬೇಕು, ನನಗೆ ಕೊಡಿ" ಎಂದು ಭಿಕ್ಷೆ ಬೇಡುತ್ತೇವೆ. ಆದಕ್ಕಾಗಿ ತಪಸ್ಸು ಮಾಡಬೇಕಾಗುತ್ತದೆ. ತಪಸ್ಸು ಮಾಡುವವನೇ ಉತ್ಕರ್ಷವನ್ನು ಮತ್ತು ಶ್ರೇಯಸ್ಸನ್ನು ಪಡೆಯುತ್ತಾನೆ.

೧

"ಅರೆ, ನಿನ್ನಿಂದ ಈ ಕೆಲಸ ಆಗುವುದಿಲ್ಲ. ನಿನ್ನಲ್ಲಿ ಅಷ್ಟು ದಮ್ ಎಲ್ಲಿದೆ!" ದಮೆ – ಈ ಶಬ್ದದ ಉಪಯೋಗವನ್ನು ನಾವು ಈ ರೀತಿ ಮಾಡುತ್ತಿರುತ್ತೇವೆ! ಅತಿಪರಿಚಯದಿಂದ ಈ ಶಬ್ದದ ಅರ್ಥಗಾಂಭೀರ್ಯ ನಮ್ಮ ಗಮನಕ್ಕೆ ಬರುವುದಿಲ್ಲ.

ಆದರೆ ಯಾವುದೇ ಕೆಲಸ ಮಾಡಬೇಕಾದರೂ ಮನುಷ್ಯನಲ್ಲಿ ದಮೆ ಇರಬೇಕಾಗುತ್ತದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ದಮೆ ಎಂದರೆ ಶಕ್ತಿ, ದಮೆ ಎಂದರೆ ಸಾಮರ್ಥ್ಯ, ದಮೆ ಎಂದರೆ ಚೈತನ್ಯ, ದಮೆ ಎಂದರೆ ಮಾನವತೆ, ಮತ್ತು ದಮೆ ಎಂದರೆ ಅದಮ್ಯ ಕಾರ್ಯಶಕ್ತಿ.

ಇಂಥ ಈ ಅದ್ಭುತವಾದ ದಮೆ ನಮ್ಮ ಕೈವಶವಾದರೆ ನಾವು ಎಲ್ಲವನ್ನೂ ಸಾಧಿಸಿದಂತೆ. ಮಹಾಭಾರತದ ಶಾಂತಿಪರ್ವದಲ್ಲಿ ಧರ್ಮರಾಯ ಪಿತಾಮಹ ಭೀಷ್ಮರನ್ನು ಕೇಳುತ್ತಾನೆ: "ಅನೇಕ ಶಾಖೆಗಳಿಂದ ಕೂಡಿದ ಈ ಧರ್ಮವೃಕ್ಷದ ಮೂಲಬೇರು ಯಾವುದು?" ಅದಕ್ಕೆ ಪಿತಾಮಹ ಭೀಷ್ಮರು ಉತ್ತರಿಸುತ್ತಾರೆ–"ಅಯ್ಯಾ, ದಮೆಯೇ ಎಲ್ಲ ಧರ್ಮಗಳಿಗೆ ಆಧಾರವಾಗಿದೆ, ದಮೆಯೇ ಮೋಕ್ಷವಾಗಿದೆ. ದಾನ, ಯಜ್ಞ, ಅಧ್ಯಯನದಂತೆ ದಮೆಯು ಮಹತ್ವದ್ದು. ದಮೆಯಿಂದಲೇ ಮನುಷ್ಯನು ತೇಜಸ್ವಿಯೂ, ಪಾಪಮುಕ್ತನೂ ಆಗಿ ಪರಬ್ರಹ್ಮನ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ. ದಮೆಯಂಥ ಧರ್ಮ ಬೇರೊಂದಿಲ್ಲ. ಇಹಪರದಲ್ಲಿ ಅದು ಸೌಖ್ಯಕಾರಿ. ದಮೆಯುಳ್ಳ ಪುರುಷನು ಸುಖದಿಂದ ನಿದ್ರಿಸುತ್ತಾನೆ, ಮತ್ತು ಸುಖವಾಗಿ ಎಚ್ಚೆತ್ತುಕೊಳ್ಳುತ್ತಾನೆ. ಅವನ ಪ್ರತಿಯೊಂದು ವ್ಯವಹಾರವೂ

ಶಾಂತಿಯಿಂದ ಪೂರ್ಣಗೊಳ್ಳುತ್ತದೆ. ಅವನು ಪ್ರಸನ್ನಚಿತ್ತನಾಗಿರುತ್ತಾನೆ. ದಮೆಯಿಲ್ಲದವನು ಮೇಲಿಂದ ಮೇಲೆ ಅನೇಕ ಬಗೆಯ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

ದಮೆ ಎಂದರೆ ಇಂದ್ರಿಯ ದಮನ, ಇಂದ್ರಿಯಗಳನ್ನು ವಶದಲ್ಲಿ ಇಟ್ಟುಕೊಳ್ಳುವುದು. ಈ ವ್ಯಾಖ್ಯೆ ಕೇಳಿದ ಕೂಡಲೇ, 'ಇದು ಸಾಧು ಸಂತರ, ಸಂನ್ಯಾಸಿಗಳ, ಪರಮಾರ್ಥ ಮೋಕ್ಷ ಎಂದು ಸದಾ ಹೇಳುವ ದಾರಿಹೋಕರ ಸುದ್ದಿ, ನಮಗೆ ಸಂಬಂಧವಿಲ್ಲ. ನಾವು ಸಾಮಾನ್ಯ ಜನ. ನಮಗೆ ತಿಂದುಂಡು, ಆಸ್ತಿ-ಪಾಸ್ತಿ ಸಂಪಾದಿಸಿ ಹಾಯಾಗಿ ಜೀವನ ಮಾಡುವುದಿದೆ. ಈ ಇಂದ್ರಿಯನಿಗ್ರಹ ಸಂಯಮ ಇತ್ಯಾದಿಗಳ ಗೊಡವೆ ನಮಗೆ ಬೇಡ' ಎಂದು ಸಾಧಾರಣವಾಗಿ ಎಲ್ಲರೂ ಯೋಚಿಸುತ್ತಾರೆ. ಆದರೆ ಇದು ತಪ್ಪು ಕಲ್ಪನೆಯಾಗಿದೆ. ಶ್ರೇಷ್ಠವಾದದ್ದನ್ನು ಸಾಧಿಸಬೇಕೆಂದಿದ್ದರೆ ದಮೆ ಗುಣವು ಅಗತ್ಯವಾಗಿ ಬೇಕು. ಒಬ್ಬ ವ್ಯಕ್ತಿ ಮನೆ ಕಟ್ಟಬೇಕೆಂದು ನಿಶ್ಚಯಮಾಡಿದಾಗ ಅದಕ್ಕಾಗಿ ಮೊದಲು ಹಣದ ವ್ಯವಸ್ಥೆ ಮಾಡಿಕೊಳ್ಳು ತ್ತಾನೆ. ಹೆಚ್ಚಿನ ಖರ್ಚುಗಳಿಗೆ ಕತ್ತರಿ ತೋರಿಸುತ್ತಾನೆ. ಧನಸಂಗ್ರಹ ಮಾಡುತ್ತಾನೆ. ಈ ರೀತಿ ಅವಶ್ಯವಾದ ಮುಖ್ಯ ಕೆಲಸಕ್ಕೆ ಶಕ್ತಿಯನ್ನು ಸಂಚಯ ಮಾಡುವುದೇ ದಮೆ.

ಸ್ವೈರವಾಗಿ ಹರಿಯುವ ನದಿಯನ್ನು ಒಬ್ಬ ಕುಶಲ ತಾಂತ್ರಿಕನು ಅಡ್ಡಗಟ್ಟಿ, ಅದನ್ನು ಒಂದು ದಿಕ್ಕಿನಲ್ಲಿ ಹರಿಯುವಂತೆ ಮಾಡಿ. ಅದರಿಂದ ನೀರಿನ ದೊಡ್ಡ ಧಾರೆಯನ್ನು ಕೆಳಕ್ಕೆ ಧುಮುಕುವಂತೆ ಯೋಜನೆ ಮಾಡಿ ಅದರಿಂದ ವಿದ್ಯುತ್ತನ್ನು ಪಡೆದು, ದೂರದೂರದವರೆಗೆ ಪ್ರಕಾಶವನ್ನೂ ಶಕ್ತಿಯನ್ನೂ ಕೊಟ್ಟು ಉಪಕರಿಸುತ್ತಾನೆ. ವಿದ್ಯುತ್ತಿನಿಂದಾಗಿ ಆ ಪ್ರದೇಶ ದಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳು ಹುಟ್ಟಿಕೊಳ್ಳುತ್ತವೆ. ಔದ್ಯೋಗಿಕ ಪ್ರಗತಿಯು ಉಂಟಾಗುತ್ತದೆ. ಅನೇಕ ಜನರಿಗೆ ಉದ್ಯೋಗಾವಕಾಶಗಳು ಸಿಕ್ಕುತ್ತವೆ. ಈ ರೀತಿಯಿಂದ ಸಮಗ್ರ ದೇಶದ ಚಿತ್ರವೇ ಬದಲಾಗುತ್ತದೆ. ದುಂದುಗಾರನ ಹಣದಂತೆ ಅತ್ತಿತ್ತ ಪೋಲಾಗುತ್ತಿರುವ ಜಲಶಕ್ತಿಯನ್ನು ಬಳಸಿ ಅದರಿಂದ ಅನೇಕ ಪ್ರಯೋಜನಗಳನ್ನು ಪಡೆಯಲಾಗುತ್ತದೆ.

ದಮೆಯು ಜಲವಿದ್ಯುತ್ ಯೋಜನೆಯಂತೆ ಶಕ್ತಿಯ ಸಂಚಯನದ ಉದಾಹರಣೆಯಾಗಿದೆ.

ಇತಿಹಾಸದ ಪುಟಗಳಲ್ಲಿ ನಮಗೆ ದಮೆಯ ನಿರೂಪಣೆ ಅಲ್ಲಲ್ಲಿ ಸಿಗುತ್ತದೆ. ಶಿವಾಜಿಯು ಛತ್ರಪತಿ ಎನಿಸಿಕೊಳ್ಳುವುದಕ್ಕೆ ಮೊದಲು ಪುಣೆಯ ಸುತ್ತಮುತ್ತ ಅನೇಕ ಸರದಾರ, ಸಾಮಂತ ರಾಜರಿದ್ದರು. ಅವರಲ್ಲಿ ಸ್ವಲ್ಪಮಟ್ಟಿಗೆ ಸೈನ್ಯವೂ ಇದ್ದಿತು. ಹಾಗೂ ಅವರೆಲ್ಲ ಸಾಹಸಿಗಳು, ಯುದ್ಧ ಕುಶಲಿಗಳು, ರಾಜನೈತಿಕರು ಆಗಿದ್ದರು. ಆದರೆ ಅವರಲ್ಲಿ ಪರಸ್ಪರ ಒಡಕು, ಭಿನ್ನಾಭಿಪ್ರಾಯಗಳಿದ್ದವು. ಶಿವಾಜಿಯು ಅವರನ್ನೆಲ್ಲ ಸಂಘಟಿಸಿ, ಸ್ವರಾಜ್ಯವನ್ನು ಸ್ಥಾಪಿಸಿದ. ಎರಡನೇ ಬಾಜಿರಾಯನೂ ಇದೇ ರೀತಿ ಐಕ್ಯತೆಯಿಂದ ಸ್ವರಾಜ್ಯವನ್ನು ಬಲಗೊಳಿಸಿದ. ಮರಾಠರ ಕುದುರೆಗಳು ಯಮುನಾನದಿಯ ನೀರನ್ನು ಕುಡಿಯುವಂತೆ ಉತ್ತರಕ್ಕೆ ಕಾಲಿಟ್ಟ. ಇತಿಹಾಸದಲ್ಲಿ ಉನ್ನತಿಯ ಸುವರ್ಣ ಪುಟಗಳ ಹಿಂದೆ ದಮೆಯ ಪಾತವಿದೆ. ಸಮಾಜದಲ್ಲಿ ದಮೆ ನಿರ್ಮಾಣಗೊಳ್ಳದೆ ಅದು ವೈಭವಸಂಪನ್ನ ವಾಗುವುದಿಲ್ಲ.

ಬೇಟೆಗಾರನು ಬೇಟೆಗೆ ಹೋದಾಗ ಆಯಕಟ್ಟಿನ ಸ್ಥಳವನ್ನು ನೋಡಿ ಬಂದೂಕನ್ನು ಗುರಿ ಇಟ್ಟು ಕುಳಿತುಕೊಳ್ಳುತ್ತಾನೆ. ಆ ಸಮಯದಲ್ಲಿ ಹಸಿವೆ ಬಾಯಾರಿಕೆ ಮರೆತು, ಗಂಭೀರವಾಗಿ ಮೌನಿಯಾಗಿ ಶರೀರದ ಶಕ್ತಿಯನ್ನೆಲ್ಲ ಕಣ್ಣಿನಲ್ಲಿ ಕೇಂದ್ರೀಕರಿಸುತ್ತಾನೆ. ಒಂದು ಕಣ್ಣನ್ನು ಮುಚ್ಚಿಕೊಂಡು, ದೃಷ್ಟಿಯನ್ನು ಬಂದೂಕಿನ ನಳಿಗೆಯ ಮೇಲೆ ಮತ್ತು ಬೇಟೆಯ ಮೇಲೆ ಇಟ್ಟು, ಶ್ವಾಸವನ್ನು ಬಿಗಿಹಿಡಿಯುತ್ತಾನೆ. ಕ್ಷಣಮಾತ್ರದಲ್ಲಿ ಗುಂಡು ಹಾರುತ್ತದೆ. ಆ ಕ್ರೂರ ಪ್ರಾಣಿ ನೆಲದ ಮೇಲೆ ಬಿದ್ದು ಹೊರಳಾಡು ತ್ತದೆ. ಅಧ್ಯಾತ್ಮಮಾರ್ಗದಲ್ಲಿನ ಕಾಮ, ಕ್ರೋಧ, ಲೋಭ ಮೊದಲಾದ ಹಿಂಸಕ ಪ್ರಾಣಿಗಳನ್ನು ಬೇಟೆಯಾಡುವುದಿದ್ದರೂ ನಮಗೆ ದಮೆಯನ್ನು ಅವಲಂಬಿಸಬೇಕಾಗುತ್ತದೆ. ತಿನ್ನುವ ಕುಡಿಯುವ ಆನಂದವೂ ದಮೆ ಯಿಂದಲೇ ಲಭಿಸುತ್ತದೆ. ಉದಾಹರಣೆಗೆ ಒಬ್ಬ ಮನುಷ್ಯ ಬೆಳಗ್ಗಿಯಿಂದ ಆಗಾಗ ಏನಾದರೂ ತಿನ್ನುತ್ತಲೇ ಇರುತ್ತಾನೆ. ಊಟದ ಸಮಯದಲ್ಲಿ ಅವನ ಮುಂದೆ ಪಕ್ವಾನ್ನಗಳು, ವಿವಿಧ ಭಕ್ಷಗಳು ಇದ್ದರೂ ಆಗ ಅವನಿಗೆ

ಅದನ್ನು ತಿನ್ನಲೂ ಆಗುವುದಿಲ್ಲ, ತಿಂದರೂ ಅದರ ಸವಿಯನ್ನು ಅನುಭವಿಸಲೂ ಸಾಧ್ಯವಿಲ್ಲ. ಆದರೆ ಬೆಳಿಗ್ಗೆಯಿಂದ ಹಸಿದು ಹೊಲದಲ್ಲಿ ಮೈ ಮುರಿದು ದುಡಿದ ಒಬ್ಬ ರೈತ, ರೊಟ್ಟಿ-ಖಾರ, ಹೆಚ್ಚೆಂದರೆ ಒಂದು ಈರುಳ್ಳಿ ತಿನ್ನುವಾಗ ಅಮೃತಾನ್ನವನ್ನೇ ತಿನ್ನುತ್ತಿರುವಂತೆ ಅವನ ಭಾವವಿರುತ್ತದೆ. ಇದು ಕೂಡಾ ದಮೆಯೇ. ದಮೆಯಿಂದಲೇ ಅವನಿಗೆ ಊಟದ ಸ್ವಾದವನ್ನು ಸವಿಯಲು ಸಾಧ್ಯವಾಯಿತು.

ವ್ಯಕ್ತಿ ಇರಲಿ, ಸಮಾಜವೇ ಇರಲಿ, ಶಾರೀರಿಕ, ಲೌಕಿಕ, ಸಾಮಾಜಿಕ, ರಾಷ್ಟ್ರೀಯ ಪ್ರಗತಿ ಸಾಧಿಸುವುದಿದ್ದರೆ, ಸುಖವನ್ನು ಬಯಸಿದರೆ ದಮೆಯನ್ನು ಸಂಪಾದಿಸುವುದು ಅವಶ್ಯ.

೨

ಆದರೆ ಇಂದು ಎಲ್ಲ ಕಡೆ ದಮೆಯ ಅಭಾವವೇ ಕಂಡುಬರುತ್ತಿದೆ. ವ್ಯಕ್ತಿಸ್ವಾತಂತ್ರ್ಯದ ಹೆಸರಿನಲ್ಲಿ, ಇರುವಷ್ಟನ್ನು ಕಿತ್ತು ಎಸೆಯಲಾಗಿದೆ. ವ್ಯಕ್ತಿಗತ ಸಂಗತಿಗಳಿಂದ ಹಿಡಿದು ರಾಷ್ಟ್ರೀಯತೆಯ ವರೆಗೆ, ಯಾವುದೇ ಕೆಲಸದಲ್ಲಿ ನೋಡಿದರೂ ಸ್ವಚ್ಛಂದವೃತ್ತಿ ತಾನೇ ತಾನಾಗಿದೆ.

ಯಾವುದೇ ಕಾರ್ಯಕ್ರಮವಿರಲಿ ನಿಶ್ಚಿತ ಸಮಯಕ್ಕೆ ಕೆಲವೇ ಜನ ಬಂದಿರುತ್ತಾರೆ. ಗಂಟೆ, ಅರ್ಧಗಂಟೆ ತಡವಾಗಿ ಬರುವುದರಲ್ಲೇ ದೊಡ್ಡಸ್ತಿಕೆ ಯೆಂದು ತಿಳಿಯುತ್ತಾರೆ ! ಕೆಲವು ದಿನಗಳ ಹಿಂದೆ ಇಂಗ್ಲಿಷ್ ಮಾಸಪತ್ರಿಕೆ ಯೊಂದರಲ್ಲಿ ಒಂದು ಚುಟುಕ ಪ್ರಕಟವಾಗಿತ್ತು – ಆಸ್ಟ್ರೇಲಿಯಾದ ವಿಮಾನ ನಿಲ್ದಾಣದಲ್ಲಿ ಒಬ್ಬ ಬ್ರಿಟಿಷರವನು ಅವಸರದಿಂದ ಬಂದು ವಿಮಾನ ಹತ್ತಿ ಕುಳಿತುಕೊಂಡ. ವಿಮಾನ ಹಾರತೊಡಗಿತು. ಆ ವ್ಯಕ್ತಿ ತನ್ನ ಜೇಬನ್ನು ಮುಟ್ಟಿ, ಹುಡುಕುವವನಂತೆ ಏನನ್ನೋ ಮರೆತವನಂತೆ ಕಂಡ. ಪಕ್ಕದ ಪ್ರಯಾಣಿಕ, “ಏನು ಮರೆತಿದ್ದೀರಿ ?” ಎಂದು ಕೇಳಿದ. ಅದಕ್ಕೆ ಆ ಇಂಗ್ಲಿಷ್ ಪ್ರವಾಸಿಯು – “ಹೌದು, ಅವಸರದಲ್ಲಿ ನನ್ನ ಗಡಿಯಾರ ಮರೆತು ಬಂದೆ” ಎಂದ. “ಹಾಗೇನು ? ನೀವು ಎಲ್ಲಿಗೆ ಹೊರಟಿದ್ದೀರಿ ?” ಅಂದಾಗ “ಭಾರತಕ್ಕೆ” ಎಂದು ಹೇಳಿದ. ಅದಕ್ಕೆ ಆ ಸಹ ಪ್ರಯಾಣಿಕ – “ಹಾಗಾದರೆ ಗಡಿಯಾರದ ಆವಶ್ಯಕತೆ ಇಲ್ಲ ಬಿಡಿ” ಎಂದ. ಇದು ನಮ್ಮವರ

ಸಮಯಪ್ರಜ್ಞೆಯ ನಿಷ್ಕಾಳಜಿಯು ವ್ಯಂಗ್ಯ. ಪ್ರತಿಯೊಬ್ಬನ ಕೈಯಲ್ಲಿ ಗಡಿಯಾರವಿದೆ. ಪ್ರತಿಯೊಂದು ಗೋಡೆಗೆ ಗಡಿಯಾರವಿದೆ. ಪ್ರತಿ ಗಂಟೆಗೊಮ್ಮೆ ಕೂಗಿ ಅದು ಹೇಳುತ್ತದೆ, ಇಷ್ಟು ಸಮಯವಾಯಿತೆಂದು. ಆದರೂ ಸಮಯಪಾಲನೆಗೆ ನಾವು ಬೆಲೆ ಕೊಡುವುದಿಲ್ಲ. ಕಾಲವನ್ನು ಈ ರೀತಿ ಉಪೇಕ್ಷೆಮಾಡುವ ಸಮಾಜಕ್ಕೆ ಕಾಲವು ಉಪೇಕ್ಷಿಸುತ್ತಿದೆ. ಕ್ಷಣಗಳನ್ನು ನಾಶಮಾಡುವುದೆಂದರೆ ದಮೆಯನ್ನು ನಾಶಮಾಡಿದಂತೆ. ಕ್ಷಣಕ್ಷಣಗಳನ್ನು ವ್ಯರ್ಥಗೊಳಿಸದೆ ದಮೆಯನ್ನು ಪಡೆದುಕೊಳ್ಳಬೇಕು.

೩

ಒಂದು ಕಡೆ ನಮ್ಮ ದೇಶದಲ್ಲಿ ಭೀಕರ ಅನ್ನಸಮಸ್ಯೆಯೆಂದು ಕೂಗುತ್ತೇವೆ. ಜಗತ್ತಿನ ತುಂಬಾ ಭಿಕ್ಷೆ ಬೇಡಿ ಧಾನ್ಯವನ್ನು ಪಡೆಯುತ್ತೇವೆ. ಇನ್ನೊಂದು ಕಡೆ ನಮ್ಮಲ್ಲಿ ಅಂಗಡಿಗಳಿಗಿಂತಲೂ ಉಪಾಹಾರಗೃಹಗಳು ಹೆಚ್ಚಾಗಿವೆ. ಏನು ತಿನ್ನಬೇಕು, ಎಷ್ಟು ತಿನ್ನಬೇಕು, ಹೇಗೆ ತಿನ್ನಬೇಕು, ಯಾವಾಗ ತಿನ್ನಬೇಕು, ಇದಕ್ಕೆ ಯಾವ ನಿಯಮವೂ ಇಲ್ಲ. ಉಪಾಹಾರಗೃಹದ ಮುಂದೆ ಹೋದ ಕೂಡಲೇ ಘಮ ಘಮ ವಾಸನೆ ಬಂದರೆ ಸಾಕು, ಒಳಹೊಗುವುದು! ಈಗ ತಿಂಡಿಯ ಆವಶ್ಯಕತೆ ಇದೆಯೆ ಇಲ್ಲವೇ, ಬೇಕೆ ಬೇಡವೇ ಎಂದು ಕ್ಷಣಕಾಲವೂ ಯೋಚಿಸುವುದಿಲ್ಲ. "ನೀವು ಬಹಳ ಹಳೆಯ ಕಾಲದವರಂತೆ ಕಾಣುತ್ತೀರಿ. ನಮ್ಮ ಧರ್ಮವೇನು ತಿಂದರೆ ಕುಡಿದರೆ ಹಾಳಾಗುವುದೇ ?" ಎಂದು ಯಾರಾದರೂ ಪ್ರಶ್ನಿಸಬಹುದು. ಇದರಲ್ಲಿ ಹಳೆಯಕಾಲ ಅಥವಾ ಆಧುನಿಕ ಕಾಲ ಎನ್ನುವ ಪ್ರಶ್ನೆ ಇಲ್ಲ. ನಮ್ಮ ರೂಢಿಗಳು, ನಿತ್ಯನಿಯಮಗಳು ಕ್ರಮ ತಪ್ಪುತ್ತವೆ. ರಬ್ಬರಿನ ಗಾಲಿಗೆ ಒಂದು ಚಿಕ್ಕ ರಂಧ್ರವಾದರೂ ಸಾಕು, ಅದರಲ್ಲಿನ ಗಾಳಿ ಹೋಗುತ್ತದೆ. ಹಾಗೆಯೇ ಈ ನಾಲಿಗೆಯ ಚಟ ಸಹ. ಬಹಳ ಕ್ಷುಲ್ಲಕ ಎಂದು ತೋರುವ ಈ ನಾಲಿಗೆಯಿಂದ ಕೆಟ್ಟ ಪರಿಣಾಮಗಳಾಗುತ್ತವೆ. ಆದರೆ ಇಂದು ಎಲ್ಲೆಲ್ಲೂ ಈ ನಾಲಿಗೆಯ ರುಚಿಯ ಕೌತುಕ ನಡೆದಿದೆ.

ಬಸ್ಸುಗಳು, ರೈಲುಗಳು, ಕಾಲೇಜುಗಳು ಹಾಗೆಯೇ ಇತರ ಸಾಮೂಹಿಕ ಸ್ಥಳಗಳಲ್ಲಿ ನಡೆಯುವ ಜನರ ಹರಟೆಯನ್ನು ಗಮನಿಸಿದಾಗ

ಅಲ್ಲಿ ಸ್ತ್ರೀಯರ ಬಗ್ಗೆ ಅವಹೇಳನಕರವಾದ ಚರ್ಚೆ ನಡೆದಿರುತ್ತದೆ. ಸಿನೆಮಾ ನಾಟಕಗಳಲ್ಲಿ ಹೆಣ್ಣನ್ನು ಕೆಟ್ಟದಾಗಿ ತೋರಿಸಲಾಗುತ್ತದೆ. ಅದೆಲ್ಲದರಿಂದ ಜನ ಆನಂದ ಪಡೆಯುತ್ತಾರೆ. ಈ ವಿಷಯವು ಅವರಿಗೆ ಪ್ರಿಯವಾಗಿರುತ್ತದೆ.

ಶೃಂಗಾರ, ಪ್ರಣಯ ಕಥೆ ಕಾದಂಬರಿಗಳನ್ನು ಬರೆಯುವುದರಲ್ಲಿ ತಮ್ಮ ಆಯುಸ್ಸನ್ನು ಬರಿದುಮಾಡಿಕೊಳ್ಳುವ ಲೇಖಕರು ನಮ್ಮ ಸಮಾಜದಲ್ಲಿದ್ದಾರೆ. "ನಿನ್ನ ಜೀವನದ ಧ್ಯೇಯವೇನು ?" ಎಂದು ನೀವು ಯುವಕನೊಬ್ಬನನ್ನು ಪ್ರಶ್ನಿಸಿ. ಆಗ "ಪ್ರೇಮವಿವಾಹ ಮಾಡಿಕೊಳ್ಳುವುದು" ಎಂದು ಉತ್ತರ ಬರುತ್ತದೆ. ಚಿಕ್ಕ ಮಕ್ಕಳಿಗೂ ಕೂಡ ಚಲನಚಿತ್ರ ಗೀತೆಗಳು, ಕಥೆಗಳು ಇಷ್ಟವಾಗುತ್ತವೆ. ಇಂಥ ವಿಕ್ಷಿಪ್ತ ವಾತಾವರಣದಿಂದ ಎಂಥ ಪೀಳಿಗೆ ನಿರ್ಮಾಣಗೊಳ್ಳಬಹುದು ? ನದಿಯ ಸತತ ಪ್ರವಾಹದಿಂದ ಆದರ ದಂಡೆಯು ಕೊರೆಯಲ್ಪಟ್ಟು ಕೆಳಗಿನಿಂದ ಪೊಳ್ಳಾಗುವಂತೆ ನಮ್ಮ ಸಮಾಜದ ಸ್ಥಿತಿಯೂ ಆಗಿದೆ. ಇನ್ನೊಬ್ಬರು ನಮ್ಮನ್ನು ಲಘುವಾಗಿ ಕಾಣುತ್ತಾರೆಂದು ಹೆದರಿ ನಾವು ನಮ್ಮ ನಿಯಮವನ್ನು ಬಿಟ್ಟುಕೊಟ್ಟಿದ್ದೇವೆ. ಆದರೆ ಹೊಸದನ್ನು ಅಂಗೀಕರಿಸಿಲ್ಲ.

ಒಬ್ಬ ಮೂರ್ಖ ಶ್ರೀಮಂತ ಹೊಗಳುಭಟರ ಮಾತಿಗೆ ಬಲಿಬಿದ್ದು, ಹಳೆಯ ಮನೆಯನ್ನು ಕೆಡವಿ ಹೊಸ ಮನೆಯ ನೀಲಿನಕಾಶೆಯನ್ನು ಹಿಡಿದು ಬಿಸಿಲು ಮಳೆಯಲ್ಲಿ ಅಲೆದ ಹಾಗೆ ಇಂದಿನ ನಮ್ಮ ಸಮಾಜದ ಸ್ಥಿತಿಯಾಗಿದೆ. ನಮ್ಮ ಜೀವನವು ಪಶುಗಳಂತೆ ಅನಿರ್ಬಂಧವಾಗಿದೆ. ಪಶುಗಳಂತೆ ಯಾವಾಗ ಬೇಕಾದರೂ ತಿನ್ನುವುದು, ಮಲಗುವುದು, ವ್ಯವಹರಿಸುವುದು ನಡೆದಿದೆ. ನಾಯಿ ಬೆಕ್ಕುಗಳಿಂದ ಹಿಡಿದು ಕುದುರೆ ಎತ್ತುಗಳವರೆಗೆ ಎಲ್ಲ ಪ್ರಾಣಿಗಳನ್ನು ಮನುಷ್ಯ ಗುಲಾಮನಾಗಿ ಮಾಡಿಕೊಂಡಿದ್ದಾನೆ. ಮಾನವ ಕೂಡಾ ಪಶುಗಳಂತೆ ವರ್ತಿಸಿದರೆ ಅವನೂ ಇನ್ನೊಬ್ಬರ ಗುಲಾಮನಾಗಬೇಕಾಗುತ್ತದೆ.

೪

ದಮೆ ಇಲ್ಲದ ಈ ಸ್ಥಿತಿ ಹೇಗೆ ಕೊನೆಗೊಂಡೀತು ? ನಮ್ಮ ಬಾಳಿನಲ್ಲಿ ದಮೆಗೆ ಹೇಗೆ ಸ್ಥಾನ ಸಿಕ್ಕೀತು ? "ನೀವು ಸ್ವೈರಾಚಾರಿಗಳಾಗಿದ್ದೀರಿ, ದ್ವಿಪಾದ

ಪಶುಗಳಾಗಿದ್ದೀರಿ" ಎಂದು ಬಯ್ಯುವುದರಿಂದ ಅಥವಾ "ದಮನ ಮಾಡಿರಿ, ದಮನ ಮಾಡಿರಿ" ಎಂದು ಘೋಷಿಸುವುದರಿಂದ ಸುಧಾರಣೆ ಆದೀತೆ? ಇಲ್ಲ. ಈ ಕೆಲಸ ಮಾಡುವ ವಿಧಾನವೇ ಬೇರೆ. ಒಬ್ಬ ಶಿಷ್ಯ ಧ್ಯಾನಮಾಡಲು ಕುಳಿತ. ಆಗ ಗುರು ಹೇಳಿದರು: "ಧ್ಯಾನ ಮಾಡುವಾಗ ನಿನ್ನ ಕಣ್ಣೆದುರು ಕೋತಿಯು ಚಿತ್ರ ಬರಬಾರದು." ಕೋತಿ ಬರಬಾರದೆಂಬ ಎಚ್ಚರಿಕೆಯಿಂದ ಶಿಷ್ಯ ಧ್ಯಾನಕ್ಕೆ ಕುಳಿತ. ಕಣ್ಣು ಮುಚ್ಚಿದ ಕೂಡಲೇ ಕೋತಿ ಪ್ರತ್ಯಕ್ಷ!

ಬೇಡವಾದದ್ದನ್ನು ಹೇಳಬಾರದು. ಬೇಕಾದ್ದನ್ನು ಕೂಗುವುದರಿಂದಲೂ ಕೆಟ್ಟ ಪರಿಣಾಮವಾಗಬಹುದು. ಸಭೆಯಲ್ಲಿ ಗಲಾಟೆ ಶುರು ಆದಾಗ ಎಲ್ಲರೂ –"ಶಾಂತರಾಗಿ ಶಾಂತರಾಗಿ" ಎಂದು ಕೂಗತೊಡಗುತ್ತಾರೆ. ಆಟದ ಬಯಲಿನಲ್ಲಿ ಒಬ್ಬ ಮೂರ್ಛೆ ತಪ್ಪಿದಾಗ ಎಲ್ಲರೂ "ನೀರು ತನ್ನಿ, ನೀರು ತನ್ನಿ, ದೂರ ಸರಿಯಿರಿ" ಎಂದು ಕೂಗುತ್ತಾರೆ. ತಮಾಷೆ ಅಂದರೆ ಯಾರೂ ದೂರ ಸರಿಯುವುದಿಲ್ಲ, ನೀರನ್ನೂ ತರುವುದಿಲ್ಲ.

ಸಮಾಜಕ್ಕೆ ಈ ಬಗೆಯು ರೂಢಿಯಾಗಿದೆ. ನಿಷೇಧ, ನಿಂದೆ ಇಲ್ಲವೆ ಘೋಷಣೆಗಳಿಂದ ಯಾವ ಪ್ರಯೋಜನವೂ ಇಲ್ಲ. ಬೇರೊಬ್ಬನಿಗೆ ಹೇಳುವುದರಿಂದ ಕೆಲಸವಾಗುವುದಿಲ್ಲ. ಅವರವರ ಪಾಲಿನ ಕರ್ತವ್ಯವನ್ನು ಅವರವರೇ ಮಾಡಬೇಕು.

೫

ದಮ ಪ್ರಾಪ್ತವಾಗಬೇಕಾದರೆ ಮನಸ್ಸನ್ನು ನಿಗ್ರಹಿಸಬೇಕು. ಮನೋನಿಗ್ರಹಕ್ಕೆ ಕೆಲವು ಮಾತುಗಳನ್ನು ಹೇಳಲಾಗಿದೆ.

(೧) ವ್ಯಕ್ತಿ ಇಲ್ಲವೇ ಸಮಾಜವು ಉಚ್ಚಧ್ಯೇಯವನ್ನು ಹೊಂದಿರಬೇಕು. ಶೈಕ್ಷಣಿಕ, ಸಾಮಾಜಿಕ ರಂಗಗಳಲ್ಲಿ ಸೇವೆ ಸಲ್ಲಿಸುವುದು, ರಾಷ್ಟ್ರೋನ್ನತಿ, ಪರಮಾತ್ಮ ಪ್ರಾಪ್ತಿ ಇಂಥ ಅನೇಕ ಶ್ರೇಷ್ಠ ಧ್ಯೇಯಗಳ ವಿಶಾಲ ಸರಣಿಯೇ ಇದೆ. ಧ್ಯೇಯ ಎಷ್ಟು ಉನ್ನತವಾದದ್ದೋ ದಮನ ಕ್ರಿಯೆಯೂ ಅಷ್ಟೇ ಸುಲಭ.

(೨) ಆ ಧ್ಯೇಯ ಪ್ರಾಪ್ತಿಗಾಗಿ ತೀವ್ರ ಹಂಬಲ ಮನದಲ್ಲಿರಬೇಕು. ಚಾತಕ ಪಕ್ಷಿ, ಕುಡಿದರೆ ಮೇಘದಿಂದ ಸುರಿಯುವ ನೀರನ್ನೇ ಕುಡಿದೇನು

ಎಂದು ನಿರ್ಧರಿಸುತ್ತದೆ. ಅದಕ್ಕೆ ಕೆರೆ ಬಾವಿಗಳ ನೀರು ಕಾಣುವುದಿಲ್ಲವೆ? ಆದರೆ ಅದು ತಿರುಗಿಯೂ ಅದರತ್ತ ನೋಡುವುದಿಲ್ಲ.

(೩) ಧ್ಯೇಯಪ್ರಾಪ್ತಿಯಿಂದ ಸಿಗುವ ಸುಖವು ಉನ್ನತವಾದದ್ದು. ಧ್ಯೇಯಮಾರ್ಗವನ್ನು ಕ್ರಮಿಸುವಾಗ, ನಾವು ಸಾಂಸಾರಿಕ ಸುಖವನ್ನು ಕಡೆಗಣಿಸಿ ಹುಚ್ಚು ಧ್ಯೇಯದ ಬೆನ್ನು ಹತ್ತಿದ್ದೇವೆಯೇ? – ಎಂಬ ಸಂಶಯ ಬೇಡ. ದೃಢವಿಶ್ವಾಸ ಬೇಕು – ಮಾನಸಿಕ ಸ್ಥೈರ್ಯ ಬೇಕು.

(೪) ಧ್ಯೇಯವನ್ನು ಕುರಿತು ಬರೀ ವಿಚಾರವಿಮರ್ಶೆ ಅಥವಾ ಚರ್ಚೆ ಬೇಡ. ಮನುಷ್ಯ ಮನಸ್ಸು ಮತ್ತು ಶರೀರಗಳನ್ನು ಯಾವಾಗಲೂ ಉದ್ಯೋಗದಲ್ಲಿ ತೊಡಗಿಸಬೇಕು. ಕೆಲಸವಿಲ್ಲದ ಶರೀರ ಮತ್ತು ಮನಸ್ಸುಗಳು ನಮ್ಮನ್ನು ರಾಕ್ಷಸನಂತೆ ನುಂಗಲು ಬರುತ್ತವೆ. ಒಳ್ಳೆಯ ಕೆಲಸಗಳಲ್ಲಿ ಯೋಜನಾಬದ್ಧವಾಗಿ ಮನಸ್ಸು ಮತ್ತು ಶರೀರವನ್ನು ತೊಡಗಿಸಬೇಕು.

(೫) ಈ ಜಗತ್ತಿನ ಎಲ್ಲ ಆಗುಹೋಗುಗಳಿಗೆ ಮೂಲಾಧಾರ ಭಗವಂತ ಎಂದು ತಿಳಿದು, ಅವನನ್ನು ಶರಣುಹೊಗಬೇಕು. ಯಾವುದೇ ರೂಪದಲ್ಲಾದರೂ ಆತನನ್ನು ಕಾಣಬೇಕು, ಯಾವುದೇ ಹೆಸರಿನಿಂದಲಾದರೂ ಅವನನ್ನು ಕೂಗಬೇಕು. "ದೇವಾ ಈ ದಶೇಂದ್ರಿಯಗಳನ್ನು ನಾನು ಗೆಲ್ಲುವಂತಾಗಲಿ. ಅವು ನನ್ನನ್ನು ಗೆಲ್ಲುವುದು ಬೇಡ" ಎಂದು ಪ್ರಾರ್ಥಿಸಬೇಕು.

(೬) ನಾಳೆಯ ಬಗ್ಗೆ ಯೋಚಿಸುವವನ ಹತ್ತಿರ ಹಣ ಸಂಗ್ರಹವಾಗುತ್ತದೆ. ಅದರಂತೆ ದಮೆಯೂ ಸಹ. ಪಾದವನ್ನಷ್ಟೇ ನೋಡುತ್ತಾ ನಡೆದರೆ ಸಾಲದು, ಸ್ವಲ್ಪ ದೂರದೃಷ್ಟಿಯೂ ಬೇಕಾಗುತ್ತದೆ. ಅಹಂಕಾರದಲ್ಲಿ ಮನುಷ್ಯ ತಾನು ಚಿರತರುಣನೆಂದೂ, ಅಮರನೆಂದೂ ತಿಳಿಯುತ್ತಾನೆ. ಆದರೆ ನಮ್ಮ ಸುತ್ತಮುತ್ತಲಿನ ಜಗತ್ತಿನ ಕಡೆ ಸ್ವಲ್ಪ ಕಣ್ಣು ತೆರೆದು ನೋಡಿದರೆ ಸಾಕು, ಈ ಭ್ರಮೆ ತೊಲಗುವುದು. ಕಪಿಲವಸ್ತುವಿನ ಸಿದ್ಧಾರ್ಥ ಅರಳುವ ಯೌವನದಲ್ಲೇ ಇದನ್ನು ತಿಳಿದುಕೊಂಡ. ರೋಗಿಯನ್ನು, ವೃದ್ಧನನ್ನು, ಹೆಣವನ್ನು ನೋಡಿ ಈ ಜಗತ್ತಿನ ನಶ್ವರತೆಯನ್ನು ಮನಗಂಡ.

ರಾಜಭೋಗ, ಪ್ರೀತಿಯ ಮಡದಿ, ಮುದ್ದಿನಮಗ ಎಲ್ಲವನ್ನೂ ತ್ಯಜಿಸಿದ. ಅದರಿಂದಲೇ ಗೌತಮಬುದ್ಧನಾದ. ದಮೆಯಿಂದಲೇ ವೈರಾಗ್ಯಭಾವ ಪ್ರಕಟವಾಗುವುದು.

(೭) ಮೋಹಕವಾಗಿ ಕಾಣುವ ಈ ಶರೀರವು ಮಾಂಸ ಮಲಿನಗಳ ಚೀಲವಾಗಿದೆ. ದೈಹಿಕವಾದ ಎಲ್ಲ ಸುಖಗಳೂ ವಾಸ್ತವದಲ್ಲಿ ದುಃಖ ರೂಪಗಳೇ. ಇಷ್ಟವಾದ ಒಂದು ಪದಾರ್ಥವನ್ನು ಅತಿಯಾಗಿ ತಿಂದರೆ ಅಸಹ್ಯ ಹುಟ್ಟುತ್ತದೆ. ಇನ್ನೂ ಹೆಚ್ಚಾಗಿ ತಿಂದರೆ ವಾಂತಿಯಾಗಬಹುದು, ಇಲ್ಲವೇ ಹೊಟ್ಟೆ ನೋವಾಗಬಹುದು, ಮರಣ ಸಂಭವಿಸಬಹುದು. ಇದೇ ರೀತಿ ಮಾನವಜೀವನದಲ್ಲಿ ತಿರಸ್ಕಾರ ಹುಟ್ಟಿದರೆ ಅದರಿಂದ ದಮೆಯ ನಿರ್ಮಾಣ ವಾಗುತ್ತದೆ.

(೮) ಮನುಷ್ಯ ಮಗುವಾಗಿದ್ದಾಗ ಕುದುರೆಯ ಹಿಂದೆ ಓಡುತ್ತಾನೆ. ಆಗ ಅವನಿಗೆ ಅದರಲ್ಲೇ ಆನಂದವೆನಿಸುತ್ತದೆ. ದೊಡ್ಡವನಾದ ಮೇಲೆ ಕುದುರೆ ಸವಾರಿ ಕಲಿಯುತ್ತಾನೆ. ಅದರ ಮೇಲೆ ಸವಾರಿ ಮಾಡುತ್ತಾನೆ. ವೇಗವಾಗಿ ಓಡಿಸುತ್ತಾನೆ. ಸನ್ನೆಯಿಂದಲೇ ಅದನ್ನು ಬೇಕಾದ ಕಡೆಗೆ ಒಯ್ಯುತ್ತಾನೆ. ಈ ಮೊದಲು ಕುದುರೆಯ ಹಿಂದೆ ಓಡುತ್ತಿದ್ದ ಆನಂದಕ್ಕಿಂತಲೂ, ಇದು ಎಷ್ಟೋ ಪಾಲು ಹೆಚ್ಚಿನ ಆನಂದ ಕೊಡುವಂಥದು ಎಂದು ಅವನು ಭಾವಿಸುತ್ತಾನೆ. ನಾನು ಇದನ್ನು ಕೈವಶ ಮಾಡಿಕೊಂಡಿದ್ದೇನೆ, ಇದಕ್ಕೆ ದಾಸನಾಗಿಲ್ಲ, ಇದರಂತೆ ನನ್ನ ಇಂದ್ರಿಯಗಳ ಮೇಲೆಯೂ ಅಧಿಕಾರ ಪಡೆಯುತ್ತೇನೆ. ಅದರ ವಶನಾಗುವುದಿಲ್ಲ, ಎನ್ನುವ ಅಜೇಯ ಪ್ರವೃತ್ತಿಯು ಬಹಳ ಸಹಾಯಕವಾಗಿದೆ.

೬

ಮನೆ ಮಠ, ಚಿನ್ನ ಬೆಳ್ಳಿ, ತೋಟ ಹೊಲ ಇವನ್ನೆಲ್ಲಾ ಸಂಪತ್ತೆಂದು ಭಾವಿಸಲಾಗುತ್ತದೆ. ಆದರೆ ನಿಜವಾದ ಸಂಪತ್ತು ಶಮೆ, ದಮೆ, ಶ್ರದ್ಧೆ, ತಿತಿಕ್ಷಾ, ಉಪರತಿ ಮತ್ತು ಸಮಾಧಾನ. ಇವುಗಳನ್ನು ಷಟ್ ಸಂಪತ್ತುಗಳೆಂದು ಕರೆಯಲಾಗುತ್ತದೆ. ಈ ಷಟ್ ಸಂಪತ್ತಿನಲ್ಲಿ ಸಮಯದ ಸ್ಥಾನ ಮಹತ್ವದ್ದು.

ಪ್ರಾಪಂಚಿಕವಿರಲಿ, ಪಾರಮಾರ್ಥಿಕವಾಗಿರಲಿ ಭಗವಂತನ ಸಾಕ್ಷಾತ್ಕಾರವಾಗಬೇಕಿದ್ದರೆ ಅದಕ್ಕಾಗಿ ನಮ್ಮ ಅಂತಶ್ಚಕ್ಷು ತೆರೆದಿರಬೇಕು. ಚಿತ್ತಶುದ್ಧಿಯಿರಬೇಕು. ನಾನಾ ವಿಷಯ ವಾಸನೆಗಳಿಂದ ಮನಸ್ಸು ವಿಕಾರಗೊಂಡಿದ್ದರೆ, ಜ್ಞಾನದ ಅನುಭೂತಿಯಾಗುವುದಿಲ್ಲ. ಪಾಚಿಗಟ್ಟಿದ ನೀರಿನಲ್ಲಿ ಪ್ರತಿಬಿಂಬ ಕಾಣಿಸುವುದಿಲ್ಲ. ಅದರಂತೆ ವಿಕಾರಗೊಂಡ ಚಿತ್ತದಲ್ಲಿ ಜ್ಞಾನದ ಬೀಜ ನೆಡುವುದಿಲ್ಲ. ಚಿತ್ತದಿಂದ ವಿಷಯವಾಸನೆಯನ್ನು ಹೊಡೆದೋಡಿಸಿ ಅಂತರಾತ್ಮದ ದೀಪಜ್ಯೋತಿಯನ್ನು ಪ್ರಕಾಶಮಾನವಾಗಿ ಬೆಳಗಿಸುವ ಸಾಧನವೇ ದಮೆ.

ಶಮೆ ಮತ್ತು ದಮೆ ಇವು ಪರಸ್ಪರ ಅವಲಂಬಿಸಿರುತ್ತವೆ. ಶಮೆ ಎಂದರೆ ಮನೋನಿಗ್ರಹ, ದಮೆ ಎಂದರೆ ಇಂದ್ರಿಯನಿಗ್ರಹ. ಮನಸ್ಸೆಂದರೆ ವೃಕ್ಷದ ಬೇರು. ಇಂದ್ರಿಯಗಳು ಅದರ ಶಾಖೆಗಳು, ಇಂದ್ರಿಯಗಳು ಮನೆಯ ಕಿಟಕಿ ಬಾಗಿಲುಗಳಾದರೆ ಮನಸ್ಸು ಅದರಲ್ಲಿ ಹೊಕ್ಕಿರುವ ಕಳ್ಳ. ಕಿಟಕಿ ಬಾಗಿಲುಗಳನ್ನು ಮುಚ್ಚಿ, ಆ ಕಳ್ಳನನ್ನು ಹಿಡಿದು ಸ್ವಾಮಿಯ ಚರಣಕ್ಕೆ ಅವನನ್ನು ಒಪ್ಪಿಸಬೇಕು. ಇದೇ ದಮೆ.

ಈ ಶರೀರ ಸಾಮ್ರಾಜ್ಯದಲ್ಲಿ ಆತ್ಮನು ಸಾರ್ವಭೌಮ. ಆತ್ಮನ ರಾಜ್ಯವನ್ನು, ಮನಸ್ಸೆಂಬ ಪ್ರಧಾನಿಯು ಕಬಳಿಸಿದ್ದಾನೆ. ವಿಲಾಸಿಗಳಾದ ಅಧಿಕಾರಿಗಳು ತಮ್ಮ ಕೈಕೆಳಗಿನ ನೌಕರರ ಅಧೀನರಾಗಿರುತ್ತಾರೆ. ಈ ಮನಸ್ಸೂ ಕೂಡ ಅದರಂತೆ ಇಂದ್ರಿಯವಶವಾಗಿರುತ್ತದೆ. ತಮ್ಮ ಸ್ವಾರ್ಥಕ್ಕಾಗಿ ಕೈಕೆಳಗಿನ ಸೇವಕರು, ಮೇಲಧಿಕಾರಿಗಳಿಗೆ ಅನೇಕ ಆಸೆ-ಆಮಿಷಗಳನ್ನು ಒಡ್ಡುತ್ತಾರೆ. ಲಂಚ ಕೊಡುತ್ತಾರೆ. ಅನೇಕ ಬಗೆಯಿಂದ ತಮ್ಮ ಕೆಲಸ ಸಾಧಿಸಲು ಅವರನ್ನು ಅಧಃಪತನಕ್ಕೆ ಎಳೆಯುತ್ತಾರೆ. ಈ ದಶೇಂದ್ರಿಯ ನೌಕರರನ್ನು ವಶಮಾಡಿಕೊಂಡ ಅಧಿಕಾರಿಯು ಈ ಸತ್ಕಾರ್ಯ ಮಾಡಲು ಸಮರ್ಥನಾಗುತ್ತಾನೆ. ಇದೇ ರೀತಿಯಿಂದ ಮನಸ್ಸು ಮತ್ತು ಇಂದ್ರಿಯಗಳು ಸತ್ಪ್ರವೃತ್ತವಾದಾಗ, ದೃಢಬುದ್ಧಿ ಹುಟ್ಟುತ್ತದೆ ಮತ್ತು ಜಯ ಲಭಿಸುತ್ತದೆ. ಅಭ್ಯಾಸದಲ್ಲಿ ಮನಸ್ಸು ಏಕಾಗ್ರವಾಗಬೇಕೆಂದು ಕಿಟಕಿ ಬಾಗಿಲುಗಳನ್ನು ಮುಚ್ಚುತ್ತೇವೆ. ಮನಸ್ಸು ಹೊರಗಡೆ ನೋಡಬಾರದು. ಆತ್ಮದ

ಅಧ್ಯಯನ ಮಾಡಬೇಕಾಗಿದೆ. ಅದಕ್ಕಾಗಿ ಕಿಟಕಿ ಬಾಗಿಲು ಮುಚ್ಚುವ ಕ್ರಿಯೆಯೇ ದಮೆ.

೭

ಇದಕ್ಕೆ ಬ್ರಹ್ಮಚರ್ಯ ಎಂತಲೂ ಹೆಸರು. ಬ್ರಹ್ಮಪ್ರಾಪ್ತಿಯ ಏಕಮೇವ ಉದ್ದೇಶದಿಂದ, ದೈನಂದಿನ ನಿಯಮಗಳನ್ನು ಪಾಲಿಸಿ, ಕಟ್ಟುನಿಟ್ಟಿನಿಂದ ಅನುಸರಿಸುವುದು ಬ್ರಹ್ಮಚರ್ಯ. ಬ್ರಹ್ಮಚರ್ಯದಿಂದ ಅಸಾಮಾನ್ಯ ಶಕ್ತಿ ಪ್ರಾಪ್ತವಾಗುತ್ತದೆ. ಸ್ವಾಮಿ ವಿವೇಕಾನಂದರ ಜೀವನದಲ್ಲಿ ಈ ಬಗ್ಗೆ ಎರಡು ಉದಾಹರಣೆಗಳು ಕಂಡುಬರುತ್ತವೆ.

ತಮ್ಮ ಯುರೋಪಿನ ಪ್ರವಾಸದಲ್ಲಿ ಸ್ವಾಮಿಜೀಯವರು ಪ್ರಾಧ್ಯಾಪಕ ಪಾಲ್ ಡಾಯಸನ್ ಇವರ ಮನೆಗೆ ಹೋಗಿದ್ದರು. ಅಲ್ಲಿ ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಚರ್ಚೆಯ ಮಧ್ಯೆ ಪ್ರಾಧ್ಯಾಪಕರು ಎದ್ದು ಒಳಗೆ ಹೋದರು. ಸ್ವಲ್ಪ ಸಮಯದ ನಂತರ ಹಿಂದಿರುಗಿ ಬಂದಾಗ ಸ್ವಾಮಿಜೀಯವರು ಒಂದು ಕವಿತೆಯ ಪುಸ್ತಕವನ್ನು ತಿರುವಿಹಾಕುವುದರಲ್ಲಿ ಮಗ್ನರಾಗಿದ್ದರು. ಪುಸ್ತಕದಲ್ಲಿ ತನ್ನನ್ನೇ ಮರೆತಿದ್ದ ಸ್ವಾಮಿಜೀಯವರಿಗೆ ಪಾಲರು ಬಹಳ ಹೊತ್ತಿನಿಂದ ತಮ್ಮ ಮುಂದೆ ನಿಂತಿರುವುದು ಗಮನಕ್ಕೆ ಬರಲಿಲ್ಲ. ಪುಸ್ತಕವನ್ನು ಬದಿಗಿಟ್ಟ ಮೇಲೆ ನೋಡಿದಾಗ ಪಾಲರು ತಮ್ಮೆದುರು ಕಂಡರು! ಸ್ವಾಮಿಜೀಯವರಿಗೆ ಬಹಳ ಸಂಕೋಚವಾಯಿತು. ಅದಕ್ಕಾಗಿ ಕ್ಷಮೆ ಕೇಳಿದರು. ಆದರೆ ಪಾಲರಿಗೆ ಅವರ ಮಾತಿನಲ್ಲಿ ನಂಬಿಕೆ ಬರಲಿಲ್ಲ. ಅವರು ತಮ್ಮನ್ನು ಬೇಕೆಂದೇ ಉಪೇಕ್ಷಿಸಿದರು ಎಂದುಕೊಂಡರು. ಸ್ವಾಮಿಜೀಯವರು ಅವರ ಭಾವನೆಯನ್ನು ಗ್ರಹಿಸಿದರು. ಸಂಭಾಷಣೆಯ ಮಧ್ಯೆ ತಾವು ಆಗ ತಾನೆ ಓದಿ ಬದಿಗಿರಿಸಿದ್ದ ಪುಸ್ತಕದ ಸಾಲುಗಳ ಹಿಂದೆ ಸಾಲುಗಳನ್ನು ಧಢ ಧಢ ಹೇಳುತ್ತಾ ಹೋದರು. ಪ್ರಾಧ್ಯಾಪಕರಿಗೆ ಆಶ್ಚರ್ಯವಾಯಿತು. "ಈ ಪುಸ್ತಕವನ್ನು ನೀವು ಮೊದಲು ಓದಿರಬೇಕು. ಇಲ್ಲದಿದ್ದರೆ ನಾಲ್ಕುನೂರು ಪುಟಗಳ ಪುಸ್ತಕವನ್ನು ಅರ್ಧಗಂಟೆಯಲ್ಲಿ ಬಾಯಿಪಾಠ ಹೇಳುವುದು ಅಸಾಧ್ಯ" ಎಂದರು.

ಸ್ವಾಮಿಜೀಯವರು ಮಂದಸ್ಮಿತರಾಗಿ ಉತ್ತರಿಸಿದರು : "ಸಂಯಮಿ ಚಿತ್ತದವನಿಗೆ ಯಾವುದೂ ಅಸಾಧ್ಯವಲ್ಲ. ಈ ರೀತಿಯ ಯೋಗ್ಯತೆಯನ್ನು ಯಾರು ಬೇಕಾದರೂ ಸಂಪಾದಿಸಬಹುದು. ನಿಮಗೆ ಗೊತ್ತೇ ಇದೆ. ನಾನು ಹೆಣ್ಣು ಹೊನ್ನು ತ್ಯಾಗ ಮಾಡಿದ ಬ್ರಹ್ಮಚಾರಿ. ಆಜನ್ಮ ಅಖಂಡ ಬ್ರಹ್ಮಚರ್ಯ ಪಾಲನೆಯಿಂದ ಈ ಶಕ್ತಿ ಸಾಮರ್ಥ್ಯ ತಾನಾಗಿಯೇ ಪ್ರಕಟವಾಗುತ್ತದೆ. ಪಾಶ್ಚಾತ್ಯರಾದ ನಿಮಗೆ ಈ ಮಾತಿನಲ್ಲಿ ವಿಶ್ವಾಸ ಹುಟ್ಟಲಾರದು. ಆದರೆ ಭಾರತದಲ್ಲಿ ಮಾತ್ರ ಬ್ರಹ್ಮಚರ್ಯದ ಬಲದಿಂದ ಈ ರೀತಿಯ ಸ್ಮರಣಶಕ್ತಿಯನ್ನು ಪಡೆದ ಕೆಲವರಾದರೂ ಇದ್ದಾರೆ." ಸ್ವಾಮಿಜೀಯವರ ವಿವರಣೆಯಿಂದ ಡಾಯುಸನರು ಸಂತುಷ್ಟರಾದರು. ಬ್ರಹ್ಮಚರ್ಯದಿಂದ ಮಾನಸಿಕಶಕ್ತಿ ಹೆಚ್ಚುತ್ತದೆ. ಮನಸ್ಸು ಕೂಡಲೇ ಏಕಾಗ್ರವಾಗುತ್ತದೆ. ಬೇರೆಯವರು ಹತ್ತು ಗಂಟೆಯಲ್ಲಿ ಮಾಡಬಹುದಾದ ಕೆಲಸವನ್ನು ಈ ಮನುಷ್ಯ ಒಂದು ಗಂಟೆಯಲ್ಲಿ ಮಾಡಬಲ್ಲ.

ಸ್ವಾಮಿಜೀಯವರ ಜೀವನದ ಇನ್ನೊಂದು ಪ್ರಸಂಗ ಹೀಗಿದೆ : ಬೇಲೂರುಮಠದಲ್ಲಿದ್ದಾಗ ಇಂಗ್ಲಿಷ್ ಜ್ಞಾನಕೋಶವನ್ನು ಕೊಂಡು ತಂದರು. ಆ ಬೃಹದ್‌ಗ್ರಂಥದ ದೊಡ್ಡ ದೊಡ್ಡ ಖಂಡಗಳನ್ನು ನೋಡಿದ ಅವರ ಶಿಷ್ಯ – "ಸ್ವಾಮಿಜೀ, ಇಷ್ಟೆಲ್ಲಾ ಓದಿ ಮುಗಿಸಲು ಎಷ್ಟೋ ಸಲ ಹುಟ್ಟಿ ಬರಬೇಕಾಗುತ್ತದೆ" ಎಂದ. ಸ್ವಾಮಿಜೀ – "ಹಾಗೇನೂ ಇಲ್ಲ. ನಾನು ಈಗಾಗಲೇ ಎಷ್ಟೋ ಭಾಗಗಳನ್ನು ಓದಿ ಮುಗಿಸಿದ್ದೇನೆ. ಅನುಮಾನವಿದ್ದರೆ ಪುಸ್ತಕ ತೆಗೆದುಕೊ, ಬೇಕಾದ್ದನ್ನು ಕೇಳು" ಎಂದರು. ಶಿಷ್ಯ ಪುಸ್ತಕ ಎತ್ತಿಕೊಂಡು ಪ್ರಶ್ನೆಗಳನ್ನು ಕೇಳತೊಡಗಿದ. ಸ್ವಾಮಿಜೀಯವರು ಅಡೆತಡೆಯಿಲ್ಲದೆ ಉತ್ತರಿಸುತ್ತಾ ಹೋದರು. ಎಷ್ಟೋ ಸಲ ಅದರಲ್ಲಿನ ವಾಕ್ಯಗಳನ್ನು ಇದ್ದಂತೆಯೇ ಹೇಳಿದರು. ಶಿಷ್ಯ ವಿಸ್ಮಯಗೊಂಡ. ಸ್ವಾಮಿಜೀಯವರು ಪುನಃ ಅದೇ ಮಾತನ್ನೇ ಹೇಳಿದರು :

"ಇದೆಲ್ಲಾ ಬ್ರಹ್ಮಚರ್ಯದ ಸಾಮರ್ಥ್ಯ."

೮

ಯಾವ ಸಮಾಜದಲ್ಲಿ ಕಾಯಾ-ವಾಚಾ-ಮನಸಾ ಬ್ರಹ್ಮಚರ್ಯ ಪಾಲಿಸಲಾಗುತ್ತದೊ, ಬ್ರಹ್ಮಚರ್ಯವನ್ನು ಗೌರವಿಸಲಾಗುತ್ತದೊ ಆ ಸಮಾಜ ಯಶಸ್ಸು ಪಡೆಯುತ್ತದೆ. ಅಂತೆಯೇ ನಮ್ಮಲ್ಲಿ ಆಯುಷ್ಯದ ಮೊದಲ ಭಾಗವನ್ನು 'ಬ್ರಹ್ಮಚರ್ಯಾಶ್ರಮ'ವೆಂದು ಕರೆಯುತ್ತಾರೆ. ಜೀವನದ ಮೊದಲ ಇಪ್ಪತ್ತೈದು ವರ್ಷಗಳಲ್ಲಿ ಜೀವನಮಂದಿರದ ಅಡಿಪಾಯ ಭದ್ರವಾಗಿರಬೇಕೆಂಬ ಉದ್ದೇಶದಿಂದ ಈ ಯೋಜನೆ ಮಾಡಲಾಗಿದೆ. ಬಾಲ್ಯಾವಸ್ಥೆ ಕಳೆದ ಕೂಡಲೇ ಬಾಲಕ ಉಪನಯನವಾಗಿ ಗುರುಗಳ ಆಶ್ರಮಕ್ಕೆ ಹೋಗುತ್ತಿದ್ದ. ಅಲ್ಲಿ ಅವನು ವಿದ್ಯೆ, ಚಾರಿತ್ರ್ಯ, ಸದಾಚಾರ ಮೊದಲಾದ ಗುಣಗಳಿಂದ ಸಂಪನ್ನನಾಗಿ ಇಪ್ಪತ್ತೈದನೆ ವರ್ಷಕ್ಕೆ ಮನೆಗೆ ಮರಳಿ ಬರುತ್ತಿದ್ದ. ಆ ವೇಳೆಗೆ ಅವನ ಮಾನಸಿಕ, ಶಾರೀರಿಕ, ಬೌದ್ಧಿಕ ವಿಕಾಸಗಳು ಪೂರ್ಣಗೊಂಡು, ಅಪೂರ್ವ ತೇಜಸ್ಸಿನಿಂದ ಬೆಳಗುತ್ತಿದ್ದ.

ಆದರೆ ದುರದೃಷ್ಟದಿಂದ ಭಾರತವು ಬ್ರಹ್ಮಚರ್ಯದ ಮಹತ್ವವನ್ನು ಕಡೆಗಣಿಸಿತು. ಬಾಲ್ಯವಿವಾಹಗಳು ಜಾರಿಗೆ ಬಂದವು. ಗುಮಾಸ್ತಗಿರಿಯಂತಹ ಸಣ್ಣಪುಟ್ಟ ಉದ್ಯೋಗ ದೊರಕಿಸಿಕೊಂಡು, ನಾಲ್ಕು ಕಾಸು ಸಂಪಾದಿಸುವುದು, ಮಕ್ಕಳನ್ನು ಹುಟ್ಟಿಸುವುದು ಇದೇ ಜೀವನದ ಆದ್ಯಕರ್ತವ್ಯವೆಂದು ಭಾವಿಸು ವಂತಾಯಿತು.

ಈಗೀಗ ಮದುವೆಯ ವಯಸ್ಸಿನಲ್ಲಿ ಹೆಚ್ಚಳ ಆಗಿದೆ. ಆದರೆ ಬ್ರಹ್ಮಚರ್ಯದ ಪೋಷಣೆಯಾಗುವಂತಹ ಪರಿಸರವಿಲ್ಲ. ಎಲ್ಲೆಡೆ ಚಾರ್ವಾಕರ ಜಯಕಾರ ನಡೆದಿದೆ. ಚಾರ್ವಾಕವಾದವೆಂದರೆ ಸ್ವೈರಾಚಾರದ ಮುಕ್ತ ಪ್ರತಿಪಾದನೆ. ಅದನ್ನು ಬುದ್ಧಿವಾದ, ಚಾರ್ವಾಕ ದರ್ಶನ, ಮತ ಸ್ವಾತಂತ್ರ್ಯ, ಸೌಂದರ್ಯಪ್ರಜ್ಞೆ ಇತ್ಯಾದಿ ಸುಂದರ ಶಬ್ದಗಳಿಂದ ಕರೆಯಲಾಗುತ್ತಿದೆ. ಈ ಎಲ್ಲ ಶಬ್ದಗಳ ಸರಿಯಾದ ಅರ್ಥವನ್ನು ತಿಳಿಯದೆ ಬಳಸಲಾಗುತ್ತದೆ. ಜೇಬುಗಳ್ಳನು ಸಭ್ಯನಂತೆ ವೇಷ ಧರಿಸಿ ಜನರ ಗುಂಪಿನಲ್ಲಿ ನುಗ್ಗುತ್ತಾನೆ, ತನ್ನ ಕೆಲಸವನ್ನು ಸಾಧಿಸಿಕೊಳ್ಳುತ್ತಾನೆ. ಅದರಂತೆ ವಿಲಾಸಿ

ಜನ ಮೇಲಿನ ಶಬ್ದಗಳ ಉಪಯೋಗದಿಂದ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುತ್ತಾರೆ.

ಇಂದು ಎಲ್ಲೆಡೆ ವಿಷಯವಾಸನೆಗೆ ಉತ್ತೇಜನ ಸಿಕ್ಕುತ್ತಿದೆ. ಇಂದ್ರಿಯಗಳ ಸ್ವೈರಾಚಾರಕ್ಕೆ ಎಲ್ಲ ದಾರಿಗಳೂ ಮುಕ್ತವಾಗಿವೆ. ಸಮೂಹ ಮಾಧ್ಯಮದ ಭಿನ್ನ ಭಿನ್ನ ಕ್ಷೇತ್ರಗಳಲ್ಲಿ ಸ್ವಚ್ಛಂದ ವೃತ್ತಿ ಎದ್ದು ಕಾಣುತ್ತದೆ. ಎಲ್ಲಿಯೂ ಸಂಯಮ, ನಿಯಮ, ರೀತಿ, ಪದ್ಧತಿ ಇಲ್ಲ. ನಿಯಮವನ್ನು ಮುರಿಯುವುದು, ಅನುಶಾಸನವನ್ನು ಹಳಿಯುವುದು ಇಂದಿನ ದೊಡ್ಡಸ್ತಿಕೆಯ ಲಕ್ಷಣಗಳಾಗಿವೆ. ಇಂಥವನನ್ನು ತಲೆಯ ಮೇಲೆ ಹೊತ್ತು ಜಯಜಯಕಾರ ಮಾಡಲಾಗುತ್ತದೆ. ಜನರ ಮನಸ್ಸಿನಲ್ಲಿ ಈ ಅನಿಷ್ಟವನ್ನು ಪ್ರತಿನಿತ್ಯ ಬಿತ್ತರಿಸಲಾಗುತ್ತಿದೆ. ಇದು ಯೋಗ್ಯವೆ ?

ಇಲ್ಲ, ಇದು ಸರ್ವಥಾ ಯೋಗ್ಯವಲ್ಲ. ಇದನ್ನು ನಾವು ತಡೆದೇ ತಡೆಯುತ್ತೇವೆ. ವ್ಯಕ್ತಿಯಲ್ಲಿ, ಸಮಾಜದಲ್ಲಿ, ರಾಷ್ಟ್ರದಲ್ಲಿ ಮತ್ತು ಆ ಮೂಲಕ ಜಗತ್ತಿನಲ್ಲಿ ದಮೆಯನ್ನು ಪ್ರಚುರಪಡಿಸೋಣ. ಸಂಯಮ ನಿಯಮವುಳ್ಳ ಸಮಾಜದಲ್ಲಿ ದಮೆಯನ್ನು ನಿರ್ಮಿಸೋಣ. ಒಂದು ಕಾಲದಲ್ಲಿ ಭಾರತದ ಸಾವಿರಾರು ಜನರು ದಮೆಯುಳ್ಳವರಾಗಿದ್ದರು. ಅವರು ತಮ್ಮ ತೇಜಸ್ಸಿನಿಂದ ಜಗತ್ತನ್ನೇ ಬೆಳಗಿದರು. ತಮ್ಮ ಅಸಾಮಾನ್ಯ ಕರ್ತೃತ್ವಶಕ್ತಿಯಿಂದ ಜಗತ್ತಿಗೇ ಮಾರ್ಗದರ್ಶಕರಾಗಿದ್ದರು. ಪ್ರಪಂಚಕ್ಕೆ ಶಾಂತಿಮಂತ್ರವನ್ನು ಬೋಧಿಸಿ ಅವರನ್ನು ಸಭ್ಯ ನಾಗರಿಕರನ್ನಾಗಿ, ಸುಸಂಸ್ಕೃತರನ್ನಾಗಿ ಮಾಡುವ ಆಕಾಂಕ್ಷೆ ಅವರಲ್ಲಿತ್ತು. ಆ ಆಕಾಂಕ್ಷೆ ಪೂರ್ಣಗೊಳ್ಳಬೇಕಾದರೆ, ಸಾಂಸಾರಿಕ-ಪಾರಲೌಕಿಕ ಪ್ರಗತಿ ಸಾಧಿಸಬೇಕಾದರೆ, ವ್ಯಕ್ತಿ ಮತ್ತು ಸಮಾಜದ ಕಲ್ಯಾಣವಾಗಬೇಕಿದ್ದರೆ ದಮೆಯ ಪ್ರಾಪ್ತಿ ಆವಶ್ಯಕವಾಗಿದೆ.

೧೦ ಋಜುತೆ

೧

ಸಂತ ಜ್ಞಾನೇಶ್ವರರು – 'ಸ್ವಭಾವದಲ್ಲಿನ ಕುಹಕತನವನ್ನು ಕಳೆಯುಂವಂತೆ' ಸೃಷ್ಟಿಕರ್ತನಾದ ಪರಮಾತ್ಮನನ್ನು ಬೇಡಿಕೊಂಡಿದ್ದಾರೆ. ಮಾತಿನಲ್ಲಿ, ಕೃತಿಯಲ್ಲಿ ಕುಹಕತನ ಇಲ್ಲವಾದಾಗ, ಜೀವನವು ಸುಂದರ ಸ್ವರ್ಗವಾದೀತು. ಕುಹಕತನ ಇಲ್ಲವಾದಾಗ ಮನುಷ್ಯ ಋಜು ಅಥವಾ ಸಜ್ಜನನಾಗುತ್ತಾನೆ. ಸಜ್ಜನನಿಗೇನು ತಲೆಯಲ್ಲಿ ಕೊಂಬು ಇರುವುದಿಲ್ಲ. ಹುಟ್ಟುವಾಗಲೇ ವಿಶಿಷ್ಟ ಗುಣಗಳನ್ನು ಪಡೆದಿರುತ್ತಾನೆ ಎಂದೂ ಅಲ್ಲ. ಕೆಲವು ಸಲ ಸಜ್ಜನನಿಗಿಂತ ದುರ್ಜನರಲ್ಲೆ ಹೆಚ್ಚಿನ ಯೋಗ್ಯತೆ ಇರುತ್ತದೆ. ಆದರೆ ಅವರು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವುದಿಲ್ಲ. ಬೇಡನಿಗೆ ಯಾವನಾದರೂ ನಾರದ ಭೇಟಿಯಾಗಿ ಅವನು ವಾಲ್ಮೀಕಿಯಾಗುತ್ತಾನೆ. ನಾಮದೇವ ಜ್ಞಾನೇಶ್ವರರನ್ನು ಭೇಟಿಯಾಗುತ್ತಾನೆ. ಗಂಗೆಗೆ ಭಗೀರಥನ ಭೇಟಿಯಾಗ ಬೇಕಾಗುತ್ತದೆ. ಆಗ ದಿಢೀರನೆ ಜೀವನದ ಗತಿ ಬದಲಾಗುತ್ತದೆ. ಸಾವಿರಾರು ಸಗರಪುತ್ರರ ಉದ್ಧಾರವಾಗುತ್ತದೆ.

ಜಗತ್ತಿನಲ್ಲಿ ಇಂದಿನವರೆಗೆ ಆಗಿಹೋದ ಸಂತ ಮಹಾತ್ಮರು ಮತ್ತು ವಿಚಾರವಂತರು "ಜನರ ದುಃಖ ಇಲ್ಲದಂತೆ ಆದೀತೆ ? ಜನರು ಹೇಗೆ ಸುಖಿಗಳಾದಾರು ? ಈ ದುಃಖಗಳ ಮೂಲ ಯಾವುದು ? ಇದಕ್ಕೆ ಉಪಾಯವೇನು ? ಇದಕ್ಕೆ ಶಾಶ್ವತ ಪರಿಹಾರವೇನು ? ಮನುಷ್ಯ ಕಷ್ಟದಲ್ಲಿದ್ದೇನೆಂದು ಅಡ್ಡದಾರಿ ಹಿಡಿಯುತ್ತಾನೆ. ಅಡ್ಡದಾರಿ ಹಿಡಿದದ್ದರಿಂದ ಕಷ್ಟಗಳಿಗೆ ಗುರಿಯಾಗುತ್ತಾನೆ. ಈ ರೀತಿ ಅನೇಕ ಬಗೆಯ ಚಿಂತೆಗಳನ್ನು ಜಗತ್ತಿನ ಹಿತಕ್ಕಾಗಿ ವಹಿಸಿಕೊಂಡು, ಅದಕ್ಕೆ ಅನೇಕ ಪರಿಹಾರಗಳನ್ನೂ ಸೂಚಿಸಿದ್ದಾರೆ.

೨

"ಆರ್ಥಿಕ ವಿಷಮತೆಯೇ ಈ ದುಃಖಕ್ಕೆಲ್ಲ ಕಾರಣ" ಎಂದು ಕೆಲವರು ಹೇಳುತ್ತಾರೆ. ಯಾರು ಹೆಚ್ಚು ಹಣ ಸಂಗ್ರಹಿಸಿದ್ದಾನೊ ಅವನಿಂದ ಅದನ್ನು ಕಿತ್ತುಕೊಂಡು ಹಣವಿಲ್ಲದವರಿಗೆ ಅಥವಾ ಕಡಿಮೆ ಇದ್ದವರಿಗೆ ಹಂಚಬೇಕು – ಅಂದರೆ ಕೆಲಸ ಮುಗಿಯಿತು, ಎಲ್ಲ ಕಡೆ ಸಮಾನತೆ ಉಂಟಾಗುತ್ತದೆ. ಭೂಮಿಯ ಮೇಲೆ ಸ್ವರ್ಗ ಇಳಿಯುತ್ತದೆ ಎನ್ನುತ್ತಾರೆ.

ಇನ್ಯಾರೋ ಹೇಳಿದರು – "ಸಾಮಾಜಿಕ, ರಾಜನೈತಿಕ ಭೇದದಿಂದ ಈ ಅಸಂತೋಷ ನಿರ್ಮಿತವಾಗಿದೆ. ಮನುಷ್ಯನ ಮನಸ್ಸಿನಲ್ಲಿ ಅಂತಸ್ತು, ವಂಶ ಮೊದಲಾದವುಗಳ ಬಗ್ಗೆ ಪೊಳ್ಳು ಕಲ್ಪನೆಗಳು ಮನೆಮಾಡಿವೆ. ಅದರಿಂದಲೇ ಜಾತಿಭೇದ ವರ್ಗಭೇದಗಳು ಹುಟ್ಟಿದ್ದು. ಆ ಭೇದಗಳು ನಿರ್ಮೂಲಗೊಳ್ಳುವವರೆಗೆ ಸಮಾನತೆ ಬರುವುದಿಲ್ಲ."

ಇನ್ನೂ ಕೆಲವು ವೈರಾಗ್ಯ ನುಡಿಗಳು ಹೀಗಿವೆ : "ಜಗತ್ತು ಮತ್ತು ಸುಖ – ಎಂದಾದರೂ ಸಾಧ್ಯವಿದೆಯೇ ? ಮೊಲಕ್ಕೆ ಕೊಂಬು, ಅತ್ತಿಯ ಗಿಡಕ್ಕೆ ಹೂ ಎಂದಾದರೂ ನೋಡಿದ್ದೀರಾ ? ಹಾಗೆಯೇ ಯಾವುದೇ ಮನುಷ್ಯ ಸುಖವಾಗಿರುವುದನ್ನು ಕಂಡಿದ್ದೀರಾ ? ದೇವರು ಮಾಡಿದಂತೆಯೇ ಆಗುವುದು. ಎಲ್ಲವೂ ಕ್ಷಣಿಕವಾದದ್ದು, ಎಲ್ಲವೂ ದುಃಖಮಯವಾದದ್ದು."

ಇನ್ನು ಕೆಲವರು ಯಾವಾಗಲೂ ಸಂಶಯಚಿತ್ತದವರು. "ದುಃಖ ಎಂದರೇನು ? ಅದು ದೂರವಾಗುವುದೇ ? ಸುಖ ಸಿಗುವುದು ಸಾಧ್ಯವೆ ? ನಮ್ಮ ಕೈಯಲ್ಲಿ ಏನಿದೆ ! ಮಾನವಜೀವನ ದೈವಾಧೀನವಾದದ್ದು. ಆದರೆ ದೇವರು ನಿಜವಾಗಿಯೂ ಇರುವನೇ ? ಆ ದೈವವೆಂಬುದಾದರೂ ಎಂತಹ ವಸ್ತು ? ನಿಜವಾಗಿಯೂ ಮಾನವಜೀವನದ ರಹಸ್ಯ ಬಿಡಿಸಲಾರದ ಒಗಟಾಗಿದೆ. ಉತ್ತರವೇ ಸಿಗದ ಪ್ರಶ್ನಮಾಲಿಕೆಯಾಗಿದೆ. ಜೀವಕ್ಕೆ ಸುಮ್ಮನೆ ಏಕೆ ಕಷ್ಟ ಕೊಡಬೇಕು ? ಅದೃಷ್ಟದಲ್ಲಿದ್ದಂತೆ ಆಗುವುದು."

ಇನ್ನೂ ಕೆಲವರು ಹಗುರವಾಗಿ ಹೇಳುತ್ತಾರೆ – "ಏನ್ರೀ, ಎಲ್ಲಿಯ ಕಷ್ಟ ಎಲ್ಲಿಯ ಸುಖ ? ತಿಂದುಂಡು ಹಾಯಾಗಿ ಇದ್ದರೆ ಆಯಿತು.

ಈ ಜಗತ್ತಿನಲ್ಲಿ ಪಾಪವೂ ಇಲ್ಲ, ಪುಣ್ಯವೂ ಇಲ್ಲ. ಎಂಥ ವಿಧಿನಿಷೇಧಗಳ ಆವಶ್ಯಕತೆಯೂ ಇಲ್ಲ. ನಾಳಿನ ಚಿಂತೆ ಬೇಡ. ಆತ್ಮ, ಪರಮಾತ್ಮ, ಜನ್ಮ, ಪುನರ್ಜನ್ಮ ಎಲ್ಲ ಕಲ್ಪನೆ. ಮನುಷ್ಯನಿಗೆ ವಿನಾಕಾರಣ ದುಃಖ ದಲ್ಲಿ ಕೆಡವುವಂಥವುಗಳಾಗಿವೆ.

ಹೀಗೆ ವಿವಿಧ ರೀತಿಯ ತರ್ಕ ವಿತರ್ಕಗಳು, ಪರಿಹಾರ ಉಪಾಯ ಗಳನ್ನು ಹೇಳಲಾಗುತ್ತದೆ. ಜಗತ್ತಿನ ದುಃಖಗಳು ನಾಶವಾಗಬೇಕು. ದುಃಖದ ಮೂಲವಾದ ಕುಟಿಲತೆ ಇಲ್ಲವಾಗಬೇಕು. ಆದರೆ ಒಬ್ಬ ಸಾಧಾರಣ ವೈದ್ಯನು ರೋಗಿಗೆ ಔಷಧಿ ಕೊಟ್ಟ ನಂತರವೂ ರೋಗ ಹೆಚ್ಚುತ್ತಾ ಹೋಗುವಂತೆ ಇಂದಿನ ಸ್ಥಿತಿಯಾಗಿದೆ. ಮನುಷ್ಯಜಾತಿಯು ನಾಯಿಯ ಬಾಲದಂತಿದೆ. ಅದರ ಡೊಂಕುತನ ಹೆಚ್ಚುತ್ತಲೇ ಹೋಗುತ್ತಿದೆ. ಅದಕ್ಕಾಗಿ ವ್ಯಾಸಮಹರ್ಷಿಗಳು ಕಳಕಳಿಯಿಂದ ಉದ್ಗರಿಸುತ್ತಾರೆ– "ಓ ಮನುಷ್ಯರೇ, ಎಂಥವರು ನೀವು? ನಾನು ಕೈಯೆತ್ತಿ ಕೂಗಿ ಹೇಳು ತ್ತಿದ್ದೇನೆ – ಧರ್ಮದಿಂದ ನಡೆಯಿರಿ, ಧರ್ಮವನ್ನು ಅವಲಂಬಿಸಿರಿ. ಅಂದರೆ ಅರ್ಥ ಕಾಮ ಪುರುಷಾರ್ಥಗಳು ತನ್ನಿಂದ ತಾನೇ ಸಾಧಿಸುತ್ತವೆ. ಆದರೆ ಈ ಹುಚ್ಚರಿಗೆ ಇದು ತಿಳಿಯುವುದಿಲ್ಲ. ಅವರು ತಮ್ಮ ಕ್ಷುದ್ರ ಸ್ವಾರ್ಥದ ಹಿಂದೆಯೇ ಧಾವಿಸುತ್ತಿದ್ದಾರೆ."

> ಊರ್ಧ್ವಬಾಹುರ್ವಿರೌಮ್ಯೇಷ ನಚ ಕಶ್ಚಿಚ್ಛೃಣೋತಿ ಮಾಮ್ ।
> ಧರ್ಮಾದರ್ಥಶ್ಚಕಾಮಶ್ಚ ಸ ಧರ್ಮಃ ಕಿಂ ನ ಸೇವ್ಯತೇ ॥

೩

ಇಂದು ಎಲ್ಲ ಕಡೆ ಕುಟಿಲತೆಯೇ ತುಂಬಿದೆ. ಸರಳತನವನ್ನು ಇಂದು ದೌರ್ಬಲ್ಯವೆಂದು ತಿಳಿಯಲಾಗುತ್ತದೆ. ಯಾವನಾದರೂ ಸರಳ ಮನುಷ್ಯ ನನ್ನು ಕಂಡರೆ ಜನರು ಅವನಿಗೆ ಹೀಗೆ ಉಪದೇಶಿಸುತ್ತಾರೆ: "ಅಪ್ಪಾ, ಸರಳತನದಿಂದ ನಡೆಯಬೇಡ. ಇದೇನು ಸತ್ಯಯುಗವಲ್ಲ. ಈಗಿನ ಕಾಲದಲ್ಲಿ ಹೀಗೆ ನಡೆದರೆ ಉದ್ಧಾರವಾಗುವುದಿಲ್ಲ. ನಮಗೆ ಈ ಜಗತ್ತಿನಲ್ಲಿ ಇರಬೇಕಾದರೆ, ಎಲ್ಲರಂತೆ ಇರಬೇಕು. ಎಲ್ಲರೂ ಅಡ್ಡದಾರಿ ಹಿಡಿದಾಗ ನಾವು ಮಾತ್ರ ನೇರವಾಗಿ ನಡೆದರೆ ಏನು ಪ್ರಯೋಜನ?" ಅಂದರೆ ಅಡ್ಡದಾರಿಯಲ್ಲಿ

ನಡೆಯುವ ಬಗ್ಗೆ ಅವರಿಗೆ ಪಶ್ಚಾತ್ತಾಪವಿಲ್ಲ. ರೋಗಿಯು ರೋಗದ ಬಗ್ಗೆ ಅಭಿಮಾನಪಟ್ಟುಕೊಂಡು, ವೈದ್ಯರು ಕೊಟ್ಟ ಔಷಧಿಯನ್ನು ಚೆಲ್ಲಬೇಕು. ಸಾಲಿಗಸು ಸಾಲದ ಬಗ್ಗೆ ಅಭಿಮಾನಪಟ್ಟುಕೊಂಡು ಉದ್ಯೋಗ ವ್ಯವಸಾಯವನ್ನು ಬಿಟ್ಟು ನಡೆಯಬೇಕು. ವಿದ್ಯಾರ್ಥಿಯು ಅಭ್ಯಾಸ ಮಾಡಲು ಬೇಸತ್ತು ಗುರುಗಳ ಅಪಹಾಸ್ಯ ಮಾಡುತ್ತ ಪಠ್ಯಪುಸ್ತಕ ಸುಡಬೇಕು. ಪತ್ನಿಯು ಪತಿಯನ್ನು ತುಚ್ಛನೆಂದು ಬಗೆದು ತನ್ನ ಚರಿತ್ರ ಹೀನತೆಯ ಬಗ್ಗೆ ಡಂಗೂರ ಸಾರಬೇಕು. ಅಥವಾ ಪತಿಯು ಪತ್ನಿಯ ಅವಜ್ಞೆ ಮಾಡಿ, ಪರಸ್ತ್ರೀಸಂಗದ ಗುಣಗಾನ ಮಾಡಬೇಕು. ಈ ರೀತಿಯ ದುಃಸ್ಥಿತಿಯನ್ನು ಕಾಣುತ್ತಿದ್ದೇವೆ.

ಅನೇಕ ವಿಚಾರವಂತರು ಚಿಂತನೆಯಲ್ಲಿ ತೊಡಗಿದ್ದಾರೆ. ಆದರೆ ಈ ಎಲ್ಲ ಅನರ್ಥಕ್ಕೆ ಮೂಲಭೂತವಾದ ಮನಸ್ಸೇ ಕುಟಿಲವಾಗಿದೆ. ಸಾವಿರಾರು ರೂಪಾಯಿ ಖರ್ಚುಮಾಡಿ ರಸ್ತೆಯನ್ನು ನೇರಗೊಳಿಸುತ್ತೇವೆ. ಆದರೆ ಮನಸ್ಸನ್ನು ನೇರಗೊಳಿಸುವಲ್ಲಿ ನಿಷ್ಕ್ರಿಯರಾಗಿದ್ದೇವೆ, ಮರವು ಚೆನ್ನಾಗಿ ಬೆಳೆಯಬೇಕಾದರೆ ಅದರ ಬೇರನ್ನು ಕಾಪಾಡದೆ ಎಲೆಗಳನ್ನು ಒರೆಸಿ ನೀರು ಗೊಬ್ಬರ ಹಾಕಿದರೆ ಉಳಿದೀತೆ ? ಬೀಜದ ಗುಣವೇ ವೃಕ್ಷದಲ್ಲಿ ವ್ಯಕ್ತ ವಾಗುತ್ತದೆ. ಮನುಷ್ಯನ ಮನಸ್ಸು ಶುದ್ಧವಾಗಿದ್ದರೆ, ಅವನ ಎಲ್ಲ ಕೆಲಸ ಗಳು ಸುಗಮವಾಗಿ ನಡೆಯುತ್ತವೆ. ಮನಸ್ಸು ಮಲಿನವಾಗಿದ್ದರೆ, ಅವನ ಕೆಲಸಗಳೆಲ್ಲ ಮಾಲಿನ್ಯದಿಂದ ಕೂಡಿರುತ್ತವೆ.

೪

ಇಂದು ಹೆಜ್ಜೆ ಹೆಜ್ಜೆಗೆ ಜನರು ಸಹಜವಾಗಿ ಅಸತ್ಯವನ್ನು ನುಡಿಯು ತ್ತಾರೆ. ಶಾಲೆಯಲ್ಲಿ, ಕಾಲೇಜಿನಲ್ಲಿ ಶಿಕ್ಷಣಶುಲ್ಕ ತುಂಬಬೇಕಾದಾಗ, ಕಡಿಮೆ ವರಮಾನ ಬರೆಸಿ ಸುಳ್ಳು ದಾಖಲೆಗಳನ್ನು ಸೃಷ್ಟಿಸುತ್ತಾರೆ. ಬಸ್ಸು ರೈಲುಗಳಲ್ಲಿ ಪ್ರಯಾಣ ಮಾಡುವಾಗ ಮಕ್ಕಳ ವಯಸ್ಸನ್ನು ಕಡಿಮೆ ಹೇಳಿ ಅರ್ಧ ಟಿಕೇಟನ್ನು ಪಡೆಯುತ್ತಾರೆ. ನ್ಯಾಯಬೆಲೆ ಚೀಟಿಯನ್ನು ಮಾಡಿಸುವಾಗ ಇರುವುದಕ್ಕಿಂತ ಹೆಚ್ಚು ಜನರನ್ನು ಬರೆಸುತ್ತಾರೆ. ಈ ಎಲ್ಲ ವ್ಯವಹಾರಗಳು ಮಕ್ಕಳ ಎದುರಿನಲ್ಲಿ ನಡೆಯುತ್ತಿರುತ್ತವೆ. ಇದರಿಂದ

ಚಿಕ್ಕಂದಿನಿಂದಲೇ ಮಕ್ಕಳು ವ್ಯವಹಾರದಲ್ಲಿ ಮುಚ್ಚುಮರೆ, ಅಸತ್ಯ ಇವೆಲ್ಲ ಅವಶ್ಯವೆಂದು ಭಾವಿಸುವಂತೆ, ಪರೋಕ್ಷವಾಗಿ ಅವರ ಮನಸ್ಸಿನ ಮೇಲೆ ಸಂಸ್ಕಾರಗಳು ಮೂಡುತ್ತವೆ. ಶಾಲೆಗೆ ಹೋಗುತ್ತಾರೆ. ಅಲ್ಲಿಯೂ ಅವರಿಗೆ ಅದೇ ಅನುಭವವಾಗುತ್ತದೆ. ಅಭ್ಯಾಸಮಾಡಿ ಸ್ವಂತ ಯೋಗ್ಯತೆಯಿಂದ ಉತ್ತೀರ್ಣರಾಗಬೇಕು ಎನ್ನುವುದಕ್ಕಿಂತ, ಓದಲಾರದೆ ಯುಕ್ತಿ-ಕುಯುಕ್ತಿಗಳಿಂದ ಹೇಗೆ ಉತ್ತೀರ್ಣರಾಗಬೇಕು ಎಂಬುದನ್ನು ಚೆನ್ನಾಗಿ ಕಲಿತಿರುತ್ತಾರೆ. ಶಾಲೆ ಕಾಲೇಜುಗಳಲ್ಲಿ ವಾರ್ಷಿಕೋತ್ಸವ, ಸ್ನೇಹಸಮ್ಮಿಲನಗಳಾಗುತ್ತವೆ. ಅಲ್ಲಿಯೂ ಕೂಡಾ ಚಂದಾಹಣವನ್ನು ಎತ್ತಿಹಾಕುವುದು, ಸುಳ್ಳು ಬಹುಮಾನಗಳನ್ನು ಸೃಷ್ಟಿಸುವುದು, ವ್ಯರ್ಥ ಖರ್ಚು ತೋರಿಸಿ ಸಾರ್ವಜನಿಕರ ಹಣವನ್ನು ಪೋಲು ಮಾಡುವುದು, ಅದರಲ್ಲಿ ಸ್ವಂತದ ಲಾಭ ಮಾಡಿಕೊಳ್ಳುವುದು – ಇತ್ಯಾದಿ ಗುಣಗಳನ್ನು ಕಲಿಯುತ್ತಾರೆ. ಚಲನಚಿತ್ರಗಳು ಇಂದಿನ ಎಳೆಯ ಪೀಳಿಗೆಯ ಮೇಲೆ ತಮ್ಮ ಸಮ್ಮೋಹನಾಸ್ತ್ರವನ್ನು ಹಾಕಿವೆ. ಅದರಲ್ಲಿ ಹೆಚ್ಚಿನ ಚಿತ್ರಗಳು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪಾಪಪ್ರವೃತ್ತಿಯನ್ನು ಹೆಚ್ಚಿಸಿ ಬಹಳ ದುಷ್ಪರಿಣಾಮವನ್ನುಂಟು ಮಾಡುತ್ತವೆ. ಈ ಎಲ್ಲ ಪರಿಸರದ ಪ್ರಭಾವ ಹೊಸ ಪೀಳಿಗೆಯ ಮೇಲೆ ಯಾವ ರೀತಿ ಆಗುತ್ತಿದೆ? 'ರಾಕ್ಷಸರ ತಾಯಿ' ಸುಪ್ರಸಿದ್ಧ ಫ್ರೆಂಚ್ ಕಥೆಗಾರ ಗಾಯ ಡಿ ಮೋಪಾಸಾನ ಬೀಭತ್ಸಪೂರ್ಣ ಕಥೆ. ಅದರಲ್ಲಿ ಒಬ್ಬ ದುಷ್ಟ ಹೆಂಗಸು, ತನ್ನ ಗರ್ಭಸ್ಥ ಶಿಶುವನ್ನು ನಾನಾ ರೀತಿಯ ಕ್ರೂರ ಉಪಾಯಗಳಿಂದ ಕುರೂಪಗೊಳಿಸುತ್ತಾಳೆ. ಮತ್ತೆ ಆ ಅಸಹ್ಯಕರ ಮಕ್ಕಳ ಪ್ರದರ್ಶನದಿಂದ ಹಣ ಗಳಿಸುತ್ತಾಳೆ. ಆ ಮಕ್ಕಳ ಅವಯವಗಳು ಕುರೂಪವಾಗಿ ಅಂಕುಡೊಂಕಾಗಿದ್ದವು. ಇಂದು ನಮ್ಮ ಮಕ್ಕಳ ಶರೀರ ಅಂದಚಂದಗಳಿಂದ ಕೂಡಿದ್ದರೂ ಮನಸ್ಸುಗಳು ಕುರೂಪವಾಗಿವೆ, ಆ ಕಥೆಯಲ್ಲಿ ರಾಕ್ಷಸ ಮಾತೆ ಇದ್ದಾಳೆ. ಇಂದು ನಮ್ಮ ಸಮಾಜ ರಾಕ್ಷಸ ಪಿತನಾಗಿದೆ.

ಹೊರಜಗತ್ತಿನ ಪ್ರತಿಯೊಂದು ವಲಯದಲ್ಲಿಯೂ ಸಿಗುತ್ತಿರುವ ಕುಸಂಸ್ಕಾರಗಳ ದೊಡ್ಡ ಹೊರೆಯನ್ನು ಹೊತ್ತುಕೊಂಡ ಯುವಪೀಳಿಗೆ

ಗೃಹಸ್ಥಾಶ್ರಮವನ್ನು ಪ್ರವೇಶಿಸುತ್ತಿದೆ. ಇಂಥ ಸಮಾಜಘಟಕ ತನ್ನ ಸುತ್ತಮುತ್ತ ಕುಟಿಲತೆಯನ್ನೇ ಬೆಳೆಸುವುದರಲ್ಲಿ ಆಶ್ಚರ್ಯವಿಲ್ಲ !

೨೩

ಮನುಷ್ಯ ಒಂದು ಸುಳ್ಳು ಹೇಳಿದರೆ ಅದನ್ನು ಮುಚ್ಚುವುದಕ್ಕಾಗಿ ಹತ್ತು ಸುಳ್ಳು ಹೇಳಬೇಕಾಗುತ್ತದೆ. ಅವನ ಸಹವಾಸದಿಂದ ಇತರರಿಗೂ ಸುಳ್ಳು ಹೇಳುವ ಅಭ್ಯಾಸವಾಗುತ್ತದೆ. ಈ ರೋಗ ನಿಧಾನವಾಗಿ ಹರಡಿ, ಪೂರ್ತಿ ಸಮಾಜವನ್ನೇ ಆಕ್ರಮಿಸುತ್ತದೆ. ಈ ವಿಷವರ್ತುಲ ಒಮ್ಮೆ ಆರಂಭವಾದರೆ ಕೊನೆಗೊಳ್ಳುವುದೇ ಇಲ್ಲ. ವಾಸ್ತವಿಕವಾಗಿ ನೇರ ದಾರಿಯಲ್ಲಿ ಕೆಲಸ ಸುಗಮವಾಗಿ ಆಗುವಂತೆ ಅಡ್ಡದಾರಿಯಲ್ಲಿ ಆಗುವುದಿಲ್ಲ. ಆದರೆ ಕೆಲವು ಜನರಿಗೆ ಅಧಿಕಪ್ರಸಂಗಿತನವೇ ಸೇರುತ್ತದೆ. ತಿಳಿದೂ ತಿಳಿದೂ ಅವರು ಕುತ್ಸಿತವಾದ ಬುದ್ಧಿಯಿಂದ ನಡೆದು ತಮ್ಮ ಮೇಲೆಯೂ ಮತ್ತು ಸಮಾಜದ ಮೇಲೆಯೂ ಆಪತ್ತನ್ನು ಎಳೆದುಕೊಳ್ಳುತ್ತಾರೆ.

ರಾಜಕಾರಣಿಗಳು, ಸೈನ್ಯಾಧಿಕಾರಿಗಳು, ರಾಜದೂತರು, ಗುಪ್ತದಳ ದವರು ಹಾಗೂ ಇಂಥ ಅನೇಕ ಜವಾಬ್ದಾರಿಯುಳ್ಳ ವ್ಯಕ್ತಿಗಳು ವಿಶಿಷ್ಟ ಪರಿಸ್ಥಿತಿಯಲ್ಲಿ, ಕಪಟಯುಕ್ತಿಗಳನ್ನು ಮಾಡಬೇಕಾಗುತ್ತದೆ. ಆಗ ಅದು ಕ್ಷಮ್ಯವೆನಿಸುತ್ತದೆ. ಆದರೆ ಸಮಾಜದ ಎಲ್ಲ ಜನರು ಈ ರೀತಿ ಕಪಟತನದಿಂದ ವರ್ತಿಸಿದರೆ, ದುರವಸ್ಥೆಯ ಪ್ರಸಂಗ ಬಾರದೆ ಇರಲಾರದು. ಈ ಪ್ರವೃತ್ತಿಯಿಂದ ನಿರಾಶೆ, ಸ್ವಾರ್ಥ, ಆತ್ಮಗ್ಲಾನಿ, ನಾಸ್ತಿಕತೆ ಹುಟ್ಟಿಕೊಳ್ಳುತ್ತವೆ. ಈ ದುರ್ಗುಣಗಳು ನಾಶವಾದಾಗ ಸಮಾಜದಲ್ಲಿ ಎಲ್ಲರ ಮನಗಳೂ ನಿರ್ಮಲವಾಗುತ್ತವೆ. ಶುದ್ಧವಾದ, ಸ್ಫಟಿಕ ದಂತೆ ಸ್ವಚ್ಛವಾದ, ನಿಷ್ಕಾಮ ಮನಸ್ಸಿನ ಜನರನ್ನು ಗೌರವಿಸುವ ಸಮಾಜ ಮತ್ತು ಅಂಥ ಜನರುಳ್ಳ ಸಮಾಜ ಆದರ್ಶಪ್ರಾಯವಾಗಿರುತ್ತದೆ. ಆ ಸಮಾಜಕ್ಕೆ ಇಹಪರ ಸೌಖ್ಯ ಒದಗುತ್ತದೆ.

ಈ ರೀತಿಯ ಮುಗ್ಧತೆಯನ್ನು ಮಕ್ಕಳಲ್ಲಿ ಕಾಣಬಹುದು. ಆದರೆ ಮಕ್ಕಳ ಮೂಲಪ್ರವೃತ್ತಿಯಾದ ಈ ಮುಗ್ಧಸ್ವಭಾವವನ್ನು ನಾವು ಕಲುಷಿತಗೊಳಿಸುತ್ತಿದ್ದೇವೆ. ಈ ರೀತಿ ಆಗಬಾರದು. ಇಟ್ಟಿಗೆಗಳು

ನೇರವಾಗಿರುತ್ತವೆ. ಆದರೆ ಅವನ್ನು ರಾಶಿಯಾಗಿ ಚೆಲ್ಲಿದಾಗ ಅಡ್ಡಾದಿಡ್ಡಿಯಾಗಿ ಬೀಳುತ್ತವೆ. ಕುಶಲನಾದ ಕೆಲಸಗಾರ, ಮಣ್ಣು ಸುಣ್ಣಗಳ ಸಹಾಯದಿಂದ ಒಂದೇ ಪಂಕ್ತಿಯಲ್ಲಿ ಇಡುತ್ತಾನೆ. ಅಡ್ಡಾದಿಡ್ಡಿಯಾದ ಕಲ್ಲುಗಳನ್ನು ಬಳಸಿ ಮನೆಕಟ್ಟುತ್ತಾನೆ. ಆ ಮನೆಯಲ್ಲಿ ಮನುಷ್ಯ ಚಳಿ, ಮಳೆ, ಬಿಸಿಲಿನಿಂದ ರಕ್ಷಣೆ ಪಡೆಯುತ್ತಾನೆ. ಅದೇ ರೀತಿ ರಾಷ್ಟ್ರದ ಪ್ರಗತಿಯಾಗಬೇಕಾದರೆ ನಿಷ್ಕಲ್ಮಶವಾದ ಮನೆಗಳನ್ನು ಕಟ್ಟಬೇಕು. ಮನಸ್ಸು ಮತ್ತು ಇಂದ್ರಿಯಗಳ ಓರೆಕೋರೆಗಳನ್ನು ಕತ್ತರಿಸಿ ಸರಳಗೊಳಿಸಿಕೊಳ್ಳಬೇಕು.

೭

ಅಪಾರ ಪಾಂಡಿತ್ಯದಿಂದ ಸ್ವಭಾವ ನಿಷ್ಕಳಂಕವಾಗುತ್ತದೆಂದು ಹೇಳಲಾಗುವುದಿಲ್ಲ. ಇದಕ್ಕೆ ವ್ಯಾಸ ಮತ್ತು ಶಂಕರ ಉದಾಹರಣೆಗಳು ಪ್ರಸಿದ್ಧವಿದೆ. ಶ್ರೀಕೃಷ್ಣನ ಬಾಲ್ಯಜೀವನ ಮನುಷ್ಯನ ನಿಷ್ಕಳಂಕ ಸ್ವಭಾವಕ್ಕೆ ಒಂದು ಮಾದರಿ.

ಚಿಕ್ಕ ಮಕ್ಕಳ ಅಂತರಂಗ ನಿರ್ಮಲವಾಗಿರುವುದರಿಂದ ಅವರ ಮುಖದ ಮೇಲೆ ಯಾವಾಗಲೂ ಪ್ರಸನ್ನಕಳೆ ಇರುತ್ತದೆ. ಅವರು ಎಲ್ಲರಿಗೂ ಇಷ್ಟವಾಗುತ್ತಾರೆ. ಮಕ್ಕಳು ಮಾಡುವ ತಪ್ಪುಗಳು ಕ್ಷಮ್ಯವಷ್ಟೇ ಅಲ್ಲ, ಕೌತುಕಪೂರ್ಣವೂ ಆಗಿರುತ್ತವೆ. ಮಕ್ಕಳ ದುಃಖದಿಂದ ಎಲ್ಲರ ಅಂತಃಕರಣಗಳು ಕಲಕುತ್ತವೆ. ಅವರ ಆನಂದದಿಂದ ಎಲ್ಲೆಲ್ಲೂ ಆನಂದದ ಲಹರಿ ಪಸರಿಸುತ್ತದೆ.

ಮಗು ತನ್ನ ತಂದೆ-ತಾಯಿಯರನ್ನು ಅವಲಂಬಿಸಿರುತ್ತಾನೆ. ಸ್ವಾರ್ಥಚಿಂತೆಗಳು ಅವನನ್ನು ಕಾಡುವುದಿಲ್ಲ. ಅವನ ಮನಸ್ಸು ಸಂವೇದನಾ ಶೀಲನಾಗಿರುತ್ತದೆ. ಇನ್ನೊಬ್ಬರ ದುಃಖದಲ್ಲಿ ಅವನು ದುಃಖಿಯಾಗು ತ್ತಾನೆ. ಇನ್ನೊಬ್ಬರ ಸುಖದಲ್ಲಿ ಆನಂದಗೊಳ್ಳುತ್ತಾನೆ. ಹುಲಿಯ ಬಾಯಿಗೆ ಆಹಾರವಾಗಲು ಹೊರಟ ಪುಣ್ಯಕೋಟಿ ಗೋವಿನ ಕಥೆ ಕೇಳಿ ಕಣ್ಣೀರು ಸುರಿಸುತ್ತಾನೆ. ಕ್ರೂರ ರಾಕ್ಷಸನೊಂದಿಗೆ ಪರಾಕ್ರಮದಿಂದ ಕಾದಾಡಿದ ರಾಜಪುತ್ರನ ಕಥೆಯಿಂದ ರೋಮಾಂಚಿತನಾಗುತ್ತಾನೆ. ಕಥಾನಾಯಕನ

ವಿಜಯ ಅವನಿಗೆ ಅತೀವ ಆನಂದ ಉಂಟುಮಾಡುತ್ತದೆ. ಚಪ್ಪಾಳೆ ತಟ್ಟಿ ಕುಣಿಯುತ್ತಾನೆ.

ಮಗುವಿಗೆ ಕಪಟತನ ಗೊತ್ತಿರುವುದಿಲ್ಲ. ಕಲಿಸಿಕೊಟ್ಟರೂ ತಿಳಿಯುವುದಿಲ್ಲ.

ಒಮ್ಮೆ ಒಬ್ಬ ಸಾಹುಕಾರ ಸಾಲ ವಸೂಲಿಗಾಗಿ ಬಂದ. ಮನೆಯೊಳಗಿದ್ದ ತಂದೆ ಮಗುವಿಗೆ – "ಅಪ್ಪ ಮನೆಯಲ್ಲಿ ಇಲ್ಲ ಅಂತ ಹೇಳು" ಎಂದು ಹೇಳಿಕೊಟ್ಟ. ಆಗ ಮಗು ಹೊರಕ್ಕೆ ಬಂದು ಸಾಹುಕಾರನಿಗೆ – "ಅಪ್ಪಾ ಮನೆಯಲ್ಲಿ ಇಲ್ಲ ಅಂತ ಹೇಳು ಅಂದಿದ್ದಾರೆ" ಎಂದು ಮುಗ್ಧವಾಗಿ ನುಡಿಯಿತು. ಅದಕ್ಕೆ ಸಾಹುಕಾರ "ಹೌದೇ ಮಗು! ಅವರು ಈಗ ಏನು ಮಾಡುತ್ತಿದ್ದಾರೆ ?" ಅಂದಾಗ, ಮಗು – "ಅಡಿಗೆಮನೆಯಲ್ಲಿ ಅವಲಕ್ಕಿ ತಿನ್ನುತ್ತಾ ಕುಳಿತಿದ್ದಾರೆ" ಎಂದು ಹೇಳಿತು.

ಚಿಕ್ಕ ಮಕ್ಕಳಿಗೆ ಅನ್ಯಾಯ ಮತ್ತು ಮೋಸಗಳನ್ನು ಕಂಡಾಗ ಕ್ರೋಧ ಉಂಟಾಗುತ್ತದೆ. ತನ್ನ ತಂದೆ ಒಳ್ಳೆಯ ಗೋವುಗಳನ್ನು ತನಗಾಗಿ ಇಟ್ಟುಕೊಂಡು ಮುದಿಯಾದ ಹಾಲು ಕೊಡದ ಹಸುಗಳನ್ನು ದಾನ ಮಾಡಿದ್ದನ್ನು ಕಂಡ ನಚಿಕೇತ ಕ್ರೋಧಗೊಂಡ.

೭

ಪ್ರಪಂಚದಲ್ಲಿ ಮಾನವತೆಯ ಪ್ರತೀಕರಾದ ಮಹಾಪುರುಷರೆಲ್ಲಾ ಬಾಲಸಹಜ ಸ್ವಭಾವದವರಾಗಿದ್ದರು. ರಾಮಕೃಷ್ಣ ಪರಮಹಂಸರ ಜೀವನ ಇದಕ್ಕೆ ಉದಾಹರಣೆ. ಈ ಬಾಲಸಹಜ ಪ್ರವೃತ್ತಿಯ ಆದರ ಎಂದರೆ ಸರಳವಾದ ನಿಷ್ಕಲಂಕವಾದ ಸ್ವಭಾವಕ್ಕೆ ಮನ್ನಣೆ. ಈ ರೀತಿಯ ಮನ್ನಣೆ ದೊರೆಯುವ ಸಮಾಜವು ಉನ್ನತಿಯನ್ನು ಸಾಧಿಸುತ್ತದೆ. ಉಚ್ಚ-ನೀಚ, ಸುಖ-ದುಃಖ, ಒಣಪ್ರತಿಷ್ಠೆ, ಲಾಭ-ಹಾನಿ ಇತ್ಯಾದಿಗಳಲ್ಲೇ ಇಂದಿನ ಸಮಾಜ ವೈ ಮರೆತಿದೆ. ಆದ್ದರಿಂದ ಬಾಳಿನಲ್ಲಿ ಸಹಜ ಮಾಧುರ್ಯ ಇಲ್ಲದಂತಾಗಿದೆ. ಮುಚ್ಚುಮರೆ, ಸೋಮಾರಿತನದ ಅಸಹಜ ಸ್ಥಿತಿ ಒದಗಿದೆ. ಒಬ್ಬ ಮತ್ತೊಬ್ಬನ ಜೀವನದಲ್ಲಿ ಕಲ್ಲುಮುಳ್ಳುಗಳನು ತುಂಬುತ್ತಿದ್ದಾನೆ. **What man has made of Man** – ಮನುಷ್ಯನನ್ನು ಹೀನ ಮಾಡಿದ ಮನುಷ್ಯ

– ವರ್ಡ್ಸ್‌ವರ್ತ್‌ನ ಈ ಕವಿತೆ ಪ್ರಸಿದ್ಧವಿದೆ. ಓ ಹೆನ್ರಿ ಎಂಬ ಅಮೇರಿಕನ್ ಲೇಖಕನ ಒಂದು ಉತ್ತಮ ಕಾದಂಬರಿಯೂ ಇದೇ ವಸ್ತುವಿನಿಂದ ಕೂಡಿದೆ. ಒಬ್ಬ ನಿಪುಣ ಕಲಾಕಾರನಿದ್ದ. ಒಮ್ಮೆ ಅವನಿಗೆ ಭಗವಂತನ ಚಿತ್ರ ಬರೆಯು ಬೇಕೆಂದು ಆಸೆಯಾಯಿತು. ಚಿಕ್ಕ ಮಕ್ಕಳು ದೇವರಂತೆ ತೇಜಸ್ವಿಯಾಗಿರುತ್ತಾರೆ ಎಂದು ವಿಚಾರ ಮಾಡಿ ಅದಕ್ಕೆ ಬೇಕಾದ ಶಾಂತ, ಸೌಮ್ಯ, ಸುಂದರ, ಭಾವಪೂರ್ಣವಾದ ಮುಖವನ್ನು ಹುಡುಕುತ್ತಾ ಹೊರಟ. ಅನೇಕ ಹಳ್ಳಿ ಪಟ್ಟಣಗಳನ್ನು ಸುತ್ತಿದ. ತಿಂಗಳುಗಟ್ಟಲೆ ತಿರುಗಿದ ಮೇಲೆ ಅವನಿಗೆ ಬೇಕಾದಂತಹ ಒಂದು ಮಗು ಸಿಕ್ಕಿತು. ಚಿತ್ರಕಾರನಿಗೆ ಆ ಮಗು ಬಹಳ ಇಷ್ಟವಾಯಿತು. ಮಗುವಿನ ತಂದೆತಾಯಿನ್ನು ಭೇಟಿಯಾಗಿ ಅವರ ಒಪ್ಪಿಗೆಯನ್ನು ಪಡೆದ ಚಿತ್ರಕಾರ ಮಗುವಿನ ಚಿತ್ರ ರಚಿಸತೊಡಗಿದ. ಒಂದು ತಿಂಗಳು ಕಳೆಯಿತು. ಚಿತ್ರ ಪೂರ್ಣಗೊಂಡಿತು. ಅದು ಜಗತ್ತಿನ ಅತ್ಯುತ್ತಮ ಚಿತ್ರವೆಂದು ಮಾನ್ಯತೆ ಪಡೆಯಿತು. ಆ ಚಿತ್ರದಿಂದ ಚಿತ್ರಕಾರ ಪ್ರಸಿದ್ಧನಾದ. ಅವನಿಗೆ ತನ್ನ ಬಗ್ಗೆಯೇ ಧನ್ಯತೆ ಎನಿಸಿತು. ಇನ್ನು ಮುಂದೆ ಬೇರೆ ಚಿತ್ರ ಬರೆಯುವುದಿಲ್ಲ ಎಂದು ಕುಂಚವನ್ನು ಕೆಳಗಿಟ್ಟ. ಹೀಗೆ ಇಪ್ಪತ್ತು ವರ್ಷ ಕಳೆದವು. ಇದ್ದಕ್ಕಿದ್ದಂತೆ ಅವನಿಗೆ ಒಬ್ಬ ಭಯಂಕರ ಕ್ರೂರಿಯ ಚಿತ್ರ ಬರೆಯಬೇಕೆಂಬ ಮನಸ್ಸಾಯಿತು. ಅದಕ್ಕಾಗಿ ಪುನಃ ಮಾದರಿಗಾಗಿ ಹುಡುಕಾಟ ನಡೆಸಿದ. ಇಂಥ ಭಯಾನಕ ಚಹರೆಯ ವ್ಯಕ್ತಿ ತನಗೆ ಸೆರೆಮನೆಯಲ್ಲಿ ಸಿಕ್ಕಬಹುದೆಂದು ಅನೇಕ ಸೆರೆಮನೆಗಳನ್ನು ಶೋಧಿಸಿದ. ಕೊನೆಗೂ ಅವನಿಗೆ ಬೇಕಾದ ಮುಖ ಸಿಕ್ಕಿತು. ಅನೇಕ ಅಪರಾಧಗಳನ್ನು ಮಾಡಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಒಬ್ಬ ಅಪರಾಧಿಯನ್ನು ತನ್ನ ಚಿತ್ರಕ್ಕಾಗಿ ವಿನಂತಿಸಿಕೊಂಡ. ಕೆಲವು ದಿನಗಳ ನಂತರ ಚಿತ್ರ ಪೂರ್ಣಗೊಂಡಿತು. ಉತ್ತಮ ರೀತಿಯಿಂದ ಸಹಕರಿಸಿದ್ದಕ್ಕೆ ಅವನಿಗೆ ಚಿತ್ರಕಾರ ಅಭಿನಂದಿಸಿದ. ಆಗ ಆ ಅಪರಾಧಿ ಹೇಳಿದ: "ನಿಮ್ಮ ಮುಖ ಎಲ್ಲಿಯೋ ನೋಡಿದಂತನ್ನಿಸುತ್ತಿದೆ, ನಾನು ಚಿಕ್ಕವನಿದ್ದಾಗ ಒಬ್ಬ ಚಿತ್ರಕಾರ ಇದೇ ರೀತಿ ನನ್ನ ಚಿತ್ರ ಬರೆದಿದ್ದ. ಆಗ ನಾನು ಬಹುಶಃ ಎಂಟು ವರ್ಷದವನಾಗಿರಬಹುದು." ಚಿತ್ರಕಾರನ ಕೈಯಿಂದ ಕುಂಚ ಜಾರಿತು.

7063

೮

ಈ ಕಥೆಯ ತಿರುಳು ಸಾರ್ವಕಾಲಿಕವಾದದ್ದು, ಸಾರ್ವತ್ರಿಕವಾದದ್ದು. ಈಶ್ವರ ಮಕ್ಕಳರೂಪಿನಲ್ಲಿ ತನ್ನ ಪ್ರತಿರೂಪವನ್ನು ಕೊಟ್ಟಿರುತ್ತಾನೆ. ನಮ್ಮ ಮನೆಯಲ್ಲಿ ದೇವರ ಅವತಾರವಾಗಿರುತ್ತದೆ. ಆದರೆ ಆ ದೇವರನ್ನು ನಾವು ದಾನವರನ್ನಾಗಿ ಪರಿವರ್ತಿಸುತ್ತೇವೆ. ಪರಿಣಾಮಗಾಗಿ ಸಮಗ್ರ ಜೀವನ ಹಾಳಾಗುತ್ತದೆ. ನಮ್ಮ ಜೀನವನ ಸರ್ವಸಂಪನ್ನವಾಗಬೇಕೆಂಬ ಕಾಳಜಿ ಇದ್ದರೆ, ನಾವು ಮಕ್ಕಳನ್ನು ಚೆನ್ನಾಗಿ ಪೋಷಿಸಬೇಕು ಮತ್ತು ಬಾಲಸಹಜ ಸ್ವಭಾವವನ್ನು ಕಾಪಾಡಬೇಕು.

ಬಾಲಸ್ವಭಾವವೆಂದರೆ ಹುಡುಗಾಟವಲ್ಲ. ಸರಳತನವೆಂದರೆ ಭೋಳೆತನವಲ್ಲ. ಆನಂದವೃತ್ತಿ ಎಂದರೆ ಕರ್ತವ್ಯಹೀನ ಮೋಜಲ್ಲ. ಮನುಷ್ಯನ ಎಲ್ಲಾ ದುರ್ಗುಣಗಳು ಅವನ ಸ್ವಾರ್ಥಮೂಲವಾದವುಗಳು. ಆದರೆ ಮಗುವಿಗೆ ಸ್ವಾರ್ಥಭಾವನೆ ಇರುವುದಿಲ್ಲ. ಬಾಲಸಹಜ ಪ್ರವೃತ್ತಿಯೆಂದರೆ, ನಿರ್ವ್ಯಾಜ ಮನೋಹರ ಸ್ವಭಾವ. ಬಾಲಸಹಜ ಪ್ರವೃತ್ತಿಯೆಂದರೆ ಋಜುತ್ವ, ಸೌಜನ್ಯ, ಸರಳತೆ. ಜನರ ಮುಂದೆ ತೋರಿಕೆಗಾಗಿ ಇದ್ದ ಸೌಜನ್ಯವಲ್ಲ. ತಾಯಿಯ ಹಾಲು ಮಗುವಿಗೆ ಯಾವಾಗಲೂ ಹಿತಕರವಾಗಿರುವಂತೆ, ಈ ಜಗತ್ತಿನಲ್ಲಿ ಚೈತನ್ಯವು ಯಾವ ಭೇದಭಾವವನ್ನೂ ಇಡದೆ ಎಲ್ಲರಿಗೂ ಜೀವದಾನ ಮಾಡುವಂತೆ, ಋಜುತೆ ಯಾವಾಗಲೂ ಎಲ್ಲರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ಮಾಡುತ್ತದೆ.

ಸಂವೇದನಾಶೀಲ ಮನುಷ್ಯನಲ್ಲಿ ಋಜುತೆ ಇರುತ್ತದೆ. ಕಲ್ಲನ್ನು ಎಡವಿದಾಗ ಕಾಲಿಗೆ ಗಾಯವಾಗುತ್ತದೆ, ರಕ್ತ ಸುರಿಯುತ್ತದೆ. ಗಾಯಗೊಂಡವನು ನರಳುತ್ತಾನೆ, ಅಳುತ್ತಾನೆ. ಇದರಿಂದ ಕಲ್ಲಿಗೆ ಯಾವುದೇ ಪರಿಣಾಮವಾಗುವುದಿಲ್ಲ. ಇದರಂತೆ ಎಷ್ಟೋ ಜನರು ಕಲ್ಲುಹೃದಯದವರಾಗಿರುತ್ತಾರೆ. ಅವರಿಂದ ಋಜುತೆ ಯಾವಾಗಲೂ ದೂರವಿರುತ್ತದೆ.

ಕೆಲವು ಜನರು ಕುಟಿಲರಾಗಿರುತ್ತಾರೆ. ಕುಯುಕ್ತಿಗಳಲ್ಲೇ ಆನಂದ ಪಡೆಯುತ್ತಾರೆ, ಒಮ್ಮೆ ಒಬ್ಬ ಕಳ್ಳ ಒಬ್ಬ ಗೃಹಸ್ಥನ ಮನೆ ಹೊಕ್ಕ. ಮೇಜಿನ ಮೇಲೆ ನೂರು ರೂಪಾಯಿ ನೋಟು ಕಾಣಿಸಿತು. ಅದನ್ನು ತೆಗೆದು

ಕೊಂಡು ಓಡುವುದರಲ್ಲಿದ್ದ. ಅಷ್ಟರಲ್ಲಿ ಆ ಮನೆಯ ಆಳು ಅವನನ್ನು ಹಿಡಿದು ಯಜಮಾನನ ಮುಂದೆ ತಂದು ನಿಲ್ಲಿಸಿದ. ಆದರೆ ಯಜಮಾನ ಅವನನ್ನು ದಂಡಿಸದೆ ಅವನು ಕದ್ದ ಹಣವನ್ನು ಅವನಿಗೇ ಕೊಟ್ಟು ಯಾವುದಾದರೂ ಉದ್ಯೋಗ ಮಾಡುವಂತೆ ಹೇಳಿದ. ಆಗ ಆ ಕಳ್ಳ "ಇಲ್ಲ, ನಾನು ಕಳ್ಳತನದಿಂದಲೇ ಹಣವನ್ನು ಸಂಪಾದಿಸುವ ಪ್ರತಿಜ್ಞೆ ಮಾಡಿದ್ದೇನೆ" ಎಂದ.

ಅನೇಕ ಜನರು ಈ ರೀತಿ ವಾಮಮಾರ್ಗದಿಂದ ನಡೆಯುವ ಪಣ ತೊಟ್ಟಿರುತ್ತಾರೆ. ಅವರು ಯಾವಾಗಲೂ ಏಡಿಯಂತೆ ಅಂಕುಡೊಂಕಾಗಿ ನಡೆಯುತ್ತಾರೆ ಮತ್ತು ಕುಹಕ ನುಡಿಯುತ್ತಾರೆ. ಎಲ್ಲಿ ಈ ರೀತಿಯ ಕುಟಿಲತೆ ತುಂಬಿದೆಯೋ ಅಲ್ಲಿ ಋಜುತೆ ಹೇಗೆ ನೆಲಸುವುದು?

೯

ಋಜುತೆಯಿರಬೇಕಾದರೆ ಮಕ್ಕಳ ಮುಗ್ಧತೆ ಬೇಕು, ತನ್ಮಯತೆ ಬೇಕು. ತನ್ಮಯನಾಗುವನು, ಪ್ರೀತಿಸುವವನು ಅಥವಾ ಯಾವುದೇ ಒಂದು ವಿಷಯದಲ್ಲಿ ಮಗ್ನನಾಗುವವನು ಸರಳ ಸ್ವಭಾವಿಯಾಗಿರುತ್ತಾನೆ.

ಋಜುತೆ ಇರಬೇಕಾದರೆ ಶರೀರ ಮತ್ತು ಮನಸ್ಸಿನಿಂದ ಶಕ್ತಿಶಾಲಿ ಯಾಗಿರಬೇಕಾಗುತ್ತದೆ. ಆತ್ಮವಿಶ್ವಾಸವಿಲ್ಲದ ದುರ್ಬಲ ವ್ಯಕ್ತಿ ತನ್ನ ಮೇಲೆ ಮತ್ತು ಇತರರ ಮೇಲೆ ಕೋಪಗೊಳ್ಳುತ್ತಾನೆ. ಆತ್ಮಬಲ ಸಂಪನ್ನರು ಸರಳರಾಗಿರುತ್ತಾರೆ. ಕುಟಿಲರಾದವರನ್ನು ಸರಳರನ್ನಾಗಿ ಮಾಡುವ ಸಾಮರ್ಥ್ಯ ಅವನಲ್ಲಿದೆ.

ಋಜುತೆ ಹೊಂದಿರಬೇಕಾದರೆ ಕ್ರೀಡಾಮನೋಭಾವ ಬೇಕು. ದುರ್ದೈವದಿಂದ ನಮ್ಮ ದೇಶದಲ್ಲಿ ಈ ಮಾತಿಗೆ ಕೊರತೆಯಿದೆ. ಚಿಕ್ಕಪುಟ್ಟ ಚುನಾವಣೆಗೆ ಸ್ಪರ್ಧಿಸುವವರು ಪರಸ್ಪರ ಶತ್ರುಗಳಂತೆ ವರ್ತಿಸುತ್ತಾರೆ. ಸರಕಾರದಿಂದ ಅಥವಾ ಶಾಲೆ ಕಾಲೇಜುಗಳಿಂದ ಏರ್ಪಡಿಸಿದ ಕ್ರೀಡೆಗಳಲ್ಲಿ ಕೂಡಾ ಕ್ರೀಡಾಮನೋಭಾವ ಕಂಡುಬರುವುದಿಲ್ಲ. ಬೇರೆ ಊರುಗಳಿಂದ ಬಂದ ಆಟಗಾರರಿಗೆ ಬೆದರಿಕೆ ಹಾಕುವುದು, ಕೈಕಾಲು ಮುರಿಯುವುದು, ಎಲ್ಲ

ಬಗೆಯ ತೋಂದರೆ ಕೊಡುವುದನ್ನು ಎಲ್ಲೆಲ್ಲೂ ನೋಡುತ್ತೇವೆ. ಜೀವನದಲ್ಲಿ ಕ್ರೀಡಾಮನೋಭಾವ ಬೆಳೆಸಿಕೊಳ್ಳಬೇಕೆಂಬ ಧ್ಯೇಯ ಯಾರಿಗೂ ಇಲ್ಲ.

ಎರಡು ಪಕ್ಷಗಳ ಆಟಗಾರರು ಒಂದೆಡೆ ಸೇರಿದಾಗ 'ಸಮಾನಶೀಲ ವ್ಯಸನೇಷು ಸಖ್ಯಮ್" ಎಂಬಂತೆ ಮಿತ್ರರಾಗುತ್ತಾರೆ. ಆಟದಲ್ಲಿ ತಮ್ಮ ಪೂರ್ಣ ಕುಶಲತೆಯನ್ನು ಪಣಕ್ಕಿಟ್ಟು, ಒಬ್ಬರನ್ನೊಬ್ಬರು ಸೋಲಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಆಟ ಮುಗಿದ ತಕ್ಷಣ ಮುಕ್ತ ಮನಸ್ಸಿನಿಂದ ಸೋಲು-ಗೆಲುವುಗಳನ್ನು ಮರೆತು ಪರಸ್ಪರ ಸ್ನೇಹದಿಂದ ವರ್ತಿಸುತ್ತಾರೆ. ಈ ಬಗೆಯ ಸ್ನೇಹಭಾವ ಇಂದು ಅಪರೂಪವಾಗಿದೆ.

ಜೀವನವೂ ಒಂದು ಆಟವಿದ್ದಂತೆ. ಚಿಕ್ಕ ಮಕ್ಕಳು ಜಗಳವಾಡು ತ್ತಾರೆ, ಪುನಃ ಮರೆತು ಆಟವಾಡುತ್ತಾರೆ. ಆಟದ ಮೈದಾನದಲ್ಲಿ ಇಳಿದಾಗ ಎರಡು ಕೊಟ್ಟು ಎರಡು ಪಡೆಯುವುದು ಇದ್ದೇ ಇದೆ. ಋಜುತೆ ಪಡೆಯ ಬೇಕಾದರೆ ಈ ರೀತಿಯ ಉದಾರಮನೋಭಾವ ಬೇಕು.

ಋಜುತೆಗಾಗಿ ಆನಂದವೃತ್ತಿ ಆವಶ್ಯಕ. ಯಾವುದೇ ಪರಿಸ್ಥಿತಿ ಯಲ್ಲೂ ರೋದಿಸುತ್ತ ಕೂಡುವುದು ಸರಿಯಲ್ಲ. ಕೆಲವರು ಎಷ್ಟೇ ಸುಖ ಸೌಲಭ್ಯಗಳಿದ್ದರೂ ದೈವವನ್ನು ದೂಷಿಸುತ್ತಾ ಕೂಡುತ್ತಾರೆ. ಮನುಷ್ಯ ಯಾವಾಗಲೂ ಆಶಾವಾದಿಯಾಗಿರಬೇಕು. ಚಿಕ್ಕ ಕಷ್ಟ ಬಂದರೂ ವಿಪತ್ತಿನ ದೊಡ್ಡ ಗುಡ್ಡವೇ ಕಡಿದುಬಿದ್ದಂತೆ ವರ್ತಿಸುತ್ತಾರೆ. ಇಂಥವರಲ್ಲಿ ಋಜುತೆ ಇರಲು ಹೇಗೆ ಸಾಧ್ಯ ?

ಋಜುತೆಯ ಪ್ರಾಪ್ತಿಗಾಗಿ ಆಸ್ತಿಕತೆ ಮತ್ತು ಭಗವಂತನಲ್ಲಿ ಶರಣಾಗತಿ ಭಾವ ಬೇಕು. ಚಿಕ್ಕ ಮಕ್ಕಳು ತಾಯಿ-ತಂದೆಯರನ್ನು ಅವಲಂಬಿಸುವಂತೆ ನಾವು ಭಗವಂತನನ್ನು ಆಶ್ರಯಿಸಬೇಕು. ಭಗವಂತ ನಮ್ಮ ತಂದೆ-ತಾಯಿ-ಬಂಧು : ಅವನು ನಮ್ಮ ರಕ್ಷಣೆಯ ಹೊಣೆ ಹೊತ್ತಿದ್ದಾನೆ ; ನಮ್ಮ ನೋವು, ಸಂಕಟ, ಅಡ್ಡಿ ಅಡಚಣೆಗಳಿಂದ ನಮ್ಮನ್ನು ಪಾರುಮಾಡುತ್ತಾನೆ ಎಂಬ ಭಾವನೆ ಮನುಷ್ಯನಿಗೆ ಅಗಾಧ ಬಲ ಕೊಡುತ್ತದೆ. ಮನಸ್ಸಿನ ಆತಂಕವನ್ನು ನಿವಾರಿಸುತ್ತದೆ.

ಯಾವ ಸಮಾಜದಲ್ಲಿ ಋಜುತೆ ಇಲ್ಲವೊ ಅಂಥ ಸಮಾಜದಲ್ಲಿ ಒಬ್ಬರು ಇನ್ನೊಬ್ಬರ ದಾರಿಯಲ್ಲಿ ಮುಳ್ಳುಗಳನ್ನು ಹರಡುತ್ತಾರೆ. ಒಬ್ಬರಿಗೊಬ್ಬರು

ಶತ್ರುಗಳಾಗುತ್ತಾರೆ. ಜೀವನವನ್ನು ದಾರುಣವನ್ನಾಗಿ ಮಾಡಿಕೊಳ್ಳು ತ್ತಾರೆ.

ಋಜುತೆ ಇದ್ದಲ್ಲಿ ಜನರು ಇತರರ ದಾರಿಗೆ ಹೂಗಳನ್ನು ಹಾಸುತ್ತಾರೆ. ಸಹಾಯ ಸಹಕಾರ ನೀಡುತ್ತಾರೆ. ಆ ಸಮಾಜವು ತನ್ನ ಸುತ್ತಮುತ್ತಲ ಜಗತ್ತಿನ ಚೇತನವನ್ನು ಸುಖಮಯವಾಗಿ ಮಾಡುತ್ತದೆ. ಇಹಪರದಲ್ಲಿ ಯಶಸ್ಸು, ಪ್ರಗತಿ ಮತ್ತು ಶಾಂತಿಯನ್ನು ಹೊಂದುತ್ತದೆ. ಪರಕೀಯರ ಹವ್ಯಾಸದಿಂದಾಗಿ ನಾವು ಕುಟಿಲತೆ, ಕ್ಷುದ್ರತೆ ಮೊದಲಾದ ದುರ್ಗುಣಗಳನ್ನು ಸ್ವೀಕರಿಸಿದ್ದೇವೆ. ಅವು ನಮ್ಮನ್ನು ಅಧೋಗತಿಗೆ ತಳ್ಳುತ್ತವೆ. ಆದ್ದರಿಂದ ಕೈಮೀರುವ ಮೊದಲೇ ಜಾಗ್ರತರಾಗಿ ದುರ್ಗುಣಗಳ ಕಪಿಮುಷ್ಟಿಯಿಂದ ನಮ್ಮನ್ನು ಬಿಡಿಸಿಕೊಂಡು ಚಿರಸೌಖ್ಯವನ್ನು ನೀಡುವ ಋಜುತೆಯನ್ನು ಧಾರಣೆ ಮಾಡಬೇಕಾಗಿದೆ.

ಅಧ್ಯಯನ

೧

ಪ್ರಾಚೀನ ಕಾಲದಲ್ಲಿ ಗುರುಕುಲದಲ್ಲಿ ಅಧ್ಯಯನ ಮುಗಿಸಿದ ಶಿಷ್ಯ ತನ್ನ ಸ್ವಗೃಹಕ್ಕೆ ಹೊರಡುವಾಗ ಗುರುಗಳು ಅವನಿಗೆ ಎಚ್ಚರಿಕೆ ನೀಡುತ್ತಿದ್ದರು : "ಯಾವಾಗಲೂ ಸತ್ಯವನ್ನು ನುಡಿ, ಧರ್ಮದಿಂದ ನಡೆ, ಸದಾ ಅಧ್ಯಯನಶೀಲನಾಗಿರು." ಸ್ವಾಧ್ಯಾಯಾನ್ಮಾ ಪ್ರಮದಃ ! ಎಷ್ಟೇ ಅಧ್ಯಯನ ಮಾಡಿದರೂ ಅದನ್ನು ಸತತವಾಗಿ ಅಭ್ಯಾಸದಿಂದ ಬೆಳಗಿಸದಿದ್ದರೆ, ಅದು ಕ್ರಮೇಣ ನಿರುಪಯುಕ್ತವಾಗುತ್ತದೆ. ಪಾತ್ರೆಯನ್ನು ಒಮ್ಮೆ ತೊಳೆದರೆ ಸಾಲದು. ವಾತಾವರಣದ ಪರಿಣಾಮದಿಂದ ಅದು ಪುನಃ ಪುನಃ ಮಲಿನವಾಗುತ್ತದೆ. ಅದಕ್ಕಾಗಿ ಮೇಲಿಂದ ಮೇಲೆ ಉಜ್ಜಿ ತೊಳೆಯುತ್ತಿರಬೇಕಾಗುತ್ತದೆ. ಇದೇ ಮಾತು ವಿದ್ಯೆ ಮತ್ತು ಕಲೆಗೂ ಅನ್ವಯಿಸುತ್ತದೆ. ಆದ್ದರಿಂದಲೇ ಗುರುಗಳು ಶಿಷ್ಯರಿಗೆ ಹೇಳುತ್ತಿದ್ದರು :

'ಸ್ವಾಧ್ಯಾಯಾನ್ಮಾ ಪ್ರಮದಃ' !

ಪುಸ್ತಕ ಜ್ಞಾನವು ಉಪಯುಕ್ತವಲ್ಲ. ಅದು ಬಾಯಿಪಾಠವಾಗಬೇಕು. ಬಾಯಿಪಾಠವಾದರೆ ಸಾಲದು, ಹೃದ್ಗತವಾಗಬೇಕು. ಹೃದ್ಗತವಾದರೆ ಸಾಲದು ಬುದ್ಧಿಯ ಮೂಲಕ ಪ್ರತಿನಿತ್ಯದ ವ್ಯವಹಾರದಲ್ಲಿ ತೇಜೋರೂಪದಿಂದ ಪ್ರಕಟವಾಗಬೇಕು. ಅದಕ್ಕಾಗಿ ಅಧ್ಯಯನ ಆವಶ್ಯಕ. ಓದಿದ್ದನ್ನೇ ಓದಬೇಕು, ತಿಳಿದದ್ದನ್ನೇ ತಿಳಿಯಬೇಕು, ಅದನ್ನೇ ವಿವರವಾಗಿ ಅರಿತುಕೊಳ್ಳಬೇಕು.

'ಸರ್ವರೊಳಗೊಂದೊಂದು ನುಡಿಗಲಿತು,
ವಿದ್ಯೆಯ ಪರ್ವತವೇ ಆದ ಸರ್ವಜ್ಞ'

ಎಂದು ಹೇಳಿದೆ.

ನಮಗೆ ಯಾವ ಸಭೆಯಲ್ಲಿ ವಾದಮಾಡಬೇಕಾಗಿದೆ? ನಾವು ಯಾವ ಪರೀಕ್ಷೆಗೆ ಬರೆಯಬೇಕಾಗಿದೆ? ಈ ಗ್ರಂಥಗಳ ಖಟಿಪಿಟಿ ಯಾರಿಗೆ ಬೇಕು? "ಒಮ್ಮೆ ಓದಿದ್ದು ನಮಗೆ ಚೆನ್ನಾಗಿ ನೆನಪಿದೆ. ನಮಗೆ ಚೆನ್ನಾಗಿ ಅರ್ಥ ವಾಗಿದೆ" ಎಂದರೆ ಸಾಲದು, ನಿಮಗೆ ಎಷ್ಟು ತಿಳಿದಿದ್ದರೂ ಅಧ್ಯಯನದ ಅಗತ್ಯವಿದೆ.

"ಈಗ ನಾನು ಎಲ್ಲ ಶತ್ರುಗಳನ್ನು ಜಯಿಸಿದ್ದೇನೆ. ಇನ್ನು ನನ್ನ ಮೇಲೆ ಯಾರೂ ಆಕ್ರಮಣ ಮಾಡುವುದಿಲ್ಲ. ನನಗಿಂತ ಬಲಶಾಲಿಗಳು ಯಾರೂ ಇಲ್ಲ" ಎಂದು ರಾಜ ಆರಾಮವಾಗಿ ಕುಳಿತು, ಸೈನ್ಯಕ್ಕೆ ರಜೆ ಕೊಟ್ಟು ಕಳಿಸಿದನೋ, ಅಂದೇ ಅವನ ನಾಶವಾಯಿತೆಂದು ತಿಳಿಯ ಬೇಕು. ಶತ್ರು ಇರಲಿ ಬಿಡಲಿ, ಸೈನ್ಯವನ್ನು ಯಾವಾಗಲೂ ಸಜ್ಜುಗೊಳಿಸಿ ಇಟ್ಟುಕೊಂಡಿರಬೇಕು. ಪ್ರತಿಯೊಬ್ಬ ಸೈನಿಕನೂ ಶಸ್ತ್ರಾಸ್ತ್ರಗಳ ಅಭ್ಯಾಸ ವನ್ನು ಮಾಡಬೇಕು. ಪ್ರತಿದಿನ ನಿಶ್ಚಿತರೂಪದಲ್ಲಿ ವ್ಯಾಯಾಮ ಅಭ್ಯಾಸ ಮಾಡಲೇಬೇಕು. ಜೀವನದಲ್ಲಿ ಯಶಸ್ಸನ್ನು ಗಳಿಸಬೇಕಾದ ಪ್ರತಿಯೊಬ್ಬನೂ ಈ ರೀತಿ ಸತತ ಪ್ರಯತ್ನಶೀಲನಾಗಿರಬೇಕು.

ಇಸೋಪನೀತಿಯ ಒಂದು ಕಥೆ ಇದೆ. , ಒಮ್ಮೆ ಒಂದು ಹುಲಿ ತನ್ನ ಗೆಳೆಯ ಕಾಡುಹಂದಿಯ ಬಳಿಗೆ ಹೋಯಿತು. ಕಾಡುಹಂದಿ ತನ್ನ ಕೋರೆಹಲ್ಲನ್ನು ಒಂದು ಮರದ ಬುಡಕ್ಕೆ ಉಜ್ಜುತ್ತಿತ್ತು. ಆಗ ಹುಲಿ ಕೇಳಿತು: "ಏನಯ್ಯಾ ಗೆಳೆಯಾ, ಕೋರೆಹಲ್ಲನ್ನು ಹರಿತಗೊಳಿಸು ತ್ತಿರುವೆ. ಇಂದು ಯಾರೊಂದಿಗಾದರೂ ಯುದ್ಧ ಮಾಡುವುದಿದೆಯೆ?" ಅದಕ್ಕೆ ಕಾಡುಹಂದಿ ಉತ್ತರಿಸಿತು – "ಹಾಗೇನೂ ಇಲ್ಲ, ಆದರೆ ಶಸ್ತ್ರ ವಿರುವವನು ಅದನ್ನು ಯಾವಾಗಲೂ ಸಿದ್ಧವಾಗಿಟ್ಟುಕೊಂಡಿರಬೇಕು. ಯಾರಿಗೆ ಗೊತ್ತು, ಯಾವಾಗ ಅದನ್ನು ಉಪಯೋಗಿಸಬೇಕಾದೀತು ಎಂದು. ಆದಕ್ಕಾಗಿ ನಾನು ಪ್ರತಿದಿನ ಬೆಳಗ್ಗೆ ನನ್ನ ಕೋರೆಹಲ್ಲನ್ನು ಹರಿತಗೊಳಿಸುತ್ತೇನೆ."

ಈ ರೀತಿ ತಮ್ಮ ಶಸ್ತ್ರ, ಸೈನ್ಯ, ಬುದ್ಧಿ ಅಥವಾ ವಿದ್ಯೆ – ಇವನ್ನು ಹರಿತಗೊಳಿಸಲಾರದವರು ಬೇಗನೆ ವಿನಾಶವನ್ನು ಹೊಂದುತ್ತಾರೆ

ಎಂದು ನಮಗೆ ಇತಿಹಾಸದ ಪುಟಗಳಿಂದ ತಿಳಿದು ಬರುತ್ತದೆ. ಜೀವನ ಧಾರೆಯನ್ನು ಸತತವಾಗಿ ಉಳಿಸಿಕೊಳ್ಳಬೇಕಾದರೆ ಅಧ್ಯಯನ ಮಾಡಲೇ ಬೇಕು. ಪರೀಕ್ಷೆ ಇರಲಿ ಬಿಡಲಿ ಗ್ರಂಥಗಳ ಅಧ್ಯಯನ ಮಾಡಲೇಬೇಕು. ಶತ್ರು ಇರಲಿ ಇಲ್ಲದಿರಲಿ ಕತ್ತಿಯನ್ನು ಝಳಪಿಸುತ್ತಿರಬೇಕು. ಸಂಗೀತ ಕಾರ್ಯಕ್ರಮವಿರಲಿ ಬಿಡಲಿ ಸಂಗೀತಗಾರ ದಿನವೂ ಸಾಧನೆ ಮಾಡುತ್ತಿರ ಬೇಕು. ವಾದ್ಯಗಾರ, ಚಿತ್ರಕಾರ, ಶಿಲ್ಪಿಕಾರ – ಎಲ್ಲರೂ ತಮ್ಮ ವೃತ್ತಿ ಪ್ರವೃತ್ತಿಯ ಸಾಧನೆಯನ್ನು ನಿರಂತರವಾಗಿ ನಡೆಸುತ್ತಿರಬೇಕು. ಕಲೆ, ವಿದ್ಯೆ ಅಥವಾ ಜ್ಞಾನ ವಿಜ್ಞಾನದ ಇನ್ನಾವುದೇ ಶಾಖೆಯಲ್ಲಿ ನಿರಂತರ ಅಧ್ಯಯನ ತುಂಬ ಆವಶ್ಯಕ. ಆಗಲೆ ಪ್ರಗತಿ ಸಾಧ್ಯವಾಗುತ್ತದೆ. ಸ್ವಾಧ್ಯಾಯವೆಂದರೆ ಅಭ್ಯಾಸ, ಮನನ, ಚಿಂತನಗಳಿಂದ ಕೂಡಿದ ಪರಿಪೂರ್ಣ ಅಭ್ಯಾಸ.

೨

ಸ್ವಾಧ್ಯಾಯವೆಂದರೆ ವೇದಗಳ ಅಭ್ಯಾಸ. ಆದರೆ ಮಧ್ಯಯುಗೀನ ಕಾಲದಲ್ಲಿ ಇದನ್ನು ಬಹಳ ಸೀಮಿತ ಅರ್ಥದಲ್ಲಿ ಬಳಸಲಾಗುತ್ತಿತ್ತು. ವೇದ ಗಳು ಸೀಮಿತಗೊಂಡಿದ್ದವು. ವೇದ ಶಬ್ದವು 'ವಿದ್' ಧಾತುವಿನಿಂದ ಆಗಿದೆ. 'ವಿದ್' ಎಂದರೆ ಜ್ಞಾನ. ಜ್ಞಾನ ಸಾಕ್ಷಾತ್ ಈಶ್ವರಸ್ವರೂಪಿಯಾಗಿದೆ. ಜ್ಞಾನ ಈಶ್ವರನ ಪ್ರಾಣವಾಗಿದೆ. ಜ್ಞಾನ ಈಶ್ವರನ ಶ್ವಾಸೋಚ್ಛ್ವಾಸ ವಾಗಿದೆ. ಜ್ಞಾನ ಅನಾದಿಯೂ ಅನಂತವೂ ಆಗಿದೆ. ಅದು ವಿಶೇಷವಾದ ಕಾಲ ಅಥವಾ ವ್ಯಕ್ತಿಯಿಂದ ಹುಟ್ಟಲಿಲ್ಲ. ಇದು ನನ್ನ ಜ್ಞಾನ ಎಂದು ಹೇಳುವ ಹಕ್ಕು ಯಾರಿಗೂ ಇಲ್ಲ. ಆದ್ದರಿಂದ ಜ್ಞಾನವನ್ನು ಅಪೌರುಷೇಯ ಎಂದು ಕರೆಯುತ್ತಾರೆ. ವೇದವು ಸಾವಿರಾರು ಪೀಳಿಗೆಗಳ ಅಪಾರ ಅನುಭವದ ಸಾರವಾಗಿದೆ. ಅದನ್ನು ಶ್ರುತಿ ಎಂತಲೂ ಹೇಳುತ್ತಾರೆ. ಪ್ರತಿಭಾವಂತರಾದ ಮೇಧಾವಿಗಳು ಅರಣ್ಯಕ್ಕೆ ಹೋಗಿ, ದೀರ್ಘಕಾಲ ತಪಸ್ಸು ಮಾಡಿ ಎಂದರೆ ಅಧ್ಯಯನ ಮಾಡಿ ಸಂಪಾದಿಸಿದ ಜ್ಞಾನವೇ ವೇದಾಂತ. ಅಂತೆಯೇ ವೇದಗಳಿಗೆ 'ಆಮ್ನಾಯ' ಇಲ್ಲವೇ 'ಸಮಾಮ್ನಾಯ' ಎಂದು ಹೇಳುತ್ತಾರೆ. 'ಮ್ನಾ' ಎಂದರೆ ಅಧ್ಯಯನ ಮಾಡುವುದು ಅಥವಾ ಅಭ್ಯಾಸ ಮಾಡುವುದು ಎಂದು ಅರ್ಥ. ವೇದಗಳು ಸತತವಾದ ಮನನ, ಚಿಂತನಗಳಿಂದ

ಮಥಿಸಿದ ವಿಚಾರಗಳ ಸಂಗ್ರಹವಾಗಿವೆ. ವೇದಗಳಲ್ಲಿ ಅನೇಕ ವಿಷಯಗಳನ್ನು ಸಕಾರಣವಾಗಿ ವಿವರಿಸುತ್ತಾ ಸಂಪೂರ್ಣ ಸೃಷ್ಟಿಯ ಆದಿಯನ್ನು, ಆ ಆದಿಗೆ ಕಾರಣನಾದ ಪರಮೇಶ್ವರನನ್ನು ಪಡೆಯುವ ಮಾರ್ಗವನ್ನು ಉಲ್ಲೇಖಿಸ ಲಾಗಿದೆ. ಹಾಗೆಂದೇ ವೇದಗಳಿಗೆ 'ನಿಗಮ'ವೆಂದು ಹೇಳುತ್ತಾರೆ. ನಿಗಮ ವೆಂದರೆ ಕಾರಣಗಳನ್ನು ಕೊಟ್ಟು ವಿವರಣೆ ನೀಡಿ ಸ್ಪಷ್ಟಗೊಳಿಸುವುದು ಎಂದು ಅರ್ಥ.

ವೇದ ಶಬ್ದದ ಅರ್ಥ ವಿಶಾಲವಾಗಿದೆ. ಆದರೆ ಕಾಲಾಂತರದಲ್ಲಿ ವೇದ ಎಂದರೆ ವಿಶಿಷ್ಟ ಗ್ರಂಥ ಎಂಬ ಸೀಮಿತ ಅರ್ಥ ಉಳಿಯಿತು. ಕೆಲವು ವೇಳೆ ಭಾಷೆಯಲ್ಲಿ ಶಬ್ದಕ್ಕೆ ವಿಶಿಷ್ಟ ಅರ್ಥ ಉಳಿದು ಬಿಡುತ್ತದೆ. ಪುರಿ ಎಂದರೆ ಯಾವುದೇ ಊರು ಎಂದು ಅರ್ಥ. "ನಾವು ಪುರಿಗೆ ಹೋಗಿದ್ದೆವು" ಎಂದರೆ ಜನ ಜಗನ್ನಾಥಪುರಿಯೆಂದೇ ತಿಳಿಯುತ್ತಾರೆ. ಗ್ರಹಿಸಿದ ವಸ್ತು ಎಂದರೆ ಗ್ರಂಥ ಎಂದಾಗುತ್ತದೆ. ಆದರೆ ಈಗ ಗ್ರಂಥ ಎಂದರೆ ಪುಸ್ತಕ ಎಂದೇ ಅರ್ಥವಾಗುತ್ತದೆ. ವೇದ ಶಬ್ದದ ಅರ್ಥವೂ ಇದೇ ರೀತಿ ಸಂಕುಚಿತ ಗೊಂಡಿದೆ. ವೇದ ಎಂದರೆ ವಿಸ್ತೃತ, ಅನಾದಿ, ಅನಂತ, ಅಪೌರುಷೇಯ, ಬಹುಸಂಖ್ಯಾ ಜ್ಞಾನವೆಂದಾಗುತ್ತದೆ. ಆದರೆ ಇಂದು ಅದರ ಮೂಲ ಅರ್ಥ ಲೋಪವಾಗಿ ವೇದ ಎಂದರೆ ವಿಶಿಷ್ಟವಾದ ಗ್ರಂಥ ಎಂದೇ ಅರ್ಥ ರೂಢಿಯಲ್ಲಿದೆ.

ಅಜ್ಞಾನ, ದುರ್ಬಲತೆ, ಪರಕೀಯರ ಆಕ್ರಮಣ ಇತ್ಯಾದಿ ಕಾರಣ ಗಳಿಂದ ವೇದದ ಅನೇಕ ಭಾಗಗಳು ಹಾಳಾದವು. ಜನರು ಕ್ಷೀಣ ಬುದ್ಧಿಯವರಾದರು. ವೇದಮಂತ್ರದ ಅರ್ಥವನ್ನು ತಿಳಿಯುವ ಸಾಮರ್ಥ್ಯವು ಅವರಲ್ಲಿ ಉಳಿಯಲಿಲ್ಲ. ದೇಶದ ಅಂದಿನ ಪರಿಸ್ಥಿತಿಯನ್ನು ಗುರುತಿಸಿ ಆಗಿನ ಋಷಿ-ಮುನಿಗಳು ಈ ಶಬ್ದವನ್ನು ನೀವು ಮುಂದಿನ ಪೀಳಿಗೆಯವರೆಗೆ ಕೊಂಡೊಯ್ಯಿರಿ. ಇಷ್ಟು ಸಾಕು. ಕಾಲವು ಅನಂತವಾಗಿದೆ. ಒಮ್ಮೆಲ್ಲೊಮ್ಮೆ ಜ್ಞಾನಿಗಳು ಹುಟ್ಟಿಬಂದಾರು. ಪ್ರಪಂಚ ವಿಶಾಲವಾಗಿದೆ. ಈ ವೇದಗಳಿಗೆ ಅರ್ಥ ಹೇಳುವ ಯೋಗ್ಯರು ಬರುವವರೆಗೆ ಈ ಶಬ್ದವನ್ನು ಮುಂದಿನವರಿಗೆ ತಲುಪಿಸಿ. ಈ ರೀತಿ ಅಭ್ಯಾಸ ಶಬ್ದಕ್ಕೂ ಸೀಮಿತ ಅರ್ಥ ಉಳಿಯಿತು. ಸ್ವಾಧ್ಯಾಯವೆಂದರೆ ವೇದಗಳ ಅಭ್ಯಾಸ ಮತ್ತು ಅಭ್ಯಾಸ

ಎಂದರೆ ವೇದಮಂತ್ರಗಳ ಶುದ್ಧ ಉಚ್ಚಾರಣೆ– ಈ ರೀತಿ ಸಮೀಕರಣ ಸಿದ್ಧವಾಯಿತು. ಇದೇ ಅರ್ಥ ಮುಂದುವರಿಯುತ್ತ ಸ್ವಾಧ್ಯಾಯವೆಂದರೆ ಪರಮಾತ್ಮನ ನಾಮಜಪ ಎಂಬ ರೀತಿಯಲ್ಲಿ ಬಳಸಲಾಯಿತು. ನಾಮಜಪಕ್ಕೆ ಬಹಳ ಹೆಚ್ಚಿನ ಸ್ಥಾನವಿದ್ದರೂ ಸ್ವಾಧ್ಯಾಯವು ಅಲ್ಲಿಗೆ ಮುಗಿಯುವುದಿಲ್ಲ. ಅಲ್ಲಿಂದ ಪ್ರಾರಂಭವಾಗುತ್ತದೆ.

ಸ್ವಾಧ್ಯಾಯವೆಂದರೆ ಕೇವಲ ವೇದಗ್ರಂಥಗಳ ಅಭ್ಯಾಸ ಎಂದು ತಿಳಿದರೂ ಅದರಿಂದೇನೂ ತೊಂದರೆ ಇಲ್ಲ. ಕಾರಣ ವೇದಗಳಲ್ಲಿ– "ಬಡಿಗತನ, ಕಮ್ಮಾರಿಕೆ, ನೃತ್ಯ, ಗಾಯನ, ರಸಾಯನ, ಜ್ಯೋತಿಷಿ, ಗಣಿತ, ಜೀವೋತ್ಪತ್ತಿ ಮೊದಲಾದ ವಿಷಯಗಳಿಂದ ಹಿಡಿದು ಪುನರ್ಜನ್ಮ, ಆತ್ಮ-ಪರಮಾತ್ಮ, ಸೃಷ್ಟಿ-ಲಯ ಮೊದಲಾದ ಗೂಢ ವಿಷಯಗಳವರೆಗೆ ವಿಶದ ವಿವರಣೆಯಿದೆ. ವೇದಗಳ ಅಭ್ಯಾಸಕ್ಕೆ ಸಂಪೂರ್ಣ ಆಯುಷ್ಯ ಬೇಕು. ಇಲ್ಲವೇ ಸಂಪೂರ್ಣ ಆಯುಸ್ಸು ವೇದಗಳ ಅಧ್ಯಯನಕ್ಕೆ ಸಾಲದು ಎನ್ನುವಂತೆ ವೇದಗಳ ಒಂದೊಂದು ಮಂತ್ರಗಳು ಸೂಕ್ತಿಗಳು ಇವೆ.

೩

ಸ್ವಾಧ್ಯಾಯದಲ್ಲಿ ಅಭ್ಯಾಸಕ್ಕೆ ಅಧಿಕ ಮಹತ್ವ ನೀಡಲಾಗಿದೆ. ಮಾನವ ಜೀವನದಲ್ಲಿ ಹುಟ್ಟಿಕೊಳ್ಳುವ ವಿಭಿನ್ನ ಸಮಸ್ಯೆಗಳ ಅಭ್ಯಾಸವೆಂದರೆ ವೇದಗಳ ಅಭ್ಯಾಸ. ನದಿಯು ಯಾವ ದಿಕ್ಕಿಗೆ ಹರಿದರೂ ಅದು ಸಮುದ್ರವನ್ನೇ ಸೇರುವಂತೆ, ಯಾವ ದೇವರ ಹೆಸರಿಗೆ ನಮಸ್ಕರಿಸಿದರೂ ಅದು ಪರಮಾತ್ಮನಿಗೇ ಸೇರುವಂತೆ, ಜ್ಞಾನ ವಿಜ್ಞಾನದ ಯಾವುದೇ ವಿಭಾಗದ ಅಭ್ಯಾಸ ವೇದಗಳ ಅಭ್ಯಾಸವೇ ಆಗಿದೆ. ಸ್ವಾಧ್ಯಾಯವೆಂದರೆ ಬರಿ ಶಬ್ದಗಳನ್ನು ಓದುವುದಲ್ಲ. ಗಿಳಿಪಾಠದ ಪಾಂಡಿತ್ಯ ಪ್ರದರ್ಶನ ಅಧ್ಯಯನ ಅಲ್ಲ. ಶಬ್ದಶಃ ಭಾಷಾಂತರ ಸ್ವಾಧ್ಯಾಯವಲ್ಲ. ಸ್ವಾಧ್ಯಾಯ ಮನುಷ್ಯನನ್ನು ಅಂತರ್ಮುಖಿಯನ್ನಾಗಿ ಮಾಡುತ್ತದೆ. ಬಾಹ್ಯಜಗತ್ತಿನಲ್ಲಿನ ಸೃಷ್ಟಿಯ ಸಹಸ್ರಪಾಲು ಸೃಷ್ಟಿ ಅಂತರ್ಯದಲ್ಲಿದೆ. ಸ್ವಾಧ್ಯಾಯದಿಂದ ಮನುಷ್ಯನಿಗೆ ಅದ್ಭುತ ಸೃಷ್ಟಿಯ ರಹಸ್ಯದ ಬೀಗದ ಕೈ ದೊರೆಯುತ್ತದೆ.

ಚಿಂತನ ಮನನಗಳಿಂದ ಸಾಧಾರಣ ಶಬ್ದಗಳಿಗೂ ಹೊಸ ಹೊಸ ಅರ್ಥಗಳು ಅವಗತವಾಗುತ್ತವೆ. ಸ್ವಾಧ್ಯಾಯದಿಂದ ಉಚ್ಚತಮ ಜ್ಞಾನೋಪಾಸನೆ ಸಾಧ್ಯವಾಗುತ್ತದೆ.

೪

ಇಂದು ನಮಗೆ ಎಲ್ಲ ಕಡೆ ಅಧ್ಯಯನಶೀಲತೆಯ ಅಭಾವ ಕಂಡು ಬರುತ್ತಿದೆ. ಚಪ್ಪಲಿ ಹೊಲೆಯುವ ಚಮ್ಮಾರನಿಂದ ಹಿಡಿದು ದೊಡ್ಡ ದೊಡ್ಡ ಕಾರ್ಖಾನೆಗಳನ್ನು ನಡೆಸುವ ಯಂತ್ರಜ್ಞರವರೆಗೆ, ಪ್ರಾಥಮಿಕ ಶಾಲಾಶಿಕ್ಷಕರಿಂದ ಮೊದಲುಗೊಂಡು ವಿಶ್ವವಿದ್ಯಾನಿಲಯಗಳ ಪ್ರಾಚಾರ್ಯರ ವರೆಗೆ ಎಲ್ಲರಲ್ಲೂ ಅಭ್ಯಾಸ ಮಾಡುವ ಪ್ರವೃತ್ತಿ ಬಹಳ ಕಡಿಮೆಯಾಗಿದೆ. ನಾನು ಓದುತ್ತಿರುವ ವಿಷಯಗಳನ್ನು ಆಳವಾಗಿ ಅಭ್ಯಸಿಸಬೇಕು. ಅದರಲ್ಲಿ ಪಾರಂಗತನಾಗಬೇಕು. ಆ ವಿಷಯಕ್ಕೆ ಸಂಬಂಧಿಸಿದ ದೇಶ-ವಿದೇಶಗಳಲ್ಲಿ ಲಭಿಸುವ ಪುಸ್ತಕಗಳನ್ನು ಸಂಗ್ರಹಿಸಿ ಅವುಗಳನ್ನು ಓದಬೇಕು, ಚರ್ಚಿಸಬೇಕು ಎನ್ನುವ ಆಕಾಂಕ್ಷೆ ಮತ್ತು ಅಭಿಲಾಷೆ ಇಂದು ಶಿಕ್ಷಕರಲ್ಲೂ ಇಲ್ಲ, ವಿದ್ಯಾರ್ಥಿ ಗಳಲ್ಲೂ ಇಲ್ಲ ಅಂದಮೇಲೆ ಬೇರೆಯವರಲ್ಲಿ ಹೇಗೆ ಬಂದೀತು ? ಹೆಚ್ಚಿನ ವಿದ್ಯಾರ್ಥಿಗಳು ನೂರಕ್ಕೆ ಮುವತ್ತು ನಂಬರ್ ತೆಗೆದುಕೊಳ್ಳುವುದರಲ್ಲೇ ಸಮಾಧಾನಪಟ್ಟುಕೊಳ್ಳುತ್ತಾರೆ. ಹೇಗೋ ಉತ್ತೀರ್ಣರಾದರೆ ಸಾಕು ಎಂದು ಭಾವಿಸುತ್ತಾರೆ. ಕಾಪಿ ಹೊಡೆದೋ, ಶಿಕ್ಷಕರಿಗೆ ಚಾಕು-ಚೂರಿ ತೋರಿಸಿಯೋ, ಲಂಚಕೊಟ್ಟೋ ಹೇಗೋ ಪಾಸಾದರೆ ಸಾಕು, ಉದ್ಧಾರ ವಾದಂತೆ ಎಂದು ತಿಳಿಯುತ್ತಾರೆ. ಶಿಕ್ಷಕರು ಹಾಗೆಯೇ ಶೇಕಡಾ ಮುವತ್ತರಷ್ಟು ಜ್ಞಾನವನ್ನು ಕೊಡುತ್ತಾರೆ. ಇನ್ನು ಬಾವಿಯಲ್ಲೇ ಇಲ್ಲದ್ದು ಕೊಡದಲ್ಲಿ ಹೇಗೆ ಬಂದೀತು ? ತಮ್ಮ ವಿಷಯಗಳ ಅಧ್ಯಯನಕ್ಕಾಗಿ ಗ್ರಂಥಾಲಯಗಳಲ್ಲಿ, ಪ್ರಯೋಗಶಾಲೆಗಳಲ್ಲಿ, ಕಲಾಶಾಲೆಗಳಲ್ಲಿ ಗಂಟೆಗಟ್ಟಲೆ ಕುಳಿತು – ಮಧುವನ್ನು ಸಂಗ್ರಹಿಸುವ ಮಧುಕರನಂತೆ – ಜ್ಞಾನದ ಬಿಂದು ಗಳನ್ನು ಸಂಗ್ರಹಿಸುವ ಆಸಕ್ತಿಯುಳ್ಳವರು ಎಷ್ಟು ಜನರಿದ್ದಾರೆ ? ಮತ್ತು ಜೀವನದಲ್ಲಿ ಅವರ ಅಸ್ತಿತ್ವದ ಬೆಳವಣಿಗೆ ಹೇಗೆ ಆದೀತು ? ಬೀಜದ ಮೇಲೆ ಆದ ಪ್ರಭಾವವೇ ಹೂವು-ಹಣ್ಣಿನಲ್ಲೂ ವ್ಯಕ್ತವಾಗುತ್ತದೆ.

ಶಿಕ್ಷಕ ಶೇ. ೩೦ ಆಗಿದ್ದರೆ, ಪೂರ್ಣ ಸಮಾಜವೇ ಆ ಲೆಕ್ಕಾಚಾರದಲ್ಲಿ ತಯಾರಾಗುತ್ತದೆ. ಶೇ. ೩೦ ಜ್ಞಾನ, ಉಳಿದದ್ದು ಅಜ್ಞಾನ. ೩೦ ಭಾಗ ಹಾಲು, ಉಳಿದದ್ದು ನೀರು. ೩೦ ಭಾಗ ತುಪ್ಪ, ಉಳಿದದ್ದು ವನಸ್ಪತಿ. ೩೦ ಭಾಗ ಔಷಧಿ, ಉಳಿದದ್ದು ಕಲಬೆರಕೆ. ಎಲ್ಲೆಲ್ಲೂ ಕಂಡುಬರುತ್ತಿರುವ ಸಮಾಜದ ಭ್ರಷ್ಟಾಚಾರದ ನಿಷ್ಪತ್ತಿ ಹೀಗಿದೆ.

ಒಬ್ಬ ಸಾಮಾನ್ಯ ಮನುಷ್ಯ ಮನೆ ಕಟ್ಟುತ್ತಾನೆ. ಬಹಳ ಅಭಿಮಾನದಿಂದ ತನ್ನ ಆಪ್ತೇಷ್ಟರಿಗೆ ಮನೆಯನ್ನು ತೋರಿಸುತ್ತಾನೆ. ರೇಡಿಯೊ, ಟೆಲಿವಿಷನ್, ಸೋಫಾ ಇವೆಲ್ಲ ಮನೆಯಲ್ಲಿ ಇರುವುದು ಪ್ರತಿಷ್ಠೆಯ ದೃಷ್ಟಿಯಿಂದ ಅವಶ್ಯವೆಂದು ಭಾವಿಸುವಂತೆ ಗ್ರಂಥಾಲಯವು ಅವಶ್ಯವೆಂದು ಭಾವಿಸುವುದಿಲ್ಲ. ನಮ್ಮಲ್ಲಿ ಅಡಿಗೆಮನೆ, ಮಲಗುವ ಕೋಣೆ, ಅತಿಥಿಗಳಿಗಾಗಿ ಕೋಣೆಗಳಿರುತ್ತವೆ. ಆದರೆ ಗ್ರಂಥಗಳಿಗಾಗಿ ಮಾತ್ರ ಸ್ಥಳವಿರುವುದಿಲ್ಲ. ಪ್ರತಿಯೊಬ್ಬ ಸುಶಿಕ್ಷಿತ ವ್ಯಕ್ತಿಯ ಮನೆಯಲ್ಲಿ ಹತ್ತಾದರೂ ಶ್ರೇಷ್ಠ ಪುಸ್ತಕಗಳ ಸಂಗ್ರಹವಿರುತ್ತದೆಂದು ಹೇಳಲಾಗುವುದಿಲ್ಲ. ಶರೀರ ಶೃಂಗಾರಕ್ಕಾಗಿ ಒಡವೆ ವಸ್ತ್ರಗಳ ಪೆಟ್ಟಿಗೆಗಳು ತುಂಬಿವೆ. ಹೊಟ್ಟೆ ತುಂಬಿಸುವುದಕ್ಕಾಗಿ ದವಸ ಧಾನ್ಯಗಳ ಉಗ್ರಾಣಗಳು ತುಂಬಿವೆ. ಇವು ಯಾವಾಗಲೂ ತುಂಬಿ ತುಳುಕಾಡುತ್ತಿರಬೇಕೆಂಬ ಮನುಷ್ಯನ ಅಖಂಡ ಧಾವಂತ ನಡೆದಿದೆ. ಆದರೆ ಮನಸ್ಸು ಮತ್ತು ಬುದ್ಧಿಯ ಪೋಷಣೆಗೆ ಮಾತ್ರ ಎಲ್ಲಿಯೂ ವ್ಯವಸ್ಥೆಯಿಲ್ಲ. ಅದರ ಬಗ್ಗೆ ಯಾರಿಗೂ ಆಸ್ಥೆಯಿಲ್ಲ. ನಮ್ಮ ದೇಶದಲ್ಲಿ ಅಧ್ಯಯನಶೀಲ ವಾತಾವರಣ ಎಲ್ಲಿಯೂ ಕಂಡುಬರುವುದಿಲ್ಲ. ವ್ಯಕ್ತಿಯ ಅಥವಾ ಸಮಾಜದ ತಿಂಗಳ ಆಯವ್ಯಯದಲ್ಲಿ ಗ್ರಂಥಗಳಿಗಾಗಿ ಮಾಡುವ ಖರ್ಚು ಅತ್ಯಲ್ಪ.

೫

ಮನುಷ್ಯ ಜೀವನದಲ್ಲಿ ಗ್ರಂಥಗಳಿಗೆ ಅಸಾಮಾನ್ಯ ಸ್ಥಾನವಿರಬೇಕು. ಗ್ರಂಥಗಳು ಮಾನವನ ಅದ್ಭುತ ಸೃಷ್ಟಿಯಾಗಿವೆ. ಗ್ರಂಥಗಳಲ್ಲಿ ಮಾನವತೆಯನ್ನು ಕ್ರೋಡೀಕರಿಸಲಾಗಿದೆ. ಗ್ರಂಥಗಳು ಮಾನವನಿಗೆ ಉತ್ತಮ ಸಂಸ್ಕಾರ, ಉತ್ತಮ ಉಪದೇಶ ಹಾಗೂ ಸದಸದ್ವಿವೇಕವನ್ನು

ದಯಪಾಲಿಸುತ್ತವೆ. ಗ್ರಂಥಗಳ ಅಧ್ಯಯನದಿಂದ ಮಾನಸಿಕ ಆನಂದವೂ, ದುಃಖದಲ್ಲಿ ಸಹಾನುಭೂತಿಯೂ ದೊರೆಯುತ್ತದೆ. ದೇಶ-ಕಾಲಗಳ ಸೀಮೆಯನ್ನು ದಾಟುವ ಸಾಮರ್ಥ್ಯ ಗ್ರಂಥಗಳಲ್ಲಿದೆ. ಗ್ರಂಥಗಳಿಂದಾಗಿ ನಾವು ನಮ್ಮ ಮನೆಯ ಮೂಲೆಯಲ್ಲಿ ಕುಳಿತು ವೈದಿಕ ಋಷಿ ಮುನಿಗಳ ಸಂಗಡ ಸಂಭಾಷಿಸಬಲ್ಲೆವು. ಗ್ರೀಕ್ ತತ್ವಜ್ಞಾನಿಗಳ ಜೊತೆ ಚರ್ಚಿಸ ಬಲ್ಲೆವು. ವ್ಯಾಸ ವಾಲ್ಮೀಕಿಗಳ ವಿಚಾರಗಳನ್ನು ತಿಳಿದುಕೊಳ್ಳಬಲ್ಲೆವು. ಷೇಕ್ಸ್‌ಪಿಯರ್ ಕಾಳಿದಾಸ ಭವಭೂತಿಗಳ ಜೊತೆ ಹರಟೆ ಹೊಡೆಯ ಬಲ್ಲೆವು. ಗ್ರಂಥ ಏಕಕಾಲದಲ್ಲಿ ಗುರು, ತಂದೆ, ತಾಯಿ, ಬಂಧು, ಮಿತ್ರ ಎಲ್ಲವೂ ಆಗಬಲ್ಲುದು.

> **ತ್ವಮೇವ ಮಾತಾ ಚ ಪಿತಾ ತ್ವಮೇವ**
> **ತ್ವಮೇವ ಬಂಧು ಸಖಾ ತ್ವಮೇವ ।**
> **ತ್ವಮೇವ ವಿದ್ಯಾದ್ರವಿಣಂ ತ್ವಮೇವ**
> **ತ್ವಮೇವ ಸರ್ವಂ ಮಮ ದೇವ ದೇವ ॥**

ಈ ಶ್ಲೋಕ ಯಾವುದೇ ಶ್ರೇಷ್ಠ ಗ್ರಂಥಕ್ಕೆ ಸಂಪೂರ್ಣ ಅನ್ವಯಿಸ ಬಲ್ಲುದು. ಇಂಥ ಬಹುಮುಖ ಶಕ್ತಿಯುಳ್ಳ ಸಾಹಿತ್ಯವನ್ನು ಉಪೇಕ್ಷೆ ಮಾಡುವವರನ್ನು, ಯಶಸ್ಸು ಕೂಡಾ ಕಡೆಗಣಿಸುತ್ತದೆ. ಪ್ರಾಪಂಚಿಕ, ಪಾರಲೌಕಿಕ ಉನ್ನತಿಯನ್ನು ಸಾಧಿಸಬೇಕಾದರೆ ನಾವು ಗ್ರಂಥಗಳ ಉಪಾಸನೆ ಮಾಡಬೇಕು. ಅಧ್ಯಯನಶೀಲ ಪರಿಸರ ನಿರ್ಮಾಣವಾಗಬೇಕು. ಚಿತ್ತದಲ್ಲಿ 'ಸ್ವಾಧ್ಯಾಯಾನ್ಮಾ ಪ್ರಮದಃ' ಈ ವಚನವನ್ನು ನಿರಂತರ ಗ್ರಹಿಸ ಬೇಕು.

೬

ಅಧ್ಯಯನವು ಸರಿಯಾಗಿ ನಡೆಯಬೇಕಾದರೆ ಉತ್ಸಾಹವಿರಬೇಕು. ಆಲಸ್ಯವು ಮನುಷ್ಯನ ಶತ್ರು. ಶಮ ದಮ ಶತ್ರುಗಳಿಂದ ಆಲಸ್ಯವನ್ನು ಕೊಲ್ಲಬೇಕು. ನಮ್ಮ ದೇಶದಲ್ಲಿ ಎಲ್ಲೆಲ್ಲೂ ಆಲಸ್ಯವೇ ಆಧಿಪತ್ಯ ನಡೆಸಿದೆ. ಅಶಿಕ್ಷಿತ-ಸುಶಿಕ್ಷಿತರು, ಸ್ತ್ರೀ-ಪುರುಷರು, ಆಬಾಲವೃದ್ಧರಾಗಿ ಎಲ್ಲರೂ

ತಿಂಗಳುಗಟ್ಟಲೆ ವ್ಯರ್ಥವಾಗಿ ಕಾಲ ಕಳೆಯುತ್ತಾರೆ. ಸೋಮಾರಿಗಳಿಂದ ಅಧ್ಯಯನ ಮಾಡಲಾಗುವುದಿಲ್ಲ. ಅವರ ಜೀವನ ವ್ಯರ್ಥ.

ಸ್ವಾಧ್ಯಾಯಕ್ಕಾಗಿ ಮನುಷ್ಯನಲ್ಲಿ ಪ್ರಬಲವಾದ ಮಾನಸಿಕ ಬಲ ಬೇಕಾಗುತ್ತದೆ. ಎಂಟು ಹತ್ತು ಗಂಟೆ ಒಂದೇ ಕಡೆ ಕುಳಿತು ಕೆಲಸ ಮಾಡುವಂಥ ದಮೆ ಬೇಕಾಗುತ್ತದೆ. ಬೇಸರವಿಲ್ಲದೆ ಶರೀರ ಮತ್ತು ಮನಸ್ಸುಗಳನ್ನು ಉಲ್ಲಸಿತವಾಗಿಟ್ಟುಕೊಂಡು ಹೊಸ ಹೊಸ ಜ್ಞಾನವನ್ನು ಪಡೆಯುವ ಆಸಕ್ತಿಯಿರಬೇಕು. ದೌರ್ಭಾಗ್ಯದಿಂದ ಇಂದು ಯುವಕರು ಮಾತು ಮಾತಿಗೆ 'ಬೇಜಾರು, ಬೇಜಾರು' ಎನ್ನುವುದನ್ನು ಕೇಳುತ್ತೇವೆ. ಸ್ವಲ್ಪ ಗಂಭೀರವಾದ ಚಿಂತನೆ, ವಿಮರ್ಶೆಯನ್ನು ಒಂದು ಅರ್ಧಗಂಟೆ ಮಾಡಿದರೂ ಅವರ ಬುದ್ಧಿಗೆ ಒತ್ತಡ ಬೀಳುತ್ತದೆ. 'ಇನ್ನು ಸಾಕಪ್ಪಾ, ಬೇಸರ ಬಂದಿತು' ಎನ್ನುವ ಉದ್ಗಾರ ಕೂಡಲೇ ಹೊರಡುತ್ತದೆ. 'ಬೇಸರ' ಎನ್ನುವವರ ಕೈಯಲ್ಲಿ ಯಾವ ಅಧ್ಯಯನವೂ ಆಗುವುದಿಲ್ಲ.

ಸ್ವಾಧ್ಯಾಯವು ಚೆನ್ನಾಗಿ ನಡೆಯಬೇಕಾದರೆ, ಚಿಕಿತ್ಸಕ ಬುದ್ಧಿ ಇರಬೇಕು. ನಾನು ಈ ವಿಷಯದಲ್ಲಿ ಸಂಪೂರ್ಣ ಜ್ಞಾನವನ್ನು ಪಡೆದೇ ತೀರುವೆನು ಎನ್ನುವ ಛಲ ಬೇಕು, ಆಕಾಂಕ್ಷೆ ಬೇಕು. ಬಹಳ ಸಲ ಒಂದು ಗ್ರಂಥವನ್ನು ಅರ್ಧ ಮುಕ್ಕಾಲು ಓದುತ್ತಿರುವಂತೆ – "ಇದು ನಮಗೆ ಅರ್ಥವಾಗುವುದಿಲ್ಲ. ಛೆ, ಈ ವಿಷಯ ತಿಳಿದುಕೊಳ್ಳುವುದು ಬಹಳ ಕಠಿಣ" ಎಂದು ಆ ಗ್ರಂಥಕ್ಕೆ ಕೈಮುಗಿಯುತ್ತಾರೆ. ಆದರೆ ಒಂದು ಸಲಕ್ಕೆ ತಿಳಿಯದಿದ್ದರೆ, ಮತ್ತೆ ಮತ್ತೆ ಅದು ಆತ್ಮಗತವಾಗುವವರೆಗೆ ಓದುತ್ತಿರಬೇಕು. ಹೆಚ್ಚು ಹೆಚ್ಚು ಅರ್ಥ ಮಾಡಿಕೊಳ್ಳುತ್ತಾ ಹೋಗಬೇಕು.

ಸ್ವಾಧ್ಯಾಯ ಸಾಧಿಸಲು ಮನುಷ್ಯನಲ್ಲಿ ವಿನಯವಿರಬೇಕಾಗುತ್ತದೆ. ನಾನು ಇನ್ನೂ ಬಹಳ ಕಲಿಯಬೇಕು. ನನ್ನಲ್ಲಿರುವ ಕೊರತೆಯನ್ನು ಕಳೆದುಕೊಳ್ಳಬೇಕು ಎನ್ನುವ ಭಾವನೆಯಿರಬೇಕು. "ನನಗೆ ಎಲ್ಲ ತಿಳಿದಿದೆ. ಈಗ ನನಗೆ ಯಾರೂ ಏನನ್ನೂ ಕಲಿಸಬೇಕಾಗಿಲ್ಲ" ಎನ್ನುವ ಅಹಂಭಾವ ಹುಟ್ಟಿದ ಕೂಡಲೇ ಆತನ ಪತನ ಆರಂಭ.

ಅಧ್ಯಯನ ಸಮರ್ಪಕವಾಗಿ ನಡೆಯಬೇಕಾದರೆ ಜ್ಞಾನಿಯು ಶಿಷ್ಯತ್ವವನ್ನು ಸ್ವೀಕರಿಸಬೇಕಾಗುತ್ತದೆ. ಯೋಗ್ಯ ಗುರುವಿಲ್ಲದೆ ಯಾವ ವಿಷಯದ ಜ್ಞಾನವೂ ಲಭಿಸುವುದಿಲ್ಲ. ಭಗವಂತನ ಹೊರತು ಈ ಜಗತ್ತಿನಲ್ಲಿ ಪರಿಪೂರ್ಣರು ಯಾರೂ ಇಲ್ಲ. 'ನನಗೇಕೆ ಗುರು ಬೇಕು, ನಾನು ಸ್ವಂತ ಕಲಿಯುತ್ತೇನೆ' ಎನ್ನುವ ದುರಹಂಕಾರ ಸರಿಯಲ್ಲ. ಗುರುಶಿಷ್ಯರ ಸಂಬಂಧ ವೈಶಿಷ್ಟ್ಯಪೂರ್ಣವಾದದ್ದು. ಇದನ್ನು ಯಾರೂ ಕಡೆಗಣಿಸಬಾರದು. ಉನ್ನತಿಯ ಇಚ್ಛೆಯುಳ್ಳ ಯಾರೇ ಆಗಲಿ ಗುರುವನ್ನು ಪಡೆಯಲೇಬೇಕು. ಮಣ್ಣಿನ ದ್ರೋಣಾಚಾರ್ಯ ಆದರೂ ಅಡ್ಡಿಯಲ್ಲ, ಆದರೆ ಗುರು ಬೇಕೇ ಬೇಕು.

ಅಧ್ಯಯನ ಸರಿಯಾಗಿ ಆಗಬೇಕಾದರೆ ಮನುಷ್ಯನಿಗೆ ಏಕಾಗ್ರತೆ ಇರಬೇಕಾಗುತ್ತದೆ. ಏಕಾಗ್ರತೆಯನ್ನು ರೂಢಿಸಿಕೊಳ್ಳಬೇಕು. ಏಕಾಗ್ರತೆ ಇಲ್ಲದಿದ್ದರೆ ಕೈಯಲ್ಲಿ ಪುಸ್ತಕವಿರುತ್ತದೆ, ಕಣ್ಣು ಅಕ್ಷರಗಳನ್ನು ನೋಡುತ್ತಿರುತ್ತವೆ, ಆದರೆ ತಲೆಗೆ ಮಾತ್ರ ಒಂದಕ್ಷರವೂ ಹೋಗುವುದಿಲ್ಲ. 'ಗೋರ್ಕಲ್ಲ ಮೇಲೆ ಮಳೆಗರೆದಂತೆ' ಗಂಟೆಗಟ್ಟಲೆ ಓದಿಯೂ ಬುದ್ಧಿಯು ಏನನ್ನೂ ಗ್ರಹಿಸುವುದಿಲ್ಲ.

'ಓಂ ಸಹ ನಾವವತು' – ಈ ಪ್ರಸಿದ್ಧ ಶಾಂತಿಪಾಠದಲ್ಲಿ ಗುರು ಶಿಷ್ಯರಿಬ್ಬರೂ ಪ್ರಾರ್ಥಿಸುತ್ತಾರೆ : 'ತೇಜಸ್ವಿನಾವಧೀತಮಸ್ತು' – ನಾವಿಬ್ಬರೂ ಪಡೆದ ವಿದ್ಯೆಯು ಯಾವಾಗಲೂ ತೇಜಸ್ವಿಯಾಗಿರಲಿ. ಈ ಪ್ರಾರ್ಥನೆಯನ್ನು ಶಿಷ್ಯನೊಂದಿಗೆ ಗುರುವೂ ಮಾಡುತ್ತಾನೆಂಬುದು ಮಹತ್ವದ ಸಂಗತಿ. ಗುರುವೂ ಕೂಡಾ ಸ್ವಲ್ಪವೂ ಅಹಂಭಾವ ತೋರದೆ ಈ ವಿದ್ಯೆಯನ್ನು ಕಾಪಾಡುವುದಕ್ಕಾಗಿ ಯತ್ನಿಸುತ್ತಾನೆ. ಅದರಂತೆ ಶಿಷ್ಯನೂ ಬಹಳ ಜಾಗರೂಕತೆಯಿಂದ ಸಂಪಾದಿಸಿದ ಜ್ಞಾನವನ್ನು ಕಾಪಾಡಿಕೊಳ್ಳುವುದು ಅವಶ್ಯವಿದೆ. ಅದಕ್ಕಾಗಿ ಅಧ್ಯಯನದ ಆವಶ್ಯಕತೆ ಇದೆ.

ವಿದ್ವಾಂಸರ ಜೊತೆ ಚರ್ಚಿಸುವುದು ಅಧ್ಯಯನದ ದೃಷ್ಟಿಯಿಂದ ಉಪಯುಕ್ತ. ಆದರೆ ಈ ಚರ್ಚೆ ರಚನಾತ್ಮಕವಾಗಿರಬೇಕು. ತಮ್ಮ ಪಾಂಡಿತ್ಯ ಪ್ರದರ್ಶನಕ್ಕಾಗಿ ಈ ಚರ್ಚೆ ನಡೆಯಬಾರದು ; ವ್ಯಕ್ತಿಗತ

ಈರ್ಷೆ, ದ್ವೇಷ, ಮತ್ಸರ ನಿರ್ಮಿಸುವಂಥದಾಗಿರಬಾರದು. ಪಕ್ಷ, ಪಂಥ, ಅಥವಾ ಯಾವುದೇ ಪಂಗಡವನ್ನು ಪ್ರತಿನಿಧಿಸುವಂಥದಾಗಿರಬಾರದು. ಜ್ಞಾನದ ಹಸಿವನ್ನು ಹುಟ್ಟಿಸುವುದಾಗಿರಬೇಕು. ಶ್ರದ್ಧೆ ಮತ್ತು ಆತ್ಮವಿಶ್ವಾಸ ವನ್ನು ಬೆಳೆಸುವಂಥದ್ದಾಗಿರಬೇಕು. 'ಸಮಾನಶೀಲವ್ಯಸನೇಷು ಸಖ್ಯಂ' – ಈ ತತ್ವಕ್ಕನುಸಾರವಾಗಿ, ನಮ್ಮಲ್ಲಿ ವರ್ಣ, ಜಾತಿ, ಉಪಜಾತಿಗಳು ಹುಟ್ಟಿಕೊಂಡಿವೆ. ಅವರಿಗೆ ಸ್ವಾಧ್ಯಾಯವು ಸುಲಭವಾಗಿ ಮಾಡಲು ಅನುಕೂಲವಿರಬೇಕೆಂಬುದೇ ಈ ವ್ಯವಸ್ಥೆಯು ಉದ್ದೇಶ. ತಮ್ಮ ತಮ್ಮ ವೃತ್ತಿಯು, ಶಾಖೋಪಶಾಖೆಗಳ ಬಗ್ಗೆ, ಜ್ಞಾನ-ವಿಜ್ಞಾನದ ಬಗ್ಗೆ ಚರ್ಚೆಮಾಡಲು ಬರುವಂತಿರಬೇಕು. ಒಬ್ಬರಿಗೊಬ್ಬರು ಸಹಕಾರದಿಂದ ಮತ್ತು ಪರಸ್ಪರ ವಿಚಾರ ವಿನಿಮಯದಿಂದ, ಎಲ್ಲರೂ ತಮ್ಮ ಕೆಲಸದಲ್ಲಿ ಪರಿಣತಿಯನ್ನು ಪಡೆಯಬೇಕೆಂಬ ಉದ್ದೇಶವಿದೆ. ಆದರೆ ದೌರ್ಭಾಗ್ಯದಿಂದ ಅದರ ಸದುದ್ದೇಶವನ್ನು ಮರೆತೆವು. ಜಾತಿವ್ಯವಸ್ಥೆ ಮೇಲು-ಕೀಳೆಂಬ ಭಾವನೆಯನ್ನು ಹರಡುತ್ತದೆ ಎಂಬ ತಿಳಿವಳಿಕೆ ಸಮಾಜದಲ್ಲಿ ಹುಟ್ಟಿ ಕೊಂಡಿತು. ಈ ತಪ್ಪು ಕಲ್ಪನೆ ಇಲ್ಲದಂತಾಗಿ ಜಾತಿ ಪಂಗಡಗಳ ಉಪಯೋಗವು ವೃತ್ತಿ ಅಧ್ಯಯನದ ಕಡೆಗೆ ಹೊರಳುವುದು ಅಗತ್ಯ ವಾಗಿದೆ.

ಅಧ್ಯಯನವು ವ್ಯವಸ್ಥಿತವಾಗಿ ನಡೆಯಬೇಕಾದರೆ ಏಕಾಂತ ಪರಿಸರ ಒಳ್ಳೆಯದು. ಏಕಾಂತದಿಂದ ಮನುಷ್ಯನಿಗೆ ಹೊಸ ದೃಷ್ಟಿ, ಹೊಸ ಉತ್ಸಾಹ, ಬಲ ಸಿಗುತ್ತದೆ. ಪ್ರಶಾಂತವಾದ ಏಕಾಂತ ಸ್ಥಳದಲ್ಲಿ ಪ್ರತಿದಿನ ಸ್ವಲ್ಪ ಸಮಯ ಕಳೆಯಬೇಕು. ಆದರೆ ಮಾನವಜೀವನವೇ ಇಂದು ಮೀನಿನ ಮಾರುಕಟ್ಟೆ ಯಾಗಿದೆ. ಸದ್ದು ಗದ್ದಲ ಗೊಂದಲ ಗಡಿಬಿಡಿಯಿಂದ ಮಾರುಕಟ್ಟೆಯ ಸ್ವರೂಪವನ್ನು ಪಡೆದಿದೆ. ಅಂಥಲ್ಲಿ ಏಕಾಂತ, ಏಕಾಗ್ರತೆ, ಅಧ್ಯಯನ ಇವುಗಳಿಗೆ ಸ್ಥಳವೆಲ್ಲಿ? ಶಾಲೆ ಕಾಲೇಜುಗಳು ಮಠ ಮಂದಿರಗಳು ಎಂದರೆ ವಾಸ್ತವವಾಗಿ ಅಧ್ಯಯನ ಕೇಂದ್ರಗಳಾಗಿರಬೇಕು, ಸರಸ್ವತಿಯ ಪೂಜಾ ಮಂದಿರಗಳಾಗಿರಬೇಕು. ಆದರೆ ಅಲ್ಲಿ ಈ ಚಿತ್ರದ ಅಸ್ಪಷ್ಟ ರೇಖೆಯು ಕೂಡಾ ಕಾಣಿಸುವುದಿಲ್ಲ.

೭

ಜಗತ್ತಿನ ಸಮಗ್ರ ಇತಿಹಾಸವನ್ನು ಅವಲೋಕಿಸಿದಾಗ, ಯಾವ ದೇಶದಲ್ಲಿ ಅಧ್ಯಯನಶೀಲ ಪ್ರವೃತ್ತಿಯನ್ನು ಕಾಪಾಡಿಕೊಂಡು ಬರಲಾಗಿದೆಯೋ ಆ ದೇಶದ ಉದ್ಧಾರವಾಗಿರುವುದು ಕಂಡುಬರುತ್ತದೆ. ಅಲ್ಲಿ ಹೊಸ ಹೊಸ ಪ್ರಯೋಗಗಳಾಗಿವೆ. ಹೊಸ ಹೊಸ ಸಂಶೋಧನೆಗಳಾಗಿವೆ. ಸೃಷ್ಟಿಯಲ್ಲಿ ಅಡಗಿಕುಳಿತಿದ್ದ ನೂರಾರು ಅನಂತಶಕ್ತಿಯ ಬೀಗದಕೈಗಳು ಅವರಿಗೆ ಉಪಲಬ್ಧವಾಗಿವೆ. ಪ್ರಾಚೀನ ಕಾಲದ ಋಷಿಗಳು ಅಧ್ಯಯನದಿಂದಲೇ ಅಮೃತ ಫಲವನ್ನು ಪಡೆದದ್ದು.

ಸ್ವಾಧ್ಯಾಯವೆಂದರೆ ಕಾಮಧೇನುವಿದ್ದಂತೆ. ಅದು ರುಚಿಕರವಾದ, ಮಧುರವಾದ, ಸಾತ್ವಿಕವಾದ ಆಹಾರವನ್ನು ಕೊಡುತ್ತದೆ. ಅದರ ಕೃಪೆಯಿಂದಲೇ ಬಗೆ ಬಗೆಯ ಶಸ್ತ್ರಗಳಿಂದ ಸುಸಜ್ಜಿತವಾದ ಸೈನ್ಯವೂ ಏರ್ಪಡುವುದು.

ಸ್ವಾಧ್ಯಾಯವೆಂದರೆ ಕಲ್ಪವೃಕ್ಷವೇ ಸರಿ. ಅದರ ಛಾಯೆಯಲ್ಲಿ ಕುಳಿತು ಬೇಕಾದ ಫಲವನ್ನು ಪಡೆಯಿರಿ. ಈ ಸ್ವಾಧ್ಯಾಯವು ಚಿಂತಾಮಣಿಯಾಗಿದೆ. ಇದರಿಂದ ಐಹಿಕ, ಪಾರಲೌಕಿಕ, ವೈಯಕ್ತಿಕ, ಸಾಮಾಜಿಕ ಔದ್ಯೋಗಿಕ, ವ್ಯಾವಸಾಯಿಕ, ಆಧಿಭೌತಿಕ, ಆಧ್ಯಾತ್ಮಿಕ – ಹೀಗೆ ಎಲ್ಲ ರೀತಿಯ ಚಿಂತೆಗಳನ್ನು ನಷ್ಟಗೊಳಿಸುವ ಶಕ್ತಿಯು ಸ್ವಾಧ್ಯಾಯದಲ್ಲಿದೆ. ಅಂತೆಯೇ ಗುರುಗಳು ತಮ್ಮ ಶಿಷ್ಯರಿಗೆ 'ಸ್ವಾಧ್ಯಾಯಾನ್ಮಾ ಪ್ರಮದಃ' ಎಂದು ಎಚ್ಚರಿಸುತ್ತಾರೆ.

ಐತರೇಯ ಉಪನಿಷತ್ತಿನ ಶಾಂತಿಪಾಠದಲ್ಲಿ ಋಷಿಗಳು ಹೀಗೆ ಭಗವಂತನನ್ನು ಪ್ರಾರ್ಥಿಸುತ್ತಾರೆ :

ಓಂ ! ವಾಙ್ಮೇ ಮನಸಿ ಪ್ರತಿಷ್ಠಿತಾ ಮನೋ ಮೇ
ವಾಚಿ ಪ್ರತಿಷ್ಠಿತಮಾವಿರಾವೀರ್ಮ ಏಧಿ ।
ವೇದಸ್ಯ ಮ ಆಣೀಸ್ಥಃ ಶ್ರುತಂ ಮೇ ಮಾ ಪ್ರಹಾಸೀಃ

ಹೇ ಸಚ್ಚಿದಾನಂದ ಭಗವಂತ! ನನ್ನ ವಾಣಿಯು ನನ್ನ ಮನಸ್ಸಿನಲ್ಲಿ ಸ್ಥಿರವಾಗಿರಲಿ. ನನ್ನ ಮನಸ್ಸು ನನ್ನ ವಾಣಿಯಲ್ಲಿ ಸ್ಥಿರವಾಗಿರಲಿ. ನನ್ನ

ವಾಣಿ ಮತ್ತು ಮನಸ್ಸುಗಳು ಏಕರೂಪವಾಗಿರಲಿ. ಓದುವುದೊಂದು, ಯೋಚಿಸುವದೊಂದು, ಮನಸ್ಸಿನ ಆಸೆ ಮತ್ತೊಂದು, ಆಚರಿಸುವುದು ನಾಲ್ಕನೆಯ ಬಗೆ – ಈ ರೀತಿಯ ಅಸಂಗತಗಳು ನನ್ನ ಜೀವನದಲ್ಲಿ ಬಾರದಿರಲಿ. ನನ್ನ ಜೀವನವು ಸುಸಂಗತವೂ ಸುಂದರವೂ ಆಗಲಿ. ಹೇ ಪ್ರಕಾಶರೂಪ ಪರಮೇಶ್ವರನೇ! ಯೋಗಮಾಯೆಯ ಎಲ್ಲ ಆವರಣಗಳನ್ನು ದೂರ ಸರಿಸಿ ನೀನು ನನ್ನ ಮುಂದೆ ಪ್ರಕಟನಾಗು. ಓ ಮನಸ್ಸೇ! ಓ ವಾಣಿಯೇ! ನೀವಿಬ್ಬರೂ ಕೂಡಿ ನನಗೆ ವೇದಗಳಲ್ಲಿ ಅಡಗಿರುವ ಜ್ಞಾನವನ್ನು ಕರುಣಿಸಿ. ನಿಮ್ಮ ಸಹಾಯದಿಂದಲೇ ನಾನು ವೇದಗಳನ್ನು ತಿಳಿಯಬಲ್ಲೆ. ಗುರುಮುಖದಿಂದ ಪ್ರಾಪ್ತವಾದ, ಮತ್ತು ಸ್ವಾನುಭವದಿಂದ ಪಡೆದ ನನ್ನ ಜ್ಞಾನವು ಎಂದೂ ನನ್ನನ್ನು ತ್ಯಜಿಸದಿರಲಿ. ನನಗೆಂದೂ ಅದರ ವಿಸ್ಮೃತಿಯಾಗದಿರಲಿ.

ಪ್ರಾಚೀನ ಕಾಲದಲ್ಲಿ ಮುನಿಗಳ ಈ ಇಚ್ಛೆಯನ್ನು ಭಗವಂತ ಈಡೇರಿಸಿದ. ಕಾರಣ ಆ ಮುನಿಗಳು ಅಧ್ಯಯನಶೀಲರಾಗಿದ್ದರು. ನಾವು ಕೂಡಾ ಅಧ್ಯಯನದಲ್ಲಿ ನಿರತರಾದರೆ ನಮ್ಮ ಎಲ್ಲ ಶುಭೇಚ್ಛೆಗಳೂ ಫಲದಾಯಿಯಾಗುತ್ತವೆ. ನಮ್ಮ ಜ್ಞಾನವು ತೇಜಸ್ವಿಯೂ, ಕ್ರಿಯಾಶೀಲವೂ ಆಗಿ ಸಂಪೂರ್ಣ ಜಗತ್ತಿನ ಗುರುಸ್ಥಾನ ಪುನಃ ನಮಗೆ ಪ್ರಾಪ್ತವಾಗುತ್ತದೆ.

೧೨ ಪರನಿಂದೆ

೧

ಮನುಷ್ಯನಿಗೆ 'ಮತ್ತೊಬ್ಬನ ಭುಜದ ಮೇಲಿನ ಕೋತಿ ಕಾಣಿಸುತ್ತದೆ. ಆದರೆ ತನ್ನ ಭುಜದ ಮೇಲಿನ ಭೂತ ಕಾಣುವುದಿಲ್ಲ' ಎಂಬ ಗಾದೆ ಮಾತೊಂದಿದೆ. ಈ ಮಾತಿನ ಅನುಭವವು ನಮಗೆ ಹೆಜ್ಜೆ ಹೆಜ್ಜೆಗೂ ಬರುತ್ತದೆ. ಇನ್ನೊಬ್ಬನ ದೋಷವನ್ನು ಹುಡುಕುವುದಕ್ಕಿಂತ ಮೆಚ್ಚಿನ ಕೆಲಸ ಮನುಷ್ಯನಿಗೆ ಇನ್ನೊಂದಿಲ್ಲ! ಅದರಲ್ಲೂ ನಿಂದಿಸುವುದು ಇನ್ನೂ ಇಷ್ಟವಾದದ್ದು. ಇನ್ನೂ ಕೆಲವರಿಗೆ ಮುಖಸ್ತುತಿ ಮಾಡುವುದು, ಹಿಂದಿನಿಂದ ನಿಂದಿಸುವುದು, ಈ ಬಗೆಯ ಸ್ವಭಾವವಿರುತ್ತದೆ. ಆದರೆ ಹಿಂದೆಯೇ ಇರಲಿ, ಮುಂದೆಯೇ ಇರಲಿ ನಿಂದೆ ಮಾಡುವುದು ವಿನಾಶಕಾರಿ.

ನಿಂದೆ ಮಾಡುತ್ತ ಮಾಡುತ್ತ ಮನುಷ್ಯನ ದೃಷ್ಟಿಗೆ ಎಲ್ಲರಲ್ಲೂ ದೋಷವೇ ಕಾಣುತ್ತದೆ. ಆಚಾರ್ಯರು ಒಮ್ಮೆ ದುರ್ಯೋಧನನಿಗೆ –"ಒಬ್ಬ ಸಜ್ಜನನನ್ನು ಹುಡುಕಿಕೊಂಡು ಬಾ" ಎಂದರು. ಆದರೆ ದುರ್ಯೋಧನನಿಗೆ ಭೂಮಂಡಲವೆಲ್ಲಾ ಜಾಲಾಡಿದರೂ ಒಬ್ಬ ಸಜ್ಜನನೂ ಸಿಗಲಿಲ್ಲ. ಅದರಂತೆ ಗುರುಗಳು ಧರ್ಮರಾಜನಿಗೂ "ಒಬ್ಬ ದುಷ್ಟನನ್ನು ಹುಡುಕಿಕೊಂಡು ಬಾ" ಎಂದರು. ಆದರೆ ಅವನೂ ಬರಿಗೈಯಿಂದ ವಾಪಸ್ಸು ಬಂದ. ಈ ಕಥೆಯ ಭಾವಾರ್ಥವೆಂದರೆ ಮನುಷ್ಯನ ದೃಷ್ಟಿಕೋನ ಹೇಗಿರುತ್ತದೋ ಅವನಿಗೆ ಹಾಗೆಯೇ ಜಗತ್ತು ಕಾಣಿಸುವುದು.

ಅಹಂಕಾರದಿಂದ ಮನುಷ್ಯನ ದೃಷ್ಟಿ ಕಲುಷಿತವಾಗಿ, ಪರನಿಂದೆ ಮಾಡತೊಡಗುತ್ತಾನೆ. ನಾನೇ ಬುದ್ಧಿವಂತ, ಪರಾಕ್ರಮಿ, ಕರ್ತೃತ್ವಶಾಲಿ ಎಂಬ ಗರ್ವದಿಂದ ಅವನಿಗೆ ಬೇರೆಯವರು ಕೀಳಾಗಿ ಕಾಣಿಸುತ್ತಾರೆ.

ಆದರೆ ಹೀಗೆ ಮಾಡುವುದರಿಂದ ಅವನ ಪ್ರಗತಿ ಅಲ್ಲಿಗೇ ಮೊಟಕಾಗುತ್ತಿದೆ ಎಂದು ಅವನಿಗೆ ತಿಳಿಯುವುದೇ ಇಲ್ಲ.

ಡಾಂಭಿಕತೆಯಿಂದ ಮನುಷ್ಯ ಪರನಿಂದೆ ಮಾಡುತ್ತಾನೆ. ತನ್ನಲ್ಲಿಲ್ಲದ ಸದ್ಗುಣಗಳನ್ನು ಪ್ರಸ್ತುತಗೊಳಿಸಲು ಇಚ್ಛಿಸುತ್ತಾನೆ. ಇನ್ನೊಬ್ಬರ ದೋಷಗಳ ಬಗ್ಗೆ ಅವಸರದ ನಿರ್ಣಯ ಕೊಡುತ್ತಾನೆ. ಆದರೆ ಸೂಜ್ಞರಾದವರು ಹೇಳುತ್ತಾರೆ – "ರೀ ಮಹಾಶಯರೇ, ನಿಮ್ಮ ಕಾಲ ಕೆಳಗೆ ಉರಿಯುತ್ತಿರುವುದನ್ನು ಮೊದಲು ನೋಡಿರಿ." ಜನರಿಗೆ ಹೇಳುವುದು ಬ್ರಹ್ಮಜ್ಞಾನ, ತಾನು ಮಾತ್ರ ಗಟ್ಟಿ ಪಾಷಾಣ.

ಕೆಲವು ಜನರು ನಿರಾಶೆಯಿಂದ ಪರನಿಂದೆ ಮಾಡುತ್ತಾರೆ. ಅವರಿಗೆ ತಮ್ಮ ಸ್ವಂತದ ನ್ಯೂನತೆಯಿಂದ ಅಪಯಶ ಸಿಕ್ಕಿರುತ್ತದೆ. ಅದಕ್ಕಾಗಿ ನಿರಾಶರಾಗಿ ಜಗತ್ತನ್ನು ಹಳಿಯುತ್ತಾರೆ.

ಒಮ್ಮೆ ಕೆಲವು ಉತ್ಸಾಹಿ ಯುವಕರು ಗಣೇಶ ಉತ್ಸವವನ್ನು ಆಚರಿಸಬೇಕೆಂದು ಯೋಚಿಸಿದರು. ಒಬ್ಬ ವ್ಯಕ್ತಿಯ ಬಳಿಗೆ ಹೋಗಿ ತಮ್ಮ ಯೋಜನೆಯನ್ನು ತಿಳಿಸಿದರು. ಅದಕ್ಕೆ ಆ ಗೃಹಸ್ಥ "ಈ ಊರಲ್ಲಿ ಎಲ್ಲರೂ ಒಂದೇ ಜಾತಿಯ ಕಳ್ಳರು. ಅವರೇನು ನಿಮಗೆ ಚಂದಾಹಣ ಕೊಡುವರೆಂದು ಕೊಂಡಿದ್ದೀರಾ ?"

ಆಗ ಆ ಯುವಕರು – "ನಾವು ಈಗಾಗಲೇ ಬಹಳಷ್ಟು ಹಣವನ್ನು ಸಂಗ್ರಹಿಸಿದ್ದೇವೆ" ಎಂದರು. ಅದಕ್ಕೆ ಆ ಗ್ರಹಸ್ಥ – "ಹೌದೇನು, ಹಾಗಾದರೆ ಈ ಹಣ ಕೊಡುವುದರಲ್ಲಿ ಅವರಿಗೆ ಏನಾದರೂ ಸ್ವಾರ್ಥವಿರಬೇಕು, ಅಥವಾ ಯಾವುದಾದರೂ ಪದವಿ, ಅಧಿಕಾರದ ಆಸೆ ಇರಬೇಕು" ಎಂದ. ಅದಕ್ಕೆ ಯುವಕರು ಉತ್ತರಿಸಿದರು – "ಹಾಗೇನೂ ಇಲ್ಲ, ನಾವು ಈ ಭಾನುವಾರ ಸಭೆ ಸೇರಿದ್ದೆವು, ಆದರೆ ಅವರಾರೂ ಅಂಥ ಆಸೆಯನ್ನು ವ್ಯಕ್ತಪಡಿಸಲಿಲ್ಲ."

ಅದಕ್ಕೆ ಆ ಮನುಷ್ಯ – "ಅರೆ ನಿಮಗೆ ಗೊತ್ತಿಲ್ಲ, ಅವರು ಮೇಲೆ ಮೇಲೆ ಹಾಗೆ ತೋರಿಸಿಕೊಳ್ಳುತ್ತಾರೆ. ಆದರೆ ಮಹಾ ಕುತಂತ್ರಿಗಳು. ಜಗಳಗಂಟಿ ಜನ" ಎಂದ. ಆದಕ್ಕೆ ಯುವಕರು – "ಹೌದು, ಆದಕ್ಕಾಗಿಯೇ

ನಾವು ಸದ್ಬುದ್ಧಿಯನ್ನು ಕೊಟ್ಟು ವಿಘ್ನಗಳನ್ನು ನಿವಾರಿಸುವ ಆ ಗಜಾನನನ ಪೂಜೆ ಮಾಡಬೇಕೆಂದಿದ್ದೇವೆ" ಎಂದು ಹೇಳಿ ಹೊರಟುಹೋದರು.

೨

ಸ್ವತಃ ತಾವು ಏನನ್ನೂ ಮಾಡುವುದಿಲ್ಲ. ಬೇರೆಯವರನ್ನೂ ಮಾಡಲು ಬಿಡುವುದಿಲ್ಲ. ಹೀಗೆ ಕೆಲವು ಜನರ ಪದ್ಧತಿಯಿರುತ್ತದೆ.

ಮತ್ಸರದಿಂದಲೂ ಮನುಷ್ಯ ಪರನಿಂದೆ ಮಾಡುತ್ತಾನೆ. ಮತ್ಸರ ಸ್ವಭಾವದವನಲ್ಲಿ ಕರ್ತೃತ್ವಶಕ್ತಿ ಇರುವುದಿಲ್ಲ. ಬೇರೆಯವರನ್ನು ಹೊಗಳಿದರೆ ಅವನಿಗೆ ಸಹನೆಯಾಗುವುದಿಲ್ಲ.

ಒಬ್ಬ ಧನಿಕ ಊರಿನಲ್ಲಿ ಒಂದು ಸುಂದರವಾದ ದೇವಸ್ಥಾನವನ್ನು ಕಟ್ಟಿಸಿದ್ದ. ಅದನ್ನು ಊರಿಗೆ ಬಂದ ಒಬ್ಬ ಪ್ರತಿಷ್ಠಿತ ವ್ಯಕ್ತಿಗೆ ತೋರಿಸಲಾಯಿತು. ಆತ ದೇವರ ವಿಗ್ರಹ, ದೇವಾಲಯದ ವ್ಯವಸ್ಥೆ, ಸ್ವಚ್ಛತೆ ಎಲ್ಲವನ್ನೂ ಗಮನಿಸಿ ಮುಕ್ತಮನಸ್ಸಿನಿಂದ ಹೊಗಳಿದ. ಅದೇ ಊರಿನ ಇನ್ನೊಬ್ಬ ಮತ್ಸರಿಯಾದ ವ್ಯಕ್ತಿಗೆ ಇದರಿಂದ ಅಸಹನೆಯುಂಟಾಯಿತು. "ಏನ್ರೀ ನಿಮಗೇನು ಗೊತ್ತು. ಅವನು ಇಷ್ಟೊಂದು ಹಣವನ್ನು ಯಾವ ದಾರಿಯಿಂದ ಸಂಪಾದಿಸಿದ್ದಾನೆಂದು ...." ಅತಿಥಿ ಬಹಳ ಚಾಣಾಕ್ಷ. ಅವನು ಕೂಡಲೇ ಉತ್ತರಿಸಿದ – "ಹೌದು! ನಿಮಗೆ ಗೊತ್ತಿರಬೇಕು, ವಟವೃಕ್ಷದ ಬೀಜ ಕಾಗೆಯ ಬಾಯಿಂದ ಬೀಳುತ್ತದೆಂದು. ಅದಕ್ಕಾಗಿ ನೀವು ಆ ಮರದ ನೆರಳಿನಲ್ಲಿ ಕೂಡುವುದಿಲ್ಲವೆ? ನಿಮಗೆ ಅವಕಾಶ ಸಿಕ್ಕಿದ್ದರೆ ನೀವೂ ಆ ರೀತಿ ಸಂಪಾದಿಸುತ್ತಿರಲಿಲ್ಲವೆ? ಹಾಗೆ ಸಂಪಾದಿಸಿದರೂ ಇಂಥ ಒಳ್ಳೆಯ ಕೆಲಸಕ್ಕೆ ಖರ್ಚು ಮಾಡುವ ಮನಸ್ಸು ಎಲ್ಲರಿಗೂ ಇರುತ್ತದೆಂಬ ಭರವಸೆ ಇಲ್ಲ." ಆ ಮತ್ಸರಿ ಮನುಷ್ಯನ ಬಾಯಿ ಕಟ್ಟಿದಂತಾಯಿತು.

ಗುಣಗಳ ಯೋಗ್ಯತೆಯನ್ನು ತಿಳಿಯಲಾರದವನೂ ನಿಂದಾಶೀಲನಾಗಿರುತ್ತಾನೆ. ಈ ಜಗತ್ತಿನ ಪ್ರತಿಯೊಂದು ಸಸ್ಯವೂ ಒಂದಿಲ್ಲೊಂದು ಔಷಧಿಯ ಗುಣಗಳನ್ನು ಹೊಂದಿರುತ್ತದೆ. ಆದರೆ ಅವರ ಯೋಗ್ಯತೆ

ತಿಳಿಯದ ಮನುಷ್ಯ, ಅದೊಂದು ಸಾಮಾನ್ಯ ಸೊಪ್ಪು ಎಂದು ಕಿತ್ತು ಎಸೆಯುತ್ತಾನೆ. ಹೀಗೆ ಅಜ್ಞಾನದಿಂದ ನಿಂದೆಗೆ ತೊಡಗುತ್ತಾನೆ.

ಯೋಗ್ಯರೀತಿಯಲ್ಲಿ ಪ್ರತಿಭೆಯನ್ನು ಉಪಯೋಗಿಸಲಾರದವನೂ ಪರನಿಂದೆ ಮಾಡುತ್ತಾನೆ. ಪ್ರತಿಭೆಯಿಂದ ಕಸದಿಂದಲೂ ರಸ ಮಾಡುವ ಕಲೆ ಸಿದ್ಧಿಸಿರುತ್ತದೆ. ಒಳ್ಳೆಯ ಗೃಹಿಣಿ ಹೊಟ್ಟಿನಿಂದ ಮಂಡಿಕೆ ಮಾಡುತ್ತಾಳೆ. ಆದರೆ ಆ ಕಲೆ ಗೊತ್ತಿರದವಳು ರವೆ, ಸಕ್ಕರೆ, ತುಪ್ಪ ಲಭ್ಯವಿದ್ದರೂ ಏನೂ ಮಾಡಲಾರಳು. "ಕುಣಿಯಲು ಬಾರದಿದ್ದರೆ ನೆಲ ಡೊಂಕು" ಎಂದು ಹೇಳುವರು. ಶ್ರೀರಾಮ ಕೇವಲ ವಾನರರ ಸಹಾಯದಿಂದ ಬಲಾಢ್ಯ ರಾವಣನನ್ನು ಮಣ್ಣುಗೂಡಿಸಿದ. ಶ್ರೀಕೃಷ್ಣ ಗೊಲ್ಲ ಬಾಲಕರಿಂದ ಅದ್ಭುತ ಕೆಲಸಗಳನ್ನು ಮಾಡಿಸಿದ. ಶಿವಾಜಿ ಸರಳ ಭೋಳೆಸ್ವಭಾವದ ಮಾವಳರನ್ನು ಶಿಸ್ತಿನ ಸೈನಿಕರನ್ನಾಗಿಸಿದ. ರಾಮಕೃಷ್ಣ ಪರಮಹಂಸರು ಸರಳ ಸುಂದರ ಕಥೆಗಳಿಂದ ಜಗತ್ತಿನಲ್ಲಿ ವೈಚಾರಿಕತೆ ಹರಡಿದರು. ಈ ಎಲ್ಲ ಮಹಾಪುರುಷರಲ್ಲಿ ಗುಣಗ್ರಾಹಕ, ಲೋಕಸಂಗ್ರಹ ಪ್ರವೃತ್ತಿ ಮತ್ತು ಯೋಜಕತೆ ಇದ್ದವು. ಈ ಮಹಾ ಮಹಿಮರ ಜೀವನವನ್ನು ಸ್ಮರಿಸಿದರೆ ನಮ್ಮಲ್ಲಿ ನಿಂದಾಪ್ರವೃತ್ತಿ ಇಲ್ಲವಾಗುತ್ತದೆ. ಯಾರಲ್ಲಿ ಧ್ಯೇಯವಿಲ್ಲವೋ, ಸಮಯಪ್ರಜ್ಞೆ ಇಲ್ಲವೋ ಅಂಥವನು ಪರನಿಂದೆ ಮಾಡುತ್ತಾನೆ.

ಪರನಿಂದೆ ಮಾದಕ ವಸ್ತುಗಳ ಚಟದಂತಿರುತ್ತದೆ. ಒಮ್ಮೆ ಅದರ ಚಟ ಅಂಟಿಕೊಂಡರೆ ಬೇರೇನೂ ಬೇಕಾಗುವುದಿಲ್ಲ. ಕರಿದ ಪದಾರ್ಥಗಳನ್ನು ತಿನ್ನುವ ಚಟವಿದ್ದವರಿಗೆ ಹಾಲು, ತುಪ್ಪ, ಹಣ್ಣು ಇಂತಹ ಸಾತ್ವಿಕ ಆಹಾರವು ರುಚಿಸುವುದಿಲ್ಲ. ದುರ್ದೈವದಿಂದ ನಮ್ಮಲ್ಲಿ ಪರನಿಂದೆಯು ಬೆಳೆ ಹುಲುಸಾಗಿದೆ. ಬೇರೆಯವರ ಕುಚೇಷ್ಟೆ ಮಾಡಿ ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುತ್ತಾರೆ. ಚಿಕ್ಕ ದೊಡ್ಡ ಪಕ್ಷಗಳಲ್ಲಿ, ಸಂಘ-ಸಂಸ್ಥೆಗಳಲ್ಲಿ ಒಬ್ಬರ ಮೇಲೊಬ್ಬರು ರಾಡಿ ಹಾಕುವುದರಲ್ಲೇ ತೊಡಗಿರುತ್ತಾರೆ. ಯಾವುದೇ ರಾಜಕೀಯ ಸಭೆಗಳಿಗೆ ಹೋದಾಗ ಅಲ್ಲಿನ ಭಾಷಣಕಾರರು ವಿರೋಧ ಪಕ್ಷದ ದೋಷಾರೋಪಣೆಯಲ್ಲಿ ಸಮಯ ಕಳೆಯುತ್ತಾರೆ.

ತಿಲಕ ಜಯಂತಿ, ಗಾಂಧೀ ಜಯಂತಿ, ಶ್ರೀರಾಮನವಮಿಯಂಥ ಉತ್ಸವಗಳು ಆಚರಿಸಲಾಗುತ್ತವೆ. ಅಲ್ಲಿ ಅವರ ದೇಶಭಕ್ತಿಯಾಗಲಿ, ಸಾಹಿತ್ಯಸೇವೆಯಾಗಲಿ ತ್ಯಾಗ-ಶೌರ್ಯ-ಬಲಿದಾನಗಳಾಗಲಿ ಪ್ರಾಮುಖ್ಯ ಪಡೆಯುವುದಿಲ್ಲ. ಅಲ್ಲಿ ನಡೆದ ಕಾರ್ಯಕ್ರಮವೆಂದರೆ ಪ್ರತಿಪಕ್ಷದ ನಿಂದೆ. ನಿಂದೆ, ಬರೀ ನಿಂದೆ!

೩

ಸಂಘ-ಸಂಸ್ಥೆಗಳಲ್ಲಿ, ಪಕ್ಷ ಪ್ರತಿಪಕ್ಷಗಳಲ್ಲಿ ನಡೆಯುತ್ತಿರುವ ಪರನಿಂದೆಯ ಸಗಟು ವ್ಯಾಪಾರದಿಂದ ಸಮಾಧಾನವಾಗದೆ, ದಿನಪತ್ರಿಕೆಗಳಲ್ಲೂ ಅದರ ಚಿಲ್ಲರೆ ವ್ಯಾಪಾರ ನಡೆದಿದೆ. ಪತ್ರಿಕೆ ಬಿಡಿಸಿದರೆ ಸಾಕು, ಅದರ ಪುಟ ಪುಟಗಳೂ ನಿಂದೆಯಿಂದ, ಚುಚ್ಚುಮಾತುಗಳಿಂದ, ಅಪಹಾಸಗಳಿಂದ ತುಂಬಿರುತ್ತವೆ. ನಮ್ಮ ಸಮಾಜದ ಆಬಾಲವೃದ್ಧರು ಈ ಟಾನಿಕ್ಕನ್ನು ನಿತ್ಯ ಸೇವಿಸುತ್ತಾರೆ. ವಿಧಾಯಕವಾದ ವೈಚಾರಿಕತೆ ಮತ್ತು ಸದ್ಭಾವನೆಯನ್ನು ಪ್ರೇರಿಸುವಂಥ ಪತ್ರಿಕೆಗಳು ಬಹಳ ಕಡಿಮೆ ಪ್ರಮಾಣದಲ್ಲಿ ಖರ್ಚಾಗುತ್ತವೆ. ಆದರೆ ಒಬ್ಬರಿಗೊಬ್ಬರು ಆರೋಪ ಪ್ರತ್ಯಾರೋಪ ಮಾಡುವ, ಪರಸ್ಪರರ ಹುಳುಕುಗಳನ್ನು ಎತ್ತಿ ತೋರಿಸುವ ಪತ್ರಿಕೆಗಳು ಭಾರಿ ಪ್ರಮಾಣದಲ್ಲಿ ಖರ್ಚಾಗುತ್ತವೆ. ಇದಕ್ಕೆ ಸಂಬಂಧಿಸಿದ ಒಂದು ವಿನೋದಪೂರ್ಣವಾದ ಕಥೆ ಇದೆ.

ಅಮೇರಿಕದ ನ್ಯೂಯಾರ್ಕ್‌ನಗರದಿಂದ ಎರಡು ಸಾಪ್ತಾಹಿಕಗಳು ಹೊರಡುತ್ತಿದ್ದವು. ಪ್ರತಿಯೊಂದು ವಿಷಯವನ್ನೂ ಒಂದನ್ನೊಂದು ವಿರೋಧಿಸಿ ಬರೆಯುತ್ತಿದ್ದವು. ಒಬ್ಬರನ್ನೊಬ್ಬರು ಶಬ್ದಗಳ ತೀಕ್ಷ್ಣಧಾರೆಯಿಂದ ಪ್ರಹಾರ ಮಾಡುತ್ತಿದ್ದರು. ಒಂದು ಸಾಪ್ತಾಹಿಕದ ಲೇಖನವನ್ನು ಈ ವಾರ ಓದಿದ ವಾಚಕರು, ಆ ಪತ್ರಿಕೆಯವನು ಏನು ಬರೆದಿದ್ದಾನೆ ನೋಡೋಣ ಎಂದು ಮುಂದಿನವಾರ ಇನ್ನೊಂದು ಪತ್ರಿಕೆಯನ್ನು ಓದುತ್ತಿದ್ದರು. ಅದಾದ ಮೇಲೆ ಭಾನುವಾರ ಬರುವ ಪ್ರತಿಸ್ಪರ್ಧಿ ಪತ್ರಿಕೆಯವನ ಲೇಖನಕ್ಕಾಗಿ ಕುತೂಹಲದಿಂದ ಕಾಯುತ್ತಿದ್ದರು. ಈ ಸಲ ಆ ಮಹಾಶಯನನ್ನು ಚೆನ್ನಾಗಿ ಫಜೀತಿ ಮಾಡಿರಬಹುದು ಎಂದು

ಭಾನುವಾರದ ನಂತರದ ಗುರುವಾರದ ಪತ್ರಿಕೆಯನ್ನು ಎದುರು ನೋಡುತ್ತಿದ್ದರು. ಕೊನೆಗೆ ಒಬ್ಬ ವಿಚಾರವಂತ ಈ ಎರಡೂ ಪತ್ರಿಕೆಗಳ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಬೇಕೆಂದು ವಿಚಾರ ಮಾಡಿದ. ಆ ಇಬ್ಬರು ಸಂಪಾದಕರ ಲೇಖನಿಯಲ್ಲಿಯೂ ಆವೇಶ, ತೇಜಸ್ಸು, ಲಾಲಿತ್ಯ, ಶಬ್ದಸಂಪತ್ತು ಸರಿಸಮವಾಗಿವೆ. ಆದರೆ ಇಬ್ಬರೂ ಒಬ್ಬರಿಗೊಬ್ಬರು ತೆಗಳುವುದರಲ್ಲಿ ಅದನ್ನು ವ್ಯಯಿಸಿದ್ದಾರೆ. ಇದು ಸರಿಯಲ್ಲ. ಇವರಿಬ್ಬರನ್ನೂ ಒಂದುಗೂಡಿಸಿ ಅವರಲ್ಲಿದ್ದ ಪ್ರತಿಭೆಯ ಸದುಪಯೋಗವಾಗಿ, ಅವರಲ್ಲಿದ್ದ ವೈಮನಸ್ಯ ದೂರವಾದರೆ ಅದರಿಂದ ದೇಶಕ್ಕೆ ಮತ್ತು ಪತ್ರಿಕೋದ್ಯಮಕ್ಕೆ ಎಂಥ ಲಾಭವಾದೀತು ಎಂದು ಯೋಚಿಸಿ ಆ ಇಬ್ಬರನ್ನೂ ತನ್ನ ಮನೆಗೆ ಸ್ನೇಹಭೋಜನಕ್ಕೆ ಆಮಂತ್ರಿಸಿದ. ನಿರ್ಧಾರಿತ ಸಮಯಕ್ಕೆ ಸರಿಯಾಗಿ ಒಬ್ಬ ಸಂಪಾದಕ ಬಂದ. ಅತಿಥಿಯನ್ನು ಹರ್ಷದಿಂದ ಸ್ವಾಗತಿಸುತ್ತಾ, "ಓ ಬನ್ನಿ ಬನ್ನಿ, ಆ ಇನ್ನೊಬ್ಬ ಸಂಪಾದಕರೂ ಇಷ್ಟರಲ್ಲೇ ಬರಬಹುದು" ಎಂದ. ಆದಕ್ಕೆ ಸಂಪಾದಕ ನಕ್ಕು – "ಆ ಇನ್ನೊಬ್ಬ ಸಂಪಾದಕನೂ ನಾನೇ. ಬೇರೆ ಬೇರೆ ಎರಡು ಹೆಸರುಗಳ ಮೇಲೆ ಆ ಎರಡೂ ಸಾಪ್ತಾಹಿಕ ಗಳನ್ನು ನಾನೇ ನಡೆಸುತ್ತೇನೆ. ಆ ಆರೋಪ ಪ್ರತ್ಯಾರೋಪಗಳನ್ನೆಲ್ಲಾ ನಾನೊಬ್ಬನೇ ಮಾಡುತ್ತೇನೆ. ನನ್ನ ಎರಡೂ ಪತ್ರಿಕೆಗಳನ್ನು ಜನ ಆಸಕ್ತಿಯಿಂದ ಓದುತ್ತಾರೆ. ನನ್ನ ಪತ್ರಿಕೆಗಳು ಭರದಿಂದ ಮಾರಾಟವಾಗು ತ್ತವೆ. ಅದರಿಂದ ನನಗೆ ಅಪಾರ ಲಾಭವೂ ಸಿಗುತ್ತಿದೆ. ಜನರ ಗೊಡವೆ ನನಗೇಕೆ? ಅವರು ಯಾವ ನರಕಕ್ಕಾದರೂ ಹೋಗಲಿ" ಎಂದ.

೪

ನಿಂದೆ ಮಾಡುವ ಪ್ರವೃತ್ತಿಯು ಮೇಲುನೋಟಕ್ಕೆ ಕ್ಷುಲ್ಲಕ ಎನಿಸಿದರೂ, ಅದು ಬಹಳ ಅಪಾಯಕಾರಿಯಾದದ್ದು. ಅದರಿಂದ ವ್ಯಕ್ತಿಯ ಮತ್ತು ಸಮಾಜದ ಮನಸ್ಸಿಗೆ ಹುಳ ಹಿಡಿಯುತ್ತದೆ. ಅದು ಒಳಗಿನಿಂದ ಟೊಳ್ಳಾಗಿ ಶಕ್ತಿಹೀನವಾಗುತ್ತದೆ. ನಿಂದೆಯಿಂದ ಸಮಯದ ದುರುಪಯೋಗವಾಗುತ್ತದೆ. ಶಾರೀರಿಕ ಮತ್ತು ಮಾನಸಿಕ ಶಕ್ತಿಯ

ಅಪವ್ಯಯವಾಗುತ್ತದೆ. ಅಷ್ಟೇ ಅಲ್ಲ, ಅನೇಕ ಜನರ ಜೀವನಗಳು ಅಕಾರಣವಾಗಿ ಹಾಳಾಗುತ್ತವೆ.

ಈಶ್ವರನು ಎಲ್ಲ ಕಡೆ ಇದ್ದಾನೆ. ನಾವಾಡುವ ಪ್ರತಿಯೊಂದು ಮಾತುಗಳನ್ನು ಕೇಳಿಸಿಕೊಳ್ಳುತ್ತಾನೆ ಮತ್ತು 'ತಥಾಸ್ತು' 'ತಥಾಸ್ತು' ಎಂದು ಆಶೀರ್ವದಿಸುತ್ತಾನೆ ಎಂದು ತಿಳಿಯಬೇಕು. ಒಳ್ಳೆಯ ಮಾತನಾಡಬೇಕು. ಕೆಟ್ಟದ್ದನ್ನೂ ಕೆಟ್ಟದ್ದೆಂದು ಹೇಳಬಾರದು. ಹಾಗೆ ಹೇಳಿದಾಗ ಅದು ಪರಿಸರದಲ್ಲಿ ಹರಡುತ್ತದೆ, ಬೆಳೆಯುತ್ತದೆ ಮತ್ತು ಹಬ್ಬುತ್ತದೆ. ಕಳ್ಳನನ್ನು ಕಳ್ಳನೆಂದು ಹೇಳಬಾರದು. ಹಾಗೆ ಹೇಳುವುದರಿಂದ ಅವನಲ್ಲಿದ್ದ ಅಲ್ಪಸ್ವಲ್ಪ ಒಳ್ಳೆಯತನವೂ ಇಲ್ಲವಾಗುತ್ತದೆ. ಆದ್ದರಿಂದಲೇ ಧರ್ಮರಾಜ ದುರ್ಯೋಧನನನ್ನು ಯಾವಾಗಲೂ ಸುಯೋಧನ ಎಂದೇ ಕರೆಯುತ್ತಿದ್ದ. ಬಳೆ ಒಡೆಯಿತು ಕುಂಕುಮ ಅಳಿಸಿತು ಎಂದು ಹೇಳುವ ಪದ್ಧತಿ ಇಲ್ಲ. ಬಳೆ ಹೆಚ್ಚಿದೆ, ಕುಂಕುಮ ಬೆಳೆದಿದೆ ಎಂದು ಹೇಳುತ್ತಾರೆ.

೨೩

ನಾವು ಕೆಟ್ಟವರನ್ನೂ ಒಳ್ಳೆಯವರನ್ನಾಗಿ ಮಾಡಲು ಯತ್ನಿಸಬೇಕು. 'ನೀನು ಸಜ್ಜನ' 'ನೀನು ಸಜ್ಜನ' ಎಂದು ದುಷ್ಟನಲ್ಲಿ ಸಂಭಾಷಿಸಿದರೆ ಅವನ ದುಷ್ಟತನ ನಾಶವಾಗುತ್ತದೆ. ಯಾರಲ್ಲಿಯೂ ದೋಷವನ್ನು ಹುಡುಕಬಾರದು. ಒಂದು ಅಡಿಕೆ ಇಲ್ಲವೆ ಒಂದು ಶಿಲೆಯನ್ನು ಪ್ರಾಣ ಪ್ರತಿಷ್ಠೆ ಮಾಡಿ ದೇವರೆಂದು ಭಾವಿಸುವ ಸಾಮರ್ಥ್ಯ, ನಮ್ಮಲ್ಲಿದೆ. ಹಾಗೆಯೇ ನಾವು ಎಲ್ಲರನ್ನೂ ತಿಳಿಯಬೇಕು. ದುರ್ಯೋಧನ ದ್ರೋಣಾಚಾರ್ಯರನ್ನು ನಿಂದಿಸಿದ. ಆದರೆ ಏಕಲವ್ಯ ಮಣ್ಣಿನ ವಿಗ್ರಹವನ್ನು ಗುರುವೆಂದು ಭಾವಿಸಿ, ನಿಷ್ಠೆಯಿಂದ ವಿದ್ಯೆಯನ್ನು ಸಂಪಾದಿಸಿದ. ದೇವರು ಕಲ್ಲಿನ ಅಥವಾ ಮಣ್ಣಿನ ವಿಗ್ರಹವೆಂದು ತಿಳಿದಿದ್ದರೂ ನಾವು ಮನಃಪೂರ್ವಕವಾಗಿ ಪೂಜಿಸಿ ಶ್ರದ್ಧೆಯಿಂದ ಪ್ರಸಾದವನ್ನು ಸ್ವೀಕರಿಸುತ್ತೇವೆ. ಇದೇ ಭಾವನೆಯಿಂದ ನಾವು ಪ್ರತಿಯೊಬ್ಬ ವ್ಯಕ್ತಿಯನ್ನು, ಸಮಾಜವನ್ನು ನೋಡಬೇಕು. ಆಗ ಮಾತ್ರ ನಮ್ಮ ದೇಶದ ಪ್ರಗತಿ ಸಾಧ್ಯ.

೧

ಕಳೆದ ಕೆಲವು ವರ್ಷಗಳಿಂದ 'ಅಹಿಂಸೆ' ಶಬ್ದದ ವಿಡಂಬನೆ ಆದಷ್ಟು ಬೇರಾವ ಶಬ್ದಕ್ಕೂ ಆಗಿರಲಿಕ್ಕಿಲ್ಲ. ಭಿನ್ನ ಭಿನ್ನ ಪಕ್ಷಗಳ ಮತ್ತು ಮತಗಳ ಜನರು, ಈ ಶಬ್ದದ ಮೇಲೆ ಪ್ರಹಾರ ಮಾಡಲಿಕ್ಕೆ ಎದ್ದರು. ಅಹಿಂಸೆಯನ್ನು ಜೀವನದ ಶ್ರೇಷ್ಠ ತತ್ವವೆಂದು ಕೆಲವರು ಘೋಷಿಸಿದರೆ, ಇನ್ನು ಕೆಲವರು ಇದನ್ನು ರಾಷ್ಟ್ರಜೀವನದ ದೀಪವನ್ನೇ ನಂದಿಸುವಂತಹದು ಎಂದು ಇದನ್ನು ಹೇಯ ಮತ್ತು ತ್ಯಾಜ್ಯವೆಂದು ತಿಳಿದರು. ಕೆಲವರು ರಾಜನೈತಿಕ ಅಹಿಂಸೆ, ಧಾರ್ಮಿಕ ಅಹಿಂಸೆ, ಸಾಮೂಹಿಕ ಜೀವನದಲ್ಲಿನ ಅಹಿಂಸೆ, ಪರಿಸ್ಥಿತಿನಿರಪೇಕ್ಷ ಅಹಿಂಸೆ ಮತ್ತು ಪರಿಸ್ಥಿತಿ ಸಾಪೇಕ್ಷ ಅಹಿಂಸೆ – ಈ ರೀತಿ ಬಗೆಬಗೆಯ ಅರ್ಥಗಳನ್ನು ಕಲ್ಪಿಸಿದರು. ಕೆಲವರು ಅಹಿಂಸೆಯನ್ನು ಧಿಕ್ಕರಿಸಿ ತಾವು ಬಹಳ ಶೂರರು, ಪರಾಕ್ರಮಿಗಳು ಎಂದು ಸಿದ್ಧಮಾಡುವ ಪ್ರಯತ್ನ ಮಾಡಿದರು. ಇನ್ನು ಕೆಲವರು ತಾವು ಇದುವರೆಗೆ ಒಂದು ಇಲಿ, ಇರುವೆ ಅಥವಾ ಸೊಳ್ಳೆಯನ್ನು ಕೂಡಾ ಕೊಂದಿಲ್ಲವೆಂದೂ ತಾವು ದೊಡ್ಡ ಅಹಿಂಸಾವಾದಿಗಳೆಂದೂ ಹೇಳಿಕೊಳ್ಳುತ್ತಾರೆ. ತಾವು ಶ್ರೀರಾಮಚಂದ್ರ, ಶ್ರೀಕೃಷ್ಣ ಅಥವಾ ಛತ್ರಪತಿ ಶಿವಾಜಿ, ರಾಣಾ ಪ್ರತಾಪ ಇತ್ಯಾದಿ ಮಹಾಪುರುಷರಿಗಿಂತಲೂ ಶ್ರೇಷ್ಠರೆಂದು ಘೋಷಿಸಿಕೊಂಡರು. ಅಹಿಂಸೆಯನ್ನು ವಿರೋಧಿಸಲು ಕೆಲವರು ಮಾಂಸಾಹಾರವನ್ನು ಸೇವಿಸಿದರು. ಅಹಿಂಸಕ ಸಿಪಾಯಿಗಳು, ಅಹಿಂಸಕ ಲಾಠಿಹಲ್ಲೆ, ಅಹಿಂಸಕ ಯುದ್ಧ, ಅಹಿಂಸಕ ಹಿಂಸೆ ಮತ್ತು ಹಿಂಸಕ ಅಹಿಂಸೆ ಹೀಗೆ ಎಷ್ಟೋ ಬಗೆಯ ಶಬ್ದ ಪ್ರಯೋಗಗಳು, ಒಮ್ಮೆ ವಿನೋದದಿಂದ ಒಮ್ಮೆ ವಿರೋಧದಿಂದ, ಒಮ್ಮೆ ತಿಳಿದು ಒಮ್ಮೆ ತಿಳಿಯದೇ ಉಪಯೋಗಿಸಲ್ಪಟ್ಟವು. ತೋಪು

ಬಂದೂಕುಗಳ ಕಾರ್ಖಾನೆಗಳನ್ನು ಸ್ಥಾಪಿಸಬೇಕೆ, ಬೇಡವೆ? ನಮ್ಮ ಸರಕಾರವು ಸೈನ್ಯವನ್ನು ಇಡಬೇಕೆ, ಇಡಬಾರದೆ? ಅಣ್ವಸ್ತ್ರಗಳನ್ನು ತಯಾರಿಸಬೇಕೆ, ತಯಾರಿಸಬೇಡವೆ? ಆಕ್ರಮಣಕಾರರ ಮೇಲೆ ಪ್ರತ್ಯಾಕ್ರಮಣ ಮಾಡಬೇಕೆ, ಮಾಡಬೇಡವೆ? ಈ ರೀತಿ ವಿವಾದಗಳು ನಡೆಯತೊಡಗಿದವು. ಅಹಿಂಸೆಯ ನಿಮಿತ್ತದಿಂದ ವೇದಗಳಿಂದ ಭಗವದ್ಗೀತೆಯವರೆಗೆ ಅನೇಕ ಗಂಥಗಳನ್ನು ಅನ್ವೇಷಿಸಿದರು. ಆ ಪ್ರಕಾರವಾಗಿ ವೇದ ಮತ್ತು ಗೀತೆಗಳನ್ನೂ ಶ್ರೇಷ್ಠ ಕನಿಷ್ಠವೆಂದು ನಿರ್ಧರಿಸಿದರು.

ಎಷ್ಟೋ ಜನರು ಆವೇಶದಿಂದ ಕೂಗಾಡುತ್ತಿದ್ದರು – "ಏನ್ರೀ ಈ ಅಹಿಂಸೆಯಿಂದಲೇ ನಮ್ಮ ವಿನಾಶವಾಗಿದೆ. ಈ ಅಹಿಂಸೆಯ ಪುರಸ್ಕರ್ತನಾದ ಗೌತಮಬುದ್ಧ ಎಂದು ನಮ್ಮ ನಾಡಿನಲ್ಲಿ ಜನಿಸಿದನೋ, ಅಂದಿನಿಂದಲೇ ನಮ್ಮ ದೇಶದ ಅಧೋಗತಿಯಾಗಿದೆ. ಯುದ್ಧ ಮಾಡುವುದನ್ನು ಬಿಟ್ಟು ರಾಜಾಧಿರಾಜರು, ಚಕ್ರವರ್ತಿಗಳು ಶಾಂತಿಮಂತ್ರ ಪಠಿಸತೊಡಗಿದರು. ಶಿಲಾಲೇಖಗಳನ್ನು ಬರೆಸಿದರು, ಸುದರ್ಶನ ಚಕ್ರಗಳ ಬದಲಾಗಿ, ಧರ್ಮ ಚಕ್ರಗಳು ಸುತ್ತತೊಡಗಿದವು. ತಮ್ಮ ಮಕ್ಕಳಿಗೆ ಯುದ್ಧಕಲೆಯ ತರಬೇತಿ ಕೊಟ್ಟು, ಅವರ ಕೈಯಲ್ಲಿ ಶಸ್ತ್ರಗಳನ್ನು ನೀಡುವ ಬದಲು ಅವರನ್ನು ಭಿಕ್ಷುಗಳಾಗಿ ಪರಿವರ್ತಿಸಿ ಅವರ ಕೈಯಲ್ಲಿ ದಂಡ ಕಮಂಡಲು ಕೊಡಲಾಯಿತು. ಅದೇ ಪರಂಪರೆ ಮುಂದುವರಿಯಿತು. ಸಮಗ್ರ ದೇಶದ ಪರಿಸರವೇ ಕೆಟ್ಟಿತು. ಪೃಥ್ವೀರಾಜ ವಿನಾಕಾರಣ ಮಹಮ್ಮದ ಘೋರಿಯನ್ನು ಕ್ಷಮಿಸುತ್ತಾ ಹೋದ. ಅಹಿಂಸಾಮಯ ವಾತಾವರಣದಿಂದಲೇ ಹಿಂದೂ ದೇಶ ಮ್ಲೇಚ್ಛರ ಪಾಲಾಯಿತು. ಅಹಿಂಸೆಯ ಪ್ರಭಾವದಿಂದ ಚಿತ್ತೂರಿನ ಭೀಮಸಿಂಹ ಅಲ್ಲಾವುದ್ದೀನನ ಮೇಲೆ ಭರವಸೆ ಇಟ್ಟ. ಅವನನ್ನು ಕೋಟೆಯಲ್ಲೇ ಕೊಂದುಹಾಕುವ ಬದಲು ಹುಚ್ಚನಂತೆ ಹೊರಕ್ಕೆ ಪಾರಾಗಲು ಅನುವು ಮಾಡಿಕೊಟ್ಟ. ಅಹಿಂಸೆಯ ದಾಳದಿಂದಲೇ ಕ್ರೂರನಾದ ಅಲ್ಲಾವುದ್ದೀನ ಖಿಲಜಿ ತನ್ನ ಅಲ್ಪ ಸೈನ್ಯದಿಂದಲೇ ಹಿಂದು ದೇಶವನ್ನು ಉದ್ದವಾಗಿ ಸೀಳಿದ. ನೃಶಂಸನಾದ ಖಿಲಜಿ ಹಿಂದುಸ್ಥಾನವನ್ನು ಒಡೆದ. ದಕ್ಷಿಣದಲ್ಲಿ ನಿಜಾಮ ಬೇರೂರಲು ನಮ್ಮವರ ಅಹಿಂಸಾ

ನೀತಿಯೇ ಕಾರಣ. ಅಹಿಂಸಾ ಪಾಲನೆಯಿಂದ ಹಿಂದುಸ್ಥಾನಕ್ಕೆ ಅಪಾರ ಹಾನಿಯಾಗಿದೆ."

ಇದಕ್ಕೆ ಪ್ರತ್ಯುತ್ತರವಾಗಿ ಕೆಲವು ಜನರು–"ನೀವು ಸಂಕುಚಿತರೂ ಹಿಂಸಾವೃತ್ತಿಯವರೂ, ಯುದ್ಧಪ್ರಿಯರೂ ಆಗಿರುವಿರಿ. ಬರೀ ಸ್ವದೇಶ ಚಿಂತೆಯೊಂದೇ ಮಾಡಿದರೆ ಸಾಕೇ ? ಜಗತ್ತಿನ ಚಿಂತೆ ಮಾಡಿರಿ. ಜಗತ್ತಿಗೆ ರಾಮ, ಕೃಷ್ಣ, ಶಿವಾಜಿಗಿಂತಲೂ ಬುದ್ಧ, ಕ್ರಿಸ್ತ, ಗಾಂಧಿ ಇವರುಗಳ ಆವಶ್ಯಕತೆ ಇದೆ. ಒಂದು ವೇಳೆ ಇಡೀ ಜಗತ್ತೆ ಅಹಿಂಸಕವಾದರೆ ಎಲ್ಲೆಲ್ಲೂ ಸುಖ ಶಾಂತಿಯ ಮಳೆಗರೆಯುತ್ತದೆ, ಅದಕ್ಕಾಗಿ ಅಹಿಂಸೆಯು ಪ್ರಚಾರ ವಾಗಬೇಕು" ಎನ್ನುತ್ತಾರೆ. ಅಹಿಂಸೆಯನ್ನು ವಿರೋಧಿಸುವವರನ್ನು ಈ ರೀತಿ ಕಟು ಶಬ್ದಗಳಲ್ಲಿ ನಿಂದಿಸಿ, ರಾಮಕೃಷ್ಣರಿಂದ ಇಂದಿನ ಕ್ರಾಂತಿಕಾರಿಗಳವರೆಗೆ ಎಲ್ಲರೂ ತಪ್ಪಿತಸ್ಥರೆಂದು ನಿರ್ಣಯಿಸಿದರು. ಈ ರೀತಿ ಹಿಂಸೆ ಅಹಿಂಸೆಗಳ ವಿವಿಧ ಚರ್ಚೆಗಳು ಯಾವ ಫಲಿತಾಂಶವನ್ನೂ ನೀಡಲಿಲ್ಲ. ನೀಡಲು ಸಾಧ್ಯವೂ ಇರಲಿಲ್ಲ. ಕಾರಣ ಈ ಎಲ್ಲ ಜನರು ಹಿಂಸಕರೂ ಇರಲಿಲ್ಲ, ಅಹಿಂಸಕರೂ ಆಗಿರಲಿಲ್ಲ. ಅವರೆಲ್ಲ ಕೇವಲ ಪಕ್ಷಾಭಿಮಾನಿಗಳಾಗಿದ್ದರು. ಈ ಗುಂಪುಗಳು ವಾದವಿವಾದದಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಮಸಿ ಬಳಿಯುವುದರಲ್ಲೇ ಮುಕ್ತಾಯಗೊಂಡವು. ಆ ಮನೆಯಲ್ಲಿ ಯಾವ ತತ್ವವೂ ಇರಲಿಲ್ಲ. ಅಹಿಂಸೆಯ ಹೆಸರಿನಲ್ಲಿ ಹಿಂಸಾಚಾರ ಮೆರೆಯಿತು.

೨

ವಾಸ್ತವವಾಗಿ ಅಹಿಂಸೆ ಮಾನವತೆಯ ಒಂದು ಶ್ರೇಷ್ಠ ಗಮಕ ವಾಗಿದೆ. ಈ ಬಗ್ಗೆ ಯಾರೂ ಎರಡನೇ ಮಾತು ಹೇಳಲಾರರು. ಎದುರಿಗೆ ಬಂದವನನ್ನು ಹೊಡೆಯುವುದು, ಭಯಭೀತಿಗೊಳಿಸುವುದು, ವಿನಾಕಾರಣ ಹೊಡೆಯುವುದು ಇವೆಲ್ಲಾ ಪಶುವೃತ್ತಿಯ ಗುಣಗಳು. ತೀಕ್ಷ್ಣವಾದ ಹಲ್ಲು, ಉಗುರು, ಕೊಂಬುಗಳಿಂದ ಪ್ರತಿಸ್ಪರ್ಧಿಯನ್ನು ಹಿಂಸಿಸುವುದೂ ಪಶುವೃತ್ತಿ ಯಾಗಿದೆ. ನನ್ನಂತೆ ಅವನಿಗೂ ಜೀವಿಸುವ ಅಧಿಕಾರವಿದೆ ಎಂದು ತಿಳಿಯುವುದು ಮಾನವತೆಯ ಲಕ್ಷಣ. ಪರಸ್ಪರ ಸಹಾಯ ಮಾಡುವುದು, ಒಬ್ಬರನ್ನೊಬ್ಬರು ಕಾಪಾಡುವುದು ಇವೆಲ್ಲಾ ಅಹಿಂಸಾಪಾಲನೆಯ

ಕುರುಹಾಗಿವೆ. ಸಹನಶೀಲತೆ, ತ್ಯಾಗ, ಬಂಧುಭಾವ, ಸ್ನೇಹ, ಸೇವೆ, ಆತ್ಮಬಲಿದಾನ ಇವೆಲ್ಲಾ ಅಹಿಂಸೆಯ ವಿವಿಧ ರೂಪಗಳಾಗಿವೆ.

ಮನುಷ್ಯ ಸಾಮಾಜಿಕ ಪ್ರಾಣಿ ಎಂದು ವ್ಯಾಖ್ಯೆ ಮಾಡಲಾಗುತ್ತದೆ. ಮನುಷ್ಯನ ಈ ಸಾಮಾಜಿಕತೆಗೆ ಅಹಿಂಸೆಯೇ ಆಧಾರ. ಮನುಷ್ಯ ಹಿಂಸಾಚಾರಿಯಾದರೆ ಅವನ ಸಾಮಾಜಿಕ ಸ್ವರೂಪ ನಾಶವಾಗುತ್ತದೆ. ಮತ್ತು ಸಾಮಾಜಿಕ ಸ್ವರೂಪ ನಾಶವಾದರೆ ಮನುಷ್ಯನಲ್ಲಿ ಮನುಷ್ಯತ್ವ ಉಳಿಯುವುದಿಲ್ಲ. ಸಮಾಜವು ಮನುಷ್ಯನನ್ನು ನಿರ್ಮಿಸಿದೆ ಮತ್ತು ಸಮಾಜಕ್ಕೆ ಅಹಿಂಸಾತತ್ವವೇ ಆಧಾರವಾಗಿದೆ. ಸಾಮಾಜಿಕ ರಕ್ಷಣೆ, ಸಾಮಾಜಿಕ ಮರ್ಯಾದೆ ಇರುವಲ್ಲಿಯೇ ವ್ಯಕ್ತಿಯ ಅಥವಾ ರಾಷ್ಟ್ರದ ಏಳಿಗೆ ಸಾಧ್ಯ. ಒಬ್ಬರನ್ನೊಬ್ಬರು ಶತ್ರುಗಳಂತೆ ಕಾಣುವುದು, ನಾಯಿಗಳಂತೆ ಕಚ್ಚಾಡುವುದು, ಹುಲಿಗಳಂತೆ ಹರಿದು ತಿನ್ನುವುದು ಅಮಾನವೀಯ ಲಕ್ಷಣ. ಮನೆಯಲ್ಲಿ, ಪೇಟೆಯಲ್ಲಿ, ರೈಲು ಬಸ್ಸುಗಳಲ್ಲಿ ಜನರು ಸಣ್ಣ ಪುಟ್ಟ ಕಾರಣಗಳಿಗಾಗಿ ಜಗಳವಾಡುತ್ತಾರೆ. ಆಗ ನಾಲ್ಕು ಜನ ಮಧ್ಯೆ ಬಂದು – "ಹೋಗಲಿ ಬಿಡಿ ಇದರಲ್ಲೇನು ಮಹಾ, ನಿಮಗೆ ಜಾಗ ಬೇಕಲ್ಲ, ಬರ್ರಿ ನಮ್ಮ ಜಾಗದಲ್ಲಿ ಕೂಡ್ರಿ" ಎನ್ನುತ್ತಾರೆ. ಒಬ್ಬರಿಗೊಬ್ಬರು ತಿಳಿಸಿ ಹೇಳುತ್ತಾರೆ, ಇಲ್ಲವೇ ಬೆದರಿಸಿ ಹೇಳುತ್ತಾರೆ, ಇಲ್ಲವೇ ಸ್ವತಃ ಏಟು ತಿಂದು ಜಗಳವನ್ನು ಬಗೆಹರಿಸುತ್ತಾರೆ. ಇದರಿಂದ ಸಮಾಜದಲ್ಲಿನ ಸೋದರಭಾವನೆ ಕಂಡು ಬರುತ್ತದೆ. ಮಾನವಹೃದಯದಲ್ಲಿನ ಸ್ಥಿರವಾದ, ಅಹಿಂಸಾ ತತ್ವದ ಅನುಭೂತಿ ಇದಾಗಿರುತ್ತದೆ. ಕೆಂಡದ ಮೇಲಿನ ಬೂದಿಯನ್ನು ಹಾರಿಸಿ, ಅದಕ್ಕೆ ಸೌದೆಯ ತುಂಡು ತುಣುಕುಗಳನ್ನು ಸೇರಿಸಿದಾಗ, ಅದು ಧಗಧಗ ಉರಿಯುವ ಜ್ವಾಲೆಯಾಗುತ್ತದೆ. ಅದೇ ರೀತಿಯಿಂದ ಮನುಷ್ಯನಲ್ಲಿ ಸುಪ್ತವಾಗಿರುವ ಅಹಿಂಸಾ ಭಾವನೆಯನ್ನು ಜಾಗೃತಗೊಳಿಸಿದಾಗ, ಅದು ಪ್ರಕಾಶಮಾನವಾಗಿ ಅಹಿಂಸೆಯ ಯಜ್ಞಕುಂಡಗಳು ಧಗಧಗಿಸುತ್ತವೆ. ಆ ಯಜ್ಞಧೂಮವನ್ನೇರಿ ಮಾನವನು ಸ್ವರ್ಗಕ್ಕೆ ಸುಲಭವಾಗಿ ಪ್ರವೇಶಿಸುತ್ತಾನೆ. ಅಥವಾ ಸ್ವರ್ಗವೇ ಆ ಯಜ್ಞಧೂಮದ ಸೋಪಾನದಿಂದ ಕೆಳಗಿಳಿದು ಬಂದೀತು. ಆದರೆ ಆ ಯಜ್ಞಕ್ಕಾಗಿ ಕಷ್ಟದ ಸಮಿಧೆಗಳು ಬೇಕಾಗುತ್ತವೆ, ತ್ಯಾಗದ ಹವಿಸ್ಸು ಬೇಕಾಗುತ್ತದೆ. ಜೀವನದಲ್ಲಿನ

ಸಾರಸರ್ವಸ್ವದ ತುಪ್ಪ ಬೇಕಾಗುತ್ತದೆ. ಸಮರ್ಪಣೆಯ ಮಂತ್ರ ಹೇಳಬೇಕಾಗುತ್ತದೆ ಮತ್ತು ಅಹಂಕಾರದ ಬಲಿ ಕೊಡಬೇಕಾಗುತ್ತದೆ.

೩

ಅಹಿಂಸೆಯ ಉಪಾಸನೆ ಸರಿಯಾಗಿ ಸಾಧಿಸಬೇಕಾದರೆ ಅಹಿಂಸೆಯ ಸ್ಪಷ್ಟ ಕಲ್ಪನೆ ಇರಬೇಕು. ಇಲ್ಲದಿದ್ದರೆ ಕಾಗೆಯನ್ನು ಕೋಗಿಲೆಯೆಂದು ತಿಳಿದು ಚಿನ್ನದ ಪಂಜರದಲ್ಲಿಟ್ಟಂತೆ, ಪಿಶಾಚಿಯನ್ನು ದೇವತೆಯೆಂದು ತಿಳಿದು ಕರೆದಂತೆ, ನಂತರ ಆ ಪಿಶಾಚಿಯೇ ಅವನನ್ನು ತಿಂದಂತೆ ಕಥೆಯ ಗತಿಯಾಗಬಹುದು. ವ್ಯವಹಾರದಲ್ಲಿ, ಕಳ್ಳರು ಠಕ್ಕರು, ಸಭ್ಯರಂತೆ ಮುಖವಾಡ ಹಾಕಿಕೊಂಡು ಸಮಯ ಸಿಕ್ಕಾಗ ತಮ್ಮ ಸ್ವಾರ್ಥ ಸಾಧಿಸುತ್ತಾರೆ. ಇದೇ ಮಾತು ದೊಡ್ಡ ದೊಡ್ಡ ಸಿದ್ಧಾಂತಗಳಿಗೂ ಅನ್ವಯಿಸುತ್ತದೆ. ಕೆಲವೊಮ್ಮೆ ದುಷ್ಟತನದಿಂದ ಆದರೆ ಬಹುತೇಕ ಅಜ್ಞಾನದಿಂದ ಮತ್ತು ಮೋಹವಶರಾಗಿರುವುದರಿಂದ ಇಂಥ ಘಟನೆಗಳು ಸಂಭವಿಸುತ್ತವೆ. ಸಿದ್ಧಾಂತವು ಇದ್ದುದೇ ಒಂದು. ಅದನ್ನು ಜನರು ತಿಳಿದುಕೊಂಡಿರುವುದೇ ಇನ್ನೊಂದು ಬಗೆ. ಅರ್ಜುನನಂಥವರಿಗೇ ಇಂಥ ಸ್ಥಿತಿ ಒದಗಿತು ಅಂದ ಮೇಲೆ ಬೇರೆಯವರ ಪಾಡೇನು? ಮಹಾ ಪರಾಕ್ರಮಿ ಅರ್ಜುನ ಶ್ರೀಕೃಷ್ಣನಿಗೆ ಹೇಳುತ್ತಾನೆ –

ಏತಾನ್ನ ಹಂತುಮಿಚ್ಛಾಮಿ ಘ್ನತೋऽಪಿ ಮಧುಸೂದನ ।
ಅಪಿ ತ್ರೈಲೋಕ್ಯರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ ॥

ಹೇ ಮಧುಸೂದನ! ನನಗೆ ತ್ರಿಲೋಕದ ರಾಜ್ಯಗಳು ಸಿಕ್ಕಿದರೂ, ಆಕ್ರಮಣ ಅವರಿಂದ ನಡೆದು, ತಪ್ಪು ಅವರದಾಗಿದ್ದರೂ, ನಾನು ಅವರ ವಧೆ ಮಾಡಲಾರೆ. ತ್ರೈಲೋಕ್ಯದ ರಾಜ್ಯವೇ ನನಗೆ ಬೇಡವಾದಾಗ, ನನಗೆ ಈ ಪೃಥ್ವಿಯ ರಾಜ್ಯದಿಂದ ಮಾಡುವುದೇನಿದೆ? ನಾನು ಎಂದಿಗೂ ಅವರ ವಧೆ ಮಾಡಲಾರೆ."

ಮುಂದೆ ಅವನು ಹೀಗೆ ಹೇಳುತ್ತಾನೆ: "ಹೇ ಜನಾರ್ದನ! ಧೃತರಾಷ್ಟ್ರ ಪುತ್ರರ ವಧೆ ಮಾಡುವುದರಿಂದ ನನಗೆ ಯಾವ ಸುಖ ಸಿಕ್ಕೀತು?"

ತಸ್ಮಾನ್ನಾರ್ಹಾ ವಯಂ ಹಂತುಂ ಧಾರ್ತರಾಷ್ಟ್ರಾನ್ ಸ್ವಬಾಂಧವಾನ್ ।
ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ ॥

ಧೃತರಾಷ್ಟ್ರನ ಪಕ್ಷದಲ್ಲಿರುವ ನಮ್ಮ ಬಂಧುಗಳನ್ನು ಕೊಲ್ಲುವುದು ಸರ್ವಥಾ ಅನುಚಿತ ಕೃತ್ಯವಾಗಿದೆ. ಆತ್ಮೀಯರಾದ ಸ್ವಕೀಯರನ್ನು ಕೊಂದು ನಾವು ಸುಖಿಗಳಾಗಲು ಸಾಧ್ಯವೇ ?

ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಂ ।
ಯದ್ರಾಜ್ಯಸುಖಲೋಭೇನ ಹಂತುಂ ಸ್ವಜನಮುದ್ಯತಾಃ ॥

ಎಂಥ ಖೇದದ ಸಂಗತಿ ಇದು. ಎಂಥ ಘೋರ ಪಾಪ ಮಾಡಲು ನಾವು ಉದ್ಯುಕ್ತರಾಗಿದ್ದೆವು ! ರಾಜ್ಯದ ಮತ್ತು ಸುಖದ ಆಸೆಯಿಂದ ನಾವು ನಮ್ಮ ಪರಿವಾರದ ಜನರನ್ನೇ ಕೊಲ್ಲಲು ಸಿದ್ಧರಾಗಿದ್ದೆವು.

ಇಂತಹ ತಪ್ಪು ಕಲ್ಪನೆಯಿಂದ ಅರ್ಜುನನು ಮಾತಾಡಿದ್ದನ್ನು ಕೇಳಿ ಕೃಷ್ಣನು ಅವನನ್ನು ತರಾಟೆಗೆ ತೆಗೆದುಕೊಂಡ. ಕಟುವಾದ ನುಡಿಗಳಿಂದ ಹೇಳಿದ – "ಅರ್ಜುನ, ನಿನ್ನ ಈ ಕೆಲಸ ಅನಾರ್ಯವಾದದ್ದು, ಅಕೀರ್ತಿಕರವಾದದ್ದು, ಪೌರುಷಹೀನವಾದದ್ದು, ಹೃದಯದೌರ್ಬಲ್ಯ ವಿರುವಂಥದು." ಅರ್ಜುನನ ಮಾತಿನ ವೈಖರಿಯನ್ನು ನೋಡಿ ಕೃಷ್ಣ ಹೇಳುತ್ತಾನೆ – 'ಪ್ರಜ್ಞಾವಾದಾಂಶ್ಚ ಭಾಷಸೇ' – "ಅರ್ಜುನಾ, ಪಂಡಿತನಂತೆ ಮಾತನಾಡುತ್ತಿ, ಅಸಂಗತನಂತೆ ನಡೆಯುತ್ತಿ, ಏನು ನಿನ್ನ ರೀತಿ."

ಅರ್ಜುನನ ಇಂಥ ನಡತೆಯು ಸಾಮಾನ್ಯ ಜನರಿಗೆ ಸಮಾಧಾನ ನೀಡುವಂಥದು. ಅರ್ಜುನನ ಮೂಲಕ ಭಗವಂತ ಜಗತ್ತಿಗೆ ದಿವ್ಯ ಸಂದೇಶವನ್ನು ಕೊಟ್ಟ. ಅರ್ಜುನನಂತೆ ನಾವು ತಪ್ಪು ನಡೆಯುಳ್ಳವರು. ಪಂಡಿತರಂತೆ ಮಾತಾಡುವವರು. ಆದರೆ ನಾವು ತಪ್ಪು ಮಾಡುವುದರಲ್ಲಿ ಮಾತ್ರ ಅರ್ಜುನನಂತಿದ್ದೇವೆ. ಮಾತು ಮಾತ್ರ ಮೂರ್ಖರಂತೆ ಆಡುತ್ತೇವೆ. ಮಾತೂ ಪಂಡಿತರಂತೆ, ನಡೆಯೂ ಪಂಡಿತರಂತೆ ಆಗಬೇಕಿದ್ದರೆ ನಾವು ಆಡುವ ಶಬ್ದದ ಅರ್ಥವನ್ನು ಸರಿಯಾಗಿ ತಿಳಿದುಕೊಂಡಿರಬೇಕು, ಇಲ್ಲದಿದ್ದರೆ ಸೈಂಧವ ಶಬ್ದದ ಕತೆಯಾದೀತು. ಸಂಸ್ಕೃತದಲ್ಲಿ ಸೈಂಧವ

ಎಂದರೆ ಉಪ್ಪು ಮತ್ತು ಕುದುರೆ ಹೀಗೆ ಎರಡು ಅರ್ಥಗಳಿವೆ. ರಾಜನು ಊಟಕ್ಕೆ ಕುಳಿತಾಗ "ಸೈಂಧವ ತಾ" ಎಂದನಂತೆ. ಮೂರ್ಖ ಸೇವಕ ಕುದುರೆಯನ್ನು ತಂದನಂತೆ. ಬೇಟೆಗೆ ಹೋಗುವಾಗ "ಸೈಂಧವ ತೆಗೆದುಕೊಂಡು ಬಾ" ಎಂದಾಗ ಉಪ್ಪನ್ನು ತಂದನಂತೆ. ಹಾಗೆ ನಮ್ಮ ಗತಿ ಆದೀತು.

೪

ಅರ್ಜುನ ಯುದ್ಧಕ್ಕೆ ಮೊದಲು ಹಿಂಸಾಚಾರದಿಂದ ಭಯಗ್ರಸ್ತನಾಗಿದ್ದ. ಯುಧಿಷ್ಠಿರ ಯುದ್ಧಾನಂತರ ಅದೇ ಭಯದಿಂದ ದುಃಖಿತನಾಗಿದ್ದ. ತನ್ನವರ ಮತ್ತು ಪರರ ಭೀಕರ ಸಂಹಾರ ನೋಡಿ, ಅವನಿಗೆ ದುಃಖ ತಡೆಯದಾಯಿತು – "ದುರ್ಯೋಧನನಿಗಾಗಿ ನಾವು ಈ ಎಲ್ಲ ಕುಲದ ನಾಶ ಮಾಡಿದೆವು. ಯಾರ ವಧೆ ಮಾಡುವುದು ಅಯೋಗ್ಯವೋ ಅಂಥವರನ್ನು ವಧಿಸಿ ಜನನಿಂದೆಗೆ ಗುರಿಯಾದೆವು. ನಾನು ನಿಮ್ಮೆಲ್ಲರ ಅನುಮತಿ ಪಡೆದು ಕಾಡಿಗೆ ಹೊರಟುಹೋಗುತ್ತೇನೆ."

ನಾಲ್ಕೂ ಜನ ತಮ್ಮಂದಿರು ಮತ್ತು ದ್ರೌಪದಿ ಅವನಿಗೆ ತಿಳಿಸಿ ಹೇಳುವ ಪ್ರಯತ್ನ ಮಾಡಿದರು. ಅದೆಲ್ಲ ವ್ಯರ್ಥವಾಯಿತು. ಆದರೆ ಧರ್ಮರಾಜ ಸರ್ವಸಂಗಪರಿತ್ಯಾಗವನ್ನು ಮಾಡುವ ಆಕ್ರೋಶವನ್ನು ಪುನಃ ಪುನಃ ಮಾಡತೊಡಗಿದ. ಅರ್ಜುನನಾದರೂ ಕೃಷ್ಣನ ಬಳಿ ನೇರವಾಗಿ ಒಪ್ಪಿಕೊಂಡಿದ್ದ – 'ಧರ್ಮಸಂಮೂಢಚೇತಾಃ' ಆಗಿದ್ದೇನೆ, ಆದ್ದರಿಂದ ನನಗೆ ಏನು ಮಾಡಬೇಕು, ಏನು ಮಾಡಬಾರದು, ನನ್ನ ಕರ್ತವ್ಯವೇನು ಎನ್ನುವ ಬಗ್ಗೆ ನೀನು ತಿಳಿಸಿ ಹೇಳು' ಎಂದು. ಇಲ್ಲಿ ಧರ್ಮರಾಜನ ಪರಿಸ್ಥಿತಿ ಹಾಗಿಲ್ಲ – "ತಮ್ಮಾ ಅರ್ಜುನಾ ! ನನಗೆ ಲೌಕಿಕ ಮತ್ತು ಅಲೌಕಿಕ ಹೀಗೆ ಎರಡೂ ಪ್ರಕಾರದ ಶಾಸ್ತ್ರಗಳ ಪರಿಚಯ ಇದೆ. 'ಕರ್ಮ ಮಾಡು' ಮತ್ತು 'ಅದರ ತ್ಯಾಗ ಮಾಡು' ಎಂಬ ವೇದವಚನಗಳು ನನಗೆ ಗೊತ್ತಿವೆ. ವೇದ ಮತ್ತು ಶಾಸ್ತ್ರಗಳಲ್ಲಿರುವ ಅತಿ ಕ್ಲಿಷ್ಟಕರವಾದ ವಚನಗಳನ್ನು ಅಭ್ಯಸಿಸಿದ್ದೇನೆ. ವೇದಗಳಲ್ಲಿ ಹೇಳುವ ಸಿದ್ಧಾಂತಗಳನ್ನೂ, ಜ್ಞಾನವನ್ನೂ ನಾನು ಯಥಾವತ್ತಾಗಿ ಸಂಪಾದಿಸಿದ್ದೇನೆ." ಇಂಥ

ಧರ್ಮರಾಜನಿಗೆ ವ್ಯಾಸಮಹರ್ಷಿ, ನಾರದಮುನಿ, ಶ್ರೀಕೃಷ್ಣ ಎಲ್ಲರೂ ಬಗೆಬಗೆಯಾಗಿ ತಿಳಿಸಿ ಹೇಳಿದರು. ಆದರೆ ಧರ್ಮರಾಜನಿಗೆ ಸಮಾಧಾನ ವಾಗಲಿಲ್ಲ. ಕೊನೆಗೆ ಅವರೆಲ್ಲರೂ ಧರ್ಮರಾಯನನ್ನು ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮನ ಬಳಿಗೆ ಕರೆದೊಯ್ದರು. ಭೀಷ್ಮನು ಅನೇಕ ಬಗೆಯಾಗಿ ಉಪದೇಶ ಮಾಡಿ, ಅವನನ್ನು ಸಾಂತ್ವನಗೊಳಿಸಿ ಧರ್ಮದಿಂದ ರಾಜ್ಯಭಾರ ಮಾಡುವಂತೆ ಹೇಳುತ್ತಾನೆ. ರಾಜಧರ್ಮ ವಿವರಿಸುವಾಗ ಪಿತಾಮಹ ಭೀಷ್ಮನು – "ಹೇ ಪಾಂಡುಪುತ್ರ ! ಎಲ್ಲ ವರ್ಣಾಶ್ರಮ ಧರ್ಮಗಳಿಗೂ ಕ್ಷತ್ರಿಯಧರ್ಮವೇ ಆಧಾರವಾಗಿದೆ. ಪೂರ್ವದಲ್ಲಿ ಶ್ರೀ ವಿಷ್ಣುವು ಕ್ಷಾತ್ರಧರ್ಮವನ್ನು ಅವಲಂಬಿಸಿ ಶತ್ರುಗಳನ್ನು ಜಯಿಸಿ ಎಲ್ಲ ಮುನಿಗಳನ್ನೂ, ದೇವತೆಗಳನ್ನೂ ಕಾಪಾಡಿದನು. ಅನಂತರೂಪಿಯಾದ ಭಗವಂತನು ಶತ್ರುಗಳನ್ನು ನಾಶಮಾಡದಿದ್ದರೆ, ಇಂದು ಈ ಲೋಕ ಉಳಿಯುತ್ತಿರಲಿಲ್ಲ. ಆರ್ಯಧರ್ಮವೂ ಉಳಿಯುತ್ತಿರಲಿಲ್ಲ .... ವೈರಿ ಮತ್ತು ಆತನ ಅಪರಾಧ ಇವುಗಳನ್ನು ತಿಳಿಯದೇ ಶಸ್ತ್ರವನ್ನು ಎತ್ತಬಾರದು. ಶತ್ರುವನ್ನು ವಧಿಸಿದ ನಂತರ ಅದಕ್ಕಾಗಿ ಶೋಕ ಪಡಬಾರದು."

ರಾಜಧರ್ಮದ ನಿರೂಪಣೆ ಮಾಡುತ್ತಾ ಮುಂದೆ ಅನುಶಾಸನಪರ್ವದಲ್ಲಿ ಅಹಿಂಸೆಯ ಬಗ್ಗೆ ಪ್ರಶ್ನಿಸಿದಾಗ ಭೀಷ್ಮರು ಹೇಳುತ್ತಾರೆ : "ಅಹಿಂಸೆಯೇ ಪರಮಧರ್ಮ, ಅಹಿಂಸೆಯೇ ಪರಮ ಇಂದ್ರಿಯ ಜಯ, ಪರಮ ಜ್ಞಾನ. ಅಹಿಂಸೆಯೇ ತಪಸ್ಸು. ಅಹಿಂಸೆಯೇ ಪರಮ ಯಜ್ಞ, ಅಹಿಂಸೆಯೇ ಪರಮ ಮಿತ್ರ, ಅಹಿಂಸೆಯೇ ಪರಮ ಸುಖ, ಅಹಿಂಸೆಯೇ ಪರಮ ಸತ್ಯ, ಅಹಿಂಸೆಯೇ ಪರಮ ಜ್ಞಾನವೆಂದು ತಿಳಿಯಬೇಕು. ಎಲ್ಲ ಯಜ್ಞಗಳು, ದಾನ, ಎಲ್ಲ ತೀರ್ಥಗಳ ಸ್ನಾನದ ಫಲವನ್ನು ಒಂದೆಡೆ ಕೂಡಿಸಿದರೂ ಈ ಅಹಿಂಸೆಗೆ ಸರಿಸಮವಾಗಲಾರದು. ರಾಜನೇ ಹಿಂಸೆ ಮಾಡಲಾರದ ಮನುಷ್ಯ, ಅಖಂಡ ತಪಸ್ಸು ಮಾಡಿದಂತೆ. ಹಿಂಸೆ ಮಾಡಲಾರದ ಪುರುಷ ಅಖಂಡ ಯಜ್ಞ ಮಾಡಿದಂತೆ. ಅವನೇ ಎಲ್ಲ ಪ್ರಾಣಿಗಳ ತಾಯಿತಂದೆ ಎಂದು ತಿಳಿಯಬೇಕು. ಕುರುಶ್ರೇಷ್ಠ, ಅಹಿಂಸೆಯ ಫಲ ಅಪ್ರತಿಮವಾಗಿದೆ. ಅಹಿಂಸೆಯ ಮಹಾನತೆಯನ್ನು ವರ್ಣಿಸಲು ನೂರು ವರ್ಷಗಳಾದರೂ ಸಾಲದು."

೫

ಗೀತೆಯಲ್ಲಿ ನಾಲ್ಕು ಸಲ ಅಹಿಂಸೆಯ ಬಗ್ಗೆ ಉಲ್ಲೇಖವಿದೆ. ಅದರಲ್ಲಿ ಹದಿಮೂರನೆ ಅಧ್ಯಾಯದಲ್ಲಿ ವಿಸ್ತಾರವಾಗಿ ಹೇಳಲಾಗಿದೆ– "ಈ ಅಹಿಂಸೆಯ ಬಗ್ಗೆ ವಿಚಿತ್ರವಾದ ಅಭಿಪ್ರಾಯಗಳು ಪ್ರಚಲಿತವಾಗಿವೆ. ಕೆಲವರು ಹಿಂಸೆಯನ್ನು ಬಿತ್ತುತ್ತಾರೆ, ಅಹಿಂಸೆಯ ಬೆಳೆಯನ್ನು ಪಡೆಯ ಬೇಕೆನ್ನುತ್ತಾರೆ. ಇನ್ನು ಕೆಲವರು ಅಹಿಂಸೆಯ ಅತಿಯಾದ ಡಂಗುರ ಬಾರಿಸಿ ಹಿಂಸೆಯಾಗುವಂತೆ ಮಾಡುತ್ತಾರೆ. ಇಂಥ ವಿವೇಕಹೀನ ಕರ್ಮಕಾಂಡ ದಲ್ಲಿ ನಿಜವಾದ ತತ್ವ ಲೋಪವಾಗುತ್ತದೆ. ಕಾರಣ ಅಹಿಂಸೆಯು ಕೃತಿಯನ್ನು ಅವಲಂಬಿಸುವುದಕ್ಕಿಂತಲೂ ಹೆಚ್ಚಾಗಿ ಮನಸ್ಸು ಮತ್ತು ಅಂತರಂಗದ ಜ್ಞಾನವನ್ನು ಅವಲಂಬಿಸುತ್ತದೆ.

ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ ।
ದುರ್ಜನರ ಸಂಗದೊಡನಾಟ ಬಚ್ಚಲಿನ ।
ರೊಚ್ಚಿನಂತಿಹುದು ಸರ್ವಜ್ಞ ॥

ನಿಜವಾದ ಜ್ಞಾನವನ್ನು ಪಡೆದ ಪುರುಷನ ಪ್ರತಿಯೊಂದು ಕೃತಿಯೂ ಅಹಿಂಸಾತ್ಮಕವಾಗಿರುತ್ತದೆ. ಅವನ ಪ್ರತಿಯೊಂದು ಕೃತಿಯೂ ಜೇನನ್ನು ಸವಿದಂತೆ ಇರುತ್ತದೆ.

ನುಡಿದರೆ ಮುತ್ತಿನಹಾರದಂತಿರಬೇಕು ।
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು ॥

ಎಂಬಂತೆ ಅವರ ವಾಣಿಯು ನಾದಬ್ರಹ್ಮನ ಮೂರ್ತಿಯಂತೆ ಶಾಂತ ಶೀತಲ. ಗಂಗಾಜಲ ಮೈಮೇಲೆ ಪ್ರವಹಿಸಿದಂತೆ ಅಥವಾ ಪತಿವ್ರತ ಸ್ತ್ರೀ ವೃದ್ಧ ಳಾದಂತೆ, ಅವರ ನುಡಿಯು ಶುದ್ಧವೂ, ಕೋಮಲವೂ, ಅಂತಃಕರಣದಿಂದ ಕೂಡಿದ್ದೂ ಆಗಿರುತ್ತದೆ.

ತಿರುವು ಮುರುವು ಮಾತನಾಡುವುದು, ಹಟವಾದ, ಕಠೋರವಾದ, ಮನಸ್ಸಿಗೆ ಕಿರುಕುಳ ಕೊಡುವ ಮಾತುಗಳು, ಕುಚೇಷ್ಟೆ, ಸುಳ್ಳು, ಆಸೆ ತೋರಿಸುವುದು, ಸುಳ್ಳು ಹೇಳುವುದು, ಮೋಸ ಮಾಡುವುದು, ಸಂಶಯ, ಠಕ್ಕುತನ ಈ ಎಲ್ಲ ದುರ್ಗುಣಗಳೂ ಅವನ ಮಾತು ಮತ್ತು ಮನಸ್ಸಿನಿಂದ

ದೂರವಿರುತ್ತವೆ. ಅವನ ದೃಷ್ಟಿ ಸ್ನೇಹಪೂರ್ಣವಾಗಿರುತ್ತದೆ. ಅವನು ಎಲ್ಲರ ಆತ್ಮದಲ್ಲಿ ಪರಮಾತ್ಮನನ್ನು ಕಾಣುತ್ತಾನೆ. ಅವನು ಯಾರ ಮೇಲೆ ದೃಷ್ಟಿ ಹರಿಸಿದರೂ ಸಾಕು, ಚಿತ್ತಶಾಂತಿ ಲಭಿಸುತ್ತದೆ.

ಚಂದ್ರಬಿಂಬದಿಂದ ಹೊರಟ ಅಮೃತಧಾರೆ ನಮಗೆ ಕಾಣಿಸದಿದ್ದರೂ ಚಕೋರಗಳಿಗೆ ಹೊಟ್ಟೆ ತುಂಬಿ ಸಮಾಧಾನವಾಗುವಂತೆ, ಈ ಜ್ಞಾನಿಗಳು ಶಾಂತರಾಗಿರುತ್ತಾರೆ. ಕೂರ್ಮದ ದೃಷ್ಟಿ ಪ್ರೇಮಮಯವಾಗಿ ಕಾಣಿಸುತ್ತದೆ. ಸತ್ಪುರುಷನ ದೃಷ್ಟಿ ಅದಕ್ಕಿಂತಲೂ ಪ್ರೇಮಪೂರ್ಣವಾಗಿರುತ್ತದೆ.

ಹದಿನಾರನೇ ಅಧ್ಯಾಯದಲ್ಲಿ ಅಹಿಂಸೆಯ ಬಗ್ಗೆ ಅತ್ಯಂತ ಸ್ಪಷ್ಟವಾಗಿ ಸರಳವಾಗಿ ಹೇಳಲಾಗಿದೆ. ಅದು ಹೀಗಿದೆ – "ಜಗತ್ತನ್ನು ಸುಖವಾಗಿಡುವ ಏಕಮಾತ್ರ ಬುದ್ಧಿಯಿಂದ ಮಾಡಿದ ಶಾರೀರಿಕ, ಮಾನಸಿಕ, ಬೌದ್ಧಿಕ ಕೆಲಸವೇ ಅಹಿಂಸೆಯಾಗಿದೆ."

೬

"ಈ ಕೃಷ್ಣನಾದರೂ ಎಂಥ ಗಮ್ಮತ್ತಿನ ಮನುಷ್ಯ! ಅಹಿಂಸೆಯ ಮೇಲೆ ಮಾತನಾಡಲಿಕ್ಕೆ ಇವನಿಗೆ ಧೈರ್ಯವಾದರೂ ಹೇಗೆ ಬಂದಿತು? ತನ್ನ ಜನ್ಮವೆಲ್ಲಾ ಹೊಡೆದಾಟ ಬಡಿದಾಟಗಳಲ್ಲೇ ಕಳೆದಿರುವ ಈತ ಅಹಿಂಸೆ ಶಬ್ದವನ್ನಾದರೂ ಹೇಗೆ ಉಚ್ಚರಿಸಿದ? ಅಘ, ಪೂತನಿ, ಕಂಸ ಇತ್ಯಾದಿ ಅಸುರರನ್ನು ಬಾಲ್ಯದಲ್ಲೇ ಸಂಹರಿಸಿದ. ಮುಂದೆ ಭೌಮಾಸುರ, ಶಿಶುಪಾಲ ಇತ್ಯಾದಿ ರಕ್ಕಸರನ್ನು ಕೊಂದ. ಜರಾಸಂಧನಲ್ಲದೆ ಪಾಂಡವರ ಕೈಯಿಂದ ಹದಿನೆಂಟು ಅಕ್ಷೌಹಿಣಿ ಸೈನ್ಯವನ್ನು ಕೊಲ್ಲಿಸಿದ ಈ ಕೃಷ್ಣ. ಇಂಥವನಿಗೆ ಅಹಿಂಸೆಯ ಬಗ್ಗೆ ಮಾತನಾಡಲು ಯಾವ ಅಧಿಕಾರವಿದೆ?" ಕೆಲವು ವಿದ್ವಾಂಸರು ಇಲ್ಲಿಯವರೆಗೆ ಗಾಡಿ ಬಿಡುತ್ತಾರೆ. ಕೆಲವರು ಬಹಳ ಉದಾರವಾಗಿ ಶ್ರೀಕೃಷ್ಣನನ್ನು ಕ್ಷಮಿಸುತ್ತಾರೆ. "ಆ ಕಾಲದ ಹಿಂಸೆ ಅಹಿಂಸೆಯ ಕಲ್ಪನೆ ಈಗಿನಷ್ಟು ಪ್ರಗತಿಪರವಾಗಿರಲಿಲ್ಲ. ಅಂದಿನ ಮಹಾಪುರುಷರನ್ನು ಇಂದಿನ ಒರೆಗೆ ಹಚ್ಚಬಾರದು." ಕೆಲವರು ತಾವು ಬಹಳ ಮುಗ್ಧರು, ವಿನಯವಂತರು ಎಂದು ತೋರಿಸಿಕೊಳ್ಳಲು – "ನಾವು ಅವರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಬಂದಿರುವುದರಿಂದಲೇ ನಮಗೆ ಇಂದು ಈ ಪ್ರಗತಿ ಮಾಡಲು

ಸಾಧ್ಯವಾಯಿತು. ವಿಜ್ಞಾನದಲ್ಲಿ ನ್ಯೂಟನ್, ಆರ್ಕಿಮಿಡೀಸ್ ಅವರ ದಾರಿಯಲ್ಲಿ ಮುಂದುವರಿಯುತ್ತಾ ಬಂದಿರುವಂತೆ ಅಹಿಂಸಾತತ್ವ ಪ್ರಣಾಳಿಕೆಗಳಲ್ಲಿ ನಾವು ಮುಂದುವರಿದಿದ್ದೇವೆ."

ಜನರು ಅಹಂಕಾರದಿಂದ ತಮ್ಮ ಬುದ್ಧಿಯ ಪ್ರದರ್ಶನವನ್ನು ಬಹಳ ಚಿತ್ರವಿಚಿತ್ರವಾಗಿ ಮಾಡುತ್ತಾರೆ. ಯಜ್ಞಗಳ ಹೆಸರಿನಲ್ಲಿ ಪ್ರಾಣಿಹತ್ಯೆ ಮಾಡುವುದರಿಂದ ಹಿಡಿದು ನೀರನ್ನು ಸೋಸಿ ಕುಡಿಯುವ ಜನರವರೆಗೆ ಜ್ಞಾನಿಗಳು ಬಹಳ ಸೊಗಸಾಗಿ ವರ್ಣಿಸಿದ್ದಾರೆ. ಜ್ಞಾನ ಮತ್ತು ಯೋಗದ ಹೊಂದಾಣಿಕೆಯಿಲ್ಲದೆ, ಕೇವಲ ಬಾಹ್ಯಾಚರಣೆ ಮಾಡುವ ಜನರ ವರ್ತನೆಯು ಬಹಳ ಹಾಸ್ಯಾಸ್ಪದವಾಗಿರುತ್ತದೆ.

'ಸತ್ಯವೆಂಬುದು ಸ್ನಾನ, ಉಪವಾಸ, ಜಪ, ನೇಮ। ಅಸತ್ಯರಲಿ ಮಾಡುವ ಕರ್ಮ ವ್ಯರ್ಥ' ಎಂದು ದಾಸರು ಹೇಳುವಂತೆ, 'ಬಿಡದೆ ಮದ ಮತ್ಸರಹಂಕಾರದಲಿ ಮುಳುಗಿ। ಒಡನೆ ಬೆರಳುಗಳೆಣಿಸಿ ಮೌನದಿಂದ। ತಡೆಯದಲೆ ಪರಲೋಕ ಸೂರೆಗೊಂಬುವೆನೆಂಬ' ರೀತಿಯಲ್ಲಿ ಈ ಜನರ ಆಚರಣೆಯಿರುತ್ತದೆ.

ಹಿಂಸೆ ಮತ್ತು ಅಹಿಂಸೆಯು ಜ್ಞಾನವಿಲ್ಲದ ಜನರ ಶಬ್ದಜ್ಞಾನ ಮತ್ತು ವ್ಯವಹಾರ ಸೊಂಟದ ವಸ್ತ್ರವನ್ನು ಬಿಚ್ಚಿ ತಲೆಗೆ ಸುತ್ತಿಕೊಂಡಂತೆ, ಇಲ್ಲವೆ ಹೊದಿಕೆಯನ್ನು ಸುಟ್ಟು ಚಳಿಗೆ ಶಾಖ ಪಡೆದಂತೆ, ಆನೆಯನ್ನು ತೋಳಿದು ತಾನು ಮಲಿವಾನದಂತೆ, ಗಿಳಿಯನ್ನು ಮಾರಿ ಪಂಜರ ಖರೀದಿಸಿದಂತೆ ಇರುತ್ತವೆ.

೭

ಆತ್ಮಬಲದ ಪ್ರಕಟರೂಪವೇ ಅಹಿಂಸೆ. ಅಹಿಂಸೆ ಎಂದರೆ ಶುಷ್ಕವಾದ ಕರ್ಮಕಾಂಡವಲ್ಲ. ಅಹಿಂಸೆ ಎಂದರೆ ಅಂಜುಗುಳಿತನ ಮೊದಲೇ ಅಲ್ಲ. ಜೀವಿಗಳನ್ನು ಕೊಲ್ಲುವುದರ ಮೇಲೆ ಹಿಂಸೆ, ಅಹಿಂಸೆ ಅವಲಂಬಿಸಿಲ್ಲ. ಆತತಾಯಿ ಜನರನ್ನು ಕೊಲ್ಲದಿರುವುದು, ಅವರ ಹಿಂಸೆ ಸಹಿಸುವುದು, ಅವರನ್ನು ದಂಡಿಸದಿರುವುದು ಹಿಂಸೆಯೇ. ಧರ್ಮ ವಿರುದ್ಧ

ಆಚರಣೆಯೂ ಹಿಂಸೆಯೇ. ಕ್ರೂರಕರ್ಮಿಗಳ ಅಕೃತ್ಯಗಳನ್ನು ಸಹಿಸಿ, ಅವರಿಗೆ ಹೆದರಿ ಬಾಯಿಮುಚ್ಚಿಕೊಂಡು ಕುಳಿತುಕೊಳ್ಳುವುದು ಹಿಂಸೆಯೇ. ಇದಕ್ಕೆ ಪ್ರತಿಯಾಗಿ ಅತ್ಯಾಚಾರಿ ಅಸುರರನ್ನು ಶಿಕ್ಷಿಸುವುದು ಅಹಿಂಸೆ. ಹಾಗೆಂದೇ ಯೋಗವಾಸಿಷ್ಠದಲ್ಲಿ ಹೀಗೆ ಹೇಳಿದೆ: "ಸ್ವಧರ್ಮೇಣ ಚ ಹಿಂಸೈವ ಮಹಾಕರುಣಯಾ ಸಮಾ". ಸ್ವಧರ್ಮದಂತೆ ಮಾಡಿದ ಹಿಂಸೆ ಕರುಣೆ ತೋರಿಸಿದಂತೆಯೇ. ನ್ಯಾಯಾಧೀಶನೆದುರು ನಿಲ್ಲಿಸಿದ ಕೊಲೆಗಾರ ಹಿಂಸಕನಾಗಿರುತ್ತಾನೆ. ಆದರೆ ಆ ಕೊಲೆಗಾರನಿಗೆ ಮರಣದಂಡನೆ ವಿಧಿಸುವ ನ್ಯಾಯಾಧೀಶ ಅಹಿಂಸಕನಿರುತ್ತಾನೆ. ಕಾರಣ ಆ ಕೊಲೆಗಾರ ಈರ್ಷೆ, ದ್ವೇಷ, ಕಾಮ, ಕ್ರೋಧ, ಲೋಭ, ಮತ್ಸರ, ಸಂಕುಚಿತ ಸ್ವಾರ್ಥ ಭಾವನೆಯಿಂದ ಇಂಥ ಭಯಾನಕ ಕೃತ್ಯ ಮಾಡಿರುತ್ತಾನೆ. ಆದರೆ ನ್ಯಾಯಾಧೀಶ ಕೊಲೆಗಾರನ ಹಿತದೃಷ್ಟಿಯಿಂದಷ್ಟೇ ಅಲ್ಲ, ಅಖಿಲ ಮಾನವಕುಲದ ಹಿತದೃಷ್ಟಿಯಿಂದ ವಿಚಾರ ಮಾಡುತ್ತಾನೆ. ಅವನು ನ್ಯಾಯ-ನೀತಿ ನೋಡುತ್ತಾನೆ. ಕಕ್ಷಿಗಾರರ ವಕೀಲರ ಅಭಿಪ್ರಾಯಗಳನ್ನು ತಿಳಿದುಕೊಳ್ಳುತ್ತಾನೆ. ಸಮಾಜದ ಸ್ಥಿರತೆ ಮತ್ತು ಸುರಕ್ಷೆಯ ಬಗ್ಗೆ ಯೋಚಿಸುತ್ತಾನೆ. ಅನಂತರ ಶಾಂತರೀತಿಯಲ್ಲಿ ಮರಣದಂಡನೆ ಘೋಷಿಸುತ್ತಾನೆ. ಹಿಂಸೆ, ಅಹಿಂಸೆ – ಇವುಗಳು ಬಾಹ್ಯಕೃತಿಯಿಂದ ನಿರ್ಣಯಿಸುವುದಲ್ಲ, ಆ ಕೃತಿಯ ಹಿಂದಿರುವ ಉದ್ದೇಶದಿಂದ ನಿರ್ಣಯಿಸಬೇಕಾಗುತ್ತದೆ.

ಒಮ್ಮೆ ಇಬ್ಬರಲ್ಲಿ ಜಗಳ ಹತ್ತಿಕೊಂಡಿತು. ಜಟಾಪಟಿಯಲ್ಲಿ ಒಬ್ಬ ಇನ್ನೊಬ್ಬನ ತೊಡೆಗೆ ಚಾಕುವಿನಿಂದ ಇರಿದ. ಪೋಲೀಸರು ಬಂದರು. ಇರಿದ ವ್ಯಕ್ತಿಯನ್ನು ಬಂಧಿಸಿದರು. ನ್ಯಾಯಾಲಯದಲ್ಲಿ ವಿಚಾರಣೆಯಾಗಿ ಚಾಕುವಿನಿಂದ ಇರಿದ ವ್ಯಕ್ತಿಗೆ ಒಂದು ವರ್ಷ ಕಠಿಣ ಶಿಕ್ಷೆಯಾಯಿತು. ಅವನು ತನ್ನ ಶಿಕ್ಷೆ ಮುಗಿಸಿಕೊಂಡು ಊರಿಗೆ ಬಂದಾಗ ನೋಡುತ್ತಾನೆ, ತನ್ನ ಪ್ರತಿಸ್ಪರ್ಧಿಯ ಕಾಲು ತೊಡೆಯಿಂದ ಕತ್ತರಿಸಲ್ಪಟ್ಟಿತ್ತು. ಅದನ್ನು ನೋಡಿ ಅವರಿವರನ್ನು ವಿಚಾರಿಸಿದಾಗ ತಿಳಿದಿದ್ದು ಇಷ್ಟು: "ಅವನ ಕಾಲನ್ನು ವೈದ್ಯರು ಶಸ್ತ್ರಕ್ರಿಯೆಯಿಂದ ತೆಗೆಯಬೇಕಾಯಿತು. ಅದಕ್ಕಾಗಿ ಅವನಿಗೆ ಐನೂರು ರೂಪಾಯಿ ಕೊಡಬೇಕಾಯಿತು." ಅಪರಾಧಿ ಉದ್ಗರಿಸಿದ: "ವಾ! ಬಹಳ ಚೆನ್ನಾಗಿದೆ. ನಾನು ಅವನ ಕಾಲಿಗೆ ಚಾಕು

ಹಾಕಿದರೆ ನನಗೆ ಒಂದು ವರ್ಷ ಶಿಕ್ಷೆಯಾಯಿತು. ಆದರೆ ವೈದ್ಯರು ಕಾಲು ಕತ್ತರಿಸಿದರೆ ಅವರಿಗೆ ಐದುನೂರು ರೂಪಾಯಿ ಸಿಕ್ಕಿದವು." ಕ್ರಿಯೆ ಇಬ್ಬರದೂ ಒಂದೇ. ಇಬ್ಬರೂ ಕಾಲಿನ ಮೇಲೆ ಶಸ್ತ್ರ ಪ್ರಯೋಗಿಸಿದರು. ಒಬ್ಬ ಹಾನಿ ಮಾಡುವುದಕ್ಕೆ, ಇನ್ನೊಬ್ಬ ಜೀವದಾನ ಮಾಡುವುದಕ್ಕೆ ಶಸ್ತ್ರ ಉಪಯೋಗಿಸಿದರು. ಒಬ್ಬ ಹಿಂಸೆಯ, ದ್ವೇಷದ ಭಾವನೆಯಿಂದ ಮಾಡಿದರೆ ಇನ್ನೊಬ್ಬ ಪರೋಪಕಾರಬುದ್ಧಿಯಿಂದ ಮಾಡಿದ. ಅಪರಾಧಿಯ ಕಾರ್ಯ ಹಿಂಸಕವಾದದ್ದು, ವೈದ್ಯನ ಕಾರ್ಯ ಅಹಿಂಸಕವಾದದ್ದು. ಮಹಾಭಾರತದಲ್ಲಿ ಒಂದು ಸುಂದರ ವಾಕ್ಯವಿದೆ – 'ಅಹಿಂಸ್ಯಾಸಾಧು ಹಿಂಸೇತಿ ಶ್ರೇಯಾನ್ ಧರ್ಮ ಪರಿಗ್ರಹಃ.' 'ದುಷ್ಟರನ್ನು ದಂಡಿಸುವುದು, ಧರ್ಮಶಾಸ್ತ್ರದಂತೆ ಅಹಿಂಸೆಯೇ ಎಂದು ತಿಳಿಯುವುದು ಯೋಗ್ಯವಾಗಿದೆ.'

ಅಂತೆಯೇ ಸಂತರು, ಜ್ಞಾನಿಗಳು ಹೀಗೆ ಹೇಳುತ್ತಾರೆ : ರಾಮ ರಾವಣನ ಉದ್ಧಾರ ಮಾಡಿದ, ಶ್ರೀಕೃಷ್ಣ ಕಂಸನಿಗೆ ಸದ್ಗತಿ ನೀಡಿದ. ಆ ದುಷ್ಟರ ಮತ್ತು ಅವರ ಅನುಯಾಯಿಗಳ ಅನ್ಯಾಯವನ್ನು ತಡೆಯಲು ಅದೊಂದೇ ಮಾರ್ಗವಾಗಿತ್ತು. ಅದೊಂದು ಮಾತನ್ನು ಬಿಟ್ಟರೆ ರಾಮ ನೆಂದರೆ ಮರ್ಯಾದಾಪುರುಷೋತ್ತಮ, ತ್ಯಾಗದ ಪ್ರತೀಕ, ಕರುಣಾಸಾಗರ. ಅನೇಕ ಅಪರಾಧ ಮಾಡಿದ್ದರೂ ರಾವಣನಿಗೆ ಬದುಕಲು ಒಂದು ಅವಕಾಶ ಕೊಟ್ಟ. ಅಂಗದನನ್ನು ಒಪ್ಪಂದಕ್ಕಾಗಿ ಕಳುಹಿಸಿದ. ಆದರೆ ಎಲ್ಲ ಉಪಾಯ ಗಳೂ ನಿರುಪಯುಕ್ತವಾದ ಮೇಲೆ, ಮಾನವತೆಗೆ ಹತ್ತಿದ ರಾವಣರೂಪಿ ವ್ರಣವನ್ನು ಶಸ್ತ್ರಕ್ರಿಯೆ ಮಾಡಿ ನಾಶಮಾಡಬೇಕಾಯಿತು. ರಾವಣನ ವಧೆಯಾಗುತ್ತಲೇ ಶತ್ರುತ್ವದ ಭಾವನೆ ಮುಗಿಯಿತು. ರಾಮನ ಮನಸ್ಸಿನಲ್ಲಿ ರಾವಣನ ರಾಜ್ಯದ ಅಭಿಲಾಷೆ ಇರಲಿಲ್ಲ. ಸೀತೆಯ ಬಗ್ಗೆ ವ್ಯಾಮೋಹವೂ ಇರಲಿಲ್ಲ. ರಾಮನ ಮನಸ್ಸಿನ ಭವ್ಯತೆ, ಉದಾತ್ತತೆ ಅವರ್ಣನೀಯ. ತರ್ಕಕ್ಕೆ ನಿಲುಕದಂತಹವು. ರಾಮನಂತೆಯೇ ಕೃಷ್ಣನು ಉದಾರಿ.

ಕಂಸನ ವಧೆಯ ನಂತರ ಕೃಷ್ಣ ಉಗ್ರಸೇನನಿಗೆ ಹೇಳುತ್ತಾನೆ : "ರಾಜ ಶ್ರೇಷ್ಠನೇ, ಆಗಿಹೋದ ಮಾತಿನಿಂದ ಪ್ರಯೋಜನವಿಲ್ಲ. ಕಂಸ ಪ್ರೇತತ್ವ ವನ್ನು ಹೊಂದಿದ್ದರೂ ಆತನ ಅಂತ್ಯಸಂಸ್ಕಾರ ರಾಜನಿಗೆ ಯೋಗ್ಯವಾದ

ರೀತಿಯಲ್ಲೇ ಮಾಡೋಣ. ಕಂಸನಿಗೆ ಬಂದಿರುವ ಈ ಮೃತ್ಯು ಅವನ ಪೂರ್ವಾರ್ಜಿತ ಕರ್ಮವಾಗಿದೆ. ಅವನ ನಾಶಕ್ಕೆ ಕಾರಣ ನಾನಲ್ಲ. ಕಾಲ ಮತ್ತು ಅವನ ದುಷ್ಟ ಕರ್ಮಗಳು – ಈ ಎರಡರಿಂದಲೇ ಅವನಿಗೆ ಮೃತ್ಯು ಒದಗಿದೆ. ನರೋತ್ತಮ, ಸ್ವಂತದ ಕರ್ಮದೋಷದಿಂದಲೇ ನಿನ್ನ ಮಗನಿಗೆ ಸಾವು ಬಂದಿದೆ. ಕಾಲವೇ ಅವನನ್ನು ಕೊಂದಿದೆ. ನನಗೆ ರಾಜ್ಯ ಬೇಕಿಲ್ಲ, ರಾಜ್ಯದಾಸೆಯಿಂದ ನಾನು ಅವನನ್ನು ವಧಿಸಲಿಲ್ಲ. ಲೋಕಹಿತಕ್ಕಾಗಿ ನಾನು ನಿನ್ನ ಮಗನನ್ನು ಕೊಂದಿರುವೆ. ವಂಶಕ್ಕೆ ಮಸಿ ಹಚ್ಚುವ ಕೆಲಸ ಮಾಡಿದ್ದಕ್ಕೆ ನಿನ್ನ ಮಗ ಅನುಚರರೊಂದಿಗೆ ನಾಶವಾದನು. ನನಗೆ ರಾಜನಾಗುವ ಇಚ್ಛೆ ಇಲ್ಲ. ವನದಲ್ಲಿ ಸ್ವಚ್ಛಂದವಾಗಿ ಅಲೆಯುವ ಗಜದಂತೆ, ನಾನು ನನ್ನ ಗೋವುಗಳೊಡನೆ ಆನಂದದಿಂದ ಸಂಚರಿಸುವೆನು. ನಾನು ನಿನ್ನ ರಾಜ್ಯವನ್ನು ನಿನಗೆ ಒಪ್ಪಿಸುತ್ತೇನೆ. ಅದನ್ನು ಸ್ವೀಕರಿಸಿ ಚಿರಕಾಲ ರಾಜ್ಯಭಾರ ಮಾಡು."

ಶ್ರೀರಾಮಚಂದ್ರ ಮತ್ತು ಶ್ರೀ ಕೃಷ್ಣರ ಚರಿತ್ರೆಗಳು ಅಹಿಂಸಾವಾದಿ ಗುಣಗಳಿಗೆ ಆದರ್ಶವಾಗಿವೆ.

೮

ಆಧುನಿಕ ಕಾಲದಲ್ಲಿ ಮಹಾತ್ಮಗಾಂಧಿಯವರು ಅಹಿಂಸಾ ತತ್ವಗಳನ್ನು ಪುನರ್ರುಚಿಸಿದರು. ಆಗ ಅವರನ್ನು ಎರಡು ಬಗೆಯಾಗಿ ಟೀಕಿಸಲಾಯಿತು. ಅದು ಬಹುಶಃ ಅವರ ಸಮರ್ಥಕರ ಮತ್ತು ವಿರೋಧಿಗಳ ಪಕ್ಷಾಭಿಮಾನದ ವೈಷಮ್ಯದಿಂದ ಕೂಡಿತ್ತು. ನಿಜವಾಗಿ ನೋಡಿದರೆ ನಮ್ಮ ಭರತ ಭೂಮಿಯಲ್ಲಿ ಅಹಿಂಸಾ ತತ್ವವು ಸನಾತನಕಾಲದಿಂದಲೂ ಚಿರಪರಿಚಿತ ವಾಗಿರುವಂತಹದೇ. ಅದನ್ನೇ ಈಗಿನ ಸಂದರ್ಭದಲ್ಲಿ ಅನುಸರಿಸಲು ಹೇಳಿದರು. ಅವರು ಹೊಸದೇನನ್ನೂ ಹೇಳಲಿಲ್ಲ. ಪೂರ್ವ ಸಿದ್ಧಾಂತಗಳನ್ನು ವಿರೋಧಿಸಲಿಲ್ಲ. ಅವರು ಹೇಳುತ್ತಾರೆ : "ಅಹಿಂಸೆಯ ತತ್ವಗಳು ವಿಶಾಲ ವಾಗಿವೆ. ಹಿಂಸೆಯ ಬಡಬಾಗ್ನಿಯಲ್ಲಿ ಸಿಕ್ಕಿರುವ ನಾವು ಅಸಹಾಯಕ ರಾಗಿದ್ದೇವೆ. 'ಜೀವವು ಜೀವಿಗಳ ಜೀವನವಾಗಿದೆ' ಈ ಮಾತು

ನಿರಾಧಾರವಾದುದಲ್ಲ. ಬಾಹ್ಯಜಗತ್ತಿನಲ್ಲಿ ಮನುಷ್ಯ ಹಿಂಸೆಯನ್ನುಳಿದು ಒಂದು ಕ್ಷಣವೂ ಬದುಕಿರಲಾರ. ತಿನ್ನುವಾಗ, ಕುಡಿಯುವಾಗ, ನಡೆಯುವಾಗ ಹೀಗೆ ಯಾವುದೇ ಕ್ರಿಯೆ ನಡೆದಿರಲಿ, ನಮಗೆ ತಿಳಿದೊ ತಿಳಿಯದೆಯೊ ಹಿಂಸೆ ನಡೆಯುತ್ತಿರುತ್ತದೆ. ಇಂಥ ಹಿಂಸೆಯಿಂದ ಪಾರಾಗುವ ಪ್ರಯತ್ನ ಅವನದಾಗಿದ್ದರೆ, ಅತಿ ಸೂಕ್ಷ್ಮವಾದ ಜೀವಿಯನ್ನೂ ಬದುಕಿಸುವ ಪ್ರಯತ್ನ ಅವನದಾಗಿದ್ದರೆ, ಅವನು ನಿಜವಾಗಿ ಅಹಿಂಸೆಯ ಪರಮ ಭಕ್ತನೇ ಸರಿ.

ಅಹಮದಾಬಾದಿನಲ್ಲಿ ಒಮ್ಮೆ ಹುಚ್ಚು ಹಿಡಿದ ಅರವತ್ತು ನಾಯಿಗಳನ್ನು ಒಬ್ಬ ವ್ಯಕ್ತಿ ಕೊಂದ. ಆ ಬಗ್ಗೆ ವಾದ-ವಿವಾದದ ಬಿರುಗಾಳಿಯೇ ಬೀಸಿತು. ಆ ಬಗ್ಗೆ ಗಾಂಧಿಜೀಯವರ ಅಭಿಪ್ರಾಯ ಹೀಗಿತ್ತು: "ನಾಯಿಗಳನ್ನು ಕೊಲ್ಲದೆ ಬೇರೆ ಉಪಾಯವೇ ಇರಲಿಲ್ಲ. ಕೊಲೆ ಮಾಡಿದ ಮನುಷ್ಯನನ್ನು ಕೊಲ್ಲುವ ಧರ್ಮಸಂಕಟ ಕೆಲವು ವೇಳೆ ಅನಿವಾರ್ಯವಾಗುತ್ತದೆ. ಇಂದು ಅಹಿಂಸೆಯ ಹೆಸರಿನಲ್ಲಿ ನಾವು ಅಜ್ಞಾನದಿಂದ ಹಿಂಸೆಯನ್ನು ಪ್ರಚುರಪಡಿಸುತ್ತಿದ್ದೇವೆ ಎಂಬುದು ನನ್ನ ದೃಢವಿಶ್ವಾಸ." ಇದೇ ಸಂದರ್ಭದಲ್ಲಿ ಅವರು ಹೀಗೆ ಮುಂದುವರಿಯುತ್ತಾರೆ – "ಅಹಿಂಸೆಯ ಹೆಸರಿನಲ್ಲಿ ನಾವು ಭಯ, ದುರ್ಬಲತೆ ಮತ್ತು ಅಜ್ಞಾನವನ್ನು ಪ್ರಚಲಿತಗೊಳಿಸುತ್ತಿದ್ದೇವೆ. ಎಲ್ಲಿಯವರೆಗೆ ಮನುಷ್ಯನು ಶೂರ, ವೀರ, ಪರಾಕ್ರಮಿಯಾಗುವುದಿಲ್ಲವೊ ಅಲ್ಲಿಯವರೆಗೆ ಅವನಿಂದ ಅಹಿಂಸೆಯ ಉಪಾಸನೆ ಸಾಧ್ಯವಿಲ್ಲ. ಕಾರಣ ಅಹಿಂಸೆ ಕ್ಷತ್ರಿಯರ ಧರ್ಮ. ಬುದ್ಧ, ಮಹಾವೀರ, ಶ್ರೀರಾಮ, ಶ್ರೀಕೃಷ್ಣ ಎಲ್ಲರೂ ಕ್ಷತ್ರಿಯರಾಗಿದ್ದರು. ಅವರೆಲ್ಲರೂ ಹೆಚ್ಚು ಕಡಿಮೆ ಅಹಿಂಸೆಯ ಉಪಾಸಕರಾಗಿದ್ದರು. ಅವರ ಹೆಸರಿನಲ್ಲಿ ನಾವು ಅಹಿಂಸೆಯನ್ನು ಸಾರಲು ಇಚ್ಛಿಸುತ್ತೇವೆ. ಆದರೆ ಇಂದು ಅಹಿಂಸೆಯು ಭೀರುಗಳ ಗುತ್ತಿಗೆಯಾಗಿದೆ. ಅದರಿಂದ ಅಹಿಂಸೆಯು ನಿಸ್ತೇಜವಾಗಿದೆ. ಅಹಿಂಸೆ ಜ್ವಲಂತ ಆತ್ಮದ ಸಂಕೇತ. ಅದು ಎಲ್ಲಾ ಗುಣಗಳ ಆಧಾರಸ್ಥಾನದಲ್ಲಿದೆ. ಆದ್ದರಿಂದ ವಿಚಾರ, ವಿವೇಕ, ವೈರಾಗ್ಯ, ತಪಸ್ಸು, ಸಮತೆ, ಜ್ಞಾನ – ಈ ಗುಣಗಳ ಸಾಂಗತ್ಯವಿಲ್ಲದ ಅಹಿಂಸೆಯನ್ನು ಪಾಲಿಸಲು ಆಗುವುದಿಲ್ಲ.

ಅಹಿಂಸೆಯನ್ನು ಅರಿಯಬೇಕಾಗಿದ್ದರೆ ಮೊದಲು ಹಿಂಸೆಯಲ್ಲಿನ ಅಹಿಂಸೆಯನ್ನು ಚೆನ್ನಾಗಿ ಅರಿತಿರಬೇಕು."

ಈ ಮಾತಿನಿಂದ ಒಂದು ವೇಳೆ ಅನರ್ಥವಾಗಬಹುದು. ಆದರೆ ಈಶ್ವರನ ಹೆಸರಿನಲ್ಲಿ ಅನರ್ಥಗಳಾಗಿಲ್ಲವೇ ? ಆತನ ಹೆಸರಿನಲ್ಲಿ ನಾವು ದೈತ್ಯರನ್ನು ಪೂಜಿಸುವುದಿಲ್ಲವೇ ? ಆತನ ಹೆಸರಿನಲ್ಲಿ ಎಷ್ಟೊಂದು ಕೊಲೆಗಳು, ಪಾತಕಗಳು ಆಗಿಲ್ಲ ? ಹಾಗೆಂದು ದೇವರನ್ನು ನಾವು ಮುಚ್ಚುಮರೆಯಿಂದ ಸ್ಮರಿಸಬೇಕೆ? ಅದರಿಂದ ಭಗವಂತನ ಹೆಸರಿಗೆ ಎಂದಾದರೂ ಮಸಿ ಹತ್ತುತ್ತದೆಯೇ ?

ಕರ್ಮಗಳಲ್ಲಿ ಹಿಂಸೆ ಅಡಗಿರುವುದರಿಂದ ಕರ್ಮವು ದೋಷಪೂರಿತವಾಗಿದೆ. ಆದರೆ ಆ ದೋಷವನ್ನು ಕಳೆದುಕೊಳ್ಳಲು ಕರ್ಮ ಮಾಡಬೇಕಾಗುತ್ತದೆ. ಅದರಂತೆ ದೇಹವು ಪಾಪಮೂಲವಾಗಿದೆ. ಆದರೆ ದೇಹವನ್ನೇ ತೀರ್ಥಕ್ಷೇತ್ರವೆಂದು ತಿಳಿದು ಅದರ ಮೂಲಕವೇ ದೇಹಮುಕ್ತಿಯನ್ನು ಸಾಧಿಸಿಕೊಳ್ಳುತ್ತೇವೆ. ಇದೇ ಮಾತು ಹಿಂಸೆಗೂ ಅನ್ವಯಿಸುತ್ತದೆ.

ಆದರೆ ಆ ಹಿಂಸೆ ಯಾವ ಪ್ರಕಾರದ್ದು ? ಅದು ಸ್ವಾಭಾವಿಕವಿರಬಹುದು. ಅದು ಅತ್ಯಲ್ಪವಿರಬಹುದು. ವಿವೇಕಯುತವಾಗಿರಬಹುದು. ಅದರ ಬಗ್ಗೆ ತಟಸ್ಥಭಾವ ಇರಬಹುದು. ಅದು ಸಹಜಧರ್ಮವಾಗಿರಬಹುದು.

ಈ ವಿಚಾರದಿಂದ ವರ್ತಿಸಿದರೆ ಹಿಂಸೆಯ ಪ್ರಮಾಣ ಕುಗ್ಗುತ್ತಾ ಹೋಗಬಹುದು. ಹಿಂಸೆಯ ಉದ್ದೇಶ ಅಹಿಂಸೆಯ ಕ್ಷೇತ್ರವನ್ನು ವಿಸ್ತರಿಸುವಂಥದ್ದಾಗಿರಬೇಕು, ಅನಿವಾರ್ಯವಾಗಿರಬೇಕು. ಆ ಹಿಂಸೆಯು ಕರ್ತವ್ಯವೂ ಆಗಿರಬಹುದು. ಅದು ಕ್ಷಮೆಗೆ ಅರ್ಹವಾಗಿರಬಹುದು. ಹಾಗೆಂದು ಹಿಂಸೆಯಲ್ಲಿ ಅಹಿಂಸೆ ಇರಬಹುದು ಎಂದು ಹೇಳುವುದು ಸರ್ವಥಾ ಅನುಚಿತವಲ್ಲ. (ಗಾಂಧಿ ವಿಚಾರ ದರ್ಶನ – ಭಾಗ ೧೬, ಪುಟ ೧೩೪)

ಗಾಂಧಿಜೀಯವರ ಹಿಂಸೆ ಅಹಿಂಸೆಯ ಕಲ್ಪನೆಗಳು ಸ್ಪಷ್ಟವಾಗಿದ್ದವು, ಸನಾತನವಾಗಿದ್ದವು. ಆದರೆ ದೌರ್ಭಾಗ್ಯದಿಂದ ಅವರ ಸಮರ್ಥಕರೂ ವಿರೋಧಿಗಳೂ ರಾಜಕೀಯ ವಲಯುದವರಾಗಿದ್ದುದರಿಂದ ಅದರ ಸ್ವರೂಪ ವಿಪರ್ಯಾಸಗೊಂಡು ಪ್ರಸಾರವಾಯಿತು. ಗಾಂಧಿಜೀಯವರು ಮುಖ್ಯತಃ ಮತ್ತು ಮೂಲತಃ ಹಿಂದುಗಳಾಗಿದ್ದರು, ಶ್ರದ್ಧಾವಂತ ಭಕ್ತಪರಾಯಣಿಗಳಾಗಿದ್ದರು. ಈ ಮಾತಿನ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ ಅವರ ಹಿಂಸೆ ಮತ್ತು ಅಹಿಂಸೆಯ ಬಗೆಗಿನ ವಿಚಾರಗಳು ಸ್ಪಷ್ಟಗೊಳ್ಳುತ್ತವೆ.

ವಿಷ್ಣುಸಹಸ್ರನಾಮದಲ್ಲಿ ವಿಷ್ಣುವಿನ ವರ್ಣನೆ ಹೀಗಿದೆ: ವಿಷ್ಣು ಸಂವೃತ ಎಂದರೆ ವಿಧಿಸಿರುವ ಎಲ್ಲ ಶ್ರೇಷ್ಠ ವ್ರತಗಳನ್ನೂ ಸ್ವೀಕರಿಸಿದ್ದಾನೆ. ಸುಮುಖ ಎಂದರೆ ಸುಂದರ ಮತ್ತು ಪ್ರಸನ್ನ ಮುದ್ರೆಯುವನಾಗಿದ್ದಾನೆ. ಸೂಕ್ಷ್ಮ ಎಂದರೆ ಅಣುವಿಗಿಂತಲೂ ಸಣ್ಣವನಿದ್ದಾನೆ. ಸುಘೋಷನೆಂದರೆ ಮಧುರ ಗಂಭೀರ ಧ್ವನಿಯಲ್ಲಿ ಮಾತನಾಡುವಂಥವನು, ಸುಖದ ಎಂದರೆ ಎಲ್ಲರಿಗೂ ಸುಖ ಕೊಡುವವನು. ಸುಹೃತ್ ಎಂದರೆ ಪ್ರಾಣಿಗಳಿಗೆಲ್ಲ ಮಿತ್ರನು, ಮನೋಹರ ಎಂದರೆ ಮಾತು ಮತ್ತು ಕೃತಿಯಿಂದ ಎಲ್ಲರ ಮನಸ್ಸನ್ನೂ ಆಕರ್ಷಿಸುವಂಥವನು, ಜಿತಕ್ರೋಧ ಎಂದರೆ ಕ್ರೋಧವನ್ನು ಜಯಿಸಿದವನು, ವೀರಬಾಹು ಎಂದರೆ ಅತ್ಯಂತ ಪರಾಕ್ರಮವುಳ್ಳವನು. ವಿದಾರಣಃ ಎಂದರೆ ಹಿರಣ್ಯಕಶಿಪುವಿನಂತಹ ದುಷ್ಟರನ್ನು ಸಂಹಾರಮಾಡುವ ನರಸಿಂಹ ಎಂದು ಅರ್ಥ.

ಸುವ್ರತಃ ಸುಮುಖಃ ಸೂಕ್ಷ್ಮಃ ಸುಘೋಷಃ ಸುಖದಃ ಸುಹೃತ್ ।
ಮನೋಹರೋ ಜಿತಕ್ರೋಧೋ ವೀರಬಾಹುರ್ವಿದಾರಣಃ ॥

ಗಾಂಧಿಜೀಯವರು ಇಂಥ ವಿಷ್ಣುವಿನ, ರಾಮನ, ಕೃಷ್ಣನ ಭಕ್ತರಾಗಿ ಇದ್ದರು. ಇಷ್ಟನ್ನು ನಾವು ಗಮನದಲ್ಲಿರಿಸಿಕೊಂಡರೆ ಗಾಂಧಿಜೀಯವರ ಬಗ್ಗೆ ಇರುವ ತಪ್ಪುಕಲ್ಪನೆಗಳು ತನ್ನಿಂದ ತಾನೇ ದೂರವಾಗುತ್ತವೆ.

೬

ಹಿಂಸೆ, ಅಹಿಂಸೆ, ವಿವೇಕ ಅಂದಾಕ್ಷಣ ರಾಮ-ರಾವಣ, ಕೃಷ್ಣ-ಕಂಸ, ಸ್ವಾತಂತ್ರ್ಯ ಯುದ್ಧ-ಪರಕೀಯ ಆಕ್ರಮಣ, ಸೈನ್ಯದ ಆವಶ್ಯಕತೆ-

ಅನಾವಶ್ಯಕತೆ ಮೊದಲಾದ ಸಂಗತಿಗಳ ಬಗ್ಗೆ ಆವೇಶದಿಂದ ಚರ್ಚೆ ನಡೆಯುತ್ತದೆ. ಅದು ಅಲ್ಲಿಗೆ ಮುಕ್ತಾಯವಾಗುತ್ತದೆ. ಹೀಗೆ ಇದು ಪದ್ಧತಿಯೇ ಆಗಿದೆ. ಯಾರನ್ನಾದರೂ ಕೊಲ್ಲುವುದು ಎಂದಾಕ್ಷಣ ಅದು ಹಿಂಸೆ ಎಂದು ಸುಲಭವಾಗಿ ಅರ್ಥೈಸಿಬಿಡುತ್ತೇವೆ. ಆ ಮೂಲಕ ನಾವೊಬ್ಬ ದೊಡ್ಡ ಅಹಿಂಸಕರು ಎಂದು ತಿಳಿದುಕೊಂಡು ಅಹಂಕಾರ ಪಡುತ್ತೇವೆ. ಇಲ್ಲವೇ ಆತ್ಮವಂಚನೆ ಮಾಡಿಕೊಳ್ಳುತ್ತೇವೆ. ಯಾರನ್ನೂ ಕೊಲ್ಲದಿರುವುದು ಮಾತ್ರ ಅಹಿಂಸೆಯಲ್ಲ, ಜೈನ ಮಹಾಮುನಿ ಉಮಾಸ್ವಾತಿ ಅವರ ತತ್ವಾರ್ಥ ಸೂತ್ರದಲ್ಲಿ ಈ ವಿಷಯದ ಒಂದು ಸುಂದರವಾದ ಸೂತ್ರವಿದೆ :

ಪ್ರಮತ್ತಯೋಗಾತ್ ಪ್ರಾಣವ್ಯಪರೋಪಣಂ ಹಿಂಸಾ ।

(ಅಧ್ಯಾಯ ೭, ಸೂತ್ರ ೮)

ಅಂದರೆ ಪ್ರಮತ್ತನಾಗಿ ಮಾಡಿದ ಪ್ರಾಣಿವಧೆ ಹಿಂಸೆ. ಇದರಲ್ಲಿ ವಧೆ ಗೌಣವಾಗಿದೆ, ಪ್ರಮತ್ತಯೋಗ ಅಂದರೆ ರಾಗದ್ವೇಷಾದಿ ಭಾವನೆಗಳು ಪ್ರಮುಖವಾದವು. ವಧೆ ಕೇವಲ ದೃಶ್ಯರೂಪವಾಗಿದೆ. ಪ್ರಮತ್ತ ಅಥವಾ ಉನ್ಮತ್ತನಾಗಿರುವುದೇ ಹಿಂಸೆ. ಶಾಂತ, ಸ್ವವಿಚಾರ, ಸಾವಧಾನವಾಗಿರುವುದೇ ಅಹಿಂಸೆ. ಇದೇ ಮಾತನ್ನು ಜ್ಞಾನೇಶ್ವರರು (೧೬ : ೧೧೪) ಸರಳ ಶಬ್ದಗಳಲ್ಲಿ ಹೇಳಿದ್ದಾರೆ :

ಸುಖಕ್ಕಾಗಿ ಮನುಜರ ವಾಕ್, ಮನಸು, ಶರೀರ
ಅಹಿಂಸೆಗಾಗಿ ಅಪಾರ ನೀಡಿದೆ, ಅದು ಶುಭಕರ ॥

೧೦

ಇಂದು ದುರ್ದೈವದಿಂದ ಎಲ್ಲೆಡೆ ಹಿಂಸೆ ಹುಚ್ಚೆದ್ದು ಕುಣಿಯುತ್ತಿದೆ. ಚಿಕ್ಕವರಿಂದ ದೊಡ್ಡವರತನಕ ಎಲ್ಲರ ವ್ಯವಹಾರದಲ್ಲಿ ಉನ್ಮತ್ತತೆ ಕಾಣುತ್ತದೆ. ಚಿಕ್ಕವರಿಗೆ ತಾಯಿ ತಂದೆಯರ ಬಗ್ಗೆ ಆದರಭಾವವಿಲ್ಲ. ವಿದ್ಯಾರ್ಥಿಗಳಿಗೆ ಗುರುಗಳ ವಿಷಯದಲ್ಲಿ ಆದರವಿಲ್ಲ. ತಮ್ಮ ಶಿಕ್ಷಕರನ್ನು ಒಂಟಿ ಹೆಸರಿನಿಂದ ಅಥವಾ ವ್ಯಂಗ್ಯ ಹೆಸರಿನಿಂದ ಸಂಬೋಧಿಸುವುದು ಇಂದು ಸಾಮಾನ್ಯ ಸಂಗತಿ. "ಉಪಾಧ್ಯಾಯನಿರಬಹುದು, ಇದ್ದಿರಬೇಕು ವಿದ್ವಾಂಸ. ಯಾವನೋ ಕಾರ್ಯಕರ್ತನಂತೆ, ಇರಬಹುದು, ಅವನಿಂದ

ನನಗೇನು" ಈ ರೀತಿಯ ಉನ್ಮತ್ತತೆಯ ಮಾತುಗಳು, ಅಲಕ್ಷ್ಯದ ನುಡಿಗಳು ಕೇಳಿಬರುತ್ತವೆ. 'ಸರ್ವಭೂತರಲ್ಲಿ ಭಗವದ್‌ಭಾವ ಎಂದು ತಿಳಿಯು ವುದಂತೂ ದೂರವೇ ಉಳಿಯಿತು. ಸರ್ವಜನರ ಬಗ್ಗೆ ಮಾನವತೆಯ ಭಾವವೂ ಕಂಡುಬರುವುದಿಲ್ಲ. ಪ್ರತಿಯೊಬ್ಬನಿಗೂ ಯಾವುದಾದರೂ ನಶೆ ಏರಿರುತ್ತದೆ. ಯೌವನ, ಧನ, ಸಂಪತ್ತಿ, ಪ್ರಭುತ್ವ, ಅವಿವೇಕ ಇವುಗಳಲ್ಲಿ ಅನರ್ಥಕ್ಕೆ ಒಂದೊಂದೇ ಸಾಕು, ನಾಲ್ಕೂ ಕೂಡಿದರೆ ಕೇಳಬೇಕೆ ?

ಗುಂಪಿನ ಆವೇಶವಂತೂ ಬಹಳ ಭಯಂಕರ. ಅದು ಇಂದು ಭಯಾನಕ ರೂಪವನ್ನು ಧರಿಸಿದೆ. ಯಾವುದಾದರೂ ಕಾರಣ ಸಂಭವಿಸು ತ್ತದೆ, ನೂರಾರು ಜನರು ಗುಂಪುಗೂಡುತ್ತಾರೆ. 'ಧಿಕ್ಕಾರ ! ಮುರ್ದಾಬಾದ್ ! ಧಿಕ್ಕಾರ !' ಘೋಷಣೆಗಳು ವಾತಾವರಣದಲ್ಲಿ ಪ್ರತಿಧ್ವನಿಸುತ್ತವೆ. ವಾಚನಾಲಯಗಳನ್ನು ಸುಡುವುದು, ಅಂಗಡಿಗಳನ್ನು ಲೂಟಿ ಮಾಡುವುದು, ಬಸ್ಸು ರೈಲುಗಳಿಗೆ ಬೆಂಕಿ ಹಚ್ಚುವುದು, ಇಂಥ ಸಮಾಚಾರಗಳನ್ನು ದಿನಪತ್ರಿಕೆಗಳಲ್ಲಿ ಓದುತ್ತೇವೆ. ಒಂದು ಊರಿನ ಬೆಂಕಿ ಇನ್ನೊಂದು ಊರಿಗೆ ಹರಡುತ್ತದೆ. ಅಲ್ಲಿಯೂ ಕಟ್ಟಡಗಳ ಮೇಲೆ ಕಲ್ಲುತೂರಾಟ, ಕಿಟಕಿಗಳ ಗಾಜು ಒಡೆಯುವುದು, ಬೀದಿ ದೀಪಗಳನ್ನು ಒಡೆಯುವುದು – ಇದರಲ್ಲಿ ಜನ ಕೃತಾರ್ಥರಾಗುತ್ತಾರೆ. ಚಿಕ್ಕ ಮಕ್ಕಳಂತೂ ಇಂಥ ಕೆಲಸಗಳಲ್ಲಿ ಬಹಳ ಉತ್ಸಾಹದಿಂದ ಭಾಗವಹಿಸುತ್ತಾರೆ. "ಎಷ್ಟು ಹುಚ್ಚರು ಈ ಮಕ್ಕಳು ! ಈ ಸಂಪತ್ತೆಲ್ಲಾ ತಮ್ಮದೇ ಎಂದು ಇವರಿಗೆ ತಿಳಿಯುವುದಿಲ್ಲವೆ ?" ಎಂದು ದೊಡ್ಡವರು ಉದ್ಗರಿಸುತ್ತಾರೆ. ರಾಜಕೀಯ ಪಕ್ಷಗಳು, ಸಭೆಗಳಲ್ಲಿ ಪರಸ್ಪರರ ಮೇಲೆ ಆರೋಪ ಪ್ರತ್ಯಾರೋಪ ಮಾಡು ತ್ತಾರೆ. ವಿಧಾನಸಭೆಗಳಲ್ಲಿ ಪ್ರಶ್ನೆಗಳು ಕೇಳಲ್ಪಡುತ್ತವೆ. ವಿಚಾರಣಾ ಆಯೋಗಗಳನ್ನು ನಿಯಮಿಸಲಾಗುತ್ತದೆ. ಅಲ್ಲಿಗೆ ಪ್ರಕರಣ ಮುಗಿಯಿತು. ಕ್ರಮೇಣ ಜನರು ಘಟನೆಯನ್ನು ಮರೆಯುತ್ತಾರೆ. ಆದರೆ ಜನರ ಅಂತರಂಗ ದಲ್ಲಿ, ಅದರಲ್ಲೂ ಮಕ್ಕಳ ಮನಸ್ಸಿನಲ್ಲಿ ಹಿಂಸೆಯ ಬೀಜ ಮೊಳಕೆಯೊಡೆದು ಬೆಳೆಯುತ್ತದೆ. ಈ ಹಿಂಸಾಚಾರ ಸರ್ವನಾಶಕವಾದುದು. ಇಹಪರಲೋಕಕ್ಕೆ ಅಮಂಗಳವಾದದ್ದು.

ದೊಂಬಿ, ಗಲಾಟೆ ಮಾಡುವ ವ್ಯಕ್ತಿಯನ್ನು ವಿಚಾರಿಸಿದರೆ ಅವನು ತನ್ನ ತಪ್ಪು ಒಪ್ಪಿಕೊಳ್ಳುತ್ತಾನೆ. ಅವರಲ್ಲಿ ಹೆಚ್ಚಿನವರು ಸತ್‌ಪ್ರವೃತ್ತಿಯುವರಾಗಿರುತ್ತಾರೆ. ಆದರೆ ಸ್ವಂತ ವಿಚಾರಶಕ್ತಿ ಇರುವುದಿಲ್ಲ, ತಿಳಿಹೇಳುವವರು ಇರುವುದಿಲ್ಲ. ಯೌವನಸಹಜವಾದ ಉತ್ಸಾಹ ತುಂಬಿ ತುಳುಕುತ್ತದೆ. ಆದರೆ ಅದನ್ನು ಹೇಗೆ, ಎಲ್ಲಿ ವ್ಯಯಿಸಬೇಕೆಂಬ ಜ್ಞಾನ ಅಥವಾ ಸಂಸ್ಕಾರ ಇರುವುದಿಲ್ಲ. ಪ್ರವಾಹಕ್ಕೆ ಸಿಕ್ಕಿ ಅದು ಒಯ್ದತ್ತ ಹೋಗುವುದೇ ಅವರ ಸ್ಥಿತಿಯಾಗಿರುತ್ತದೆ.

ಗುಂಪುಗಾರಿಕೆಯು ನಶೆ ಬಹಳ ಘಾತಕವಾದದ್ದು. ಅದು ಯಾವ ಘಳಿಗೆಯಲ್ಲಿ ಏನು ಮಾಡೀತು, ಯಾವ ಮಟ್ಟಕ್ಕೆ ತಲಪೀತು ಎಂದು ಹೇಳುವಂತಿಲ್ಲ. ಫ್ರೆಂಚ್ ರಾಜ್ಯ ಕ್ರಾಂತಿಯಲ್ಲಿ ಇದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ಷೇಕ್ಸ್‌ಪಿಯರನ 'ಜೂಲಿಯಸ್ ಸೀಜರ್' ನಾಟಕದಲ್ಲಿ ಸಮೂಹಮದದ ಚಿತ್ರಣವಿದೆ. ಮಹಾಪೂರದ ಅಲೆಗಳಿಗಿಂತ ಇಲ್ಲವೇ ಕಾಡ್ಗಿಚ್ಚಿಗಿಂತ ಈ ಗುಂಪಿನ ನಶೆಯು ಭಯಂಕರವಾದದ್ದು. ಆದರೆ ಇಂದು ಎಲ್ಲೆಲ್ಲೂ ಸಮೂಹಮದವೇ ಪ್ರಾಶಸ್ತ್ಯ ಪಡೆಯುತ್ತಿದೆ. ವಿದ್ಯಾರ್ಥಿ, ಕೂಲಿಕಾರ, ಕೆಲಸಗಾರ, ರೈತ, ಬಾಡಿಗೆದಾರ, ಶಿಕ್ಷಕ, ಮನೆಮಾಲಿಕ – ಹೀಗೆ ಎಲ್ಲರೂ ಸಂಘಟನೆಯ ಹೆಸರಿನಲ್ಲಿ ಗುಂಪುಗೂಡುತ್ತಾರೆ. ಯಾಕಾಗಿ ? ಸ್ವಂತದ, ಸಮಾಜದ, ರಾಷ್ಟ್ರದ ಅಥವಾ ಜಗತ್ತಿನ ಉನ್ನತಿಗಾಗಿ ಅಲ್ಲ, ನಾಲ್ಕು ಕಾಸು ಹೆಚ್ಚಿಗೆ ಗಳಿಸಬೇಕು, ಪ್ರತಿಪಕ್ಷದವರನ್ನು ಉರುಳಿಸಬೇಕು ಎನ್ನುವುದಕ್ಕಾಗಿ. ಇದೆಲ್ಲ ಹಿಂಸಾಚಾರವೇ.

ಸಮೂಹ ಮತ್ತು ಸಂಖ್ಯಾಬಲದ ಪ್ರಾಬಲ್ಯವಿದ್ದಲ್ಲಿ, ಆ ದೇಶದ ಪ್ರಗತಿ ಸಾಧ್ಯವಿಲ್ಲ. ಅಲ್ಲಿ ಯೋಗ್ಯತೆಗೆ ಬೆಲೆ ಇಲ್ಲ. ಪ್ರತಿಭೆಗೆ ಪುರಸ್ಕಾರವಿಲ್ಲ. ನಾಲ್ಕೂ ಕಡೆಯಿಂದ ಆ ಸಮಾಜದ ಅಧಃಪತನವಾಗುತ್ತದೆ. ಅದು ಚೆಲ್ಲಾಪಿಲ್ಲಿಯಾಗಿ ಅವನತಿಯತ್ತ ಜಾರುತ್ತದೆ.

ಸಾಮೂಹಿಕ ಹಿಂಸಾಚಾರವನ್ನು ನಾವು ಉಪೇಕ್ಷೆಯಿಂದ ನೋಡುತ್ತೇವೆ. ಆ ಬಗ್ಗೆ ಅಲಕ್ಷ್ಯದಿಂದಿರುತ್ತೇವೆ. ವಿರುದ್ಧ ಪಕ್ಷದವರ ದುರವಸ್ಥೆಯಿಂದ ಆನಂದಿಸುತ್ತೇವೆ. ಆದರೆ ಈ ಭಸ್ಮಾಸುರನು ಯಾವಾಗ ಹೇಗೆ ತಿರುಗಿಬಿದ್ದಾನು ಎಂದು ಹೇಳುವಂತಿಲ್ಲ. ಈ ಸ್ಥಿತಿಯು ಒಂದು ಭಯಾನಕ

ರೋಗದಂತಿದೆ. ಈ ರೋಗ ನಿವಾರಣೆಗಾಗಿ ಎಲ್ಲರೂ ಉತ್ತಮ ಯೋಜನೆಗಳನ್ನು ರೂಪಿಸಬೇಕು ಮತ್ತು ಅನುಸರಿಸಬೇಕು. ಅದಕ್ಕಾಗಿ ಎಲ್ಲರೂ ಚಿಂತನಶೀಲರಾಗಬೇಕು.

ಅನಾದರವನ್ನು ತೋರಿಸುವುದು ಹಿಂಸೆ. ಈ ಹಿಂಸೆಯ ಬೀಜಾರೋಪಣ ಎಲ್ಲ ಮನೆಗಳಲ್ಲೂ ಕಂಡುಬರುತ್ತಿದೆ. ಮಕ್ಕಳು ಹಿರಿಯರ ಬಗ್ಗೆ, ಮಾತಾ-ಪಿತರ ಬಗ್ಗೆ ಗೌರವಭಾವನೆಯನ್ನು ಹೊಂದಿಲ್ಲ. ಮನೆಯಲ್ಲಿನ ವೃದ್ಧರು ನಿರುಪಯೋಗಿ ವಸ್ತುಗಳಂತೆ ತಿಳಿಯಲ್ಪಡುತ್ತಾರೆ. ವೃದ್ಧಾಶ್ರಮಗಳು ಪ್ರತಿಯೊಂದು ಊರಿನಲ್ಲೂ ಇರಬೇಕೆಂದು ಹೇಳುತ್ತಾರೆ. ಇವೆಲ್ಲ ಅಮಾನವೀಯ ಪದ್ಧತಿ. ಕೀಳುತನ ಹಿಂಸೆಯ ತಾಯಿ.

ಅಶ್ಲೀಲ ಮಾತುಗಳು ಉನ್ಮಾದಕತೆಯ ಪರಿಣಾಮವಾಗಿದೆ. ಮದ್ಯಪಾನ ಮಾಡಿದವನು ಅಶ್ಲೀಲವಾಗಿ ಮಾತನಾಡುತ್ತಾನೆ. ತಾವು ಏನು ಮಾಡುತ್ತಿದ್ದೇವೆಂದು ಅವರಿಗೆ ಎಚ್ಚರಿರುವುದಿಲ್ಲ. ಇಂದು ನಮ್ಮ ಸ್ಥಿತಿ ಹಾಗೆಯೇ ಆಗಿದೆ. ಜಗಳದಲ್ಲಿಯೇ ಆಗಲಿ, ಸಹಜ ಮಾತನಾಡುವಾಗಲೇ ಆಗಲಿ, ಮುಕ್ತಕಂಠದಿಂದ ಬೈಗಳನ್ನು ಬಳಸುತ್ತಾರೆ. ರೈತನಿಗೆ ಎತ್ತುಗಳನ್ನು ಹೊಡೆಯುವುದಿದ್ದರೂ ಒಂದು ಪ್ರಶಸ್ತ ಬೈಗಳಿಂದಲೇ ಆಗಬೇಕು. ನಾಮ ಹಾಕುವವನು, ಜಪಮಾಲೆ ಧರಿಸುವವನು ಬೈಗಳಿಲ್ಲದೆ ಮಾತನಾಡುವುದಿಲ್ಲ. ಹಿಂದೆ ಈ ತರದ ಭಾಷೆಯನ್ನು ಗ್ರಾಮ್ಯವೆಂದಾದರೂ ತಿಳಿಯುತ್ತಿದ್ದರು. ಇಂದು ಅದೊಂದು ಪ್ರತಿಷ್ಠೆಯ ವಿಷಯವಾಗಿದೆ. ಅನೇಕ ಸಾಹಿತ್ಯ ಪ್ರಕಾರಗಳಲ್ಲಿ, 'ತಮ್ಮತನ, ಮಣ್ಣಿನವಾಸನೆ' ಇತ್ಯಾದಿ ಹೆಸರಿನಲ್ಲಿ ಹೇರಳವಾಗಿ ಬೈಗಳನ್ನು ಸೇರಿಸಲಾಗುತ್ತದೆ. ಇದೆಲ್ಲ ಹಿಂಸಾಚಾರ. ಆತ್ಮಘಾತುಕವಾದುದು. ಬಸ್ಸು, ರೈಲು, ಪೇಟೆ, ಎಲ್ಲಿ ಹೋದರೂ ಅಶ್ಲೀಲ ನುಡಿಗಳು ಕೇಳಿಬರುತ್ತವೆ.

ಯಾವುದೇ ಸಂಘ-ಸಂಸ್ಥೆಗಳಲ್ಲಿ ನೋಡಿದರೂ ಅಲ್ಲಿ ಪರನಿಂದೆಯ ಮಳೆಯೇ ಸುರಿಯುತ್ತದೆ. ಸಂಸ್ಥೆಯ ಉದ್ದೇಶ ಘನವಾಗಿರುತ್ತದೆ. 'ಜಾಗತಿಕ ಐಕ್ಯ, ವಿಶ್ವಶಾಂತಿ, ವಿಶ್ವಬಂಧುತ್ವ' ಇಂಥ ದೊಡ್ಡ ದೊಡ್ಡ ಶಬ್ದಗಳನ್ನು ಬಳಸುತ್ತಾರೆ. ಆದರೆ ಅಲ್ಲಿ ಕೀಳುಮಟ್ಟದ ಗುಂಪುಗಾರಿಕೆ ನಡೆಯುತ್ತದೆ.

ವ್ಯಕ್ತಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಸವ್ಯ ಪ್ರಯೋಗ ಇತ್ಯಾದಿ ಬೆಣ್ಣೆಯಂಥ ಮೃದುವಾದ ಶಬ್ದಗಳ ಅಡಿಯಲ್ಲಿ ಈರ್ಷೆ-ದ್ವೇಷ-ಮತ್ಸರಗಳು ತುಂಬಿರುತ್ತವೆ. ಒಬ್ಬರ ಗೋರಿ ಒಬ್ಬರು ತೋಡುತ್ತಾರೆ. ಒಬ್ಬರಿಗೊಬ್ಬರು ಕೆಳಗೆ ಎಳೆಯುವ ಪರಾಕ್ರಮ ನಡೆದಿರುತ್ತದೆ. ಇದು ಘೋರ ಹಿಂಸಾಚಾರ ಮತ್ತು ದುರದೃಷ್ಟದಿಂದ ನಮ್ಮಲ್ಲಿ ಸರ್ವತ್ರ ಕಾಣುತ್ತದೆ.

ಸೆರೆಕುಡುಕ ಮನುಷ್ಯ ತನ್ನ ಮುದ್ದುಮಕ್ಕಳನ್ನು ಮರೆಯುತ್ತಾನೆ, ಸುಂದರಳಾದ ಸುಶೀಲೆ ಪತ್ನಿಯನ್ನು ಮರೆಯುತ್ತಾನೆ. ಅವನಿಗೆ ಬೇಕಾಗಿರುವುದು ಹೆಂಡ – ಬರೀ ಹೆಂಡ, ಸರ್ವನಾಶ ಮಾಡುವಂಥ ಹೆಂಡ! ಉನ್ಮಾದವು ಕೂಡಾ ಹೀಗೆಯೇ ಒಮ್ಮೆ ಏರುತ್ತಾ ಹೋದರೆ ಏರುತ್ತಲೇ ಹೋಗುತ್ತದೆ. ಅದು ಪದವಿ, ಅಧಿಕಾರ, ಕೀರ್ತಿ, ಸಂಪತ್ತು, ಜ್ಞಾನ, ಬುದ್ಧಿ – ಯಾವುದೇ ಬಗೆಯ ಉನ್ಮಾದವಿರಲಿ ಅದು ಇಳಿಯುವುದೇ ಇಲ್ಲ. ಅಲ್ಲಿಂದಲೇ ಅವನ ಪತನದ ಆರಂಭವಾಗುತ್ತದೆ. ಒಮ್ಮೆ ಉನ್ಮತ್ತತೆಯಿಂದ ಅಮಲು ಏರಿದರೆ ಜಾತಿ, ಕುಲ, ಸಮಾಜ, ದೇಶ, ಪಕ್ಷ, ಧರ್ಮ, ಸಂಪ್ರದಾಯ ಎಲ್ಲವನ್ನೂ ಮರೆಯುತ್ತಾನೆ. ಯಾರನ್ನು ಯಾವಾಗಲೂ ಸ್ಮರಿಸಬೇಕೋ ಅಂಥವನನ್ನು ಮರೆಯುತ್ತಾನೆ. ಇದು ಭೀಕರ ಹಿಂಸೆ.

ರಣರಂಗದಲ್ಲಿ ಸಂಭವಿಸುವ ಹಿಂಸೆಗಿಂತಲೂ ಅದು ಬೇರೆ ಕಡೆಯೇ ಹೆಚ್ಚಾಗಿ ಸಂಭವಿಸುತ್ತದೆ. ಹೆಂಡತಿಯೊಡನೆ ಕಠೋರವಾಗಿ ಅಪ್ರಾಮಾಣಿಕತನದಿಂದ ನಡೆಯುವುದು, ಮಕ್ಕಳನ್ನು ನಿರ್ಲಕ್ಷ್ಯದಿಂದ ಕಾಣುವುದು, ಅವರ ಆರೋಗ್ಯ, ಶಿಕ್ಷಣ, ಶೀಲ ಮೊದಲಾದವುಗಳ ಬಗ್ಗೆ ಚಿಂತಿಸದಿರುವುದು ; ಕೆಲಸದವರೊಡನೆ ಕೀಳ್ತನದಿಂದ ವರ್ತಿಸುವುದು ; ನೆರೆಹೊರೆಯವರೊಡನೆ ಜಗಳವಾಡುವುದು, ಸ್ನೇಹಿತರಿಗೆ ಮೋಸ ಮಾಡುವುದು, ಬಡವರನ್ನು ಕಾಡುವುದು ; ವೃದ್ಧರು ಮತ್ತು ರೋಗಿಗಳ ಸೇವೆ ಮಾಡದಿರುವುದು, ಅಧಿಕಾರದ ದುರುಪಯೋಗ ಮಾಡುವುದು – ಇವೆಲ್ಲ ಹಿಂಸೆಯ ರೂಪಗಳು. ಜಾಗತಿಕ ಯುದ್ಧಕ್ಕಿಂತಲೂ ಇವು ಭಯಾನಕ.

ನಮ್ಮ ಎಲ್ಲ ಹಿಂಸಾಚಾರ ನಿಲ್ಲಬೇಕು, ಉನ್ಮಾದ ಇಳಿಯಬೇಕು, ವಿವೇಕ ಜಾಗೃತಿಗೊಳ್ಳಬೇಕು. ಸಮಾಜದ ಎಲ್ಲ ಘಟಕಗಳ ಪರಸ್ಪರ ಸಂಬಂಧ ಶಾಂತಿಯುತವಾಗಿಯೂ ಸ್ನೇಹಪೂರ್ಣವಾಗಿಯೂ ಇರಬೇಕು. ನಾಲ್ಕೂ ಕಡೆ ಅಹಿಂಸೆಯ ವಾತಾವರಣ ಉತ್ಪನ್ನವಾಗಬೇಕು.

ಬಾಯಲ್ಲಿ ಅಹಿಂಸೆಯ ಮಂತ್ರವನ್ನು ಹೇಳುತ್ತಾ ಭಗವಾನ್ ಬುದ್ಧ, ಮಹಾತ್ಮಗಾಂಧಿ ಇವರುಗಳನ್ನು ವಂದಿಸುವುದು, ಅದೇ ಕೈಗಳಿಂದ ದುಷ್ಕಾರ್ಯಗಳನ್ನು ಮಾಡುವುದು – ಇದನ್ನು ತಡೆಯಬೇಕು. ದೊಡ್ಡ ದೊಡ್ಡ ಭಾಷಣಗಳನ್ನು ಝಾಡಿಸುವುದು ನಿಲ್ಲಬೇಕು. ಇದು ಅಹಿಂಸೆಯ ಉಪಾಸನೆ ಆಗಿರದೇ ಆತ್ಮವಂಚನೆಯಾಗಿದೆ, ದಾಂಭಿಕತೆಯಾಗಿದೆ. ಅಹಿಂಸೆಯ ನಿಜವಾದ ಪರಿಸರವನ್ನು ಪ್ರತಿಯೊಂದು ಮನೆಗಳಲ್ಲಿ ಮತ್ತು ಸಂಪೂರ್ಣ ದೇಶದಲ್ಲಿ ನಿರ್ಮಿಸಬೇಕು.

೧೧

ನಿನ್ನೆ ರಾತ್ರಿ ಯುವರಾಜ್ಯಾಭಿಷೇಕದ ತಯಾರಿ ನಡೆದಿತ್ತು. ಆದರೆ ಇಂದು ನಾರುಮಡಿಯನ್ನುಟ್ಟು ವನವಾಸಕ್ಕೆ ಹೋಗಬೇಕು ಎಂದು ತಿಳಿಯಿತು. ಆದರೆ ಪ್ರಭು ರಾಮಚಂದ್ರನ ಮನಸ್ಸಿನಲ್ಲಿ, ಕೈಕೆಯಿಯ ಬಗ್ಗೆ ಒಂದು ಕ್ಷಣಮಾತ್ರವೂ ತಿರಸ್ಕಾರ ಭಾವ ಮೂಡಲಿಲ್ಲ. ದ್ವೇಷದ ಒಂದು ಎಳೆಯೂ ಕಾಣಲಿಲ್ಲ. ಆ ಅಸೀಮ ಪ್ರೇಮಮೂರ್ತಿಯ ಉತ್ತರಾಧಿಕಾರಿಗಳು ನಾವು! ಸಮಗ್ರ ರಾಜ್ಯ ಕೈವಶವಾಗಿತ್ತು. ಆದರೆ ಅದನ್ನು ಕಡೆಗಣಿಸಿ ರಾಮನ ಪಾದುಕೆಗಳನ್ನು ಮಸ್ತಕದಲ್ಲಿ ಧರಿಸಿದ ವಿಶಾಲಹೃದಯಿ ಆ ಭರತನ ಉತ್ತರಾಧಿಕಾರಿಗಳು ನಾವು! ಮಧುರ ಮುರಳೀನಾದದಿಂದ ಪಶುಪಕ್ಷಿಗಳನ್ನು ಮೋಹಿಸಿ, ಸುದಾಮನ ಹಿಡಿ ಅವಲಕ್ಕಿ ಮುಕ್ಕಿದ, ಯುಧಿಷ್ಠಿರನ ಯಜ್ಞದಲ್ಲಿ ಎಂಜಲು ಬಳಿದ ಕರುಣಾಸಾಗರ ಶ್ರೀಕೃಷ್ಣನ ವಾರಸುದಾರರು ನಾವು! "ಸರ್ವೇ ಜನಾಃ ಸುಖಿನೋ ಭವಂತು" ಎಂಬ ಏಕಮಾತ್ರ ಆಕಾಂಕ್ಷೆಯಿಂದ ಜೀವನವನ್ನು ಅರ್ಪಿಸಿದ ಜ್ಞಾನೇಶ್ವರ, ಶ್ರೀಶಂಕರರ ವಾರಸುದಾರರು ನಾವು! ಜಡಭರತ, ಶುಕಮುನಿ, ಗೌತಮಬುದ್ಧ, ಶ್ರೀ ಶಂಕರಾಚಾರ್ಯ, ಜ್ಞಾನೇಶ್ವರ, ತುಲಸಿದಾಸ, ಮೀರಾಬಾಯಿ, ಸೂರದಾಸ, ಚೈತನ್ಯ ಮಹಾ ಪ್ರಭು ಮೊದಲಾದ ಮಹಾ ಸದ್ಭಕ್ತರ ಉತ್ತರಾಧಿಕಾರಿಗಳು ನಾವು! ನಾವು ಹಿಂಸಾಮಯ ವಾತಾವರಣವನು ಹೋಗಲಾಡಿಸುವ ನಿರ್ಧಾರ ಮಾಡಬೇಕು. ಪ್ರಭು ರಾಮಚಂದ್ರ ಮತ್ತು ಭಗವಾನ್ ಶ್ರೀಕೃಷ್ಣರು ಆಚರಿಸಿದ ಮತ್ತು ಉಪದೇಶಿಸಿದ ಅಹಿಂಸೆಯನ್ನು ನಾವು ಮನೆ ಮನೆಗಳಲ್ಲಿ ಕಾಯಾ ವಾಚಾ ಮನಸಾ ಪಾಲಿಸಬೇಕು.

೧

ಇಂದು ಸರ್ವತ್ರ ಶಾಂತಿಯ ಭಾಷಣ ಕೇಳಿಬರುತ್ತಿದೆ. ಆದರೆ ಯುದ್ಧದ ನಗಾರಿಗಳು ಬಾರಿಸುತ್ತಿವೆ. ಗುಪ್ತ ರೀತಿಯಿಂದ ಅಣ್ವಸ್ತ್ರಗಳ ತಯಾರಿಕೆ ನಡೆದಿದೆ. ಕೆಲವು ಕಡೆ ಬಿಳಿಯರ ದೌರ್ಜನ್ಯ ನಡೆದಿದೆ. ಆರ್ಥಿಕ ಪರದಾಟ ನಡೆದಿದೆ. ಇನ್ನೂ ಕೆಲವು ಕಡೆ ವಿಷಮತೆ, ಪಾರತಂತ್ರ್ಯ, ದ್ವೇಷದ ಗಾಳಿ ಬೀಸುತ್ತಿದೆ. ಆದರೊಂದಿಗೆ ಸಮತೆ, ಸ್ವಾತಂತ್ರ್ಯ, ಬಂಧು ಭಾವದಂಥ ಮಧುರವಾದ ಭಾಷೆ ಆಡಲಾಗುತ್ತಿದೆ. ಒಂದು ಕಡೆ ಪ್ರಗತಿಯ ದುಂದುಂಭಿ ಚಂದ್ರನವರೆಗೆ ಕೇಳಿಬಂದರೆ ಇನ್ನೊಂದೆಡೆ ವಸುಂಧರೆ ಯನ್ನು ಹಾಳುಗೆಡವಿ ತುಂಡರಿಸುವ ಕಾರ್ಯ ನಡೆದಿದೆ. ದೃಶ್ಯ, ಶ್ರವ್ಯ, ಖಾದ್ಯ ಪದಾರ್ಥಗಳ ಹೇರಳ ಆವಿಷ್ಕಾರ ನಡೆದಿದೆ. ಭೋಗವಸ್ತುಗಳ ಪರ್ವತಗಳು ಎದ್ದುನಿಂತಿವೆ. ಇಷ್ಟೆಲ್ಲ ಸೌಕರ್ಯಗಳಿದ್ದಾಗ್ಯೂ ಜನರು ವಿಕೃತಮನಸ್ಕರಾಗುತ್ತಿದ್ದಾರೆ. ಸ್ವೇಚ್ಛಾವೃತ್ತಿ ಹೆಚ್ಚಿದೆ, ಆತ್ಮಹತ್ಯೆ ಗಳು ಹೆಚ್ಚುತ್ತಿವೆ. ಅತೃಪ್ತ ಹಾಗೂ ಅಸಂತುಷ್ಟ ಜನರ ಪ್ರಮಾಣ ಹೆಚ್ಚುತ್ತಿದೆ. ಅವರ ಉನ್ಮತ್ತ ಲೀಲೆಗಳಿಗೆ ರಾಜಮಾನ್ಯತೆ, ಜನಮಾನ್ಯತೆ ದೊರೆಯುತ್ತಿದೆ. ಶಾಂತಿಯೇನೋ ಎಲ್ಲರೂ ಬಯಸುತ್ತಾರೆ. ಆದರೆ ಅದರ ಛಾಯೆ ಕೂಡಾ ಎಲ್ಲಿಯೂ ಕಾಣುತ್ತಿಲ್ಲ.

ಈಗ ಸದ್ಯಕ್ಕಂತೂ ನಾವು ಅದೇ ದಾರಿಯಲ್ಲಿ ಸಾಗುತ್ತಿದ್ದೇವೆ. ಪ್ರಾಚೀನವಾದ ನಮ್ಮ ಈ ಧರ್ಮಭೂಮಿಯಲ್ಲಿ ಧರ್ಮದ ಉಪೇಕ್ಷೆ ನಡೆದಿದೆ. ಅಧರ್ಮಕ್ಕೆ ಉತ್ತೇಜನ ಸಿಗುತ್ತಿದೆ. ಕಾರುಗಳು, ಬಂಗಲೆಗಳು, ಲೆಕ್ಕವಿಲ್ಲದೆ ಧನ ಸಂಪತ್ತು ಗಳಿಸಲು ಧಾವಿಸುತ್ತಿದ್ದಾರೆ. ಪ್ರಾಣವನ್ನೂ ಲೆಕ್ಕಿಸದೇ ಅದಕ್ಕಾಗಿ ಬಳಲುತ್ತಿದ್ದಾರೆ. ಯಾಕೆ ಮತ್ತು ಯಾರಿಗಾಗಿ ಈ

ಧಿಮಂತ ಎನ್ನುವುದು ಮಾತ್ರ ಯಾರಿಗೂ ತಿಳಿದಿಲ್ಲ. ಎಲ್ಲರೂ ದಾಹದಿಂದ ಬಳಲುತ್ತಿದ್ದಾರೆ. ಎಷ್ಟು ನೀರು ಕುಡಿದರೂ ಅವರ ದಾಹ ಶಮನ ವಾಗುತ್ತಿಲ್ಲ. ಉಪಾಯಗಳೆಲ್ಲ ಅಪಾಯಗಳೆಂದು ಸಿದ್ಧವಾಗುತ್ತಿವೆ. ಅಫೀಮು, ಗಾಂಜಾ, ಚರಸ್, ತಂಬಾಕು ಮೊದಲಾದ ವ್ಯಸನಗಳಿಗೆ ಕೆಲವರು ಬಲಿ ಬಿದ್ದರೆ, ಇನ್ನು ಕೆಲವರು ಅಸಭ್ಯ ಜೀವನ, ಅಶ್ಲೀಲ ಸಾಹಿತ್ಯದ ಆಶ್ರಯ ಪಡೆದಿದ್ದಾರೆ. ಕುಡಿತ, ಜೂಜು, ಸಟ್ಟಾ, ಲಾಟರಿ ಹೀಗೆ ಏನೇನೋ ದಾರಿಗಳನ್ನು ಹುಡುಕುತ್ತಿದ್ದಾರೆ. ಆದರೆ ಅಶಾಂತಿ ಮಾತ್ರ ಹೆಚ್ಚುತ್ತಲೇ ಇದೆ.

ಒಮ್ಮೆ ಒಂದು ಮನೆಗೆ ಬೆಂಕಿ ಹತ್ತಿಕೊಂಡಿತು. ಜನರು ಕೂಡಲೇ ಬೆಂಕಿಯನ್ನು ನಂದಿಸುವ ಪ್ರಯತ್ನದಲ್ಲಿ ತೊಡಗಿದರು. ಕೆಲವರು ಅಗ್ನಿಶಾಮಕ ದಳದವರನ್ನು ಕರೆಸಿದರು. ಹತ್ತಿರದ ಒಂದು ಹಳೆಯ ಬಾವಿಗೆ ಪೈಪು ಹಾಕಿ ನೀರನ್ನು ಎತ್ತಲು ಪ್ರಾರಂಭಿಸಿದರು. ಆದರೆ ಅಲ್ಲಿಂದ ನೀರಿನ ಬದಲಾಗಿ ಆ ಪೈಪಿನ ಮೂಲಕ ಎಣ್ಣೆ ಬರತೊಡಗಿತು. ಅಗ್ನಿಯು ಇನ್ನಷ್ಟು ಭೀಕರವಾಗಿ ದಹಿಸತೊಡಗಿತು. ಬೆಂಕಿಯನ್ನು ನಂದಿಸಲು ಬಂದವರೊಂದಿಗೆ ನಗರವೂ ಭಸ್ಮವಾಯಿತು. ಶಾಂತಿ ಸ್ಥಾಪಿತವಾಗ ಬೇಕೆನ್ನುವ ಉದ್ದೇಶದಿಂದ ಮಾಡಿದ ಪ್ರಯತ್ನಗಳೂ ಹೀಗೆಯೇ ತಿರುಗಿ ಬೀಳುತ್ತಿವೆ.

೨

ಹೀಗೆಯೇ ಜಗತ್ತು ಮುಂದುವರಿದರೆ, ಶಾಂತಿಸ್ಥಾಪನೆ ಆದರೂ ಆಗಬಹುದು. ಆದರೆ ಅದು ಸ್ಮಶಾನಶಾಂತಿ ಆಗುತ್ತದೆ. ಅನೇಕ ವೇಳೆ ಶವಯಾತ್ರೆ ಮುಗಿಸಿ ಬಂದವರು ಮೌನರಾಗಿರುತ್ತಾರೆ. ಕೆಲವರು ದುಃಖದಿಂದ, ಕೆಲವರು ಮೃತ್ಯುವಿನ ಸಮೀಪದರ್ಶನದಿಂದ ಮೂಕರಾಗಿರು ತ್ತಾರೆ. ಅದು ಭಯಾನಕವಾದ ಶಾಂತತೆ. ಊರಿನಲ್ಲಿ ಅಕಸ್ಮಾತ್ ದರೋಡೆ ಕೋರರು ಹೊಕ್ಕರೆ ಜನರು ಗಾಬರಿಯಿಂದ ಕಿಟಕಿ ಬಾಗಿಲುಗಳನ್ನು ಮುಚ್ಚಿಕೊಂಡಿರುತ್ತಾರೆ. ಇದು ಹೆದರಿಕೆಯಿಂದ ನಿರ್ಮಾಣವಾದ ಶಾಂತಿ. ಎರಡು ಬಣಗಳು ಪರಸ್ಪರ ದ್ವೇಷದಿಂದ ಸಂಚಿನಲ್ಲಿ ತೊಡಗಿರುತ್ತಾರೆ.

ಮೌನದಿಂದ ಆಗ ಉಂಟಾದ ಶಾಂತಿಯು ಬಿರುಗಾಳಿಯ ಮುಂಚಿನ ಸೂಚನೆಯಾಗಿರುತ್ತದೆ. ಈ ಶಾಂತಿಯು ದ್ವೇಷ, ಮತ್ಸರ, ಹಿಂಸಾವೃತ್ತಿಯಿಂದ ಕೂಡಿರುತ್ತದೆ. ಇದು ನಿಜವಾದ ಶಾಂತಿಯಲ್ಲ. ಅತಿರೇಕದಿಂದ ಕೂಡಿದ ಶಾಂತಿಯಾಗಿದೆ. ಜಲಾಭಾಸದಿಂದ ಓಡುವ ಮೃಗದಂತೆ, ವರ್ಣರಂಜಿತ ಜಗತ್ತಿನ ಗಂಧರ್ವನಗರದ ಸೆಳೆತಕ್ಕೆ ಒಳಗಾಗಿದ್ದಾರೆ. ಆದರೆ ಜನರು ಅದನ್ನೆ ಶಾಂತಿಯೆಂದು ಭ್ರಮಿಸಿ ಬೆನ್ನಟ್ಟುತ್ತಿದ್ದಾರೆ.

೩

ವಾಸ್ತವದಲ್ಲಿ ಇಂದು ಎಲ್ಲೆಲ್ಲೂ ಅಶಾಂತಿಯೇ ಇದೆ. ಸಾಂಸಾರಿಕ ಜೀವನದಲ್ಲಿ, ಸಾಮಾಜಿಕ ಜೀವನದಲ್ಲಿ, ರಾಜಕೀಯ ಜೀವನದಲ್ಲಿ, ರಾಷ್ಟ್ರ ಜೀವನದಲ್ಲಿ ಇಂದು ಎಲ್ಲಿಯೋ ಸಾಕಷ್ಟು ತಪ್ಪಿದ್ದೇವೆ. ಆದ್ದರಿಂದ ಪರಿಸರವೆಲ್ಲ ಅಶಾಂತವಾಗಿದೆ.

ಮನೆ ಮನೆಯಂತೆ ಉಳಿದಿಲ್ಲ. ಮನೆಯಲ್ಲಿ ಜನರೇ ಇಲ್ಲ. ಇದ್ದರೂ ಅವರಲ್ಲಿ ಹೊಂದಾಣಿಕೆ ಇಲ್ಲ. ತಂದೆ-ಮಗ, ಅಣ್ಣ-ತಮ್ಮ, ಅಕ್ಕ-ತಂಗಿ, ಅತ್ತೆ-ಸೊಸೆ ಎಲ್ಲರೂ ಕಲಹಪ್ರಿಯರಾಗಿದ್ದಾರೆ. ಎಲ್ಲರೂ ಸ್ವತಂತ್ರರಾಗಲು, ಪ್ರತ್ಯೇಕವಾಗಿರಲು ಬಯಸುತ್ತಾರೆ. ಮೊದಲಿಗೆ ನಮ್ಮಲ್ಲಿ ಅವಿಭಕ್ತ ಕುಟುಂಬಗಳಿರುತ್ತಿದ್ದವು. ಒಂದೇ ಸಲಕ್ಕೆ ಐವತ್ತು ಅರವತ್ತು ಜನರು ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದರು. ಆ ಕಾಲದಲ್ಲಿ ದೂರದ ನೆಂಟನೂ ಹತ್ತಿರದ ಸಂಬಂಧಿಯೇ ಆಗಿರುತ್ತಿದ್ದ. ಆದರೆ ಇಂದು ಅಣ್ಣ, ತಮ್ಮನ ಮನೆಗೆ ಅತಿಥಿಯಂತೆ ಹೋಗುತ್ತಾನೆ. ಮನೆ ಎಂದರೆ ಇಂದು ಗುಬ್ಬಚ್ಚಿಯ ಗೂಡುಗಳಾಗಿವೆ. ನಮ್ಮಲ್ಲಿ ಹಿಂದೆ ಕುಟುಂಬಗಳು ಗೃಹಸಂಸ್ಥೆಗಳಾಗಿದ್ದವು. ನಿಜವಾದ ಅರ್ಥದಲ್ಲಿ ಸಹಕಾರಿ ಸಂಸ್ಥೆಗಳಾಗಿದ್ದವು. ಅದನ್ನು ಹಾಳುಗೆಡವಿ ಇಂದು ನಕಲಿ ಸಹಕಾರಿ ಸಂಸ್ಥೆಗಳನ್ನು ನಡೆಸುತ್ತಿದ್ದೇವೆ.

ನಾಲ್ಕು ಜನರ ಪುಟ್ಟ ಸಂಸಾರದಲ್ಲೂ ಸದಾ ಪರದಾಟ ಇರುತ್ತದೆ. ಪತಿ ಹೊರಗಡೆ ಸಹಕಾರಿ ಸಂಸ್ಥೆಗಳನ್ನು ನಡೆಸುತ್ತಾನೆ. ಪತ್ನಿ ಯಾವುದೋ ಮಹಿಳಾ ಕಲ್ಯಾಣ ಕೇಂದ್ರ ಅಥವಾ ಯಾವುದಾದರೂ

7063

ಸಂಸ್ಥೆಯ ಕಾರ್ಯಕರ್ತೆಯಾಗಿರುತ್ತಾಳೆ. ಆದರೆ ಅವರ ಮನೆಯಲ್ಲಿ ಮಾತ್ರ ವಿರೋಧ, ಅಸಹಕಾರ ಕಂಡುಬರುತ್ತದೆ. ಇಬ್ಬರೂ ಹೊರಗಿನಿಂದ ದಣಿದು ಮನೆಗೆ ಬರುತ್ತಾರೆ. ಇಬ್ಬರೂ ಮಾನಸಿಕ ಒತ್ತಡಕ್ಕೆ ಗುರಿಯಾಗಿರುತ್ತಾರೆ. ಮಕ್ಕಳು ಮುದ್ದಿನಿಂದ, ಹಿರಿಯರ ರಕ್ಷಣೆಯಿಲ್ಲದೇ ದಾರಿ ತಪ್ಪುತ್ತಿದ್ದಾರೆ. ಮನೆಯಲ್ಲಿನ ವೃದ್ಧರು ಅಪಮಾನಿತ, ಉಪೇಕ್ಷಿತ, ಉಪಹಾಸದ ಬಾಳು ಬಾಳುತ್ತಿದ್ದಾರೆ. ವೃದ್ಧರ ಬಗ್ಗೆ ಗೌರವವಿಲ್ಲದ ಮನೆ, ಹಿರಿಯರಿಗೆ ಮಕ್ಕಳ ಬಗ್ಗೆ ಆತ್ಮೀಯತೆ ಇಲ್ಲದ ಮನೆ ಛತ್ರವಿದ್ದಂತೆ. ಯಾವ ಮನೆಯಲ್ಲಿ ಪೂಜೆಯಿಲ್ಲ, ವ್ರತನಿಯಮಗಳಿಲ್ಲ, ಸಂಧ್ಯಾದೀಪವಿಲ್ಲ, ಪೌರಾಣಿಕ, ಐತಿಹಾಸಿಕ ಕಥೆಗಳಿಲ್ಲ, ಧಾರ್ಮಿಕ ಉತ್ಸವ, ಹಬ್ಬ ಹರಿದಿನಗಳಿಲ್ಲ ಆ ಮನೆ ಖಾನಾವಳಿ ಅಥವಾ ಹೋಟೆಲು ಇದ್ದಂತೆ. ಅಲ್ಲಿ ಮಮತೆ, ಶಾಂತಿ ನೆಲೆಸುವುದಿಲ್ಲ.

ನಾವು ಸರಕಾರಿ ಇಲ್ಲವೇ ಖಾಸಗಿ ಕಾರ್ಯಾಲಯಗಳಿಗೆ ಹೋದರೆ ಅದೊಂದು ಯುದ್ಧ ಕಣದಂತೆ ಕಾಣುತ್ತದೆ. ಮೇಲು ಕೀಳು ಭಾವನೆಯಿಂದ ಗುಂಪುಗಳು, ಸಂಚುಗಳು, ಬೆದರಿಕೆ, ದಬ್ಬಾಳಿಕೆ ಇರುತ್ತದೆ. ಕೆಲಸದ ಕಡೆ ಯಾರ ಗಮನವೂ ಇರುವುದಿಲ್ಲ. ಅವರ ಗಮನವೆಲ್ಲ ಒಂದನೇ ತಾರೀಖಿನ ವೇತನದೆಡೆಗೆ ಇರುತ್ತದೆ. ಕೆಲಸದ ಹಾನಿ ದೇಶದ ಹಾನಿ ಎಂಬ ಪ್ರಜ್ಞೆ ಇರುವುದಿಲ್ಲ. ಕಾರ್ಯಾಲಯ ಎಂದರೆ ಇಂದು ಕಾರ್ಯದ 'ಲಯ'ಗಳಾಗಿವೆ. ಇದರ ಪರಿಣಾಮವಾಗಿ ಇವು ಅಶಾಂತಿಯ ಆಲಯಗಳಾಗಿವೆ.

ವ್ಯಾಪಾರ ಕ್ಷೇತ್ರಗಳಲ್ಲಿ, ಸಣ್ಣ ದೊಡ್ಡ ಎಲ್ಲ ವ್ಯಾಪಾರಿಗಳು ಅಸಂತುಷ್ಟರಿದ್ದಾರೆ. ಲಕ್ಷಗಟ್ಟಲೆ ಬಂಡವಾಳ ಹಾಕಿರುತ್ತಾರೆ. ತೆರಿಗೆಯ ಮೊತ್ತ ಏರುತ್ತಿದೆ. ಬೆಲೆಗಳು ಹೆಚ್ಚುತ್ತಿವೆ. ಆದರಿಂದ ಕಲಬೆರಕೆ, ಮೋಸ ಹೆಚ್ಚುತ್ತಾ ಇವೆ.

ವಿದ್ಯಾಲಯಗಳೆಂದರೆ ಶಾರದೆಯ ಮಂದಿರಗಳೆಂದು ತಿಳಿಯಬೇಕು. ಆದರೆ ಅವು ಕೂಡಾ ಭ್ರಷ್ಟಾಚಾರದ ಆಗರಗಳಾಗಿವೆ. ಶಿಕ್ಷಣ ನಿರುಪಯುಕ್ತ, ಶಿಕ್ಷಕ ಬಾಡಿಗೆಯವ, ವಿದ್ಯಾರ್ಥಿ ಶ್ರದ್ಧಾಹೀನ. ಅನೇಕ ವಿದ್ಯಾಲಯಗಳ ಸ್ಥಾಪನೆಯ ಉದ್ದೇಶ ವಿದ್ಯಾದಾನವಾಗಿರದೆ ಬೇರೇನೋ ಆಗಿರುತ್ತದೆ. ಪರಿಣಾಮ ವಿದ್ಯಾರ್ಥಿಗಳ ಯೋಗ್ಯವಿಕಾಸವಾಗುವುದಿಲ್ಲ. ಅವರ ಪ್ರತಿಭೆಯ

ಬೆಳವಣಿಗೆಯಾಗುವುದಿಲ್ಲ. ದುರ್ಗುಣಗಳಿಗೆ ತಡೆ ಒಡ್ಡುವವರಿಲ್ಲ. ಅದರಿಂದ ಅವರಲ್ಲಿ ಗುಪ್ತವಾಗಿದ್ದ ಅಮೋಘ ಶಕ್ತಿಯು ನಷ್ಟವಾಗುತ್ತಿದೆ. ಕ್ರಮೇಣ ಅವರು ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಅವರ ಮನಸ್ಸಿನಲ್ಲಿ ವೈಫಲ್ಯದ ವಿಕೃತಿ ಹುಟ್ಟುತ್ತದೆ. ಈ ಎಲ್ಲ ಮಾತಿನಿಂದ ಕ್ಷೋಭೆಗೊಂಡ ವಿದ್ಯಾರ್ಥಿ ಅಶಾಂತನಾಗಿದ್ದಾನೆ.

ಅಧಿಕಾಂಶ ಶಿಕ್ಷಕರು ತಮ್ಮ ವೃತ್ತಿಯನ್ನು ಕ್ಷುದ್ರವೆಂದು ತಿಳಿಯುತ್ತಾರೆ ; ಅನಿವಾರ್ಯತೆಯಿಂದ ಸ್ವೀಕರಿಸಿದ ಉದ್ಯೋಗ ಎಂದು ಭಾವಿಸುತ್ತಾರೆ. ಶಿಕ್ಷಕರ ಆರ್ಥಿಕ, ಬೌದ್ಧಿಕ, ಮಾನಸಿಕ, ಸಾಮಾಜಿಕ ತೊಳಲಾಟ ಪರಾಕಾಷ್ಠೆಗೆ ತಲಪಿದೆ.

ಮಾಲೀಕ-ಕಾರ್ಮಿಕ ಸಂಘರ್ಷಗಳಿಲ್ಲದೆ ಯಾವುದೇ ಕಾರ್ಖಾನೆ ಕಂಡು ಬರುವುದಿಲ್ಲ. ನಿಜ ಹೇಳುವುದಾದರೆ ಮಾಲೀಕನಿಲ್ಲದೆ ಕಾರ್ಮಿಕನಿಲ್ಲ, ಕಾರ್ಮಿಕನಿಲ್ಲದೆ ಮಾಲೀಕನಿಲ್ಲ. ಇಬ್ಬರ ಶಕ್ತಿಗಳೂ ಪೂರಕವಾಗಿ ಕೆಲಸ ಮಾಡಿದಾಗ ದೇಶದ ಪ್ರಗತಿಯು ಸಾಧ್ಯವಾಗುತ್ತದೆ. ಆದರೆ ಇಬ್ಬರೂ ಆಜನ್ಮ ವೈರಿಗಳಂತೆ ನಡೆದುಕೊಳ್ಳುತ್ತಾರೆ. ಇಬ್ಬರೂ ತಮ್ಮ ತಮ್ಮ ಹಕ್ಕುಗಳಿಗಾಗಿ ಬಡಿದಾಡುತ್ತಾರೆ. ಸುಳ್ಳು, ವಂಚನೆ ಮಾಡುತ್ತಾರೆ. ಇಬ್ಬರ ದಲ್ಲಾಳಿಗಳೂ ಹಣ ಸೆಳೆಯುತ್ತಾರೆ. ಸುಳ್ಳು ಸಂಘಟನೆಗಳು, ಅದರ ಹೆಸರಿನಲ್ಲಿ ಸಂಪು, ಸತ್ಯಾಗ್ರಹ ನಡೆಯುತ್ತವೆ. ಗೋಲಿಬಾರ್, ಲಾಠಿಚಾರ್ಜ್, ದೊಂಬಿ, ಜಗಳ, ಬೆಂಕಿ, ಲೂಟಿ ಏನೇನೊ ಅನಾಹುತಗಳು ನಡೆಯುತ್ತವೆ. ಇಂದು ಮಾಲೀಕನ ಜೀವನವಿರಲಿ, ಕೂಲಿಗಾರನ ಜೀವನವಿರಲಿ ಅಶಾಂತಿಯಿಂದ ಕೂಡಿವೆ. ಅಸ್ವಸ್ಥ ಮತ್ತು ಅಸ್ಥಿರವಾಗಿವೆ. ಬಟ್ಟೆ, ಪಾತ್ರೆ, ಔಷಧಿ, ಯಾವುದೇ ಕಾರ್ಖಾನೆಗಳನ್ನು ನೋಡಿದರೂ ಅವೆಲ್ಲ ಅಶಾಂತಿಯ ಕಾರ್ಖಾನೆಗಳಾಗಿವೆ. 'ಕೂಲಿಗಾರನ ರಾಜ್ಯ'ದಲ್ಲಿನ ಕಾರ್ಖಾನೆಗಳು ಇದರಿಂದ ಹೊರತಾಗಿಲ್ಲ.

ಸಂಪೂರ್ಣ ಸಾಮಾಜಿಕ ಜೀವನವೇ ತೀವ್ರ ಅಪಾಯಕ್ಕೊಳಗಾಗಿದೆ. ಸಂಸ್ಕಾರಕೇಂದ್ರಗಳು ನಷ್ಟಗೊಂಡಿವೆ. ಆಶ್ರಮವ್ಯವಸ್ಥೆ ಲೋಪವಾಗಿದೆ. ವರ್ಣವ್ಯವಸ್ಥೆ ವಿಕೃತಗೊಂಡು ವರ್ಣಭೇದರೂಪವಾಗಿದೆ. ದೇವಾಲಯಗಳು ಅಂಗಡಿಗಳಾಗಿವೆ. ಸಾಮಾಜಿಕ ತತ್ವಗಳೆಂದರೆ ಕೇವಲ ಸಿಹಿ ತಿನ್ನುವ

ಹಬ್ಬಗಳಾಗಿವೆ. ಸಮಾಜದ ವ್ಯಕ್ತಿಗೆ ಸಾಮಾಜಿಕ ಆಧಾರ ಉಳಿದಿಲ್ಲ. ಭೇದಭಾವನೆ ಎಲ್ಲರನ್ನೂ ಮುತ್ತಿಕೊಂಡಿದೆ. ದ್ವೇಷದ ಕಿಡಿಗಳು ಹರಡಿವೆ. ಸಾಮಾಜಿಕ ಜೀವನದಲ್ಲಿ ಸಂಶಯ, ಅವ್ಯವಸ್ಥೆ, ಅಶಾಂತಿ ನೆಲೆಸಿವೆ.

ಇಂದಿನ ರಾಜಕಾರಣವು ಅಶಾಂತಿ ಮತ್ತು ಅಸಂತೋಷದಿಂದ ತುಂಬಿದೆ. ಎಲ್ಲಿ ಅಶಾಂತಿಯಿದೆಯೋ ಅಲ್ಲಿ ಅದನ್ನು ಕಾಯ್ದುಕೊಂಡು ಹೋಗುವುದು, ಇಲ್ಲದಿರುವೆಡೆ ಅದನ್ನು ಹುಟ್ಟುಹಾಕುವುದು ಮತ್ತು ಅದರಿಂದ ತಮ್ಮ ಹಾಗೂ ಪಕ್ಷದ ಹಿತದೃಷ್ಟಿಯಿಂದ ಉಪಯೋಗಿಸುವುದು, ಇದೇ ಇಂದಿನ ರಾಜಕೀಯ ಜೀವನವಾಗಿದೆ.

ಊರಲ್ಲಿ ಯಾರೂ ಸಾಯದಿದ್ದರೆ ಸ್ಮಶಾನದ ಕಾವಲುಗಾರನಿಗೆ ದುಃಖವಾಗುವಂತೆ, ಶಾಂತಿಸ್ಥಾಪನೆಯಿಂದ ಇಂಥ ಸ್ವಾರ್ಥಸಾಧಕರಿಗೆ ದುಃಖವಾಗುತ್ತದೆ. ಕಾರಣ ಬೇರೆಯವರ ದುಃಖ ಮತ್ತು ಅಶಾಂತಿಯೇ ಅವರ ಬಂಡವಾಳವಾಗಿದೆ.

೪

ಜಗತ್ತಿನಲ್ಲಿ ಎಲ್ಲ ದೇಶಗಳಲ್ಲಿ ಅಶಾಂತಿಯ ಬಿಸಿಗಾಳಿ ಬೀಸುತ್ತಿದೆ. ಎಲ್ಲೆಲ್ಲೂ ಅಣು, ಪರಮಾಣು ಅಸ್ತ್ರಗಳ ಪ್ರಯೋಗ ನಡೆದಿದೆ. ಇಷ್ಟರಿಂದಲೇ ಅವರಿಗೆ ಸಮಾಧಾನವಿಲ್ಲ. ಇದಕ್ಕಿಂತಲೂ ವಿಧ್ವಂಸಕ ಶಕ್ತಿಯ ನಿರಂತರ ಸಂಶೋಧನೆ ನಡೆದಿದೆ. ಜಾಗತಿಕ ಯುದ್ಧದ ಜ್ವಾಲೆ ಭುಗಿಲೆದ್ದರೆ ಪರಸ್ಪರ ಪ್ರಯೋಗಿಸುವ ಮಾರಕಾಸ್ತ್ರಗಳಿಂದ ಸಂಪೂರ್ಣ ಪ್ರಪಂಚವೇ ಸುಟ್ಟು ಬೂದಿಯಾದೀತು. ಈವರೆಗೆ ಮನುಷ್ಯ ಸಂಪಾದಿಸಿದ ಜ್ಞಾನ-ವಿಜ್ಞಾನಗಳೆಲ್ಲಾ ನಾಶಗೊಂಡು ಪುನಃ ಶಿಲಾಯುಗದ ಪೂರ್ವ ಕಾಲಕ್ಕೆ ಹೋಗಬೇಕಾಗುತ್ತದೆ ಎಂಬ ಭಯ ಇಂದಿನ ಅನೇಕ ವಿಚಾರ ವಂತರನ್ನು ಕಾಡುತ್ತಿದೆ. ಸುಧಾರಣೆ, ಸೌಕರ್ಯ, ಪ್ರಗತಿ ಇವೆಲ್ಲ ಜೀವನಾನುಕೂಲಕ್ಕಾಗಿ ಆಗಿವೆಯೇ ಹೊರತು, ಮನುಷ್ಯ ಒಳಗಿನಿಂದ ಅಂದಿನ ವನ್ಯಜೀವಿಯಂತೆಯೇ ಉಳಿದಿದ್ದಾನೆ. ಪಾಶ್ಚಿಮಾತ್ಯರ ಪ್ರಗತಿಯ ಡಿಂಡಿಮವನ್ನು ಬಾರಿಸಲಾಗುತ್ತದೆ. ಆದರೆ ಅವರೊಂದಿಗೆ ಅಲ್ಲಿ ಮನೋವಿಕಾರಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಹಿಪ್ಪಿಗಳು, ಬೀಟಲ್ಸ್

ಇತ್ಯಾದಿ ವಿಕೃತ ಜನಾಂಗವೇ ರೂಪುಗೊಳ್ಳುತ್ತಿದೆ ಮತ್ತು ಭರದಿಂದ ಬೆಳೆಯುತ್ತಿದೆ. ನಾನಾ ಬಗೆಯ ಅನೈತಿಕ ವರ್ತನೆ ಮಾನ್ಯತೆ ಪಡೆಯುತ್ತಿದೆ. ಈ ಪಾಶ್ಚಿಮಾತ್ಯರ ಪ್ರಗತಿಮಾರ್ಗವು ಅಪಾಯದೆಡೆಗೆ ತಳ್ಳುವಂಥದು, ಎಂದು ಅಲ್ಲಿನ ಚಿಂತನಶೀಲರು ಅಭಿಪ್ರಾಯ ಪಡುತ್ತಿದ್ದಾರೆ. ಅವರಲ್ಲಿ ಅನೇಕರು ಭಾರತದತ್ತ ಭವಿಷ್ಯದ ಆಶಾಭಾವನೆಯಿಂದ ನೋಡುತ್ತಿದ್ದಾರೆ.

ನಮ್ಮ ಈ ಹಿಂದೂಸ್ಥಾನದಲ್ಲಿ ನಾವು ಸಾವಿರಾರು ವರ್ಷ ಶಾಂತಿಯಿಂದ ಬಾಳಿದೆವು. ಅಷ್ಟೇ ಅಲ್ಲ, ಶಾಸ್ತ್ರಗಳನ್ನೂ ಬರೆದೆವು. ಆದರೆ ದೀಪದ ಕೆಳಗೆ ಕತ್ತಲೆಯಿರುವಂತೆ ಭಾರತದ ಇಂದಿನ ಸ್ಥಿತಿಯಾಗಿದೆ. ಮೃಗಜಲದಂತೆ ಭ್ರಮೆಯಿಂದ ಪಾಶ್ಚಿಮಾತ್ಯರ ಬೆನ್ನು ಹತ್ತಿದ್ದೇವೆ. ತಲೆ ಕೊಟ್ಟು ಟೋಪಿ ಖರೀದಿಸಿದಂತೆ, ನಮ್ಮ ಆಧ್ಯಾತ್ಮಿಕ, ನೈತಿಕ ಮಟ್ಟವನ್ನು ಕಳೆದುಕೊಂಡು ಲೌಕಿಕ ಸುಖದ ಬೆನ್ನು ಹತ್ತಿದ್ದೇವೆ. ಔಷಧಿಯಿಲ್ಲದೇ ರೋಗ ವಾಸಿಯಾಗಬೇಕು, ಎಣ್ಣೆಯಿಂದ ಅಗ್ನಿಯನ್ನು ನಂದಿಸಬೇಕು ಎನ್ನುವ ಹಾಸ್ಯಾಸ್ಪದ ವಿಚಾರಗಳಂತೆ, ಶರೀರ ಸುಖದಿಂದ ಶಾಂತಿ ಪಡೆಯಬೇಕೆಂದು ಬಯಸುತ್ತೇವೆ. ಆತ್ಮವನ್ನು ಮಾರಿ ದೇಹವನ್ನು ಶೃಂಗರಿಸುತ್ತಿದ್ದೇವೆ. ಪರಿಣಾಮವಾಗಿ ಅಶಾಂತಿಯನ್ನು ಸಮಾಜದ ಎಲ್ಲ ರಂಗದಲ್ಲಿ ಹರಡುತ್ತಿದ್ದೇವೆ.

೫

ವೈಯಕ್ತಿಕ, ಸಾಮಾಜಿಕ ಹಾಗೂ ರಾಷ್ಟ್ರೀಯ ಜೀವನದಲ್ಲಿ ನಮಗೆ ಶಾಂತಿಯನ್ನು ಪ್ರಸ್ಥಾಪಿತಗೊಳಿಸುವುದಿದ್ದರೆ, ನಾವು ಭಾರತೀಯ ತತ್ವಜ್ಞಾನವನ್ನು ಅಂಗೀಕರಿಸಬೇಕಾಗುತ್ತದೆ. ಭಾರತೀಯ ತತ್ವಜ್ಞಾನ ಎಂದರೆ ಅದನ್ನು ಓದುವುದು, ಬರೆಯುವುದು, ಉಪನ್ಯಾಸ ಭಾಷಣ ಮಾಡುವುದು ಎಂದಲ್ಲ. ಅಥವಾ ಅದರ ಹೆಸರಿನಲ್ಲಿ ಸಂಘ ಸಂಸ್ಥೆಗಳನ್ನು, ಪಕ್ಷಗಳನ್ನು ರಚಿಸುವುದಲ್ಲ. ಭಾರತೀಯ ತತ್ವಜ್ಞಾನದ ನಿಜವಾದ ಅಂಗೀಕಾರವೆಂದರೆ ಅದನ್ನು ಜೀವನದಲ್ಲಿ ಅನುಸರಿಸುವುದು. ಆ ದಿಸೆಯಲ್ಲಿ ಹೆಜ್ಜೆ ಹಾಕತೊಡಗಿದರೂ ಜೀವನದಲ್ಲಿ ಶಾಂತಿಯ ಸುಗಂಧ ಸೂಸತೊಡಗುವುದು.

ಚಿತ್ತಶಾಂತಿಗಾಗಿ ನಮ್ಮ ಪ್ರಾಚೀನ ಗ್ರಂಥಗಳಲ್ಲಿ ವಿವಿಧ ಉಪಾಯ ಗಳನ್ನು ಹೇಳಿದೆ. ಅವುಗಳು ಹೀಗಿವೆ:

(೧) ಜೀವನದಲ್ಲಿ ಯಾವುದಾದರೊಂದು ಉಚ್ಚಧ್ಯೇಯ ಇರಿಸಿ ಕೊಳ್ಳಬೇಕು. ಪರೋಪಕಾರದಿಂದ ಹಿಡಿದು ಪರಮಾತ್ಮನ ಪ್ರಾಪ್ತಿಯವರೆಗೆ ಯಾವುದೋ ಒಂದು ಧ್ಯೇಯಕ್ಕಾಗಿ ತನ್ನನ್ನು ಅರ್ಪಿಸಿಕೊಳ್ಳುವುದು. ಧ್ಯೇಯವು ಉಚ್ಚವಿದ್ದಷ್ಟೂ ಅದರಿಂದ ಲಭಿಸುವ ಶಾಂತಿಯು ಅಷ್ಟೇ ಉನ್ನತವಾಗಿರುತ್ತದೆ. ಕೆಲಸದ ಶ್ರೇಷ್ಠತೆಗಿಂತ ಮನಸ್ಸಿನ ಹಿರಿಮೆ ಮಹತ್ತರ ವಾದದ್ದು. ಸಂನ್ಯಾಸಿಯೊಬ್ಬನನ್ನು ಮಹಿಳೆಯೊಬ್ಬಳು ಕೇಳಿದಳು: "ನನಗೆ ಪರಮಾತ್ಮನ ದರ್ಶನವಾಗಬಹುದೇ? ನಾನು ನನ್ನ ಮಗನನ್ನು ಬಹಳ ಪ್ರೀತಿಸುತ್ತೇನೆ." ಆಗ ಆ ಸಂನ್ಯಾಸಿ ಹೇಳಿದ– "ನೀನು ನಿನ್ನ ಮಗನನ್ನೇ ಪರಮೇಶ್ವರನೆಂದು ತಿಳಿದು ಪ್ರೀತಿಸು. ಆಗ ನಿನ್ನ ಆಸೆ ನೆರವೇರುವುದು." ಪಿತಾ, ಪುತ್ರ, ಚಿತ್ರ, ಮಂತ್ರ, ಮೂರ್ತಿ ಹೀಗೆ ಅನೇಕ ಸಾಧನಗಳಿವೆ. ಮನಸ್ಸಿನ ಹಂಬಲ ಎಲ್ಲಕ್ಕಿಂತ ಮುಖ್ಯ. ಅಂತೆಯೇ ಗುರು ದ್ರೋಣಾಚಾರ್ಯರು ಅರ್ಜುನನಿಗೆ ಯಾವುದನ್ನು ಕೊಡಲಾಗಲಿಲ್ಲವೋ, ಅದನ್ನು ದ್ರೋಣಾಚಾರ್ಯರ ವಿಗ್ರಹ ಏಕಲವ್ಯನಿಗೆ ಕೊಟ್ಟಿತು. ಧ್ಯೇಯನಿಷ್ಠೆಯಲ್ಲಿ ಅಸಾಮಾನ್ಯವಾದದ್ದನ್ನು ಸಾಧಿಸುವ ಸಾಮರ್ಥ್ಯ ಇದೆ. ಇದರಿಂದ ಚಿತ್ತಕ್ಕೆ ಅಪಾರ ಶಾಂತಿ ಲಭಿಸುತ್ತದೆ.

(೨) ತನ್ನ ಧ್ಯೇಯಕ್ಕನುಗುಣವಾದ ಯಾವುದಾದರೂ ಕೆಲಸದಲ್ಲಿ ಮನುಷ್ಯ ನಿರತನಾಗಿರಬೇಕು. ನಾನು ಏನಾದರೂ ಮಾಡುತ್ತಿದ್ದೇನೆ, ಅದರಿಂದ ಯಾರಿಗಾದರೂ ಉಪಕಾರವಾಗುತ್ತದೆ, ನನ್ನ ಜೀವನ ಸಾರ್ಥಕ ವಾಗುತ್ತದೆ ಎನ್ನುವ ಆತ್ಮವಿಶ್ವಾಸ, ಕಾರ್ಯಶೀಲತೆಯಿಂದ ಜಾಗೃತ ವಾಗುತ್ತದೆ. ಅದರಿಂದ ವಿಫಲತೆಗೆ ಅವಕಾಶವಿರುವುದಿಲ್ಲ. ಅಶಾಂತಿಯೂ ಉಳಿಯುವುದಿಲ್ಲ. ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾರ್ಯಕ್ರಮವನ್ನು ಯೋಜಿಸಿ ಮನಸ್ಸನ್ನು ಅದರಲ್ಲಿ ಕೇಂದ್ರೀಕರಿಸಬೇಕು. ಮನಸ್ಸನ್ನು ಸೋಮಾರಿಯಾಗಲಿಕ್ಕೆ ಅವಕಾಶ ಕೊಡಬಾರದು. ಸತತ ಉದ್ಯೋಗದಿಂದ ಚಿತ್ತಶಾಂತಿ ದೊರೆಯುತ್ತದೆ.

(೩) ಚಿತ್ತಶಾಂತಿಯುಳ್ಳವರ ಸಹವಾಸ ಮಾಡಬೇಕು. ಇಂಥವರು ದೈವಯೋಗದಿಂದ ಮತ್ತು ಬಹಳ ಪ್ರಯತ್ನದಿಂದ ಬಹಳ ಕಡಿಮೆ ಸಿಗುತ್ತಾರೆ. ಅಂಥವರು ಸಿಗದಿದ್ದಾಗ, ಅಂಥ ಮಹಾಪುರುಷರ ಗ್ರಂಥಗಳನ್ನು ಓದಬೇಕು. ಆ ಗ್ರಂಥಗಳ ಮನನ-ಚಿಂತನ ಮಾಡಬೇಕು. ರಾಮಾಯಣ, ಭಾರತ, ಭಾಗವತದಂಥ ಗ್ರಂಥಗಳನ್ನೂ; ರಾಮಕೃಷ್ಣ ಪರಮಹಂಸರ, ವಿವೇಕಾನಂದರ ಉಪದೇಶಗಳನ್ನೂ; ದಾಸರ, ಶರಣರ, ವಚನ ಸಾಹಿತ್ಯವನ್ನೂ ಓದುವುದರಿಂದ ಕೂಡಲೆ ಮನಸ್ಸು ಶಾಂತವಾಗುತ್ತದೆ. ಈ ಗ್ರಂಥಗಳನ್ನು ಓದುವುದೆಂದರೆ ಆಯಾ ಮಹಾಪುರುಷರ ಸಾನ್ನಿಧ್ಯ ಪಡೆದಂತೆ ಭಾಸವಾಗುತ್ತದೆ. ಮನಃಪೂರ್ವಕವಾಗಿ ಆ ಗ್ರಂಥಗಳ ಅಧ್ಯಯನ ಮಾಡುವುದರಿಂದ, ಆ ಮಹಾ ಚೇತನಗಳ ದರ್ಶನವಾದಂತೆ ಎನಿಸುತ್ತದೆ. ಕಾರಣ ಅವರ ಸಾಹಿತ್ಯ ಅವರ ಆತ್ಮದ ಪ್ರತೀಕವಾಗಿವೆ. ನೂರಾರು ವರ್ಷಗಳು ಕಳೆದರೂ ಆ ಸಾಹಿತ್ಯ ಇನ್ನೂ ಜೀವಂತವಾಗಿದೆ. ಕಾರಣ ಅದು ಅವರ ಆತ್ಮದ ಶಬ್ದರೂಪವಾಗಿದೆ. ಜ್ಞಾನೇಶ್ವರರು, ಪರಮಹಂಸರು ಇಂದಿಗೂ ಶಾಂತಿರಸವನ್ನು ಹರಿಸುವುದರಲ್ಲಿ ಸಫಲರಾಗಿದ್ದಾರೆ. ಸಂಸಾರದ ಎಲ್ಲ ಕಿರಿಕಿರಿಗಳನ್ನೂ ಮರೆತು ಚಿತ್ತ ಶಾಂತವಾಗುತ್ತದೆ.

(೪) ಧ್ಯಾನ, ಧಾರಣೆ, ಇಲ್ಲವೆ ಯಾವುದೇ ಉಪಾಸನೆ ಮಾಡಬೇಕು. ಅತ್ತಿತ್ತ ಅಲೆಯುವ ಮನಸ್ಸಿಗೆ ಕಡಿವಾಣ ಹಾಕಿ ಚಿತ್ತವನ್ನು ಏಕಾಗ್ರಗೊಳಿಸುವ ಪ್ರಯತ್ನ ಮಾಡಬೇಕು.

(೫) ಧನ, ವಿದ್ಯೆ, ಕಲೆ, ಪ್ರೇಮ, ಸಹಾನುಭೂತಿ ಇದರಲ್ಲಿ ನಮಗೆ ಇತರರಿಗೆ ಏನನ್ನು ಕೊಡಲು ಸಾಧ್ಯವಿದೆಯೋ ಅದನ್ನು ಕೊಡಬೇಕು. ನಾನು ಭಗವಂತನ ಆದೇಶವನ್ನು ಪಾಲಿಸುತ್ತಿದ್ದೇನೆ, ಇನ್ನೊಬ್ಬರಿಗೆ ಉಪಯುಕ್ತವಾಗುತ್ತಿದ್ದೇನೆ ಎನ್ನುವ ಸಮಾಧಾನಕೊಡಬಲ್ಲ ಸಂಗತಿ ಬೇರೊಂದಿಲ್ಲ. ಅಂತೆಯೇ ಏಕನಾಥರು ಗಂಗೆಯಿಂದ ತಂದ ಜಲವನ್ನು ನೀರಡಿಸಿದ ಕತ್ತೆಯ ಬಾಯಿಗೆ ಸುರಿದರು. ಮಾನವಜೀವನವೇ ಕೊಡುವುದಕ್ಕಾಗಿ ಇದೆ. ಸತತವಾಗಿ ಕೊಡುತ್ತಿರುವುದೇ ಶಾಂತಿಯ ದಿವ್ಯ ಮಂತ್ರ.

(೬) ಏಕಾಂತವಾಸ ಶಾಂತಿಯನ್ನು ನೀಡುತ್ತದೆ. ವರ್ಷದಲ್ಲಿ ಕೆಲವು ದಿನಗಳು, ಇಲ್ಲವೆ ದಿನದಲ್ಲಿ ಕೆಲವು ಕ್ಷಣಗಳನ್ನಾದರೂ ಏಕಾಂತದಲ್ಲಿ ಕಳೆಯಬೇಕು. ಎಲ್ಲರಿಗೂ ಕಾಡಿನಂಥ ಏಕಾಂತಕ್ಕೆ ಹೋಗುವುದು ಸಾಧ್ಯವಿಲ್ಲ. ಆದರೆ ಊರ ಹೊರಗೆ ನದೀತೀರ, ಸಮುದ್ರತೀರಕ್ಕೆ ಹೋಗಬೇಕು, ಸೃಷ್ಟಿಯ ಆ ವಿಶಾಲತೆಯಲ್ಲಿ ಕೆಲವು ಕ್ಷಣಗಳಾದರೂ ಒಂದಾಗಬೇಕು. ಜನಜಂಗುಳಿಯಿಂದ ದೂರ ಮಠ ಮಂದಿರಗಳಿದ್ದರೆ ಅಂಥಲ್ಲಿ ಕೆಲ ಹೊತ್ತು ಕಳೆಯುವುದು ಒಳ್ಳೆಯದು. ರಾತ್ರಿ ಸಮಯದಲ್ಲಿ ನಕ್ಷತ್ರಗಳಿಂದ ಕೂಡಿದ ವಿಶಾಲ ನೀಲಾಕಾಶವನ್ನು ನೋಡುತ್ತ ಕೆಲವು ಕ್ಷಣಗಳನ್ನು ಕಳೆದರೆ ನಿಸರ್ಗದ ಭವ್ಯತೆ, ಉಜ್ವಲತೆ ಅರಿವಾಗುತ್ತದೆ.

(೭) ಮನಸ್ಸಿನ ದುರ್ಬಲತೆಯಿಂದ ಅಶಾಂತಿ ಹುಟ್ಟುತ್ತದೆ. ಮನಸ್ಸಿನ ಈ ದುರ್ಬಲತೆ ಕೀಳರಿಮೆಯಿಂದ ಹುಟ್ಟುತ್ತದೆ. ಈ ಭಾವನೆ ಇಲ್ಲವಾಗಬೇಕು. ನಾನು ಸಮ, ಶಾಂತ, ಸಚ್ಚಿದಾನಂದ ಸ್ವರೂಪಿಯಾಗಿದ್ದೇನೆ ; ನಾನು ಸರ್ವಶಕ್ತ, ನಿತ್ಯಮುಕ್ತ, ಚಿರಂತನ ಮತ್ತು ಅವಿನಾಶಿ ಎಂದು ಚಿಂತಿಸಬೇಕು.

(೮) ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇತ್ಯಾದಿ ವಿಕಾರಗಳು ಚಿತ್ತದಲ್ಲಿ ಅಶಾಂತಿಯನ್ನು ಹುಟ್ಟಿಸುತ್ತವೆ. ಈ ವಿಕಾರಗಳು ಲೌಕಿಕ ಆಸಕ್ತಿಯಿಂದ ಹುಟ್ಟುತ್ತವೆ. ಈ ನಶ್ವರವಾದ ಪ್ರಪಂಚದ ಮೋಹವನ್ನು ನಾಶಗೊಳಿಸುವ ಪ್ರಯತ್ನ ಮಾಡಬೇಕು.

(೯) ಮನುಷ್ಯ ತನ್ನ ಕಷ್ಟಗಳ ಬಗ್ಗೆ, ತೊಂದರೆಗಳ ಬಗ್ಗೆ ಚಿಂತಿತನಾಗಿರುತ್ತಾನೆ. ಆ ಚಿಂತೆಯಲ್ಲಿಯೇ ಮನಸ್ಸಿನ ಶಾಂತಿಯನ್ನು ಕಳೆದುಕೊಳ್ಳುತ್ತಾನೆ. ಆದರೆ ಈ ಜಗತ್ತಿನಲ್ಲಿ 'ಸರ್ವಸುಖಿಗಳು' ಯಾರಿದ್ದಾರೆ ? – ಎಂದು ಆಲೋಚಿಸಬೇಕು. 'ದುಃಖವು ಪರ್ವತಾಕಾರ, ಸುಖವು ಸಾಸಿವೆಯಷ್ಟು' ಎಂದು ಚಿಂತಿಸಬೇಕು. ಪರರ ಕಷ್ಟಗಳನ್ನು ಕಂಡು ಸಹಾನುಭೂತಿ ತೋರಿಸುವುದು ಒಳ್ಳೆಯ ಸ್ವಭಾವ. ಇತರರ ಕಷ್ಟಗಳನ್ನು ನಿವಾರಿಸುವುದಕ್ಕಾಗಿ ಪ್ರಯತ್ನಿಸುವುದು ಒಂದು ಯಜ್ಞ ಮಾಡಿದಂತೆ. ಆ ಯಜ್ಞಾವಶೇಷದಿಂದ ಒಂದು ಮುಂಗುಸಿಯ

ಅರ್ಧದೇಹ ಚಿನ್ನದ್ದಾಗಿ ಮಾರ್ಪಟ್ಟ ಕಥೆ ಮಹಾಭಾರತದಲ್ಲಿ ಬರುತ್ತದೆ.

ಅನೇಕ ಸಾಧು ಸಂತರಂತೆ ಪ್ರಪಂಚವನ್ನು ಸುತ್ತಿ ಜನರ ದುಃಖವನ್ನು ಅರಿಯಲು, ಆ ದುಃಖಸಾಗರದಲ್ಲಿ ಮುಳುಗಿದವರನ್ನು ಮೇಲೆತ್ತಲು, ಅಂಥ ಜನರ ಸೇವೆ ಮಾಡಲು ಪ್ರಯತ್ನಿಸಬೇಕು. ಇದು ಚಿರಶಾಂತಿಯ ಮಾರ್ಗವಾಗಿದೆ. ದೀನದರಿದ್ರರ, ರೋಗಿಗಳ ಸೇವೆಯ ವ್ರತವನ್ನು ಸ್ವೀಕರಿಸಬೇಕು.

(೧೦) ಜೀವನದಲ್ಲಿ ಏನಾದರೂ ರೀತಿ, ಪದ್ಧತಿ, ವ್ಯವಸ್ಥೆ ಇರಬೇಕು, ಅನುಶಾಸನವಿರಬೇಕು. ಕರ್ತವ್ಯ, ಅಕರ್ತವ್ಯಗಳ ವಿವೇಕ ಇರಬೇಕು. ಉಚ್ಚ ಜೀವನಧ್ಯೇಯವಿರಬೇಕು ಮತ್ತು ಅದನ್ನು ಪಾಲಿಸುವ ನಿರ್ಧಾರವಿರಬೇಕು.

ಮೇಲಿನ ಎಲ್ಲ ಮಾತುಗಳನ್ನೂ ಒಂದೇ ಮಾತಿನಲ್ಲಿ ಹೇಳುವುದಾದರೆ – 'ಧರ್ಮದಿಂದ ನಡೆಯಿರಿ.' ಎಲ್ಲಿ ಧರ್ಮವಿರುತ್ತದೆಯೊ ಅಲ್ಲಿ ಶಾಂತಿ ಇರುತ್ತದೆ. ಎಲ್ಲಿ ಅಧರ್ಮವಿರುತ್ತದೆಯೊ ಅಲ್ಲಿ ಅಶಾಂತಿ ಇರುತ್ತದೆ. ಇಂದು ಎಲ್ಲೆಲ್ಲೂ ಧರ್ಮದ ಉಪೇಕ್ಷೆ ಮತ್ತು ಉಪಹಾಸ ಆಗುತ್ತಿದೆ. ಅದರಿಂದ ಅಶಾಂತಿ ಎಲ್ಲೆಲ್ಲೂ ಬೆಳೆಯುತ್ತಿದೆ.

ಮೇಲಿನ ಉಪಾಯಗಳಿಂದ ವ್ಯಕ್ತಿಜೀವನದಲ್ಲಿ ಮತ್ತು ಸಮಾಜದಲ್ಲಿ ಶಾಂತಿ ನೆಲೆಗೊಳ್ಳುತ್ತದೆ. ವ್ಯಕ್ತಿ ಅಶಾಂತವಾಗಿದ್ದಾಗ ಜಗತ್ತು ಶಾಂತಿಯಿಂದಿರುವುದಿಲ್ಲ. ಅಥವಾ ವ್ಯಕ್ತಿ ಶಾಂತವಾಗಿದ್ದಾಗ ಜಗತ್ತು ಅಶಾಂತವಾಗಿರುವುದಿಲ್ಲ. ತನ್ನ ಮತ್ತು ತನ್ನ ಸುತ್ತಮುತ್ತಲಿನ ವಲಯದಲ್ಲಿ ಶಾಂತಿಯನ್ನು ಕಾಪಾಡುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವೇ ಆಗಿದೆ.

೬

ನವರಸಗಳಲ್ಲಿ ಶಾಂತಿರಸಕ್ಕೆ ಪ್ರಮುಖಸ್ಥಾನವಿದೆ. ಶಾಂತಿರಸವೆಂದರೆ ಸಜ್ಜನರ ಬುದ್ಧಿಯ ವಿಶ್ರಾಂತಿ ಸ್ಥಳವಾಗಿದೆ. 'ಅಶಾಂತಸ್ಯ ಕುತಃ ಸುಖಮ್' ಎಂಬ ವಚನವು ಪ್ರಸಿದ್ಧವಿದೆ. ಚಿತ್ತವು ಅಶಾಂತವಾಗಿದ್ದಾಗ

ಯಾವ ಸುಖವನ್ನೂ ಅನುಭವಿಸಲು ಆಗುವುದಿಲ್ಲ. ಚಿತ್ತಶಾಂತಿ ಉಳ್ಳವನು ಸಣ್ಣ ಸಣ್ಣ ವಿಚಾರಗಳಲ್ಲೂ ಆನಂದವನ್ನು ಅನುಭವಿಸುತ್ತಾನೆ.

ಚಿತ್ತವು ಅಶಾಂತಿಯಿಂದ ಕೂಡಿದ್ದರೆ ನೃತ್ಯ ನಾಟಕ ಸಂಗೀತವೂ ಅವನನ್ನು ರಂಜಿಸುವುದಿಲ್ಲ. ಮತ್ತು ಚಿತ್ತವು ಪ್ರಸನ್ನವಾಗಿದ್ದರೆ ವಿಷ ಪ್ರಾಶನವೂ ಸುಖಕರವೆನಿಸುತ್ತದೆ. ಪ್ರಹ್ಲಾದ, ಸಾಕ್ರೆಟೀಸ್, ಮೀರಾಬಾಯಿ ಇವರ ಉದಾಹರಣೆ ಪ್ರಸಿದ್ಧವಿದೆ.

ಅಂತರಂಗ ಬಹಿರಂಗ ಶಾಂತಿಸ್ಥಾಪನೆಗಾಗಿ ಪ್ರಾಚೀನ ಋಷಿಗಳು ದೀರ್ಘಕಾಲ ತಪಸ್ಸು ಮಾಡಿದರು. ನೃತ್ಯ, ನಾಟಕ, ಶಿಲ್ಪಕಲೆ, ಚಿತ್ರಕಲೆ ಈ ಎಲ್ಲದರ ಧ್ಯೇಯ ಪರಮಾತ್ಮನ ಉಪಾಸನೆ ಮತ್ತು ಚಿರಶಾಂತಿಯ ಸ್ಥಾಪನೆಯಾಗಿದೆ. ವಿವಿಧ ವಿದ್ಯೆ, ಭಕ್ತಿ, ಜ್ಞಾನ, ವೈರಾಗ್ಯ ಈ ಎಲ್ಲಕ್ಕೂ ಅದೊಂದೇ ಗುರಿಯಾಗಿದೆ. ಅಂತೆಯೇ ನಮ್ಮಲ್ಲಿ ಧಾರ್ಮಿಕ ಕೆಲಸಗಳ ಕೊನೆಯಲ್ಲಿ ಈ ಶಾಂತಿಮಂತ್ರವನ್ನು ಹೇಳಲಾಗುತ್ತದೆ – 'ಓಂ ಶಾಂತಿಃ ಶಾಂತಿಃ ಶಾಂತಿಃ.' ಅಂದರೆ ಓಂಕಾರರೂಪಿಯಾದ ಪರಮಾತ್ಮನ ಕೃಪೆಯಿಂದ ನಮಗೆ ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ ಹೀಗೆ ಮೂರು ಬಗೆಯ ಶಾಂತಿ ಲಭಿಸಲಿ. ಭರತಭೂಮಿಯ ಎಲ್ಲ ಪ್ರಾಚೀನ ಋಷಿಗಳು, ಗ್ರಂಥಕಾರರು, ತಮ್ಮ ಗ್ರಂಥದ ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಇದೇ ರೀತಿ ಮಂಗಳಾಚರಣಗಳನ್ನು ಹೇಳಿದ್ದಾರೆ. ಉಪನಿಷತ್ತಿನ ಆದಿ ಮತ್ತು ಅಂತ್ಯದಲ್ಲಿ ಹೇಳಿದ ಮಂತ್ರವು ಅಭ್ಯಸಿಸುವಂತೆ ಇದೆ. ಇದು ಭಾರತೀಯ ಜೀವನದರ್ಶನದ ಸಾರಭೂತವಾಗಿದೆ. ಶಾಂತಿಯನ್ನು ಹೇಗೆ ಪಡೆಯ ಬಹುದು ಎಂಬುದನ್ನು ಇಲ್ಲಿ ಹೇಳಲಾಗಿದೆ.

ಈಶಾವಾಸ್ಯೋಪನಿಷತ್ತಿನ ಶಾಂತಿಮಂತ್ರ ಹೀಗಿದೆ :

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ
ಓಂ ಶಾಂತಿಃ ಶಾಂತಿಃ ಶಾಂತಿಃ ॥

ಆ ಸಚ್ಚಿದಾನಂದ ಪರಬ್ರಹ್ಮಸ್ವರೂಪಿ ಪರಮಾತ್ಮ ಸರ್ವಪ್ರಕಾರ ಸದಾ ಸರ್ವದಾ ಸಂಪೂರ್ಣನಿದ್ದಾನೆ. ಈ ಸಂಪೂರ್ಣ ವಿಶ್ವವು ಆ ಪರಬ್ರಹ್ಮ

ನಿಂದಲೇ ಆವಿರ್ಭೂತವಾಗಿದ್ದು ಅದು ಪೂರ್ಣವಿದೆ. ಪೂರ್ಣದೊಳಗಿಂದ ಪೂರ್ಣ ಉದಿಸಿದೆ. ಕೊನೆಯಲ್ಲಿ ಪೂರ್ಣವೇ ಉಳಿಯುತ್ತದೆ. ಪೂರ್ಣದಲ್ಲಿ ಪೂರ್ಣವನ್ನು ಪಡೆದರೂ ಅದು ಪೂರ್ಣವೇ ಆಗಿರುತ್ತದೆ. ಹೇ ಓಂಕಾರ ಸ್ವರೂಪಿ ಪರಮೇಶ್ವರ ! ನಮಗೆ ತ್ರಿವಿಧ ಶಾಂತಿಯನು ಕರುಣಿಸು.

ಈ ಶಾಂತಿಮಂತ್ರವು ನಮ್ಮನ್ನು ಉನ್ನತರನ್ನಾಗಿಯೂ, ಭವ್ಯರನ್ನಾಗಿಯೂ ಮಾಡುತ್ತದೆ. ದೇಶಕಾಲಗಳ ಸೀಮೆಯನ್ನು ದಾಟಿ ನಮ್ಮನ್ನು, ಅದು ಅನಾದಿ, ಅನಂತ, ಅಸೀಮನಾದ ಈಶ್ವರನಲ್ಲಿ ಐಕ್ಯಗೊಳಿಸುತ್ತದೆ. ತನ್ನ ಪೂರ್ಣತೆಯ ಸಾಕ್ಷಾತ್ಕಾರವನ್ನು ಪ್ರದಾನ ಮಾಡುತ್ತದೆ. ಈ ಮಂತ್ರದ ಮನನ ಚಿಂತನವಷ್ಟೇ ಅಲ್ಲ. ಪುನಃ ಪುನಃ ಉಚ್ಚರಿಸುವುದರಿಂದಲೂ ಚಿತ್ತವು ಶಾಂತವಾಗುತ್ತದೆ.

ಕೇನೋಪನಿಷತ್ತಿನ ಶಾಂತಿಮಂತ್ರ ಹೀಗಿದೆ :

ಓಂ ಆಪ್ಯಾಯಂತು ಮಮಾಂಗಾನಿ ವಾಕ್ ಪ್ರಾಣಶ್ಚಕ್ಷುಃ
ಶ್ರೋತ್ರಮಥೋ ಬಲಮಿಂದ್ರಿಯಾಣಿ ಚ ಸರ್ವಾಣಿ
ಸರ್ವಂ ಬ್ರಹ್ಮೋಪನಿಷದಂ ಮಾಹಂ ಬ್ರಹ್ಮ ನಿರಾಕುರ್ಯಾಂ ಮಾ ಮಾ
ಬ್ರಹ್ಮ ನಿರಾಕರೋತ್ ಅನಿರಾಕರಣಮಸ್ತ್ವನಿರಾಕರಣಂ ಮೇsಸ್ತು
ತದಾತ್ಮನಿ ನಿರತೇ ಯ ಉಪನಿಷತ್ಸು ಧರ್ಮಾಸ್ತೇ
ಮಯಿ ಸಂತು ತೇ ಮಯಿ ಸಂತು ।
ಓಂ ಶಾಂತಿಃ ಶಾಂತಿಃ ಶಾಂತಿಃ ॥

ಹೇ ಓಂಕಾರಸ್ವರೂಪ ಪರಮೇಶ್ವರ ! ನನ್ನ ವಾಣಿ, ನನ್ನ ಕಣ್ಣು, ನನ್ನ ಕಿವಿ, ನನ್ನ ಅಂಗ ಪ್ರತ್ಯಂಗ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳು, ನನ್ನ ಪಂಚಪ್ರಾಣಗಳು, ನನ್ನ ಎಲ್ಲ ಶಾರೀರಿಕ ಮತ್ತು ಮಾನಸಿಕ ಶಕ್ತಿಗಳು ಹಾಗೂ ನನ್ನಲ್ಲಿನ ತೇಜಸ್ಸು ಇವೆಲ್ಲ ಪುಷ್ಟಿಗೊಳ್ಳಲಿ. ಅದರ ಉತ್ಕೃಷ್ಟ ವಿಕಾಸವಾಗಲಿ. ಉಪನಿಷತ್ತಿನಲ್ಲಿ ವರ್ಣಿಸಿರುವ ಆ ಅಣುರೇಣು ವ್ಯಾಪ್ತನಾದ ಪರಬ್ರಹ್ಮ ಸ್ವರೂಪನನ್ನು ನಾವೆಂದೂ ನಿರಾಕರಿಸದಿರಲಿ. ಆ ಬ್ರಹ್ಮನು ಕೂಡಾ ನನ್ನನ್ನು ನಿರಾಕರಿಸದಿರಲಿ. ಬ್ರಹ್ಮನ ಸಂಬಂಧ ನನಗೆ ಮತ್ತು ನನ್ನ ಸಂಬಂಧ ಬ್ರಹ್ಮನೊಂದಿಗೆ ನಿತ್ಯವಾಗಿರಲಿ. ಉಪನಿಷತ್ತಿನಲ್ಲಿ ಪ್ರತಿಪಾದಿಸಿದ ಸರ್ವ ಧರ್ಮಗಳೂ ಮೋಕ್ಷಾಕಾಂಕ್ಷಿಗಳಾದ ನಮ್ಮ ಜೀವನ

ಮಾರ್ಗವನ್ನು ಪ್ರಶಾಂತಗೊಳಿಸಲಿ. ಆ ಧರ್ಮವು ನಮ್ಮಲ್ಲಿ ನಿರಂತರ ವಾಸವಾಗಿರಲಿ. ಈ ರೀತಿ ನಮಗೆ ತ್ರಿವಿಧ ತಾಪದಿಂದ ಬಿಡುಗಡೆ ದೊರೆತು ಚಿರಶಾಂತಿ ದೊರೆಯಲಿ.

ಕಠೋಪನಿಷತ್ತಿನಲ್ಲಿನ ಶಾಂತಿಮಂತ್ರವೂ ಪ್ರಸಿದ್ಧವಾಗಿದೆ.

> **ಓಂ ಸಹ ನಾವವತು ಸಹ ನೌ ಭುನಕ್ತು ಸಹ ವೀರ್ಯಂ ಕರವಾವಹೈ ।**
> **ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ।**
> **ಓಂ ಶಾಂತಿಃ ಶಾಂತಿಃ ಶಾಂತಿಃ ॥**

ಹೇ ಪರಮೇಶ್ವರ ! ಗುರುಶಿಷ್ಯರಾದ ನಮ್ಮಿಬ್ಬರಿಗೂ ಸರ್ವವಿಧದಿಂದ ರಕ್ಷಿಸು. ಯೋಗ್ಯ ರೀತಿಯಿಂದ ನಮ್ಮನ್ನು ಪಾಲಿಸು. ಸರ್ವ ಪ್ರಕಾರದ ಬಲ ನಮಗೆ ಲಭಿಸಲಿ, ನಮ್ಮ ಜ್ಞಾನದ ತೇಜಸ್ಸು ಎಂದಿಗೂ ಕುಂದದಿರಲಿ. ಗುರುಶಿಷ್ಯರಾದ ನಮ್ಮಲ್ಲಿ ಸ್ನೇಹಸಂಬಂಧವು ಶಾಶ್ವತವಾಗಲಿ. ನಮ್ಮಲ್ಲಿ ಎಂದಿಗೂ ದ್ವೇಷವು ಹುಟ್ಟದಿರಲಿ. ನಮ್ಮ ತ್ರಿವಿಧ ತಾಪಗಳು ಶಮನವಾಗಿ ಚಿರಶಾಂತಿಯು ಲಭ್ಯವಾಗಲಿ.

೭

ಇಂಥ ಅನೇಕ ಸುಂದರ ಶಾಂತಿಮಂತ್ರಗಳಿಂದ ಪುರಾತನ ಭಾರತೀಯ ಸಾಹಿತ್ಯ ಸಮೃದ್ಧವಾಗಿದೆ. ಈ ಶಾಂತಿಯು ಕೇವಲ ಮಂತ್ರಸ್ಥವಾಗಿರಲಿಲ್ಲ. ಅದು ಪ್ರತಿಯೊಂದು ಊರಿನಲ್ಲಿ, ಪ್ರತಿಯೊಂದು ಮನೆಯಲ್ಲಿ ನೆಲೆಸಿತ್ತು. ಪ್ರತಿಯೊಬ್ಬರ ಅಂತರ್ಯದಲ್ಲಿಯೂ ಮತ್ತು ಬಾಹ್ಯಜೀವನದಲ್ಲಿಯೂ ಪ್ರಕಟಗೊಂಡಿತ್ತು. ಅದಕ್ಕಾಗಿ ಸಾವಿರಾರು ಜನ ತಪಸ್ಸು ಮಾಡುತ್ತಿದ್ದರು. ಅದಕ್ಕಾಗಿಯೇ ಋಷಿಮುನಿಗಳ ಆಶ್ರಮಗಳಿದ್ದವು. ರಾಜ ಮಹಾರಾಜರು ಆ ಮುನಿಗಳ ಚರಣದಲ್ಲಿ ನತಮಸ್ತಕರಾಗುತ್ತಿದ್ದರು. ಎಲ್ಲೆಡೆ ಸಂಯಮ, ಸುವ್ಯವಸ್ಥೆ, ಸಮೃದ್ಧಿ, ಸಂತೋಷ ನೆಲೆಸಿತ್ತು. ಸ್ವರ್ಗೀಯವಾದ ಸುಖ ಶಾಂತಿ ವಿರಾಜಿಸುತ್ತಿತ್ತು.

ಈಗಲೂ ನಾವು ಶಾಂತಿಯನ್ನು ಪ್ರಸ್ಥಾಪಿಸಬಹುದು. ಕೇವಲ ನಮ್ಮ ವೈಯಕ್ತಿಕ ಜೀವನದಲ್ಲಷ್ಟೇ ಅಲ್ಲ. ನಮ್ಮ ನಾಡಿನಲ್ಲಿ ಮತ್ತು ವಿಶ್ವದಲ್ಲಿ ಶಾಂತಿಯನ್ನು ನೆಲೆಗೊಳಿಸಬಹುದು. ಆದರೆ ಅದಕ್ಕಾಗಿ ಪೌರುಷ ಪರಾಕ್ರಮಗಳು ಬೇಕು. ಅಸಾಮಾನ್ಯ ತ್ಯಾಗ ಮತ್ತು ತಪಶ್ಚರ್ಯೆ ಬೇಕು.

ಕಠಿಣ ವಿಪತ್ತಿನಲ್ಲಿಯೂ ದೃಢಚಿತ್ತರಾಗಿ ಧ್ಯೇಯಪಥದಲ್ಲಿ ಮುನ್ನಡೆಯ ಬೇಕು. ನಾವು ಭಗವಾನ್ ಶಂಕರನ ಉಪಾಸಕರು. ಅವನು ಕಂಠದಲ್ಲಿ ಸರ್ಪವನ್ನು ಸುತ್ತಿಕೊಂಡಿದ್ದಾನೆ. ಜಗತ್ತನ್ನು ವಿನಾಶಗೊಳಿಸುವ ವಿಷವನ್ನು ಪ್ರಾಶನ ಮಾಡಿದ. ಆದರೂ ಆತ ಶಾಂತ! ನಾವು ಶ್ರೀವಿಷ್ಣುವಿನ ಉಪಾಸಕರು. 'ಶಾಂತಾಕಾರಂ ಭುಜಗಶಯನಂ' ಎಂದು ಆತನ ವರ್ಣನೆಯಿದೆ. ಸಹಸ್ರಮುಖದ ಆ ಭೀಷಣ ಸರ್ಪದ ಮೇಲೆ ಶಾಂತನಾಗಿ ಮಲಗಿದ್ದಾನೆ. ದೇವಿಯ ಉಪಾಸಕರು ನಾವು. 'ಅತಿಸೌಮ್ಯಾತಿರೌದ್ರಾಯೈ' ಎಂದು ಆಕೆಯನ್ನು ವರ್ಣಿಸಲಾಗಿದೆ. ಅವಳು ಚಂಡಿ, ದುರ್ಗಿ, ಹಾಗೆಯೇ ಸೌಮ್ಯಳೂ ಆಗಿದ್ದಾಳೆ. ಅಂತೆಯೇ ಅವಳನ್ನು ಪ್ರಾರ್ಥಿಸುವಾಗ :

> **ಯಾ ದೇವೀ ಸರ್ವಭೂತೇಷು ಶಾಂತಿರೂಪೇಣ ಸಂಸ್ಥಿತಾ ।**
> **ನಮಸ್ತಸ್ಯೈ, ನಮಸ್ತಸ್ಯೈ ನಮೋ ನಮಃ ॥**

ಪ್ರಾಣಿ ಮಾತ್ರರಲ್ಲಿ ಶಾಂತಿರೂಪಿಯಾಗಿ ವಾಸವಾಗಿರುವ ಜಗಜ್ಜನನಿಯನ್ನು ಆವಾಹನೆ ಮಾಡುವುದಕ್ಕಾಗಿ ನಮ್ಮ ಅಂತಃಸ್ಥನಾದ ಪರಮೇಶ್ವರನೊಂದಿಗೆ ತಾದಾತ್ಮ್ಯ ಪಡೆಯಬೇಕಾಗುತ್ತದೆ. ಅದಕ್ಕಾಗಿ ಶ್ರದ್ಧಾವಂತರಾಗಬೇಕು, ಸಂಯಮಿಗಳಾಗಬೇಕು, ವಿರಾಗಿಗಳಾಗಬೇಕು. ನಮ್ಮ ಜೀವನ ವರ್ತುಲದ ಕೇಂದ್ರವನ್ನು ನಿರ್ಣಯಿಸಬೇಕಾಗಿದೆ.

ಕಠೋಪನಿಷತ್ತಿನ ಒಂದು ಶ್ಲೋಕದಲ್ಲಿ ಇದನ್ನು ಸ್ಪಷ್ಟವಾಗಿ ಹೀಗೆ ಹೇಳಿದೆ :

> **ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾ-**
> **ಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್ ।**
> **ತಮಾತ್ಮಸ್ಥಂ ಯೇsನಂ ಪಶ್ಯಂತಿ ಧೀರಾ-**
> **ಸ್ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಮ್ ॥ ೧೩ ॥**

ನಿತ್ಯ ಚೈತನ್ಯ ಆತ್ಮಗಳ ಆತ್ಮನಾಗಿರುವ, ಸೃಷ್ಟಿಯಲ್ಲಿನ ಅನಂತ ಜೀವಿಗಳಿಗೆ ಅವರ ಕಾರ್ಯಾನುಸಾರ ಗತಿಯನ್ನು ಪಾಲಿಸುವ ಕಾರ್ಯವನ್ನು ತಾನೊಬ್ಬನೇ ಮಾಡುತ್ತಿರುವ, ಆ ಅಂತರಂಗದಲ್ಲಿನ ಪರಮಾತ್ಮನು, ಸರ್ವಶಕ್ತಿವಂತ, ಪರಬ್ರಹ್ಮರೂಪ, ಪುರುಷೋತ್ತಮನ ದರ್ಶನವನ್ನು ನಿರಂತರವಾಗಿ ಪಡೆಯುವ ಜ್ಞಾನಿಪುರುಷನಿಗೆ ಮಾತ್ರ ಶಾಶ್ವತ ಶಾಂತಿಯು ಪ್ರಾಪ್ತವಾಗುತ್ತದೆ. ಅನ್ಯರಾರಿಗೂ ಲಭಿಸುವುದಿಲ್ಲ.

೧

'ದಯೆ, ಕ್ಷಮೆ, ಶಾಂತಿ। ಅಲ್ಲಿ ದೇವನ ವಸತಿ' ಹೀಗೆ ಸಂತ ತುಕಾರಾಮರು ಹೇಳುತ್ತಾರೆ. 'ದಯೆಯೇ ಧರ್ಮದ ಮೂಲವಯ್ಯ' ಎಂದು ಬಸವಣ್ಣನವರು ಹೇಳುತ್ತಾರೆ. ಹೀಗೆ ದಯೆಯ ಮಹತ್ವವನ್ನು ಅನೇಕರು ಅನೇಕ ಕಡೆಗಳಲ್ಲಿ ಹೇಳುತ್ತಾರೆ.

'ಧಣೀರೇ, ಬಡವನ ಮ್ಯಾಗ ದಯಾ ಮಾಡ್ರಿ, ಇಷ್ಟ ಹೊಟ್ಟೆಗೆ ಕೊಡ್ರಿ ಅಪ್ಪಾ' ಇಂಥ ಧ್ವನಿಯನ್ನು ಅನೇಕ ಕಡೆಗಳಲ್ಲಿ ಕೇಳುತ್ತೇವೆ. 'ಆ ಮನುಷ್ಯ ಬಹಳ ದಯಾಳು. ಅವನ ಮನೆಯಿಂದ ಬರಿಗೈಯಲ್ಲಿ ಯಾರೂ ಹಿಂದಿರುಗುವುದಿಲ್ಲ' ಎಂದೂ ಕೇಳುತ್ತೇವೆ. 'ಬುದ್ಧ ರಾಜ ಮಹಾದಯಾಳು ವಾಗಿದ್ದ, ಅವನು ಯುದ್ಧ ನಿಲ್ಲಿಸಿದ' ಇಂಥ ಕಥೆಗಳನ್ನು ಓದುತ್ತೇವೆ. 'ಮಹಾಸ್ವಾಮಿ, ಅಪರಾಧಿಯ ಮೇಲೆ ದಯೆ ತೋರಿರಿ. ಅವನಿಗೆ ಮರಣ ದಂಡನೆ ವಿಧಿಸಬೇಡಿ' 'ನಮ್ಮೂರಿನ ಶೆಟ್ಟರು ಬಹಳ ದಯಾಳುಗಳು. ಅವರು ನಾಯಿಗಳಿಗೆ ಅನ್ನ ಹಾಕುತ್ತಾರೆ, ಬಡವರಿಗೆ ಬಟ್ಟೆ ಹಂಚುತ್ತಾರೆ' ಇಂಥ ಗುಣಗೌರವದ ಕೇಳಿ ಬರುತ್ತವೆ. 'ಪೃಥ್ವೀರಾಜ ಮಹಮ್ಮದಘೋರಿಯನ್ನು ದಯೆಯಿಂದ ಬಿಟ್ಟುಬಿಟ್ಟ' ಎಂದು ಇತಿಹಾಸದಲ್ಲಿ ಓದುತ್ತೇವೆ. 'ನಮ್ಮ ನೆರೆಯವನು ಬಹಳ ಕ್ರೂರ. ಮಕ್ಕಳನ್ನು ದನ ಬಡಿದಂತೆ ಬಡಿಯುತ್ತಾನೆ' ಇಂಥ ನಿಂದೆಯನ್ನು ಕೇಳುತ್ತೇವೆ.

ಬಾಳಿನಲ್ಲಿ ದಯೆ ಎಂಬ ಶಬ್ದದ ಬಳಕೆಯನ್ನು ನಾವು ಪ್ರತಿದಿನ ಮಾಡುತ್ತೇವೆ. ದಯೆ ತೋರುವುದು ಎಂದರೆ ಯಾರಿಗಾದರೂ ಸಹಾಯ ಮಾಡುವುದು. ನಿರ್ಗತಿಕರಿಗೆ ಹಣ ಕೊಡುವುದು, ಹಸಿದವರಿಗೆ ಅನ್ನ

ಇನ್ನೊಂದೆಡೆ. ಈ ವಿಷಮತೆ ನಿರ್ದಯತೆಯಲ್ಲದೆ ಏನನ್ನು ತೋರಿಸುತ್ತದೆ? ನಾಲ್ಕು ಕಡೆಗೂ ಯಂತ್ರಗಳ ಗಡಗಡಾಟ ಕೇಳಿಬರುತ್ತದೆ. ಜನರು ಒಂದೇ ಸಮನೆ ಧಾವಿಸುತ್ತಾರೆ. ಲೋಹದ ಯಂತ್ರದ ಭಾಗವಾಗಿದ್ದಾರೆ. ಅಂದ ಮೇಲೆ ಅವರ ಹೃದಯಗಳು ಲೋಹದ ಯಂತ್ರಗಳಾದರೆ ಆಶ್ಚರ್ಯವಿಲ್ಲ.

ಯಾವನಾದರೂ ರಸ್ತೆಯಲ್ಲಿ ನಡೆದಿರುತ್ತಾನೆ. ಜಾರಿ ಬೀಳುತ್ತಾನೆ. ವಾಹನವೊಂದರಿಂದ ನಜ್ಜುಗುಜ್ಜಾಗುತ್ತಾನೆ. ರಕ್ತದ ಕಾರಂಜಿ ಹಾರುತ್ತದೆ. ಆದರೆ ಜನ ನಿರ್ವಿಕಾರದಿಂದ ಒಂದು ಕೆಂಪು ಬಣ್ಣದ ಡಬ್ಬ ಬಿದ್ದಿತ್ತು, ಒಡೆಯಿತು, ಎಸೆದುಬಿಟ್ಟೆವು ಎನ್ನುವಂತೆ ಹೊರಟುಹೋಗುತ್ತಾರೆ. ನೆರೆಯುವಸು ಕಾಯಿಲೆ ಬೀಳುತ್ತಾನೆ, ನರಳುತ್ತಾನೆ, ಕಿರಚುತ್ತಾನೆ. ಆದರೆ ಅದನ್ನೆಲ್ಲಾ ಕೇಳುತ್ತಾ ಕೂಡಲು ಯಾರಿಗೂ ಪುರುಸೊತ್ತಿಲ್ಲ. ಇದೆಲ್ಲಾ ನಿರ್ದಯತೆಯಲ್ಲದೆ ಮತ್ತೇನು? ಹಣಕ್ಕಾಗಿ ಗುಣಮಟ್ಟವಿಲ್ಲದ ಕಳಪೆ ಔಷಧಿಗಳನ್ನು ಮಾರುವುದು ನಿರ್ದಯತೆಯಲ್ಲವೇ? ಆಹಾರ ಪದಾರ್ಥಗಳಲ್ಲಿ ಹಾನಿಕಾರಕವಾದ ಕಲಬೆರಕೆ ಮಾಡುವುದು ನಿರ್ದಯತೆ ಅಲ್ಲವೇ? ಮಕ್ಕಳ ಭವಿಷ್ಯತ್ತಿನ ವಿಚಾರ ಮಾಡದೆ ಅವರಿಗೆ ಸರಿಯಾದ ಶಿಕ್ಷಣ ಕೊಡದಿರುವುದು, ತಮ್ಮ ನಾಯಕಪಟ್ಟ ಉಳಿಸಿಕೊಳ್ಳಲು ಜನತೆಯನ್ನು ಸುಳ್ಳು ಆಶ್ವಾಸನೆಗಳಿಂದ ತಪ್ಪು ದಾರಿಗೆ ಎಳೆಯುವುದು – ಈ ಎಲ್ಲ ಮಾತುಗಳು ನಿರ್ದಯತೆಯ ಕಕ್ಷೆಯಲ್ಲಿ ಬರುವುದಿಲ್ಲವೇ? ಶರೀರವನ್ನು ತುಂಡರಿಸುವುದು ನಿರ್ದಯತೆಯ ಲಕ್ಷಣವಿದ್ದಂತೆ. ಮನಸ್ಸನ್ನು ಗಾಯಗೊಳಿಸುವುದು ನಿರ್ದಯತೆಯ ಲಕ್ಷಣವಾಗಿದೆ. ಹೀಗೆ ಬಗೆ ಬಗೆಯ ನಿರ್ದಯತೆಯ ಚಿಹ್ನೆಗಳನ್ನು ನಾವು ಪ್ರತಿನಿತ್ಯ ಕಾಣುತ್ತೇವೆ.

೩

ನಿಃಸ್ವಾರ್ಥ ಬುದ್ಧಿಯವರಲ್ಲಿ ದಯೆ ಇರುತ್ತದೆ. ಹಸಿದವರಿಗಾಗಿ ಸಂತ ತುಕಾರಾಮರು ತಮ್ಮ ದವಸದ ಕಣಜವನ್ನು ತೆರೆದಿಟ್ಟರು. ತಮಗಾಗಿ ಸ್ವಲ್ಪ ಧಾನ್ಯ ಇರಿಸಿಕೊಳ್ಳಬೇಕೆಂಬ ಸ್ವಾರ್ಥವೂ ಅವರಲ್ಲಿರಲಿಲ್ಲ. ಧೈರ್ಯಶಾಲಿಯಾದವನೂ ದಯೆಯುಳ್ಳವನಾಗಿರುತ್ತಾನೆ. ಇದರ ಪರಿಣಾಮ ಏನಾದೀತು? ನನಗೆ ಇದರಿಂದ ಎಷ್ಟು ನಷ್ಟವಾಗಬಹುದು?

ಎನ್ನುವ ವ್ಯಾವಹಾರಿಕ ಅಂಜುಗುಳಿತನ ಇರುವಲ್ಲಿ ದಯಾಬುದ್ಧಿ ನಿರ್ಮಾಣವಾಗುವುದು ಸಾಧ್ಯವಿಲ್ಲ. ನಿರ್ಮಾಣವಾದರೂ ಅದು ಅಪ್ರಯೋಜಕವಾಗುತ್ತದೆ.

ಇನ್ನೊಬ್ಬರ ಸುಖದಲ್ಲಿ ಸುಖವನ್ನು ಕಾಣುವವನು ದಯಾಬುದ್ಧಿ ಉಳ್ಳವನು. ಒಮ್ಮೆ ಗಾಂಧಿಜೀಯವರು ಒಬ್ಬ ಹಳ್ಳಿಯ ವೃದ್ಧ ಮಹಿಳೆಯನ್ನು ಕಂಡು – "ನಿನ್ನ ಬಟ್ಟೆಗಳು ಇಷ್ಟೊಂದು ಹೊಲಸಾಗಿವೆ. ಅವುಗಳನ್ನು ಒಗೆಯಬಾರದೆ ?" ಎಂದು ಕೇಳಿದರಂತೆ. ಅದಕ್ಕೆ ಆ ವೃದ್ಧೆ – "ಏನು ಮಾಡಲಿ, ಈ ಬಟ್ಟೆಗಳನ್ನು ಒಗೆಯುವಾಗ, ಹಾಕಿಕೊಳ್ಳಲು ನನ್ನ ಬಳಿ ಬೇರೆ ಬಟ್ಟೆಗಳಿಲ್ಲ, ಅದಕ್ಕಾಗಿ ಇದನ್ನು ಒಗೆದು ತೊಡುವುದು ಸಾಧ್ಯವಿಲ್ಲ" ಎಂದು ಉತ್ತರಿಸಿದಳು. ಅಂದಿನಿಂದ ಗಾಂಧಿಜೀಯವರು – "ನನ್ನ ದೇಶದ ಎಲ್ಲ ಜನರಿಗೆ ಧರಿಸಲು ಆವಶ್ಯಕವಾದಷ್ಟು ಬಟ್ಟೆ ಸಿಗುವವರೆಗೆ ನಾನೂ ಅರ್ಧ ಬಟ್ಟೆಯನ್ನೇ ತೊಟ್ಟುಕೊಳ್ಳುತ್ತೇನೆ" ಎಂದು ನಿರ್ಧರಿಸಿದರು. ಅದಕ್ಕಾಗಿ ಕೊನೆಯವರೆಗೆ ತುಂಡು ಪಂಚೆಯಲ್ಲಿಯೇ ಬಾಳಿದರು.

ಇನ್ನೊಬ್ಬನ ದುಃಖದಲ್ಲಿ ದುಃಖವನ್ನು ಅನುಭವಿಸುವ ಸಂವೇದನಶೀಲ ಮನುಷ್ಯ, ದಯಾಭಾವದವನಾಗಿರುವನು. ಪುರಂದರದಾಸರಂಥವರಿಗೇನು ಏಕಾಂತದಲ್ಲಿ ಕುಳಿತು ಭಗವಂತನನ್ನು ಭಜಿಸಲು ಆಗುತ್ತಿರಲಿಲ್ಲವೆ ? ವಿವೇಕಾನಂದರಿಗೇನು ಗಿರಿಧಾಮಗಳಲ್ಲಿ ಕುಳಿತು ಸಮಾಧಿಸ್ಥರಾಗಲು ಸಾಧ್ಯವಿರಲಿಲ್ಲವೆ ? ಲೋಕಮಾನ್ಯ ತಿಲಕರಿಗೆ ವಕೀಲ ವೃತ್ತಿ ಅಥವಾ ಅವರಿಗೆ ಪ್ರಿಯವಾದ ಗಣಿತದ ಅಧ್ಯಾಪಕರಾಗಲು ಸಾಧ್ಯವಿರಲಿಲ್ಲವೆ ? ಗಾಂಧಿಜೀಯವರಿಗೆ ದಕ್ಷಿಣ ಆಫ್ರಿಕೆಯಲ್ಲಿದ್ದು ಚಳವಳಿ ಆರಂಭಿಸುವ ಅಗತ್ಯವಿದ್ದಿತೆ ? ದಂಡೀಯಾತ್ರೆ, ಚಂಪಾರಣ್ಯಗಳಿಗೆ ಹೋಗಿದ್ದೇಕೆ ? ಮೇಲಿಂದ ಮೇಲೆ ಜೈಲಿಗೇಕೆ ಹೋದರು ? ವಾಸುದೇವ ಬಲವಂತ ಫಡಕೆ ನೇಣುಗಂಬ ಏರಿದ್ದೇಕೆ ? ಚಾಫೇಕರ ಬಂಧುಗಳ ಬಲಿದಾನದ ಸಂಕೇತವೇನು ? ದಯಾಬುದ್ಧಿಯೇ ಈ ಎಲ್ಲ ಕೆಲಸಗಳ ಹಿಂದಿನ ಪ್ರೇರಣೆಯಾಗಿತ್ತು.

೪

ದಯೆಯ ಅರ್ಥ ವಿಶಾಲವಾಗಿದೆ. ಅದು ಭಾವನಾತ್ಮಕ, ರಚನಾತ್ಮಕ ಮತ್ತು ಕ್ರಿಯಾತ್ಮಕವಾಗಿದೆ. ಹೊಡೆಯಬೇಡ, ಕೋಪಿಸಿಕೊಳ್ಳಬೇಡ, ಯುದ್ಧಮಾಡಬೇಡ. ಇಂಥ ನಕರಾತ್ಮಕ ಭಾವಗಳಲ್ಲಿಲ್ಲ ದಯೆ. 'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್' ಎಂದು ಗೀತೆಯಲ್ಲಿ ಹೇಳಿರುವಂತೆ ಭಗವಂತನು ಧರ್ಮಸ್ಥಾಪನೆಗಾಗಿ ಅವತರಿಸುತ್ತಾನೆ. ದಯಾಭಾವದಿಂದಾಗುವ ಕೆಲಸಗಳು ಅನೇಕ ವಿಧವಾಗಿವೆ. ಪ್ರಾಣಿಮಾತ್ರರನ್ನು ಕಾಪಾಡುವುದು, ರಕ್ಷಿಸುವುದು ದಯೆಯ ಲಕ್ಷಣವಿದ್ದಂತೆ, ದುಷ್ಟರನ್ನು ನಾಶಮಾಡುವುದೂ ದಯೆಯ ಕೆಲಸವಾಗಿದೆ. ರೈತನಿಗೆ ಹೊಲವನ್ನು ನಟ್ಟು ತೆಗೆದು, ನೇಗಿಲು ಹಾಕಿ, ಹದಮಾಡಿ, ಬೀಜ ಬಿತ್ತುವುದು ಎಷ್ಟು ಹೊಣೆಗಾರಿಕೆಯಿಂದ ಮಾಡಬೇಕಾಗುತ್ತದೊ, ಅಷ್ಟೇ ಕಾಳಜಿಯಿಂದ ಒಡ್ಡು ಹಾಕಿ ನೀರು ಒದಗಿಸಿ, ಬೇಲಿಹಾಕಿ, ಬೆಳೆಯನ್ನು ರಕ್ಷಿಸುವುದು ಮಹತ್ವದ್ದಾಗಿರುತ್ತದೆ. ಬಹುಶಃ ಎರಡನೇ ಕೆಲಸ ಮಾಡಿಲ್ಲವಾದರೆ, ಮೊದಲನೆ ಕೆಲಸ ನಿರರ್ಥಕವಾಗುತ್ತದೆ.

ದಯೆ ಎಂದರೆ ಬೇರೆಯವರ ದುಃಖದಿಂದ ಸಂಕಟಪಡುವುದಲ್ಲ, ಗಾಯಕ್ಕೆ ಮದ್ದು ಹಾಕುವುದಲ್ಲ, ಅಥವಾ ಸೋಮಾರಿಗಳಾದ ಕೆಲಸಗಳ್ಳರಿಗೆ ಊಟ ಹಾಕುವುದಲ್ಲ. ದುಃಖ ಏಕೆ, ಹೇಗೆ ಮತ್ತು ಯಾರಿಂದ ಆಯಿತು, ದುಃಖದ ಮೂಲ ಯಾವುದು, ಎಂದು ತಿಳಿದುಕೊಂಡು ಅದನ್ನು ನಿವಾರಿಸುವುದು ದಯೆಯ ಮುಖ್ಯ ಕಾರ್ಯಭಾಗವಾಗಿದೆ. ಅದಕ್ಕಾಗಿ ರಾವಣನನ್ನು ಮತ್ತು ಅವನ ರಾಕ್ಷಸ ಸೈನ್ಯವನ್ನು ನಿರ್ನಾಮ ಮಾಡಿದ ಶ್ರೀರಾಮಚಂದ್ರನನ್ನು ಕರುಣಾಸಾಗರನೆಂದು ಕರೆಯುತ್ತಾರೆ. ಶ್ರೀಕೃಷ್ಣ ಕಂಸಚಾಣೂರರನ್ನು ವಧಿಸಿಯೂ ದಯಾಮಯನೆನಿಸಿಕೊಳ್ಳುತ್ತಾನೆ. ಶಬರಿಯ ಎಂಜಲು ತಿನ್ನುವುದರಿಂದಲೇ ರಾಮನ ದಯಾಗುಣವು ವ್ಯಕ್ತವಾಗಲಿಲ್ಲ. ಲೋಕಕಂಟಕರನ್ನು ಸಂಹಾರಮಾಡಿ ಲೋಕರಕ್ಷಣೆ ಮಾಡಿದ್ದರಿಂದಲೇ ಅದು ವ್ಯಕ್ತವಾಯಿತು.

೫

ದಯಾಬುದ್ಧಿಯು ಕೂಡಾ ಸಾತ್ವಿಕ, ರಾಜಸ, ತಾಮಸ, ಈ ಮೂರು ಗುಣಗಳಿಂದ ಕೂಡಿರುತ್ತದೆ. ಮೂರ್ಖತನದಿಂದ, ಅಜ್ಞಾನದಿಂದ, ಸಾರಾಸಾರ ವಿವೇಚನೆಯಿಲ್ಲದೆ ಮಾಡುವ ದಯೆಯು ತಾಮಸವಾದದ್ದು, ಸೋಮಾರಿಗಳು, ಕೆಲಸವಿಲ್ಲದೆ ಕುಳಿತು ಉಣ್ಣುವವರನ್ನು ಪೋಷಿಸುವುದು ತಾಮಸ ದಯೆ. ಸಿಂಹ, ಹುಲಿ, ಹಾವು, ಚೇಳುಗಳಂಥ ಹಿಂಸಕ ಪ್ರಾಣಿಗಳನ್ನು ಕಾರಣವಿದ್ದರೂ ಹೊಡೆಯದಿರುವುದು ತಾಮಸ ದಯೆ. ಪ್ರವೃತ್ತಿಯಿಂದ ಕಳ್ಳ, ಸುಳ್ಳ, ಕೊಲೆಗಾರನಾದ ಮನುಷ್ಯನನ್ನು ಶಿಕ್ಷಿಸದಿರುವುದು ತಾಮಸ ದಯೆ. ಸಮಾಜದ್ರೋಹಿ, ದೇಶದ್ರೋಹಿ, ಧರ್ಮದ್ರೋಹಿಗಳಾದ ಶತ್ರುಗಳನ್ನು ದಮನಮಾಡದಿರುವುದು ತಾಮಸ ದಯೆ. ದಯೆಯ ನಿಜವಾದ ಅರ್ಥ ತಿಳಿಯದೆ ನಾವು ದಯೆ ತೋರಿಸುತ್ತಿದ್ದೇವೆ ಎಂಬ ಭಾವನೆಯಿಂದ ಮಾಡುವ ನಿರ್ದಯತೆಯ ಕಾರ್ಯ ತಾಮಸ ದಯೆ.

ದಯೆಯ ಪ್ರದರ್ಶನ ಮಾಡುವುದು, ದಯೆಯ ವ್ಯಾಪಾರ ಮಾಡುವುದು ರಾಜಸ ದಯೆ. ಪ್ರಪಂಚದಲ್ಲಿ ಹೆಸರು ಸಂಪಾದಿಸಬೇಕು, ಕೀರ್ತಿ ಹರಡಬೇಕು ಎನ್ನುವ ಉದ್ದೇಶದಿಂದ ದೊಡ್ಡ ದೊಡ್ಡ ದೇಣಿಗೆಗಳನ್ನು ಕೊಡುವುದು, ಆಸ್ಪತ್ರೆ, ಅನಾಥಾಲಯಗಳನ್ನು ಕಟ್ಟಿಸುವುದು ಇದಕ್ಕೆಲ್ಲ ಕಾರಣವಾದದ್ದು ರಾಜಸ ದಯೆ. ನಾನು ದಾನ ಮಾಡುವುದನ್ನು ಜನರು ಗಮನಿಸಬೇಕು. ತಾನೊಬ್ಬ ಧಾರ್ಮಿಕ, ದಯಾಳುಪುರುಷ ಎಂದು ಜನ ತಿಳಿಯಬೇಕು. ತಮ್ಮ ಭಾವಚಿತ್ರ ಪತ್ರಿಕೆಗಳಲ್ಲಿ ಅಚ್ಚಾಗಬೇಕು. ಈ ರೀತಿಯ ಉದ್ದೇಶ ಬಹಳ ಜನರಿಗಿರುತ್ತದೆ. ಜನರನ್ನು ತಮ್ಮ ಪಕ್ಷಕ್ಕೆ ಸೇರುವಂತೆ ಮಾಡುವುದಕ್ಕಾಗಿ ಔಷಧ, ಬಟ್ಟೆಬರೆ ಹಂಚುವುದು ಇದೆಲ್ಲ ರಾಜಸ ದಯೆಯ ಲಕ್ಷಣವಾಗಿದೆ. ಜನರು ನಮಗೆ ಮತಕೊಟ್ಟು ಚುನಾಯಿಸಬೇಕೆಂದು ಆಸೆಯಿಂದ ಕೆರೆ, ಬಾವಿ ಕಟ್ಟಿಸುವುದು, ನೆರೆಪೀಡಿತರಿಗೆ ಸಹಾಯ ಮಾಡುವುದು – ಇಂಥ ಬೇರೆ ಯಾವುದೇ ಕೆಲಸ ರಾಜಸವಾದ ದಯೆ.

ನಿಃಸ್ವಾರ್ಥ ಬುದ್ಧಿಯಿಂದ, ವಿಶಾಲ ಮನೋಭಾವನೆಯಿಂದ ಲೋಕಕಲ್ಯಾಣಕ್ಕಾಗಿ ದುಡಿಯುವುದು ಸಾತ್ವಿಕ ದಯೆ. ಶಿಷ್ಟರನ್ನು ರಕ್ಷಿಸಿ, ದುಷ್ಟರನ್ನು ದಂಡಿಸುವುದು ಸಾತ್ವಿಕವಾದ ದಯೆ. ದೇವತೆಗಳ ಸಂಹಾರವನ್ನು ತಡೆಯಲು ದಧೀಚಿ ತನ್ನ ಅಸ್ಥಿಯನ್ನು ದಾನವಾಗಿ ಕೊಟ್ಟ. ಇದು ಸಾತ್ವಿಕ ದಯೆ. ತಮಗೆ ಕೀರ್ತಿ ಲಭಿಸಬೇಕು, ಅಧಿಕಾರ ಸಿಗಬೇಕು, ಸ್ವರ್ಗದಲ್ಲಿ ಸ್ಥಾನ ದೊರೆಯಬೇಕು ಎಂಬಂಥ ಯಾವ ಅಭಿಲಾಷೆಯೂ ಇಲ್ಲದೆ, ಬೇರೆಯವರಿಗೆ ಮಾಡುವ ಸಹಾಯ ಸಾತ್ವಿಕ ದಯೆ.

೬

ಇವನು ದೊಡ್ಡವ, ಇವನು ಚಿಕ್ಕವ ಎಂಬ ಯಾವ ಭೇದ ಭಾವವನ್ನು ಮಾಡದೆ ನಿಸರ್ಗವು ಎಲ್ಲರಿಗೂ ಸಮನಾಗಿ ಗಾಳಿ, ಬೆಳಕು, ಬೆಳದಿಂಗಳನ್ನು ನೀಡುವಂತೆ, ದಯಾಳುಮನುಷ್ಯ ಯಾವ ಭೇದ ಭಾವವನ್ನು ಎಣಿಸದೆ ದುಃಖಿತರ ದುಃಖವನ್ನು ದೂರ ಮಾಡುತ್ತಾನೆ. ನೀರು ಹರಿಯುವಾಗ ತನ್ನ ದಾರಿಗೆ ಬಂದ ಹುಲ್ಲುಕಡ್ಡಿಗೂ ನೀರುಣಿಸುವಂತೆ ಈ ದಯಾಳುವಿನ ಸ್ವಭಾವವಿರುತ್ತದೆ. ಮಾರ್ಗದಲ್ಲಿ ಎದುರಾಗುವ ಹಳ್ಳ ಹೊಂಡಗಳನ್ನು ತುಂಬುತ್ತಾ ಸಾಗುವ ನೀರಿನ ಪ್ರವಾಹದಂತೆ ಈ ಮನುಷ್ಯ ತನ್ನ ದಾರಿಯಲ್ಲಿ ಕಾಣುವ ದೀನದಲಿತರ ಕಷ್ಟಗಳನ್ನು ನಿವಾರಿಸುತ್ತ, ಮುಂದುವರಿಯುತ್ತಾನೆ. ಕಾಲಿನಲ್ಲಿ ಮುಳ್ಳುನೆಟ್ಟರೆ ಕಳವಳಿಸುವ ಜೀವದಂತೆ, ಬೇರೆಯವರ ಕಷ್ಟವನ್ನು ಕಂಡು ಅವನು ಸಂಕಟಪಡುತ್ತಾನೆ. ಕಾಲಿನ ಶೀತ ತಲೆಗೆ ಮುಟ್ಟುವಂತೆ, ಬೇರೆಯವರ ಸಂತೋಷವನ್ನು ನೋಡಿದಾಗ ಅವನು ಸುಖಿಯಾಗುತ್ತಾನೆ. ಬಾಯಾರಿದವನ ಬಾಯಾರಿಕೆ ಪರಿಹರಿಸುವುದು, ಅವರೊಂದಿಗೆ ಜಗತ್ತಿನ ಮಾಲಿನ್ಯವನ್ನು ತೊಳೆದು ಸ್ವಚ್ಛ ಮಾಡುವುದು ನೀರಿನ ಕಾರ್ಯವಾಗಿರುವಂತೆ ದಯಾಳುವಾದವನ ಕಾರ್ಯವಿರುತ್ತದೆ. ಇಂಥ ಧೀರನು ದಯೆಯ ಸಾಕ್ಷಾತ್ ಅವತಾರವೇ ಆಗಿರುತ್ತಾನೆ. ಸಾಕ್ಷಾತ್ ಪರಮಾತ್ಮನೂ ಅವನಿಗೆ ಋಣಿಯಾಗಿರುತ್ತಾನೆ.

೭

ಇಂಥ ದಯಾಳುಪುರುಷ ಇರುವ ಸ್ಥಳವೇ ಸ್ವರ್ಗ, ಅವನು ಇಲ್ಲದ ಸ್ಥಳವೇ ನರಕ. ಎಷ್ಟೋ ನಗರಗಳಲ್ಲಿ, ಹಳ್ಳಿಗಳಲ್ಲಿ ಸಾವಿರಾರು

ಜನರಿಗೆ ತಲೆಯ ಮೇಲೊಂದು ಸೂರಿಗೆ ಗತಿ ಇಲ್ಲ. ಅವರು ಬಿಸಿಲಿಗೆ ಬೆಂದು, ಮಳೆಯಲ್ಲಿ ನೆನೆದು, ಚಳಿಯಲ್ಲಿ ನಡುಗುತ್ತ ಜೀವಿಸುತ್ತಾರೆ. ಯಾವುದಾದರೂ ನದಿ, ಕಾಲುವೆ, ದಂಡೆಗಳಲ್ಲಿ ತಮ್ಮ ಗೂಡನ್ನು ನಿಲ್ಲಿಸುತ್ತಾರೆ. ಅಲ್ಲಿಯೇ ಹುಟ್ಟುತ್ತಾರೆ, ಅಲ್ಲಿಯೇ ಸಾಯುತ್ತಾರೆ. ವರ್ಷಗಳಿಂದ ಹೀಗೆಯೇ ಬದುಕುತ್ತಿದ್ದಾರೆ. ಮಾನವತೆಯನ್ನು ಕೂಗುತ್ತಾರೆ! ಆದರೆ ಅದು ಓಗೊಡುವುದೇ ಇಲ್ಲ.

ರಸ್ತೆರಸ್ತೆಗಳಲ್ಲಿ, ಗಲ್ಲಿಗಲ್ಲಿಗಳಲ್ಲಿ, ಕುರುಡರು, ಕುಂಟರು, ಅಂಗವಿಕಲರು ತಿರುಗುತ್ತಾರೆ. ಯಾತ್ರಾಸ್ಥಳಗಳಲ್ಲಿಯಂತೂ ಸಾವಿರಗಟ್ಟಲೆ ಇರುತ್ತಾರೆ. ಬಗೆಬಗೆಯ ರೋಗಗ್ರಸ್ತರಾದ ಜನರು ಮನೆಮನೆಯಲ್ಲಿ ಕಂಡುಬರುತ್ತಾರೆ. ಅವರ ಸರಳಾಟ, ಅವರ ಒದ್ದಾಟ ಕಲ್ಲೂ ಕರಗುವಂತೆ ಇರುತ್ತದೆ. ಆದರೆ ಮಾನನ ದಯಾಬುದ್ಧಿ ಮಾತ್ರ ಎಚ್ಚರಗೊಳ್ಳುವುದಿಲ್ಲ. ಎಷ್ಟೋ ಕಡೆಗಳಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳಿರುತ್ತವೆ. ಅಲ್ಲಿ ಬಗೆ ಬಗೆಯ ಔಷಧಿಗಳಿರುತ್ತವೆ, ಔಷಧಿ ಕೊಡುವವರು ಇರುತ್ತಾರೆ, ಮತ್ತು ಕೊಟ್ಟೂ ಕೊಡುತ್ತಾರೆ. ಆದರೆ ಇದೆಲ್ಲ ನಿತ್ಯ ಕರ್ಮವೆಂದು ಮಾಡುತ್ತಾರೆ. ನೌಕರಿ ಎಂದು ಮಾಡುತ್ತಾರೆ, ಹಣ ಗಳಿಸುವ ಒಂದು ಸಾಧನವೆಂದು ಮಾಡುತ್ತಾರೆ. ದಯಾಬುದ್ಧಿಯಿಂದಲ್ಲ!

ಜನರು ಅಂಗಳದಲ್ಲಿ ಹಚ್ಚಿದ ಗಿಡಗಳಿಗೆ ನೀರು ಗೊಬ್ಬರ ಹಾಕುತ್ತಾರೆ. ಕರುಗಳಿಗೆ, ಹಸುಗಳಿಗೆ ಮೇವು ಹಾಕುತ್ತಾರೆ. ಆದರೆ ತಮ್ಮ ಮಕ್ಕಳನ್ನೇ ತಾವು ಕಾಪಾಡುವುದಿಲ್ಲ. ಅನೇಕ ಸಂದುಗೊಂದುಗಳಲ್ಲಿ ಅರೆಬೆತ್ತಲೆ ಮಕ್ಕಳು ತಿರುಗುತ್ತಿರುತ್ತಾರೆ. ಆ ಮಕ್ಕಳು ಜಗಳದಲ್ಲಿ, ಹೊಲಿಮಾತುಗಳಲ್ಲಿ ಅಶ್ಲೀಲ ಬಯ್ಗಳಲ್ಲಿ, ತಮ್ಮ ಅಮೂಲ್ಯ ಬಾಲ್ಯವನ್ನು ಹಾಳು ಮಾಡಿಕೊಳ್ಳುತ್ತಾರೆ. ಪ್ರವಾಹಕ್ಕೆ ಸಿಕ್ಕಿ ಹರಿದುಹೋಗುವಂತೆ ಅಪಾರವಾದ ದೈವೀಶಕ್ತಿ ವ್ಯರ್ಥವಾಗಿ ನಾಶವಾಗುತ್ತದೆ. ಆದರೆ ಯಾರಿಗೂ ಅವರಿಂದ ಕರುಣೆಯುಂಟಾಗುವುದಿಲ್ಲ.

ಅಲ್ಲಲ್ಲಿ ಬೇಕಾದಷ್ಟು ಶಾಲೆಗಳು ಹುಟ್ಟಿಕೊಂಡಿವೆ. ಅಲ್ಲಿಗೆ ಮಕ್ಕಳು ಕೆಲವೊಮ್ಮೆ ಹೋಗುತ್ತಾರೆ. ಆದರೆ ಆ ಶಾಲೆಯಲ್ಲಿನ ಕೆಲಸಗಳು

ಯಾಂತ್ರಿಕವಾಗಿ ನಡೆಯುತ್ತವೆ. ಹಣಕ್ಕಾಗಿ ಮಾಡುವ ಕೆಲಸ ಎಂದು ತಿಳಿಯುತ್ತಾರೆ. ಅಲ್ಲಿ ಮಕ್ಕಳ ಮೇಲೆ ಯಾವ ಸುಸಂಸ್ಕಾರಗಳೂ ಆಗುವುದಿಲ್ಲ. ಮಕ್ಕಳ ಮೇಲಿನ ದಯಾಬುದ್ಧಿಯಿಂದ ಯಾರೂ ಕೆಲಸ ಮಾಡುವುದಿಲ್ಲ. ಚಿಕ್ಕಂದಿನಲ್ಲಿ ಮಕ್ಕಳು ಭಗವಂತನ ರೂಪವೇ ಆಗಿರುತ್ತಾರೆ. ಆದರೆ ದೊಡ್ಡವರಾದಂತೆ ದಾನವರಾಗುತ್ತಾರೆ. ಮಕ್ಕಳೆಂದರೆ 'ಅರಳುವ ಹೂ' ಎಂದು ಹೇಳಲಾಗುತ್ತದೆ. ಆದರೆ ಸಮಾಜದ ನಿರ್ದಯತೆಯಿಂದ ಆ ಹೂವುಗಳು ಮುಳ್ಳುಗಳಾಗಿ ಬದಲಾಯಿಸುತ್ತವೆ.

ಪಟ್ಟಣಗಳಲ್ಲಿ ಅನೇಕ ಕಾರ್ಯಾಲಯಗಳಿರುತ್ತವೆ. ಜನರ ಹಣದಿಂದ, ಜನತೆಯ ಸಲುವಾಗಿ ಅವನ್ನು ನಡೆಸಲಾಗುತ್ತದೆ. ಸಾವಿರಾರು ಸಂಬಳ ಸಹಿತ ಕೆಲಸಗಾರರು ನಿಯುಕ್ತರಾಗಿರುತ್ತಾರೆ. ಅವರು ವೇತನದೊಂದಿಗೆ ಮೇಲು ಸಂಪಾದನೆಯನ್ನೂ ಮಾಡಿಕೊಳ್ಳುತ್ತಾರೆ. ಆದರೆ ಕರ್ತವ್ಯ ಪ್ರಜ್ಞೆ ಮಾತ್ರ ಸೊನ್ನೆಯಾಗಿರುತ್ತದೆ. ಜನರು ತಮ್ಮ ಕೆಲಸಕ್ಕಾಗಿ ಪ್ರತಿನಿತ್ಯ ಅಲೆಯುತ್ತಾರೆ, ಪ್ರಾರ್ಥಿಸುತ್ತಾರೆ. ಆದರೆ ಯಾರ ಹೃದಯದಲ್ಲಿಯೂ ದಯೆ ಹುಟ್ಟುವುದಿಲ್ಲ. ಸಾರ್ವಜನಿಕರ ಕೆಲಸಗಳನ್ನು ತಡೆಹಿಡಿದು, ಅವರಿಂದ ಕಾಸು ಬಿಚ್ಚಿಸುವವರೆಗೆ ಕಾರ್ಯವಾಗದಂತೆ ಮಾಡುತ್ತಾರೆ. ಅದರಿಂದ ಆನಂದವನ್ನು ಪಡೆಯುತ್ತಾರೆ. ಇಂಥ ನಿರ್ದಯತೆಯ ಉದಾಹರಣೆಗಳು ವಿಪುಲವಾಗಿವೆ.

೮

ಅದ್ವೈತ ತತ್ವಜ್ಞಾನವನ್ನು ಘೋಷಿಸುವ ದೇಶದಲ್ಲಿ, ಅಣುರೇಣುವಿನಲ್ಲಿ ಪರಮಾತ್ಮನ ಅಸ್ತಿತ್ವವನ್ನು ಒಪ್ಪಿಕೊಂಡಿರುವ ಈ ದೇಶದಲ್ಲಿ ದಯೆಗೆ ಗೌರವಸ್ಥಾನವಿಲ್ಲದಿರುವುದು ದೌರ್ಭಾಗ್ಯವೇ ಸರಿ. ಹಿಂದಿನ ಕಾಲದಲ್ಲಿ 'ಅತಿಥಿದೇವೋ ಭವ' ಎಂದು ತಿಳಿದು ಅತಿಥಿಯ ಆದರ ಮಾಡಲಾಗುತ್ತಿತ್ತು. ತೀರ ಇತ್ತೀಚಿನ ದಿನಗಳವರೆಗೆ ಹಳ್ಳಿಗಳಲ್ಲಿ ಪ್ರಮುಖರಾದ ಜಮೀನುದಾರರು, ಶಾನಭೋಗರು, ಅಥವಾ ಗೌಡರು ಮಧ್ಯಾಹ್ನದ ಊಟದ ಸಮಯದಲ್ಲಿ – "ಊರಿಗೆ ಬಂದ ಹೊಸಬರು

ಯಾರಾದರೂ ಹಸಿದವರಿದ್ದಾರೆಯೇ" ಎಂದು ವಿಚಾರಿಸಿ ಇದ್ದರೆ ಅವರನ್ನು ತಮ್ಮೊಂದಿಗೆ ಭೋಜನಕ್ಕೆ ಬರಹೇಳುತ್ತಿದ್ದರು. ಅನಂತರವೇ ಅವರು ಊಟ ಮಾಡುತ್ತಿದ್ದರು.

ಇಂಥ ಭಾವನೆ ಪುನರ್ನಿರ್ಮಾಣಗೊಳ್ಳಬೇಕು. ಅಖಂಡ ಮಾನವ ಕುಲದ ಬಗ್ಗೆ ಇಂಥ ಆತ್ಮೀಯ ಭಾವನೆ ಬೆಳೆಯಬೇಕು. ನಾನು ನನ್ನ ಸ್ವಾರ್ಥವನ್ನಷ್ಟೇ ಚಿಂತಿಸುವುದಿಲ್ಲ. ನನಗಿಂತ ಮೊದಲು ಎರಡನೆಯವನ ದುಃಖವನ್ನು ನಿವಾರಿಸುವ ಪ್ರಯತ್ನ ಮಾಡುತ್ತೇನೆ. ಅವನ ಹಸಿವನ್ನು ಹಿಂಗಿಸುತ್ತೇನೆ, ಅವನಿಗೆ ಆಶ್ರಯನೀಡುತ್ತೇನೆ ಎನ್ನುವ ಭಾವನೆ ಹುಟ್ಟಿದರೂ ಸಾಕು, ಈ ದೇಶದ ಸ್ವರೂಪವೇ ಬದಲಾಗಬಹುದು.

ದಯಾವಂತರಾಗುವುದರ ಬದಲು ನಾವಿಂದು ದಯಾಪಾತ್ರರಾಗಿದ್ದೇವೆ. ಭಿಕ್ಷೆಯ ಜೋಳಿಗೆಯನ್ನು ಹಿಡಿದುಕೊಂಡು ನಾವು ಜಗತ್ತಿನ ತುಂಬಾ ಭಿಕ್ಷೆ ಬೇಡುತ್ತಿದ್ದೇವೆ. ಜ್ಞಾನದ, ಧಾನ್ಯದ, ಹಣದ ಭಿಕ್ಷೆ ಬೇಡುತ್ತಿದ್ದೇವೆ. ಯಂತ್ರಗಳ, ಯಂತ್ರಜ್ಞರ, ಶಸ್ತ್ರಾಸ್ತ್ರಗಳ, ಯುದ್ಧವಾಹನಗಳ, ಹೀಗೆ ನಾನಾ ಬಗೆಯ ದಾನಕ್ಕಾಗಿ ಆರ್ತರಾಗಿ ಕೈಚಾಚುತ್ತಿದ್ದೇವೆ. ಜಗತ್ತು ನಮಗೆ ಕರುಣೆ ತೋರಬೇಕೆಂದು ಬಯಸುತ್ತೇವೆ. ಅದೇ ಕಾಲಕ್ಕೆ ನಾವು ಮಾತ್ರ ಯಾರ ಮೇಲೆಯೂ ದಯೆ ತೋರಿಸಲು ಸಿದ್ಧರಿರುವುದಿಲ್ಲ. ದಯೆಯಿಂದ ದಯೆ ವೃದ್ಧಿಸುತ್ತದೆ. ನಿರ್ದಯತೆಯಿಂದ ನಿರ್ದಯತೆ ವೃದ್ಧಿಸುತ್ತದೆ. ನಮ್ಮ ಮನೆಯವರೊಂದಿಗೆ, ನಮ್ಮ ನೆರೆಯವರೊಂದಿಗೆ, ನಮ್ಮ ಸಮಾಜದೊಂದಿಗೆ ನಾವು ದಯಾಬುದ್ಧಿಯಿಂದ ವರ್ತಿಸಿದರೆ, ಪರಮೇಶ್ವರನೂ ನಮ್ಮ ಮೇಲೆ ದಯೆ ತೋರಿಸುತ್ತಾನೆ ಮತ್ತು ರಾಷ್ಟ್ರದ ಎಲ್ಲೆಡೆ ಆನಂದ ಹರಡುತ್ತದೆ.

೧೬ ಜೀವನ ಮೌಲ್ಯಗಳು

ಜಗತ್ತಿನ ಮಹಾಪುರುಷರ ಜೀವನವನ್ನು ನಾವು ಅಭ್ಯಾಸ ಮಾಡಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ. ಕೆಲವು ಅಸಾಮಾನ್ಯ ಗುಣಗಳು ಅವರಲ್ಲಿ ಮೈಗೂಡಿದ್ದವು. ದೇಶದ ಇತಿಹಾಸವೂ ಕೂಡಾ ಇದಕ್ಕೆ ಸಾಕ್ಷಿಯಾಗಿದೆ. ಬೇರೆ ಬೇರೆ ದೇಶಗಳು, ಬೇರೆ ಬೇರೆ ಕಾಲಗಳಲ್ಲಿ ವಿಶಿಷ್ಟಗುಣಗಳನ್ನು ಹೊಂದಿ ವೈಭವಶಾಲಿಯಾಗಿದ್ದವು. ಪ್ರಾಚೀನ ಕಾಲದ ಗ್ರೀಸ್, ರೋಮ್, ಇಟಲಿಯ ಇತಿಹಾಸವನ್ನು ನೋಡಿ. ಆಧುನಿಕ ಕಾಲದ ರಜಪೂತರ, ಸಿಖ್ಖರ, ಮರಾಠರ ಇತಿಹಾಸವನ್ನು ಓದಿರಿ.

ಕೆಲವು ಸದ್ಗುಣಗಳ ಆಳವಾದ ಪ್ರಭಾವದಿಂದ ಅವು ಪ್ರಾಬಲ್ಯವನ್ನು ಪಡೆದವು. ಹಾಗೆಯೇ ಕೆಲವು ವೇಳೆ ದುರ್ಗುಣಗಳ ಪ್ರಭಾವದಿಂದ ಪತನವನ್ನು ಹೊಂದಿದವು.

ಪ್ರಗತಿಶೀಲ ವ್ಯಕ್ತಿ ಮತ್ತು ರಾಷ್ಟ್ರದ ಪರೀಕ್ಷೆಯನ್ನು ಕೆಲವು ಒರೆಗಲ್ಲುಗಳಿಂದ ಮಾಡಿದಾಗ ಘನತೆಯುಳ್ಳದ್ದು, ಉಳಿಯಿತು, ಘನತೆಯಿಲ್ಲದ್ದು ಅಳಿಯಿತು. ಈ ಘನತೆಯುಳ್ಳ ಗುಣಗಳು ಪರೀಕ್ಷೆಯಲ್ಲಿ ಗೆದ್ದವು. ಈ ಗುಣಗಳೇ ಸಮಾಜದಲ್ಲಿ ಸ್ಥಿರತೆಯನ್ನು ಸ್ಥಾಪಿಸಿದವು.

ಈ ಗುಣಗಳನ್ನೇ ಶ್ರೀಮದ್ ಭಗವದ್ಗೀತೆಯಲ್ಲಿ ದೈವೀಸಂಪತ್ತು ಎಂದು ಹೇಳಲಾಗಿದೆ. ನವ್ಯಸಾಹಿತ್ಯದಲ್ಲಿ ಇದನ್ನೇ 'ಜೀವನ ಮೌಲ್ಯಗಳು' ಎಂದು ಹೇಳುತ್ತಾರೆ. ಮಾನವಜೀವನವನ್ನು ಮೌಲ್ಯಾಧಾರಿತವಾಗಿಸುವ ಕ್ಷಮತೆ ಪಡೆದ ಗುಣಗಳೇ ಜೀವನ ಮೌಲ್ಯಗಳು. ಈ ಮೌಲ್ಯಗಳು ಶಾಶ್ವತವಾಗಿವೆ. ಮಾನವತೆಯೊಂದಿಗೆ ಅವು ಜನಿಸಿವೆ ಮತ್ತು ಈ ಜೀವನ ಮೌಲ್ಯಗಳು ಅಂತ್ಯಗೊಂಡರೆ ಅದರೊಂದಿಗೆ ಮಾನವತೆಯ ಅಂತ್ಯವೂ ಆಗುತ್ತದೆ.

ಕೆಲವು ವಿಚಾರವಂತರು ಹೀಗೆ ಅಭಿಪ್ರಾಯ ಪಡುತ್ತಾರೆ: "ಇಂದು ಹಳೆಯ ಜೀವನ ಮೌಲ್ಯಗಳು ಶಿಥಿಲಗೊಂಡಿವೆ. ಇದು ಯಂತ್ರಯುಗ, ವಿಜ್ಞಾನಯುಗ. ಅದಕ್ಕನುಸರಿಸಿ ಇಂದಿನ ಜೀವನ ಮೌಲ್ಯಗಳು ಪರಿವರ್ತನೆ ಗೊಳ್ಳುತ್ತಿವೆ." ಆದರೆ ಇದು ಕೇವಲ ಭ್ರಮೆ. ಈ ಮೌಲ್ಯಗಳು ಸನಾತನವೂ ಶಾಶ್ವತವೂ ಆಗಿವೆ. ಅದರ ಬಾಹ್ಯರೂಪ, ಅದನ್ನು ಪ್ರಸಾರ ಮಾಡುವ ಸಾಧನಗಳು, ಪರಿಸ್ಥಿತಿ, ಕ್ರಮ ಇವುಗಳಲ್ಲಿ ವ್ಯತ್ಯಾಸವಾಗಿರಬಹುದು. ಆದರೆ ಜೀವನ ಮೌಲ್ಯಗಳು ಬದಲಾಗುವುದಿಲ್ಲ. ಅವು ನಿತ್ಯನೂತನ ವಾದವು.

ಪಾತ್ರೆಯ ಆಕಾರ ಬದಲಾದರೆ ನೀರಿನ ರೂಪ ಬದಲಾಗುವುದಿಲ್ಲ. ವಿಗ್ರಹವು ಬದಲಾದರೆ ಭಗವಂತನು ರೂಪಾಂತರ ಹೊಂದುವನೆ? ಕಟ್ಟಿಗೆಯ ಆಕಾರ ಬೇರೆಯಾದರೆ ಅಗ್ನಿಯ ರೂಪ ಭಿನ್ನವಾದೀತೆ?

ಆರ್ಥಿಕ, ರಾಜನೈತಿಕ, ಸಾಮಾಜಿಕ, ಧಾರ್ಮಿಕ ಪರಿಸ್ಥಿತಿಗಳಲ್ಲಿ ಪರಿವರ್ತನೆ ಆಗಿದ್ದರೂ ಜೀವನ ಮೌಲ್ಯಗಳು ಬದಲಾಗುವುದಿಲ್ಲ. ಶ್ರದ್ಧೆ, ಉದ್ಯೋಗಶೀಲತೆ, ನಿರ್ಭಯತೆ, ಸಾತ್ವಿಕತೆ, ಅಹಿಂಸೆ, ದಯೆ ಮೊದಲಾದ ಗುಣಗಳು ಪ್ರಾಚೀನ ಕಾಲದಿಂದಲೂ ಗೌರವವನ್ನು ಪಡೆದಿವೆ. ಈ ಗುಣಗಳು ವಿನಾಶಗೊಂಡಾಗ ಮಾನವ ಮಾನವನಾಗಿರುವುದಿಲ್ಲ. ಅವನು ಪಶುವಾದಾನು. ಅವನೊಬ್ಬ ಸಾಮಾಜಿಕ ಪ್ರಾಣಿ ಎನಿಸಿಕೊಂಡಾನು. ಸಮಾಜ ಎಂಬುದರ ಅರ್ಥ ಗುಂಪುಗೂಡಿ ಇರುವುದೆಂದಲ್ಲ. ಜಿಂಕೆ ಆನೆ ನರಿ ಮೊದಲಾದ ಪ್ರಾಣಿಗಳೂ ಗುಂಪು ಗುಂಪಾಗಿ ನೆಲೆಸುತ್ತವೆ. ಆದರೆ ಆ ಪ್ರಾಣಿಗಳಿಗೆ ಸಮಾಜವಿಲ್ಲ. ಸಮಾಜವನ್ನು ಮನುಷ್ಯ ಮಾತ್ರ ಕಟ್ಟಬಲ್ಲ. ಅದಕ್ಕಾಗಿ ಅವನಿಗೆ ಕೆಲವು ಸಾಮಾಜಿಕ ಗುಣಗಳ ಆವಶ್ಯಕತೆಯಿದೆ. ಆ ಸಾಮಾಜಿಕ ಗುಣಗಳೇ ಜೀವನ ಮೌಲ್ಯಗಳು. ಮನುಷ್ಯನೆಂದರೆ ಬುದ್ಧಿಶಕ್ತಿ, ವಿಚಾರಶಕ್ತಿ ಇರುವ ಪ್ರಾಣಿ ಎಂದು ಕೆಲವರು ವ್ಯಾಖ್ಯೆ ಮಾಡುತ್ತಾರೆ. ಆದರೆ ವಿಚಾರಮಾಡುವ ಆಸಕ್ತಿ ಹೊಂದಿರಬೇಕಾದರೂ ಜೀವನ ಮೌಲ್ಯಗಳು ಅತ್ಯಗತ್ಯವಾಗಿವೆ. ಮನುಷ್ಯನು ಸೃಜನಶೀಲನೆಂದು ಬಲ್ಲವರು ಅಭಿಪ್ರಾಯಪಡುತ್ತಾರೆ. ಮನುಷ್ಯನಲ್ಲಿ ಮಾನವೀಯತೆ ಉಳಿಯದಿದ್ದರೆ ಅವನು ಸೃಜನಶೀಲವಾದ ಯಾವುದೇ ಕಾರ್ಯ ಮಾಡಲಾರ. ಒಂದು ವೇಳೆ

ಮಾಡಿದರೂ ಮೌಲ್ಯರಹಿತವಾದ ಆ ಕಾರ್ಯ ಕೂಡಲೇ ಪತನಗೊಳ್ಳುತ್ತದೆ.

ಭಾರತದ ಇತಿಹಾಸವೆಂದರೆ ಜೀವನ ಮೌಲ್ಯಗಳನ್ನು ದಿಗ್ದರ್ಶಿಸುವ ಶ್ರೇಷ್ಠ ಚಲನಚಿತ್ರವೇ ಸರಿ! ಶ್ರದ್ಧೆ ಮಾಯವಾಯಿತು, ಆಲಸ್ಯದ ಪೈರು ಹುಲುಸಾಗಿ ಬೆಳೆಯಿತು, ವಿಲಾಸದ ನಗ್ನ ನೃತ್ಯ ಮೊದಲಾಯಿತು. ಸಾತ್ವಿಕತೆಯ ಹೆಸರೇ ಉಳಿಯಲಿಲ್ಲ. ವಿಚಾರ-ಆಚಾರಗಳಿಗೆ ಹೊಂದಾಣಿಕೆ ತಪ್ಪಿತು. ಮನಸ್ಸು ಸಂಕುಚಿತಗೊಂಡಿತು. ಜೀವನದಲ್ಲಿ ಯಮ-ನಿಯಮ ಉಳಿಯಲಿಲ್ಲ. ದಮೆ, ತಪಸ್ಸು ಅಡಗಿದವು. ಕ್ಷುದ್ರತೆ ಹರಡಿತು. ಒಟ್ಟಿನಲ್ಲಿ ಜೀವನ ಮೌಲ್ಯಗಳು ನೆಲೆ ತಪ್ಪಿದವು. ಮನುಷ್ಯ ದ್ವಿಪಾದ ಪಶುವಾದ. ಅದರೊಂದಿಗೆ ಪಶುಗಳಿಗೆ ಯೋಗ್ಯವಾದ ದಾಸ್ಯವು ಒದಗಿತು.

ಧರ್ಮವು ಲೋಪಗೊಂಡಾಗಲೆಲ್ಲ ಮಹಾಪುರುಷರು ಹುಟ್ಟಿಬಂದರು. ಭಕ್ತಿಯ ಶಂಖವನ್ನು ಊದಿದರು. ತ್ಯಾಗದ ಸುಗಂಧವನ್ನು ಹರಡಿದರು. ಸಮರ್ಪಣೆಯ ಯಜ್ಞಕುಂಡಗಳು ಹೊತ್ತಿಕೊಂಡವು. ಸಾಧು-ಸಂತರು, ಶರಣರು, ದಾಸರು ಒಂದುಗೂಡಿದರು. ಜೀವನ ಮೌಲ್ಯಗಳನ್ನು ಪ್ರಚುರಗೊಳಿಸಿದರು. ಆತ್ಮಸಾಕ್ಷಾತ್ಕಾರವಾಗತೊಡಗಿತು. ಜೀವನಕ್ಕೆ ಏನಾದರೂ ಅರ್ಥವಿದೆ ಎಂದು ಪ್ರತಿಯೊಬ್ಬನಿಗೆ ಅನಿಸತೊಡಗಿತು. ಪರಾಕ್ರಮ ಮತ್ತು ಕರ್ತೃತ್ವಗಳ ಪ್ರಚಂಡ ಅಲೆ ನಿರ್ಮಾಣವಾಯಿತು.

ಕರ್ತೃತ್ವ ಮತ್ತು ಶೌರ್ಯಗಳೊಂದಿಗೆ ಸಮೃದ್ಧಿಯೂ, ಸಂಪನ್ನತೆಯೂ ಲಭಿಸಿದವು. ಅದರ ಹಿಂದೆಯೇ ಭೋಗವಿಲಾಸಗಳು ಇಣುಕಿದವು. ಚಕ್ರವು ಮೇಲಿನಿಂದ ಕೆಳಕ್ಕಿಳಿಯಿತು. ಧ್ಯೇಯವಾದ ಮರೆಯಾಯಿತು. ಆಲಸ್ಯವು ಪ್ರವೇಶಿಸಿತು. ಜೀವನ ಮೌಲ್ಯಗಳು ಅಳಿದವು. ಮನುಷ್ಯ ದ್ವಿಪಾದ ಪಶುವಾದ. ಏಳು ಸಮುದ್ರದ ಆಚೆಯಿಂದ ಬಂದ ದಸ್ಯುಗಳು ಪುನಃ ಬೇಡಿಗಳನ್ನು ಜಡಿದರು.

ಚಕ್ರ ತಿರುಗಲೇಬೇಕಲ್ಲವೇ ? ಪುನಃ ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ಮಹರ್ಷಿ ದಯಾನಂದರು, ಸ್ವಾಮಿ ರಾಮತೀರ್ಥರು, ಲೋಕಮಾನ್ಯ ತಿಲಕರು. ನ್ಯಾಯಮೂರ್ತಿ ಮಹಾದೇವ ಗೋವಿಂದ ರಾನಡೆ

ಯವರು, ಪಟೇಲರು, ಮಹಾತ್ಮಗಾಂಧಿಜೀಯವರಂಥ ವಿಭೂತಿಪುರುಷರು ಆ ಜೀವನ ಮೌಲ್ಯಗಳನ್ನು ಪುನಃ ಜನಜೀವನದಲ್ಲಿ ಪ್ರತಿಷ್ಠಾಪಿಸಿದರು. ಸ್ವಾತಂತ್ರ್ಯಸೂರ್ಯನ ಉದಯವಾಯಿತು. ಆದರೆ ಆ ಸೂರ್ಯನಿಗೆ ನಮ್ಮ ಕುಕೃತ್ಯಗಳ ರಾಹು ಬಡಿದಿದೆ. ಶಾಶ್ವತವಾದ ಜೀವನ ಮೌಲ್ಯ ಗಳನ್ನು ನಾವು ದುರ್ಲಕ್ಷಿಸುತ್ತಿದ್ದೇವೆ. ವೃಕ್ಷದ ಬೇರುಗಳನ್ನು ಉಪೇಕ್ಷಿಸಿ ಅದರ ಎಲೆಗಳನ್ನು ತೊಳೆಯುತ್ತಿದ್ದೇವೆ. ತಲೆಯನ್ನು ಸುರಕ್ಷಿತವಾಗಿ ಇಡುವುದಕ್ಕೆ ಮೊದಲು ಟೊಪ್ಪಿಗೆಗಳನ್ನು ಸಂಗ್ರಹಿಸುತ್ತಿದ್ದೇವೆ. ನಗರಗಳು ಹೊಲಸು, ರೋಗ, ದುರಾಚಾರಗಳ ಆಗರಗಳಾಗಿವೆ. ಹಳ್ಳಿಗಳು ಕೂಡಾ ಅದೇ ಹಾದಿ ಹಿಡಿದಿವೆ. ಬಾಹ್ಯ ಸುಧಾರಣೆಗಳು ಬೇಕಾದಷ್ಟು ಆಗಿವೆ. ಆದರೆ ಅಂತರಂಗಗಳು ಕೊಳೆಯುತ್ತಿವೆ. ಯಾವುದಾದರೂ ಒಂದು ಹಳ್ಳಿಗೆ ಹೋಗಿ. ಅಲ್ಲಿನ ಪುಡಾರಿಗಳು ಹಳ್ಳಿಯ ಪರಿಚಯ ಮಾಡುತ್ತಾ ಹೇಳುತ್ತಾರೆ – 'ಹಿಂದೆ ಇಲ್ಲಿ ಪ್ರಾಥಮಿಕ ಶಾಲೆಯಷ್ಟೇ ಇದ್ದಿತು. ಈಗ ಕಾಲೇಜುಗಳಾಗಿವೆ. ಕಚ್ಚಾರಸ್ತೆ ಇದ್ದುದು ಈಗ ಡಾಂಬರುರಸ್ತೆಯಾಗಿದೆ. ಅಕ್ಕಪಕ್ಕದ ನಗರಗಳಿಗೆ ಹೋಗಿ ಬರಲು ಬಸ್ಸಿನ ಸೌಕರ್ಯ ಉತ್ತಮ ವಾಗಿದೆ. ಚಿತ್ರಮಂದಿರ, ವಾಚನಾಲಯ, ಮನೆಮನೆಗೆ ನಲ್ಲಿಗಳು, ನಗರ ಪಾಲಿಕೆ ಸಹಕಾರಿ ಸಂಸ್ಥೆ, ಆಸ್ಪತ್ರೆ ಆಗಿವೆ' ಎಂದು. ಎಲ್ಲ ಸೌಲಭ್ಯಗಳ ಬಗ್ಗೆ ಹೇಳುತ್ತಾರೆ. ಇದನ್ನೆಲ್ಲ ಕೇಳುತ್ತಾ ನೀವು ಊರೊಳಗೆ ಹೋದರೆ ಅಲ್ಲಿನವರ ಬಾಯಿಂದ ಬೇರೊಂದು ಕಥೆ ತಿಳಿಯುತ್ತದೆ. ಆ ಪುಡಾರಿ ಭ್ರಷ್ಟನೂ, ದುರಾಚಾರಿಯೂ ಆಗಿರುವನು. ಹಿಂದೆ ಊರಿನಲ್ಲಿ ಕಳ್ಳತನ ಆಗುತ್ತಿರಲಿಲ್ಲ. ಇಂದು ಇಸ್ಪೀಟು ಜೂಜಿನಂಥ ಆಟದ ಕಟ್ಟೆಗಳು ಹುಟ್ಟಿ ಕೊಂಡಿವೆ. ಮಕ್ಕಳು ಶಾಲೆಗೆ ಹೋಗಿ ಸುಳ್ಳು ಹೇಳುವುದು, ಕಾಸು ಕದಿಯುವುದನ್ನು ಕಲಿತಿದ್ದಾರೆ. ಹಿಂದೆ ಊರಿನಲ್ಲಿನ ಹೆಣ್ಣು ಮಕ್ಕಳನ್ನು ಎಲ್ಲರೂ ಗೌರವದಿಂದ ಕಾಣುತ್ತಿದ್ದರು. ಆದರೆ ಈಗ ಯಾವಾಗ ಯಾರಿಂದ ತೊಂದರೆಯಾದೀತೆಂದು ಹೇಳಲಾಗದು. ಕೋರ್ಟು ಕಟ್ಟೆಗಳು, ಸುಳ್ಳು ಸಾಕ್ಷಿಗಳು, ಮೂಗರ್ಜಿಗಳು, ಲಂಚಗುಳಿತನ ಹೀಗೆ ಬಗೆ ಬಗೆಯ ದುರ್ವ್ಯವಹಾರಗಳು ಹಗಲು ರಾತ್ರಿ ನಡೆಯುತ್ತಿವೆ. ಸುಖದ ಸಾಧನಗಳು ಹೇರಳವಾಗಿವೆ. ಆದರೆ ಸುಖ ಮಾತ್ರ ಇಲ್ಲ. ಮನುಷ್ಯನ ಕರ್ತೃತ್ವದ

ಗುರುತುಗಳು ಬೇಕಾದಷ್ಟು ಇವೆ, ಆದರೆ ಮನುಷ್ಯತ್ವವೇ ಉಳಿದಿಲ್ಲ. ರುಚಿಕರವಾದ ತಿನಿಸುಗಳಿವೆ, ಆದರೆ ನಾಲಿಗೆಗೆ ರುಚಿಯೇ ಇಲ್ಲ. ಚೆಲುವಾದ ಹೂಗಳು ಅರಳಿವೆ, ಆದರೆ ಪರಿಮಳವೇ ಇಲ್ಲ. ಸಂಪೂರ್ಣ ಸಮಾಜವು ಶೀಲಭ್ರಷ್ಟವಾಗಿದೆ. ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವೇಚ್ಛಾಚಾರ ನಡೆದಿದೆ. ಜೀವನ ಮೌಲ್ಯಗಳ ಉಪೇಕ್ಷೆ ನಡೆದಿದೆ.

ದೂರಾಲೋಚನೆ ಇಲ್ಲದ ಸ್ವಾರ್ಥ, ಅಂಧಾನುಕರಣೆ ಇವುಗಳಿಂದಾಗಿ ದೇಶದ ಸುರಕ್ಷೆಯ ಬಗ್ಗೆ ವಿಚಾರಮಾಡುವ ಮನೋಭಾವ ಇಲ್ಲವಾಗಿದೆ. ಶ್ರದ್ಧೆ, ದಯೆ, ತಪಸ್ಸು, ದಮೆ, ಅಹಿಂಸೆ, ಈ ಗುಣಗಳು ಸಮಾಜಕ್ಕೆ ಆವಶ್ಯಕವೆಂದು ಯಾರಿಗೂ ಅನಿಸುವುದಿಲ್ಲ. ಆದರೆ ಯಾವುದೇ ದುರ್ಘಟನೆ ನಡೆದಾಗ ಪ್ರತಿಯೊಬ್ಬರು ಉದ್ಗಾರ ತೆಗೆಯುತ್ತಾರೆ– "ಛೆ ಎಂಥ ಅನ್ಯಾಯ, ಎಂಥ ಭ್ರಷ್ಟಾಚಾರ. ಸರಕಾರದ ನೀತಿಯಾದರೂ ಎಂಥದು, ಎಲ್ಲಾ ಕಡೆ ಸ್ವಾರ್ಥವೇ ತುಂಬಿದೆ." ಆದರೆ ಈ ದುಃಸ್ಥಿತಿ ನಿರ್ನಾಮವಾಗಿ ಸಮ್ಮಾನ-ಜನಕ ಪರಿಸರ ಹೇಗೆ ನಿರ್ಮಾಣಗೊಂಡೀತು ? ಎಂದು ಯಾರೂ ಯೋಚಿಸಲು ಸಿದ್ಧರಿಲ್ಲ. ಯಾರಿಗೂ ಪುರುಸೊತ್ತಿಲ್ಲ. ಪ್ರಯತ್ನ ಮತ್ತು ದೀರ್ಘಪ್ರಯತ್ನದ ಮಾತಂತೂ ದೂರವೇ ಉಳಿಯಿತು. ಎಲ್ಲರೂ ತಮ್ಮ ಸ್ವಾರ್ಥದ ಬಗ್ಗೆಯೇ ಚಿಂತಿಸುತ್ತಾರೆ, ನಾಳಿನ ಯೋಚನೆ ಯಾರಿಗೂ ಬೇಡವಾಗಿದೆ. ಸಮಾಜದ ಗತಿ ಏನಾದರೂ ಆಗಲಿ ಎಂಬುದು ಇಂದಿನ ಸಾರ್ವತ್ರಿಕ ಪ್ರವೃತ್ತಿಯಾಗಿವೆ.

ಶರೀರ ಮತ್ತು ಮನೋವಿಜ್ಞಾನದ ಸಂಶೋಧಕರು ಶರೀರಕ್ಕೆ ಆವಶ್ಯಕವಾದ ಜೀವಸತ್ವಗಳನ್ನು ನಿರ್ಧರಿಸಿದ್ದಾರೆ. ಶರೀರಕ್ಕೆ ಯಾವ ಜೀವಸತ್ವದ ಕೊರತೆಯಾಗಿದೆ ಎಂಬುದನ್ನು ಹೇಳಿ ಅದಕ್ಕೆ ಬೇಕಾದ ಔಷಧಿ ಅಥವಾ ಆಹಾರವನ್ನು ಸೇವಿಸಲು ಸಲಹೆ ನೀಡುತ್ತಾರೆ.

ಇಂದು ಸಾವಿರಾರು ಜನರು ತಮ್ಮ ಆರೋಗ್ಯ ರಕ್ಷಣೆಗಾಗಿ ಜೀವ ಸತ್ವಗಳ ಕೊರತೆಯಾಗದಂತೆ ನೋಡಿಕೊಳ್ಳುತ್ತಾರೆ. ಇದು ಯೋಗ್ಯವೂ ಮತ್ತು ಆವಶ್ಯಕವೂ ಆಗಿದೆ. 'ಶರೀರಮಾದ್ಯಂ ಖಲು ಧರ್ಮ ಸಾಧನಂ' ಈ ತತ್ವವಷ್ಟೇ ಸಾರ್ಥಕತೆಗೊಯ್ಯಲಾರದು. ಮನಸ್ಸು, ಬುದ್ಧಿ, ಆತ್ಮ

ಇದರ ಶ್ರೇಷ್ಠತೆಯನ್ನು ಕಡೆಗಾಣಿಸಲಾಗುವುದಿಲ್ಲ. ಒಂದು ರೀತಿಯಿಂದ ನೋಡಿದರೆ ಮನಸ್ಸು ಇಂದ್ರಿಯಗಳ ಅಧಿಪತಿ. ಆದ್ದರಿಂದ ಶರೀರದ ಆರೋಗ್ಯವು ಅಧಿಕತರವಾಗಿ ಮನಸ್ಸನ್ನೇ ಅವಲಂಬಿಸಿದೆ. ಮನಸ್ಸು ಮನುಷ್ಯನ ಮಿತ್ರನೂ ಹೌದು, ಶತ್ರುವೂ ಹೌದು. ಮನಸ್ಸು, ಬುದ್ಧಿ, ಆತ್ಮಗಳ ಅಸ್ತಿತ್ವದಿಂದಲೇ ದೇಹದ ಪ್ರತಿಷ್ಠೆ ಹೆಚ್ಚಿದೆ. ದೇಹದ ಪೋಷಣೆಗಾಗಿ ಜೀವಸತ್ವಗಳ ಅಗತ್ಯವಿದ್ದಂತೆ ಮನಸ್ಸು ಮತ್ತು ಬುದ್ಧಿಗಳ ಪೋಷಣೆಗೆ ಮತ್ತು ಆತ್ಮಶೋಧನೆಗೆ ಇರುವ ಚಿರಂತನ ಜೀವನ ತತ್ವಗಳನ್ನೇ ಜೀವನ ಮೌಲ್ಯಗಳೆಂದು ಕರೆಯುತ್ತಾರೆ.

ಆಬಾಲವೃದ್ಧರ ಮನದಲ್ಲಿ ಈ ಜೀವನ ತತ್ವಗಳನ್ನು ಅಂಕುರಿಸ ಬೇಕಾಗಿದೆ. ಅಕ್ಷರ ಕಲಿಕೆಯೇ ಶಿಕ್ಷಣವಲ್ಲ. ಶಾಶ್ವತವಾದ ಮಾನವನ ಜೀವನ ಮೌಲ್ಯಗಳನ್ನು ಅಭ್ಯಸಿಸುವುದೇ ನಿಜವಾದ ಶಿಕ್ಷಣ. ಅದು ವ್ಯಕ್ತಿಯನ್ನು ಸ್ವಾರ್ಥದ ಸಂಕೋಲೆಯಿಂದ ಮುಕ್ತಗೊಳಿಸಿ ಉದಾರ ನನ್ನಾಗಿ ಮಾಡುತ್ತದೆ. ಅದು ಸಾರಾಸಾರ ವಿವೇಕವನ್ನು ಜಾಗೃತ ಗೊಳಿಸುತ್ತದೆ. ಸ್ವಾರ್ಥಕ್ಕಿಂತಲೂ ಪರೋಪಕಾರವು ಅವನಿಗೆ ಹೆಚ್ಚು ಪ್ರಿಯವಾಗುತ್ತದೆ. ಇಂಥ ಮನುಷ್ಯ ಹೋದಲ್ಲೆಲ್ಲ ಒಂದು ಪ್ರಕಾರದ ಸುವ್ಯವಸ್ಥೆ ನಿರ್ಮಾಣಗೊಳ್ಳುತ್ತದೆ. ನಿರಾಶೆಯು ಅವನನ್ನು ಸೋಕುವುದೇ ಇಲ್ಲ. ಅವನು ಜೀವನದ ಬಗ್ಗೆ ಆರೋಗ್ಯಕರ ದೃಷ್ಟಿಕೋನವನ್ನು ಹೊಂದಿರುತ್ತಾನೆ.

ಒಂದಾನೊಂದು ಕಾಲದಲ್ಲಿ ಈ ಭರತಭೂಮಿಯಲ್ಲಿ ಲಕ್ಷಾವಧಿ ಸುಶಿಕ್ಷಿತರು ನೆಲೆಸಿದ್ದರು. ಅದಕ್ಕಾಗಿ ಈ ದೇಶ ಜಗತ್ತಿನ ಗುರು ಎನಿಸಿತು, ಪುಣ್ಯಭೂಮಿಯಾಯಿತು! ಆ ಸುಶಿಕ್ಷಿತರ ಜೀವನವು ಅಕ್ಷಯ ಜೀವನ ಮೌಲ್ಯಗಳಿಂದ ಶೃಂಗಾರಗೊಂಡಿತ್ತು. ದೇವರು, ಧರ್ಮ, ಸಂತರು, ಸಾಧು-ಸಂನ್ಯಾಸಿಗಳು, ಕಥೆ ಕೀರ್ತನೆಗಳು, ವೇದ ಪುರಾಣಗಳು ಇವರಿಂದ ಪ್ರಚಲಿತಗೊಂಡವು. ಇಂದು ನಾವು ಹಳೆಯ ಮಾರ್ಗವನ್ನು ತ್ಯಜಿಸಿದ್ದೇವೆ. ಹೊಸ ಮಾರ್ಗವನ್ನು ಸ್ವೀಕರಿಸಿಲ್ಲ. ಯಾವುದೇ ಹೆಸರಿನಿಂದಾದರೂ, ಯಾವುದೇ ಮಾರ್ಗದಿಂದಾದರೂ ನಾವು ಜೀವನ ತತ್ವಗಳನ್ನು ಸಂಪಾದಿಸ

7063

ಬೇಕು. ಶಾಶ್ವತವಾದ ಈ ಜೀವನ ಮೌಲ್ಯಗಳನ್ನು ಅಂಗೀಕರಿಸಬೇಕು. ಶ್ರೇಷ್ಠವಾದ ಜೀವನಧ್ಯೇಯವನ್ನು ಸ್ವೀಕರಿಸಬೇಕು. ಹಾಗಾದಾಗ ಮಾತ್ರ ನಮ್ಮ ತಾಂತ್ರಿಕ ಮತ್ತು ವೈಜ್ಞಾನಿಕ ಶಕ್ತಿಗಳ ಸದುಪಯೋಗವಾದೀತು. ಅನ್ಯಥಾ ಅದೇ ಶಕ್ತಿಯು ಆತ್ಮನಾಶಕ್ಕೆ ಕಾರಣವಾದೀತು.

ಜ್ಞಾನೇಶ್ವರರು ಈ ರೀತಿ ಹೇಳಿದ್ದಾರೆ : "ಗರುಡಪಕ್ಷಿಗೆ ರೆಕ್ಕೆಗಳಿದ್ದರೂ ಅವು ಅಂಧತ್ವದಿಂದ ನಿರುಪಯೋಗಿಯಾಗಿರುತ್ತವೆ. ಅದರಂತೆ ಜ್ಞಾನವಿಲ್ಲದ ಸತ್ಕರ್ಮಗಳು ನಿರರ್ಥಕವಾಗುತ್ತವೆ." ಆಳವಾದ, ವಿಶಾಲವಾದ ದೃಷ್ಟಿಕೋನ ಇಲ್ಲದಿದ್ದರೆ ಈ ಚೈತನ್ಯರಹಿತವಾದ ಭೌತಿಕ ಪ್ರಗತಿಯು ಆತ್ಮಘಾತಕವೆಂದೇ ಸಿದ್ಧವಾಗುತ್ತದೆ.

ಆ ಜ್ಞಾನದ ಕಣ್ಣುಗಳನ್ನು ನಾವು ಪಡೆಯಬೇಕಾಗಿದೆ. ಪಕ್ಷಿರಾಜನಾದ ಗರುಡ ಇಂದ್ರನೊಡನೆ ಯುದ್ಧಮಾಡಿ ಅಮೃತವನ್ನು ಪಡೆದ. ನಾವೂ ಕೂಡಾ ಅನಂತ ಯುದ್ಧಗಳನ್ನು ಮಾಡಿ ಅಮೃತ ಪಡೆಯಬೇಕಾಗಿದೆ. ಅದಕ್ಕಾಗಿ ನಾವು ಮೊದಲು ಮಾನವರಾಗಬೇಕಾಗಿದೆ. ಸಂಪೂರ್ಣ ಜಗತ್ತನ್ನು ಮಾನವರನ್ನಾಗಿ ಮಾಡಬೇಕಾಗಿದೆ. ಆ ದೇದೀಪ್ಯಮಾನವಾದ ಸಿಂಹಾಸನದ ಮೊದಲ ಮೆಟ್ಟಲೆಂದು ನಾವು ಜೀವನ ಮೌಲ್ಯಗಳನ್ನು ಅಂಗೀಕರಿಸಬೇಕಾಗಿದೆ.

7063